ಸಂವಾದ

ಮೇ 2003 ರೂ. 10/- ಮಾಸ ಪತ್ರಿಕೆ

ಖಾಸಗಿ ರಂಗದಲ್ಲಿ
ಮೀಸಲಾತಿ ಸಾಧ್ಯವೇ?

●

ಮಾನವ ಹಕ್ಕುಗಳು
ಹಾಗೂ ಮಹಿಳಾ
ಸಶಕ್ತತೆ

ಡಾ|| ಕೆ.ಆರ್. ನಾರಾಯಣನ್

●

ಬಸವಣ್ಣನವರ
ಬ್ಯಾಂಕ್ ಬ್ಯಾಲೆನ್ಸ್
ನಿಲ್ ಮಾಡಿದವರು !

● ಜ. ತೋಂಟದಾರ್ಯ
ಮಹಾಸ್ವಾಮಿಗಳು

ಪಾತ್ರ,
ಒಣಕೆಮ್ಮಿಗೆ
ಗೋಪೂರಾಂಸ

ಸಂವಾದ

ಮಾಸ ಪತ್ರಿಕೆ

ಸಂಪುಟ 1 ಸಂಚಿಕೆ 7

ಮೇ 2003

ಸಂಪಾದಕ :
ಇಂದೂಧರ ಹೊನ್ನಾಪುರ

ನೆರವು :
ಕೆ.ಸಿ. ಶಿವರಾಂ
ಡಾ|| ಎಂ. ಶಿವಲಿಂಗಯ್ಯ
ಸುಬ್ಬು ಹೊಲೆಯಾರ್

ವಿಳಾಸ : ಸ್ಫೂರ್ತಿಧಾಮ
ಬಾಬಾಸಾಹೇಬ್ ಅಂಬೇಡ್ಕರ್
ಸ್ಮಾರಕ ಕೇಂದ್ರ
ಅಂಚೆ ಪೆಟ್ಟಿಗೆ ಸಂಖ್ಯೆ : 9143
ಹೇರೋಹಳ್ಳಿ, ಮಾಗಡಿರಸ್ತೆ
ವಿಶ್ವನೀಡಂ ಅಂಚೆ
ಬೆಂಗಳೂರು - 560 091
ದೂರವಾಣಿ : 3287943 / 3281667

PRINTED AND PUBLISHED BY
S. R. GOVINDU
ON BEHALF OF SPOORTHIDHAMA
PB NO. 9143, HEROHALLI
VISHWANEEDAM POST
BANGALORE - 560 091
PHONE : 3287943, 3281667

EDITOR :
INDUDHARA HONNAPURA

ಒಳ ಪುಟಗಳಲ್ಲಿ



- ಪತ್ರಗಳು 3
- ಮೇರಾ ಭಾರತ್ ಮಹಾನ್ 4
- ಅಂತರಂಗ 5
- ಖಾಸಗಿ ರಂಗದಲ್ಲಿ ಮೀಸಲಾತಿ ಅಗತ್ಯವೇ?
  ○ ಎನ್.ಕೆ. ಮೋಹನರಾಂ 6
- ವಾತ, ಒಣ ಕೆಮ್ಮಿಗೆ ಗೋಮಾಂಸ ಔಷಧ 8
- ಅಧಿಕಾರವನ್ನು ಮೆಟ್ಟಿನಿಲ್ಲಿ; ಅಯ್ಯನ್‌ಕಾಳಿ 10
- ಹಿಂದುತ್ವದ ಕಾಲಾಳು ಸೈನಿಕರು
  ○ ರಾಮ್ ಪುನಿಯಾನಿ 14
- ಅಸ್ಪೃಶ್ಯತೆ ಸೃಷ್ಟಿಯ ಕಾರಣ ಅರಸುತ್ತಾ...
  ○ ಡಾ|| ಸಾವುಕಾರ ಎಸ್. ಕಾಂಬಳೆ 18

- ಉಳಿವಿಗಾಗಿ ಒಟ್ಟಾಗಬೇಕಾದ ಅನಿವಾರ್ಯತೆ?
  ○ ಪ್ರಾ. ಸಂಜೀವ ಬೋಳಾರ 20
- ಸ್ತ್ರೀವಾದದ ಜಾತಿ ಪ್ರಶ್ನೆ
  ○ ರೇಖಾ ಠಾಕೂರ್ 26
- ಮಾನವ ಹಕ್ಕುಗಳು ಹಾಗೂ ಮಹಿಳಾ ಸಶಕ್ತತೆ
  ○ ಡಾ|| ಕೆ.ಆರ್. ನಾರಾಯಣನ್ 30
- ಬುದ್ಧನನ್ನೂ ಬಿಡದ ವೈದಿಕಶಾಹಿಯ ಕಟ್ಟುಕತೆಗಳು 36
- ಬಸವಣ್ಣನವರ ಬ್ಯಾಂಕ್ ಬ್ಯಾಲೆನ್ಸ್ ನಿಲ್ ಮಾಡಿದವರು
  ○ ಜ|| ತೋಂಟದಾರ್ಯ ಮಹಾಸ್ವಾಮಿಗಳು 38
- ಡಿ.ವಿ.ಜಿ. ವೈದಿಕ ಸಂಪತ್ತು, ಶೂದ್ರ ಇತ್ಯಾದಿ
  ○ ಶ್ರೀಮತಿ ವಿಜಯಾ ಮಹೇಶ್ 40
- ಅವಲೋಕನ-ಸಂವಾದ 22
  ○ ರಾಜಾ ಶೈಲೇಶ ಚಂದ್ರ ಗುಪ್ತ
  ○ ಡಾ|| ನಟರಾಜ್ ಹುಳಿಯಾರ್
  ○ ಎಫ್.ಹೆಚ್. ಜಕ್ಕಪ್ಪನವರ
  ○ ಎಸ್. ಗಣೇಶನ್
  ○ ಟಿ. ನಾರಾಯಣಸ್ವಾಮಿ



ಕವನಗಳು : ❑ ನಿಂತ ರಾತ್ರಿ - 13, ❑ ನಮ್ಮ ಹಾಡು - 35, ❑ ನೀಲಿ ಗ್ಯಾನ - 35

ಮುಖಪುಟ ರೇಖಾ ಚಿತ್ರ ಕಲಾವಿದೆ : ಮಧ್ಯ ಪ್ರದೇಶದ ಆದಿವಾಸಿ ಮಹಿಳೆ ದುರ್ಗಾಬಾಯಿ

ವಿನ್ಯಾಸ : ರಾಥೋಡ್

ಭೇಟಿ ಇಲ್ಲದೆಯೂ ಸಂವಾದ

ಅಣ್ಣ ಇಂದೂಧರರಿಗೆ,

ಮೊನ್ನೆ ಬೆಂಗಳೂರಿಗೆ ಬಂದಾಗ ಸುಬ್ಬಣ್ಣ 'ಸಂವಾದ'ಕೊಟ್ಟರು. ಖುಷಿ ಎನ್ನಿಸಿತು. ಇಂಥದೊಂದು ಪತ್ರಿಕೆ ಮಾತ್ರ ನಾವು ಭೇಟಿಮಾಡದೆಯೂ ಸಂವಹನಕ್ಕೆ ತೊಡಗಿಸಬಲ್ಲಂತಹುದು. ಈ ಸನ್ನಿವೇಶದಲ್ಲಿ ಸಂವಾದದ ಅಗತ್ಯ ಬಹಳವಿತ್ತು. ಧಾರವಾಡದಲ್ಲಿಯೂ ಸ್ನೇಹಿತರನ್ನು ಚಂದಾದಾರನ್ನಾಗಿಸುತ್ತೇನೆ. ಆ ಬಗ್ಗೆ ಕರಪತ್ರವಿದ್ದರೆ ಕಳಿಸಿಕೊಡಿ. ಮತ್ತೊಮ್ಮೆ ಬೆಂಗಳೂರಿಗೆ ಬಂದಾಗ ಭೇಟಿಯಾಗಲು ಪ್ರಯತ್ನಪಡುತ್ತೇನೆ.

ವಂದನೆಗಳೊಂದಿಗೆ,

ತಮ್ಮವ

ಮೋಹನ ನಾಗಮ್ಮನವರ, ಧಾರವಾಡ

ಮಾಹಿತಿಪೂರ್ಣ ಪತ್ರಿಕೆ

ಮಾನ್ಯರೆ,

ಡಾ|| ಅಂಬೇಡ್ಕರ್ ಸ್ಮಾರಕ ಕೇಂದ್ರದಿಂದ ಇಂದೂಧರ ಹೊನ್ನಾಪುರ ರವರ ಸಂಪಾದಕತ್ವದೊಂದಿಗೆ ಹೊರ ಬರುತ್ತಿರುವ "ಸಂವಾದ" ಪತ್ರಿಕೆಯನ್ನು ತಪ್ಪದೇ ಓದುತ್ತಿದ್ದೇನೆ. ನನಗೆ ಮತ್ತು ನನ್ನಂತಹ ಹಲವು ಯುವಕರಿಗೆ ಸಾಕಷ್ಟು ಮಾಹಿತಿಗಳನ್ನು ನೀಡುತ್ತಿದೆ.

ನಮಗೆ ತಿಳಿಯದ ಅನೇಕ ಸಂಗತಿಗಳನ್ನು ಹೊತ್ತು ಅಂದವಾಗಿ ಬರುತ್ತಿರುವ 'ಸಂವಾದ'ವನ್ನು ಪ್ರತೀ ತಿಂಗಳೂ ತಪ್ಪದೇ ಕಳಿಸಿಕೊಡುತ್ತೀರೆಂದು ಕಾಯುತ್ತಿರುತ್ತೇನೆ.

ವಂದನೆಗಳೊಂದಿಗೆ

ಮಹೇಶ್, ಶಿವರಾಂಪೇಟೆ, ಮೈಸೂರು

ಅಮೂಲ್ಯ ಸಂಚಿಕೆ

ಸನ್ಮಾನ್ಯರೆ,

ಡಾ|| ಅಂಬೇಡ್ಕರ್ ಸರ್ವಕಾಲಕ್ಕೂ ಆದರಣೀಯರಾಗುವ ಜಗತ್ತಿನ ಶ್ರೇಷ್ಠ ಸಾಧಕ, ಚಿಂತಕ, ದಾರ್ಶನಿಕ ಎಂಬುದರಲ್ಲಿ ಎರಡನೇ ಮಾತಿಲ್ಲ ಎಂಬುದಕ್ಕೆ ಕಳೆದ ತಿಂಗಳ ಸಂವಾದವೇ ಸಾಕ್ಷಿ.

ಜಲವಿವಾದ ಕುರಿತ ಲೇಖನವಂತೂ ಅದ್ಭುತ. ನಿಮಗೆ ವಂದನೆಗಳು.

ಸಿ.ಕೆ. ಕೃಷ್ಣೇಗೌಡ, ಹಾಸನ



ಆರೋಗ್ಯ ಪೂರ್ಣ ಪತ್ರಿಕೆ

ಸಹೃದಯ ಸಂಪಾದಕರಿಗೆ,

ಸಂವಾದ ಪತ್ರಿಕೆಯ ಕಳೆದ ಸಂಚಿಕೆಗಳನ್ನು-ನೋಡುತ್ತಾ ಬರುತ್ತಿದ್ದೇವೆ. ಈ ನಾಡಿನ ಶೋಷಿತರ ಪರವಾದ ಧ್ವನಿಯಾಗಿ ಚೆನ್ನಾಗಿ ಮೂಡಿಬರುತ್ತಿದೆ ಎಂದು ತಿಳಿಸಲು ಸಂತಸವಾಗುತ್ತಿದೆ.

ಒಂದು ಆರೋಗ್ಯಪೂರ್ಣ ಪತ್ರಿಕೆ ಹಾಗೂ ಸರಳ ಮತ್ತು ಸಹಜವಾದ ವಿಷಯಗಳನ್ನು ಒಳಗೊಂಡ ಪತ್ರಿಕೆ ಹೇಗಿರಬೇಕು ಎಂಬುದಕ್ಕೆ 'ಸಂವಾದ' ನಿದರ್ಶನ ಎಂಬುದರಲ್ಲಿ ಎರಡು ಮಾತಿಲ್ಲ.

ಪತ್ರಿಕೆ ಚೆನ್ನಾಗಿ ಬೆಳೆಯಲಿ.

ಇತಿ ಶರಣು

ಜಗದ್ಗುರು ತೋಂಟದಾರ್ಯ ಸ್ವಾಮೀಜಿ

ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ

ಖುಷಿ ತಂದ ವಿಶೇಷಾಂಕ

ಸಂವಾದ ಸಂಪಾದಕರೆ,

ಸಂವಾದ ಮಾಸಪತ್ರಿಕೆಯ ಕಳೆದ ತಿಂಗಳ ಅಂಬೇಡ್ಕರ್ ವಿಶೇಷಾಂಕ ಸಂಚಿಕೆಯನ್ನು ಓದಿದೆ.

ಡಾ|| ಬಾಬಾ ಸಾಹೇಬ್ ಅಂಬೇಡ್ಕರ್‌ರವರ ವಿವಿಧ ರೀತಿಯ ಭಾವಭಂಗಿಗಳು ಹಾಗೂ ವಿವಿಧ ಮಗ್ಗುಲಿನ ಚಿಂತನೆಯನ್ನು ಆಧರಿಸಿದ ಲೇಖನಗಳನ್ನು ಓದಿ ಸಂತೋಷವಾಯಿತು.

'ಸಂವಾದ' ನಿಜವಾಗಿಯೂ ಇಂದಿನ ಆರೋಗ್ಯ ಪೂರ್ಣ ಸಮಾಜದ ನಿರ್ಮಾಣಕ್ಕೆ ಅಗತ್ಯವಿರುವ ಉತ್ತಮ ಲೇಖನಗಳನ್ನು ನೀಡುತ್ತಿದೆ. 'ಸಂವಾದ' ಹೀಗೆಯೇ ಸದಾ ನಮ್ಮನ್ನು ಎಚ್ಚರಿಸುತ್ತಿರಲಿ.

ವಂದನೆಗಳು,

ಚಿ. ಗೌರೀಶ, ಮೈಸೂರು

ಮನಸೂರೆಗೊಂಡಿರುವ ಸಂವಾದ

ಅಂಬೇಡ್ಕರ್‌ರವರ ಕೆಲವೊಂದು ಭಾವ ಚಿತ್ರಗಳು ಮತ್ತು ಪದೇ ಪದೇ ರಿಪೀಟು ಹೊಡೆಯುತ್ತಿದ್ದ ಕೆಲವೇ ಲೇಖನಗಳನ್ನು ಓದುತ್ತಿದ್ದ ನಮಗೆ ಕಳೆದ ತಿಂಗಳ ಅಂಬೇಡ್ಕರ್ ವಿಶೇಷಾಂಕ ನಮ್ಮ ಆಸಕ್ತಿ ಮತ್ತು ಆನಂದಗಳನ್ನು ಇಮ್ಮಡಿಗೊಳಿಸಿದೆ.

ಸಿವಿಲ್‌ಕೋರ್ಟ್ ಕಾಂಪ್ಲೆಕ್ಸ್‌ನ ಅಂಗಡಿಯೊಂದರಲ್ಲಿ ವಾರಪತ್ರಿಕೆಗಳ ಜೊತೆಯಲ್ಲಿ ರಾರಾಜಿಸುತ್ತಿದ್ದ ಸಂವಾದವನ್ನು ಗೆಳೆಯರ ಜೊತೆ ನಾಲ್ಕಾರು ಪ್ರತಿಗಳನ್ನು ಕೊಂಡು ಅದೆಷ್ಟು ರಾತ್ರಿಗಳು ಮತ್ತೆ ಮತ್ತೆ ಓದಿದೆವು.

ಪರೀಕ್ಷೆ ಬರೆದು ಊರುಗಳಿಗೆ ಹೋಗುವ ದುಗುಡ ಮನದಲ್ಲಿದ್ದರೂ ಸಂಚಿಕೆ ಸಿಕ್ಕ ಖುಷಿ ಮತ್ತು ಅದರಲ್ಲಿದ್ದ ಚಿತ್ರಗಳು-ಲೇಖನಗಳು-ನಮ್ಮ ರಜೆಯು ಓದು ಮತ್ತು ಸಂವಾದದ ಗುಂಗಿನಲ್ಲಿ ಕಳೆಯಲು ಸಹಾಯಕವಾಗಿದೆ ಅದಕ್ಕಾಗಿ ಸಂವಾದ ಬಳಗಕ್ಕೆ ನಮ್ಮ ನಮನಗಳು.

ಹೇಗಾದರೂ ಸರಿಯೇ ಮುಂದಿನ ತಿಂಗಳ ಸಂಚಿಕೆಗಾಗಿ ಅದೇ ಅಂಗಡಿಗೆ ಹೋಗುವ ಯೋಚನೆಯಲ್ಲಿರುವ ನಮಗೆ ತಾವು ನಿರಾಶೆ ಮಾಡಲಾರಿರಿ ತಾನೇ. ಸಂವಾದ ಯಶಸ್ವಿಯಾಗಿ ರಾಜ್ಯದಾದ್ಯಂತ ಬೆಳೆಯಲಿ, ಬೆಳಗಲಿ.

ಬುದ್ಧ ಮತ್ತು ಅಂಬೇಡ್ಕರ್ ಜಯಂತಿಯ ಶುಭಾಶಯಗಳು.

ಡಿ. ರಾಜು, ಕೆ.ಎಸ್. ಮೂರ್ತಿ, ಬಿ.ಆರ್. ವೆಂಕಟೇಶ್, ಎಂ. ನರಸಿಂಹ, ಶಂಕರ್, ಪ್ರಭು ಮತ್ತು ವಿದ್ಯಾರ್ಥಿಗಳು, ಬೆಂಗಳೂರು

ಜಾಗತೀಕರಣ : ಒಂದು ವಿವರಣೆ

ಫೆಬ್ರವರಿ ತಿಂಗಳಲ್ಲಿ ಪ್ರಕಟವಾದ ಡಿ ಡೊಮಿನಿಕರ "ಜಾಗತೀಕರಣ ಐಡಿಯಾಲಜಿ" ಲೇಖನಕ್ಕೆ ಚಿಕ್ಕಮಗಳೂರಿನ ಗೆಳೆಯರೊಬ್ಬರು ಪ್ರತಿಕ್ರಿಯೆ ಬರೆದಿದ್ದರು. ಮಾರ್ಚ್ ತಿಂಗಳ ಸಂವಾದದಲ್ಲಿ 'ಪತ್ರಿಕೆಯ ನಿಲುವು ಸ್ಪಷ್ಟವಿರಬೇಕು' ಎಂಬ ಶೀರ್ಷಿಕೆಯಲ್ಲಿ, ಇವರ ಪ್ರತಿಕ್ರಿಯೆಯನ್ನು ಓದಿದಾಗ ಇವರು ಲೇಖನವನ್ನು ಸರಿಯಾಗಿ ಓದಿ ಅರ್ಥೈಸಿಕೊಂಡಿಲ್ಲ, ಮೇಲ್ನೋಟಕ್ಕೆ ಅರ್ಥೈಸಿ ಪ್ರತಿಕ್ರಿಯೆ ನೀಡಿದ್ದಾರೆಂದೇ ಅನ್ನಿಸುತ್ತದೆ. ಇವರಿಗೆ ಜಾಗತೀಕರಣವೆಂದರೇನೆಂದೇ ತಿಳಿದ ಹಾಗೆ ಕಾಣುತ್ತಿಲ್ಲ. ಆದ್ದರಿಂದ ತಾವು ಇನ್ನೊಮ್ಮೆ ಲೇಖನವನ್ನು ತುಂಬ ಗಮನವಿಟ್ಟು ಓದಬೇಕೆಂದು ನನ್ನ ಬಯಕೆ.

ಇಡೀ ಲೇಖನವು ಜಾಗತೀಕರಣದ ಪರವಾಗಿದೆ ಎನ್ನುವುದಕ್ಕಿಂತ ಜಾಗತೀಕರಣ ಎಂದರೇನು? ಅದು ಹೇಗೆ ತನ್ನ ಕಬಂಧ ಬಾಹುಗಳನ್ನು ಚಾಚಿದೆ ಹಾಗೂ ಅದರ ಚಾರಿತ್ರಿಕತೆಯೇನು ಎನ್ನುವುದನ್ನು ವಿವರಿಸಿಕೊಳ್ಳಲು ಪ್ರಯತ್ನಿಸುತ್ತದೆ. ಈ ರೀತಿಯ ವಿವರಿಸಿಕೊಳ್ಳುವಿಕೆಯನ್ನೇ ಪರವಾದ ನಿಲುವು ಎಂದು ಭಾವಿಸುವುದು ಸರಿಯಲ್ಲ. ಜಾಗತೀಕರಣ ಭರವಸೆಗಳನ್ನು ಹುಟ್ಟುಹಾಕಿದೆ ಎಂದು ಹೇಳಿಲ್ಲ. ವಿಜ್ಞಾನ, ತಂತ್ರಜ್ಞಾನಗಳು ಭರವಸೆಗಳನ್ನು ಹುಟ್ಟು ಹಾಕಿರುವುದು ಎಂದದ್ದು. ಲೇಖಕರು "ಜಾಗತೀಕರಣ ಪ್ರಕ್ರಿಯೆಯನ್ನು ವಿರೋಧಿಸಿ, 'ಪರ್ಯಾಯವಾದ 'ಸ್ವದೇಶಿ' ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದೆಂದರೆ ಜಾಗತೀಕರಣಕ್ಕೆ ಅಡಿಪಾಯ ಹಾಕಿಕೊಟ್ಟಂತೆಯೇ. ಆದ್ದರಿಂದ ಪರ್ಯಾಯ ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದು ಎಂದರೆ ಪುನಃ ವೈರುಧ್ಯದಲ್ಲಿ ಸಿಕ್ಕಿಕೊಳ್ಳುವುದೇ ಆಗುತ್ತದೆ. ಈ ಮೂಲಕ ಯಾರೋ ಒಬ್ಬನ ಬದುಕನ್ನು ಅಪಾಯಕ್ಕೊಡ್ಡುತ್ತಿಲ್ಲ. ಇಡೀ ಬುಡಮಟ್ಟದ ಜನತೆಯ ಬದುಕನ್ನೇ ಅಪಾಯಕ್ಕೊಡ್ಡುತ್ತಿದ್ದೇವೆ" ಎಂಬುದನ್ನು ಸ್ಪಷ್ಟವಾಗಿಯೇ ಹೇಳಿದ್ದಾರೆ.

ಸ್ನೇಹಿತರು ಸೂಚಿಸಿದ ಪರ್ಯಾಯವೆಂದರೆ ಪ್ರಬಲ ಜನ ಹೋರಾಟ. ಇದನ್ನೇ ಲೇಖನದಲ್ಲಿ 'ಜಾಗತೀಕರಣದೊಳಗಿನ ಬಿರುಕುಗಳನ್ನು ಶೋಧಿಸಿ ಬುಡಮಟ್ಟದ ಜನತೆಯನ್ನು ಎಚ್ಚರಿಸುವುದೇ ಸಂಘಟನೆಯ ಕೆಲಸವಾಗುತ್ತದೆ' ಎಂದು ಹೇಳಿರುವುದನ್ನು ಇವರು ಗಮನಿಸಿದಂತೆ ಕಾಣುವುದಿಲ್ಲ 'ಎನ್‌ಜಿಓಗಳ ಕೆಲಸದ ವೇಳೆಯ ಕ್ರಾಂತಿಕಾರಿಗಳು' ಮಾತ್ರ ಜಾಗತೀಕರಣವನ್ನು ಸಮರ್ಥಿಸುತ್ತಿದ್ದಾರೆ. ಇದು ದಲಿತ ದಮನಿತ ಜನರಿಗೆ ತುಂಬಾ ಅಪಾಯಕಾರಿಯಾದುದು. ದಾರಿ ತಪ್ಪಿಸುವ ಪ್ರಯತ್ನವಿದು ಎಂದು ಹೇಳುವ ಈ ಸ್ನೇಹಿತರು ಕೂಡಾ ಅರ್ಧಂಬರ್ಧವಾಗಿ ತಿಳಿದುದನ್ನೇ ಸರಿ ಎಂದು ಭಾವಿಸಿ ದಲಿತ ದಮನಿತ ಜನರನ್ನು ವಂಚಿಸುವುದು ಅಷ್ಟೇ ಅಪಾಯಕಾರಿಯಾದುದು ಮತ್ತು ದಾರಿ ತಪ್ಪಿಸುವುದು ಆಗಿದೆ ಎಂಬುದನ್ನು ಜನತೆ ಅರ್ಥ ಮಾಡಿಕೊಳ್ಳಬೇಕಾಗಿದೆ.

ಉಮೇಶ್, ಮೈಸೂರು

ಪಿ. ಮಹಮ್ಮದ್, ಪ್ರಜಾವಾಣಿ

ಜಾತಿ ಭೂತಕ್ಕೆ ಮತ್ತೊಂದು ಯುವ ಜೋಡಿ ಬಲಿ

ಬೆಂಗಳೂರು, ಏ. 11 : ಜಾತಿ ಭೂತಕ್ಕೆ ನಗರದಲ್ಲಿ ಯುವ ಪ್ರೇಮಿಗಳಿಬ್ಬರು ಬಲಿಯಾದ ಮತ್ತೊಂದು ಘಟನೆ ಜರುಗಿದೆ.

ಜೀವನ್ ಭೀಮಾನಗರದ ಪಾಲರಾಜ್-ಸಮೀನಾ, ರಾಜಾನುಕುಂಟೆಯ ನಂದಕಿಶೋರ್-ತಬಸ್ಸುಮ್ ಜೋಡಿ ಮತಾಂಧರ ಕೆಂಗಣ್ಣಿಗೆ ಗುರಿಯಾದ ಘಟನೆ ಇನ್ನೂ ಹಚ್ಚ ಹಸಿರಾಗಿರುವಾಗಲೇ ಹಳ್ಳಿಗಾಡಿನ ಎರಡು ಮುಗ್ಧ ಜೀವಿಗಳು ಕೂಡ ಇಂತಹದೇ ಪಿಡುಗಿಗೆ ಗುರಿಯಾಗಿ ಆತ್ಮಹತ್ಯೆಯ ಮೊರೆ ಹೋಗಿದ್ದಾರೆ.

ಯುವ ಪ್ರೇಮಿಗಳಾದ ಮುನಿರಾಜ (23) ಮತ್ತು ನಾಗರತ್ನ (20) ಮನೆಯ ಹಿರಿಯರ ಜಾತಿ ಪ್ರೇಮಕ್ಕೆ ಬಲಿಯಾದ ನತದೃಷ್ಟರಾಗಿದ್ದಾರೆ. ರಾಜಗೋಪಾಲ ನಗರದ ಲಕ್ಷ್ಮಿದೇವಿನಗರದಲ್ಲಿ ನಾಗರತ್ನ ವಿಷ ಸೇವಿಸಿ ಮೃತಪಟ್ಟರೆ, ಸಾತನೂರಿನ ವಡ್ಡೆಗೌಡ ದೊಡ್ಡಿಯಲ್ಲಿ ಮುನಿರಾಜು ಕೂಡ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳುವ ಮೂಲಕ ಸಾವಿನಂಚಿನಲ್ಲೂ ತಮ್ಮ ಪ್ರೇಮವನ್ನು ಅಮರಗೊಳಿಸಿದ್ದಾರೆ.

ಮುನಿರಾಜ ಬಿಎಂಟಿಸಿ ಬಸ್ ಕಂಡಕ್ಟರ್, ನಾಗರತ್ನಳ ತಂದೆ ವೆಂಕಟಗಿರಿಗೌಡ ನಗರ ಸಶಸ್ತ್ರ ಮೀಸಲು ಪಡೆ (ಸಿಎಆರ್)ಯಲ್ಲಿ ಪೊಲೀಸ್ ಪೇದೆಯಾಗಿ ಕೆಲಸ ಮಾಡುತ್ತಿದ್ದಾರೆ. ಕಳೆದ ವರ್ಷ ಎಸ್‌ಎಸ್‌ಎಲ್‌ಸಿ ಮುಗಿಸಿ ಮನೆಯಲ್ಲಿಯೇ ಇದ್ದ ನಾಗರತ್ನಳಿಗೆ ರಾಜಗೋಪಾಲ ನಗರ ಪೊಲೀಸ್ ಠಾಣೆ ವ್ಯಾಪ್ತಿಯ ಲಕ್ಷ್ಮಿದೇವಿನಗರದಲ್ಲಿ ಒಂದು ಚಿಲ್ಲರೆ ಅಂಗಡಿಯೊಂದನ್ನು ಅವರ ತಂದೆ ಕೊಡಿಸಿದ್ದರು.

ಮುನಿರಾಜ-ನಾಗರತ್ನ ಅವರ ಪ್ರೇಮ ಸಂಗಮವಾದದ್ದು ಆ ಚಿಲ್ಲರೆ ಅಂಗಡಿಯಲ್ಲಿಯೇ. ಮುನಿರಾಜು ಆಗಾಗ್ಗೆ ಆಕೆಯನ್ನು ನೋಡಲು, ಮಾತನಾಡಿಸಲು ಅಲ್ಲಿಗೆ ಬರುತ್ತಿದ್ದ. ಮುಂದೆ ಅದು ಪ್ರೇಮಕ್ಕೆ ನಾಂದಿಯಾಯಿತು. ಮದುವೆಯಾಗಬೇಕೆಂದು ನಿಶ್ಚಯಿಸಿದ್ದ ಅವರಿಗೆ ಜಾತಿಗೋಡೆ ಅಡ್ಡ ಬರುತ್ತದೆ ಎಂಬ ಪರಿವೆ ಇರಲಿಲ್ಲ.

(ಜನವಾಹಿನಿ)

ಮೇರಾ ಭಾರತ್ ಮಹಾನ್

ಗುಮ್ಮನಹಳ್ಳಿಯಲ್ಲಿ ಘರ್ಷಣೆ, ದಾಂಧಲೆ

ಪಾಂಡವಪುರ, ಏ. 12 : ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಗುಮ್ಮನಹಳ್ಳಿ ಗ್ರಾಮದಲ್ಲಿ ಪರಿಶಿಷ್ಟ ಜನಾಂಗದವರಿಗೆ ಅಲ್ಲಿನ ಕೆರೆ, ಹೋಟೆಲ್, ಕ್ಷೌರಿಕರ ಅಂಗಡಿ, ದೇವಸ್ಥಾನ ಇತ್ಯಾದಿ ಸಾರ್ವಜನಿಕ ಸ್ಥಳಗಳಿಗೆ ಒಕ್ಕಲಿಗ ಜನಾಂಗದವರು ಪ್ರವೇಶ ನಿರಾಕರಿಸಿದ್ದಾರೆ ಎಂಬ ಆರೋಪಗಳ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ಇಂದು ಮತ್ತೆ ಗಲಭೆ ಸಂಭವಿಸಿದ್ದು ಮೂವರು ಗಾಯಗೊಂಡಿದ್ದಾರೆ. ಈ ಸಂಬಂಧವಾಗಿ ಮೂವರನ್ನು ಬಂಧಿಸಲಾಗಿದೆ.

ವಿವಾದದಿಂದಾಗಿ ಗ್ರಾಮದಲ್ಲಿ ಬಿಗು ಪರಿಸ್ಥಿತಿ ತಲೆದೋರಿದ ಹಿನ್ನೆಲೆಯಲ್ಲಿ ಪಾಂಡವಪುರದಲ್ಲಿ ಇಂದು ಶಾಂತಿ ಸಭೆ ನಡೆಸಿ ಪರಸ್ಪರ ಸಹಕಾರ ಮನೋಭಾವದಿಂದ ವರ್ತಿಸಲು ಎರಡೂ ಕಡೆಯವರು ಸಹಮತ ವ್ಯಕ್ತಪಡಿಸಿದ ಬೆನ್ನಲ್ಲೇ ಸಂಜೆ ಗ್ರಾಮದಲ್ಲಿ ಗಲಾಟೆ ಸಂಭವಿಸಿತು.

ಈ ಘರ್ಷಣೆಯಲ್ಲಿ ಮೂವರು ಗಾಯಗೊಂಡಿದ್ದು ಅವರನ್ನು ಪಾಂಡವಪುರದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿದೆ. ದಲಿತರ ಕೆಲವು ಮನೆಗಳಿಗೆ ನುಗ್ಗಿ ದಾಂಧಲೆ ನಡೆಸಲಾಗಿದೆ. ಈ ಸಂಬಂಧವಾಗಿ ಮೂವರನ್ನು ದಸ್ತಗಿರಿ ಮಾಡಲಾಯಿತು.

(ಪ್ರಜಾವಾಣಿ)

ಕೊಮ್ಮನ ಹಳ್ಳಿಯಲ್ಲಿ ದಲಿತರ ಗುಡಿಸಲಿಗೆ ಬೆಂಕಿ

ಮಾಲೂರು, ಮಾ. 4 : ಅಪ್ರಾಪ್ತ ಬಾಲಕಿಯೊಬ್ಬಳನ್ನು ಅಪಹರಿಸಿದ್ದಾರೆ ಎಂಬ ಕಾರಣಕ್ಕೆ ಸವರ್ಣೀಯರ ಗುಂಪೊಂದು ದಲಿತರ ಗುಡಿಸಲಿಗೆ ಬೆಂಕಿ ಇಟ್ಟಿರುವ ಪ್ರಸಂಗ ಗುರುವಾರ ರಾತ್ರಿ ಟೇಕಲ್ ಸಮೀಪದ ಕೊಮ್ಮನಹಳ್ಳಿಯಲ್ಲಿ ಸಂಭವಿಸಿದೆ.

ಸವರ್ಣೀಯ ಜನಾಂಗಕ್ಕೆ ಸೇರಿದ ಲಕ್ಷ್ಮಮ್ಮ (16) ಮತ್ತು ಅದೇ ಗ್ರಾಮದ ದಲಿತ ವೆಂಕಟೇಶಪ್ಪ (22) ಎಂಬುವರು ಒಂದು ವಾರದ ಹಿಂದೆ ಪರಾರಿಯಾಗಿದ್ದು ಈ ಹಿನ್ನಲೆಯಲ್ಲಿ ಗ್ರಾಮದಲ್ಲಿ ನ್ಯಾಯ ಪಂಚಾಯ್ತಿಗಳು ನಡೆದು ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು.

ರಾತ್ರಿ 9 ಗಂಟೆ ವೇಳೆಯಲ್ಲಿ ಉದ್ರಿಕ್ತ ಗುಂಪೊಂದು ವೆಂಕಟೇಶಪ್ಪನ ಗುಡಿಸಲು ಮನೆಗೆ ಬೆಂಕಿ ಇಟ್ಟ ಕಾರಣ ಅದರಲ್ಲಿದ್ದ 10 ಕುರಿಗಳು, 11 ಮೇಕೆಗಳು ಜೀವಂತ ಬೆಂದು ಹೋಗಿವೆ. (ಸಂಯುಕ್ತ ಕರ್ನಾಟಕ)

ದಲಿತರ ದಹನ

ನಾಸಿಕ್ : ಏ. 6 (ಯುಐಎನ್‌ಐ)-ನಂದುರ್ಬಾರ್ ಜಿಲ್ಲೆಯ ಬೊರಾಲೆ ಗ್ರಾಮದಲ್ಲಿ ದಲಿತರ ಮನೆಗೆ ಬೆಂಕಿ ಇಟ್ಟು ಹತ್ಯೆ ನಡೆಸಿದ ಪ್ರಕರಣ ಸಂಬಂಧ ಎಂಟು ಮಂದಿಯನ್ನು ಬಂಧಿಸಲಾಗಿದೆ. ಘಟನೆಯಲ್ಲಿ ಗಂಭೀರ ಸುಟ್ಟಗಾಯಗಳಿಂದ 'ಸಾವನ್ನಪ್ಪಿದ ರಮೇಶ್ ಎಂಬುವರು ನೀಡಿದ ಸುಳಿವಿನ ಆಧಾರದ ಮೇರೆಗೆ ಹತ್ತು ಮಂದಿ ಆರೋಪಿಗಳನ್ನು ಗುರುತಿಸ ಲಾಗಿದ್ದು, 8 ಜನರನ್ನು ಬಂಧಿಸಲಾಗಿದೆ.

(ಪ್ರಜಾವಾಣಿ)

ಅಕ್ಕಸಾಲಿಗರ ಕುಟುಂಬಕ್ಕೆ ಸಾಮಾಜಿಕ ಬಹಿಷ್ಕಾರ

ಚಿಕ್ಕನಾಯಕನಹಳ್ಳಿ (ತುಮಕೂರು), ಏ.29 : ಅಕ್ಕಸಾಲಿಗರ ಕುಟುಂಬವೊಂದಕ್ಕೆ ಊರಿನ ಮುಖಂಡರು ಸಾಮಾಜಿಕ ಬಹಿಷ್ಕಾರ ಹಾಕಿದ ಪರಿಣಾಮವಾಗಿ ಕಳೆದ ಒಂದೂವರೆ ತಿಂಗಳಿಂದ ಇಡೀ ಕುಟುಂಬ ನರಕಯಾತನೆ ಅನುಭವಿಸುತ್ತಿದೆ.

ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಂದನಕೆರೆ ಹೋಬಳಿ ಬೆಳಗುಲಿ ಪಂಚಾಯ್ತಿ ವ್ಯಾಪ್ತಿಯ ನಿರುವುಗಲ್ಲು ಗ್ರಾಮದಲ್ಲಿ ಈ ಅವಮಾನವೀಯ ಸಾಮಾಜಿಕ ಬಹಿಷ್ಕಾರ ನಡೆದಿದೆ.

'ಊರಿನಲ್ಲಿ ಇಡೀ ಕುಟುಂಬಕ್ಕೆ ಮಾತ್ರವಲ್ಲ ಅವರ ಜಾನುವಾರುಗಳಿಗೂ ಕುಡಿಯಲು ನೀರು ಕೊಡಬಾರದು; ಅವರೊಂದಿಗೆ ಮಾತನಾಡಬಾರದು; ಅಂಗಡಿಗಳಲ್ಲಿ ಸಾಮಗ್ರಿಗಳನ್ನು ನೀಡಬಾರದು; ದೇವಸ್ಥಾನದಲ್ಲಿ ಪೂಜೆ ಸಲ್ಲಿಸಲು ಅವಕಾಶ ನೀಡಬಾರದು ಎಂದು ಊರಿನ ಮುಖಂಡರು ಟಾಂಟಾಂ ಹೊಡೆಸಿದ್ದಾರೆ' ಎಂದು ಬಹಿಷ್ಕಾರಕ್ಕೊಳಗಾದ ಕುಟುಂಬದ ಕುಮಾರಾಚಾರಿ ಸ್ಥಳಕ್ಕೆ ಭೇಟಿ ನೀಡಿದ್ದ 'ಪ್ರಜಾವಾಣಿ'ಗೆ ವಿವರಿಸಿದರು.

(ಪ್ರಜಾವಾಣಿ)

ಜಾತಿ ನಿಂದನೆ ; ಬಂಧನ

ಬೆಂಗಳೂರು, ಏ.11 : ಕೆಂಪೇಗೌಡ ಬಸ್ ನಿಲ್ದಾಣದ ಕೇಂದ್ರ ಕಚೇರಿಯಲ್ಲಿ ಸಹಾಯಕ ನಿಲ್ದಾಣಾಧಿಕಾರಿಯೊಬ್ಬರಿಗೆ ಅವಾಚ್ಯ ಶಬ್ದಗಳಿಂದ ಬೈದು ಜಾತಿ ನಿಂದನೆ ಮಾಡಿದ ಪ್ರಕರಣ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. (ಜನವಾಹಿನಿ)

ಅಂತರಂಗ

ಬುದ್ಧ, ಬಸವ, ಅಂಬೇಡ್ಕರ್ ದಾರಿಯಲ್ಲಿ...



ಬುದ್ಧ, ಬಸವ, ಅಂಬೇಡ್ಕರ್ ಜಯಂತಿಗಳು ಒಂದರ ಹಿಂದೆ ಒಂದರಂತೆ ಬರುತ್ತಿವೆ. ನಾಡಿನ ದುರ್ಬಲರ ಪಾಲಿಗೆ ಈ ಮೂವರು ಮಹನೀಯರು ನೀಡಿದ ಕೊಡುಗೆ ಅಳತೆಗೆ ಮೀರಿದ್ದು. ಇಡೀ ಲೋಕದ ನೋವು-ದುಮ್ಮಾನಗಳಿಗೆ ಸಾಂತ್ವನದ ಸಿಂಚನ ಮಾಡಿದವರು ಇವರು. ಇವರಾರೂ ದೇವರುಗಳಲ್ಲ. ದೇವದೂತರೂ ಅಲ್ಲ. ನಮ್ಮ ನಿಮ್ಮಂತೆ ಸಹಜ ಮನುಷ್ಯರು. ಸಿಟ್ಟು-ಅಸಹಾಯಕತೆ, ಜೀವನ ಶ್ರದ್ಧೆ, ಸಂಸಾರ, ಹೋರಾಟ ಎಲ್ಲದರೊಳಗೂ ಇದ್ದೂ, ಎಲ್ಲವನ್ನು ಮೀರಿದವರು. ಮಾನವ ಸಹಜ ಪ್ರೀತಿ ಕರುಣೆಗಳನ್ನು ಲೋಕಕ್ಕೆ ಉಣಬಡಿಸಿದವರು. ಎಲ್ಲ ಬಗೆಯ ಶೋಷಣೆಗಳನ್ನು ವಿರೋಧಿಸಿದವರು. ಪ್ರೀತಿ, ಸಮಾನತೆ-ಸ್ವಾಭಿಮಾನವೇ ಸರ್ವಸ್ವ ಎಂದವರು.

ಆದರೆ ಇಂಥ ಬುದ್ಧ, ಬಸವ, ಅಂಬೇಡ್ಕರ್ ಹುಟ್ಟಿದ ನಾಡಿನಲ್ಲಿ ಈಗ ತ್ರಿಶೂಲಗಳ ವಿತರಣೆ ನಡೆಯುತ್ತಿದೆ. ದೊಣ್ಣೆ, ಖಡ್ಗ, ಗದೆಗಳನ್ನು ಹಂಚಲಾಗುತ್ತಿದೆ. ಐದು ಸಾವಿರ ವರ್ಷಗಳಿಂದ ನಿರಂತರವಾಗಿ ಇಡೀ ಜನ ಸಮುದಾಯವನ್ನು ಅರಿವು ಮತ್ತು ಜಾಗೃತಿಯಿಂದ ವಂಚಿಸಿದ ಜನ, ಸ್ವಾತಂತ್ರ್ಯಾನಂತರದ ಐವತ್ತಾರು ವರ್ಷಗಳ ನಂತರ ಕೂಡ ಯಶಸ್ವಿಯಾಗಿ ವಂಚಿಸುತ್ತಲೇ ಇದ್ದಾರೆ.

ಇದುವರೆಗೆ ಅಲ್ಪಸಂಖ್ಯಾತರ ವಿರುದ್ಧ ಮಾತ್ರ ಕಾಲು ಕೆರೆಯುತ್ತಿದ್ದ ಕೋಮುವಾದಿಗಳು ಈಗ ಎಲ್ಲಾ ಜಾತ್ಯಾತೀತರ ವಿರುದ್ಧ ತಿರುಗಿ ಬಿದ್ದಿದ್ದಾರೆ. ಜಾತ್ಯಾತೀತವಾದಿಗಳನ್ನು ಸರ್ವ ನಾಶಮಾಡುವುದಾಗಿ ವಿಶ್ವ ಹಿಂದೂ ಪರಿಷತ್ ಘೋಷಿಸಿದೆ. ಅಂದರೆ ಭಾರತ ಸಂವಿಧಾನದ ವಿರುದ್ಧವೇ ವಿಶ್ವ ಹಿಂದೂ ಪರಿಷತ್ ಯುದ್ಧ ಸಾರಿದೆ. ಬಹು ಜನ ಸಂಸ್ಕೃತಿಯ ವಿರುದ್ಧ ಅವರು ನಡೆಸಿರುವ ದಾಳಿಗೆ ಸರ್ಕಾರವೂ ಕೈ ಜೋಡಿಸಿದೆ. ವ್ಯಕ್ತಿಯ ಮೂಲಭೂತ ಹಕ್ಕನ್ನು ಕಸಿದುಕೊಳ್ಳಲು ಸರ್ಕಾರ ತುದಿಗಾಲ ಮೇಲೆ ನಿಂತಿದೆ.

ಅಸಮಾನತೆ-ದಬ್ಬಾಳಿಕೆಗಳಿಂದ ಬೇಸತ್ತು ನೆಮ್ಮದಿ ಅರಸಿ ಹೊರಟವರಿಗೆ ಹಾಗೆ ಮಾಡಬಾರದೆಂದು ಕಾನೂನು ಮಾಡಲಾಗುತ್ತಿದೆ. ಅವರ ಆಹಾರ ಕ್ರಮಗಳನ್ನು ಬದಲಾಯಿಸುವ ಪರೋಕ್ಷ ದಬ್ಬಾಳಿಕೆಗೆ ಸರ್ಕಾರ ಮುಂದಾಗುತ್ತಿದೆ. ಅಸಮಾನತೆಯ ಶೋಷಕ ವ್ಯವಸ್ಥೆಯವನ್ನು ಒಪ್ಪಿಕೊಳ್ಳುವಂತೆ ಬಹು ಜನರ ಮೇಲೆ ಒತ್ತಡ ಹೇರಲಾಗುತ್ತಿದೆ. ಹಂತ ಹಂತವಾಗಿ ಒಂದು ಜನ ವರ್ಗವನ್ನು ಶ್ರೇಷ್ಠವನ್ನಾಗಿಯೂ ಉಳಿದವರನ್ನು ಕನಿಷ್ಠರನ್ನಾಗಿಯೂ ಒಪ್ಪಿಕೊಳ್ಳುವಂತೆ ಮಾಡುವ ಪ್ರಯತ್ನ ಅವ್ಯಾಹತವಾಗಿ ಸಾಗುತ್ತಿದೆ.

ಮತಾಂಧ ಹಿಂದೂಗಳ ಮುಖಂಡರಾದ ತೊಗಾಡಿಯಾ, ಗಿರಿರಾಜ ಕಿಶೋರರಂತಹ ಧೂರ್ತರು ಭಾರತದ ಬಹುಸಂಖ್ಯಾತ ಜನಕ್ಕೆ ಜ್ಞಾನಕ್ಕೆ ಬದಲು ಅಜ್ಞಾನವನ್ನು, ಶಾಂತಿಗೆ ಬದಲು ಕ್ಷೋಭೆಯನ್ನು ಹಂಚುತ್ತಿದ್ದಾರೆ. ತ್ರಿಶೂಲ ಹಂಚುವ ಮೂಲಕ ಬಹುಸಂಖ್ಯಾತ ಶೂದ್ರರು-ದಲಿತರು ಮತ್ತು ಆದಿವಾಸಿಗಳನ್ನು ಅಲ್ಪಸಂಖ್ಯಾತರ ವಿರುದ್ಧ ಎತ್ತಿಕಟ್ಟಿ, ಇಡೀ ದೇಶವನ್ನು ಅರಾಜಕತೆಯತ್ತ ಕೊಂಡೊಯ್ಯುವ ಪಿತೂರಿ ಮಾಡುತ್ತಿದ್ದಾರೆ.

ಇದಕ್ಕೆ ಪ್ರತಿಯಾಗಿ ಸಮಾಜವಾದಿ ಪಕ್ಷದ ಮುಲಾಯಂಸಿಂಗ್ ಯಾದವ್ ಹಂಚುತ್ತಿರುವ ಖಡ್ಗವಾಗಲಿ, ಲಾಲೂ ಪ್ರಸಾದ್ ಯಾದವ್ ಹಂಚುತ್ತಿರುವ ದೊಣ್ಣೆಯಾಗಲಿ, ದೇಶದ ನೆಮ್ಮದಿಗೆ ಅನುಕೂಲ ವನ್ನೇನೂ ಮಾಡಲಾರವು. ಇವುಗಳು ಸಾಮಾಜಿಕ ನೆಮ್ಮದಿಯನ್ನು ಮತ್ತಷ್ಟು ಕೆಡಿಸಿ, ಅಂತಃಕ್ಷೋಭೆಯನ್ನು ಹುಟ್ಟುಹಾಕುತ್ತವೆಂಬ ಸಾಮಾನ್ಯ ವಿಚಾರ ಕೂಡ ಇವರಿಗೆ ಅರಿವಾಗುತ್ತಿಲ್ಲ. ಕೋಮುವಾದಿಗಳು ಹಿಂಸೆಗೆ ಪ್ರಚೋದಿಸುತ್ತ, ಸಾಮಾಜಿಕ ಅರಾಜಕತೆ ಉಂಟು ಮಾಡಲು ನಿರಂತರವಾಗಿ ಪ್ರಯತ್ನಿಸುತ್ತಲೇ ಇರುವ ಸಂದರ್ಭದಲ್ಲಿ ಜಾತ್ಯಾತೀತರು ಎನಿಸಿಕೊಂಡಿರುವ ಯಾದವದ್ವಯರು, ಮತ್ತೊಂದು ಅರಾಜಕತೆಗೆ ದಾರಿಮಾಡಿಕೊಡುವ ಯತ್ನದಲ್ಲಿ ಅಪ್ರಜ್ಞಾಪೂರ್ವಕವಾಗಿ ತೊಡಗಿರುವ ಅಪಾಯ ನಮ್ಮ ಕಣ್ಣ ಮುಂದಿದೆ. ಹಿಂಸೆಯನ್ನು ಹಿಂಸೆಯಿಂದಲೇ ಹತ್ತಿಕ್ಕಬಹುದೆಂಬುದು ಅನಾಗರಿಕ ವಾದ. ಇವರೆಲ್ಲ ತಿಳಿಯಲೇಬೇಕಾದ ಅಂಶವೆಂದರೆ ಈ ಎಲ್ಲರೂ ಗುರಿ ಇಟ್ಟಿರುವುದು ದಲಿತರು, ಆದಿವಾಸಿಗಳು ಮತ್ತು ಕೆಳವರ್ಗದ ಶೂದ್ರರ ಮೇಲೆ ಮಾತ್ರ. ಇವರುಗಳ ರಾಜಕೀಯ ದಾಳಕ್ಕೆ ಬಲಿಪಶುಗಳಾಗುವವರು ಈ ಕೆಳ ಹಂತದ ಜನವರ್ಗವೇ ಎಂಬ ಗಂಭೀರ ವಿಚಾರ ಇವರಿಗೆ ಅರಿವಾಗದಿರುವುದು ಆಶ್ಚರ್ಯ.

ಜಾತಿವಾದಿಗಳು ಧೃವೀಕರಣವಾಗುತ್ತಿರುವ ಈ ಸಂದರ್ಭದಲ್ಲಿ ಜಾತ್ಯಾತೀತರು-ಪ್ರಗತಿಪರ ಆಲೋಚನೆ ಉಳ್ಳವರು ವಿಘಟಿತರಾಗುತ್ತಿದ್ದಾರೆ. ಬಲ ಪಂಥೀಯ ಪಕ್ಷಗಳು ತಮ್ಮ ಗೌಪ್ಯ ಕಾರ್ಯಕ್ರಮಗಳನ್ನು ದೇಶದ ಮೇಲೆ ಸತತವಾಗಿ ಹೇರುತ್ತಿದ್ದಾರೆ. ದೀನ ದಲಿತರ ಏಳಿಗೆಯನ್ನು ಸಂಪೂರ್ಣ ತಡೆಯುವ ಹುನ್ನಾರ ವ್ಯವಸ್ಥಿತವಾಗಿ ನಡೆಯುತ್ತಿದೆ. ಆಳುವ ಸರ್ಕಾರ ಸಂವಿಧಾನ ವಿರೋಧಿಯಾಗಿ ನಡೆದುಕೊಳ್ಳುತ್ತಿದೆ. ಸಮಾಜದಲ್ಲಿ ಕ್ಷೋಭೆ ಉಂಟು ಮಾಡುತ್ತಿರುವ ದೇಶದ್ರೋಹಿಗಳಿಗೆ ಪ್ರತ್ಯಕ್ಷ ಹಾಗೂ ಪರೋಕ್ಷ ಬೆಂಬಲ ನೀಡುತ್ತಿದೆ. ಆದರೆ ಇದನ್ನು ತಡೆಯುವ ನಿಟ್ಟಿನಲ್ಲಿ ಜಾತ್ಯಾತೀತರು ಏನನ್ನೂ ಮಾಡಲಾರದಷ್ಟು ಅಸಹಾಯಕರಾಗಿದ್ದಾರೆ. ಹಲವು ಗುಂಪು, ಪಕ್ಷಗಳಾಗಿ ಚದುರಿಹೋಗಿರುವ ಪ್ರಗತಿಪರ ಶಕ್ತಿಗಳು ತಮ್ಮ ಸ್ವಪ್ರತಿಷ್ಠೆಗಳಿಗೆ ನೀಡುತ್ತಿರುವ ಮಹತ್ವವನ್ನು ಕೋಮುವಾದಿಗಳ ವಿರುದ್ಧದ ಹೋರಾಟಕ್ಕೆ ನೀಡುತ್ತಿಲ್ಲ. ಅಲ್ಪಸಂಖ್ಯಾತರಾಗಲಿ-ದಲಿತರಾಗಲಿ ವಿಶ್ವಾಸದಿಂದ ತೊಡಗಿಸಿಕೊಳ್ಳುವಂತಹ ಪಕ್ಷ-ಸಂಘಟನೆಗಳು ಇಲ್ಲದಿರುವುದೂ ಇದಕ್ಕೆ ಕಾರಣ ಇರಬಹುದು.

ಮುಸ್ಲಿಮರ ಅಭದ್ರತೆ ಮತ್ತು ಅಸಹಾಯಕತೆ ಅವರನ್ನು ಒಂದಾಗಿ ಯೋಚಿಸಲು ಬಿಡುತ್ತಿಲ್ಲ. ಹಾಗೇ ಶೂದ್ರರು, ದಲಿತರು ಮತ್ತು ಆದಿವಾಸಿಗಳ ನಡುವಿನ ಜಾತಿ ಗೋಡೆಗಳು ಅವರನ್ನು ಒಂದಾಗಿ ಚಿಂತಿಸಲು ಬಿಡುತ್ತಿಲ್ಲ. ಹಾಗಾಗಿ ಪುರೋಹಿತಶಾಹಿ ಶಕ್ತಿಗಳು ವಿಜೃಂಭಿಸಲು ಸಾಧ್ಯವಾಗುತ್ತಿದೆ. ಮುಲಾಯಂ ಆಗಲಿ ಲಾಲೂ ಪ್ರಸಾದ್ ಆಗಲಿ ತಮ್ಮ ಕಾರ್ಯ ತಂತ್ರಗಳನ್ನು ಬದಲಾಯಿಸಿಕೊಳ್ಳದಿದ್ದರೆ, ಅವರೂ ಪರೋಕ್ಷವಾಗಿ ಪುರೋಹಿತ ಶಾಹಿಯ ಷಡ್ಯಂತ್ರದ ಭಾಗವಾಗುತ್ತಾರೆಂಬುದನ್ನು ಮರೆಯಬಾರದು. ಜನರನ್ನು ಅರಿವಿನ ಮೂಲಕ ಜಾಗೃತರನ್ನಾಗಿ ಮಾಡಬೇಕೆ ಹೊರತು ಖಡ್ಗ-ದೊಣ್ಣೆಗಳಿಂದ ಅಲ್ಲ ಅನ್ನುವುದನ್ನು ಅವರುಗಳು ಅರಿತುಕೊಳ್ಳಬೇಕು.

ಇಡೀ ದೇಶ ಇಂದು ನೈಸರ್ಗಿಕ ವಿಕೋಪಕ್ಕೆ ತುತ್ತಾಗಿ ನರಳುತ್ತಿದೆ. ಮಳೆ ಇಲ್ಲದೆ, ಜನ-ಜಾನುವಾರುಗಳು ಹಾಹಾಕಾರ ಪಡುತ್ತಿದ್ದಾರೆ. ಬಿಸಿಲಿನ ಬೇಗೆಗೆ ನೂರಾರು ಬಡವರು ಬಲಿಯಾಗುತ್ತಿದ್ದಾರೆ. ಆದರೆ ಧರ್ಮಾಂಧರು ಬಡವರಿಗೆ ಅನ್ನ, ನೀರು, ವಿದ್ಯೆಗೆ ಬದಲಾಗಿ ತ್ರಿಶೂಲ ಹಂಚುತ್ತಿದ್ದಾರೆ. ಜಾತ್ಯಾತೀತವಾದಿಗಳೆನಿಸಿಕೊಂಡವರು ಖಡ್ಗ-ದೊಣ್ಣೆಗಳನ್ನು ವಿತರಿಸುತ್ತಿದ್ದಾರೆ. ಇಂಥ ಅಸಹಾಯಕ ಸಮಯದಲ್ಲಿ ಜನರಿಗೆ ಬುದ್ಧ-ಬಸವ-ಅಂಬೇಡ್ಕರರೇ ದಾರಿದೀಪವಾಗಬೇಕಾಗಿದೆ.

○ ಇಂದೂಧರ ಹೊನ್ನಾಪುರ

ಸಂಪಾದಕ

ಖಾಸಗಿ ರಂಗದಲ್ಲಿ ಮೀಸಲಾತಿ ಅಗತ್ಯವೇ?

ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಮತ್ತು ಲೇಖಕ ದೇವನೂರು ಮಹಾದೇವ, ಇಬ್ಬರೂ ಭಿನ್ನ ದಿಕ್ಕಿನವರು. ಒಬ್ಬ ರಾಜಕಾರಣಿ, ಮತ್ತೊಬ್ಬ ಶ್ರೇಷ್ಠ ಬರಹಗಾರ. ಅಧಿಕಾರಕ್ಕಾಗಿ, ಚಪ್ಪಾಳೆಗಾಗಿ ಏನನ್ನು ಬೇಕಾದರೂ ಮಾಡಬಲ್ಲ ಜನ ನಾಯಕ ಒಬ್ಬರಾದರೆ, ಅಧಿಕಾರವನ್ನು ಧಿಕ್ಕರಿಸಿದ ಸಂತ, ಮತ್ತೊಬ್ಬ. ಈ ಇಬ್ಬರು ಭಿನ್ನರೂ, ಖಾಸಗಿ ರಂಗದಲ್ಲೂ ದಲಿತರಿಗೆ ಮೀಸಲಾತಿ ತರಬೇಕೆನ್ನುವ ವಿಚಾರದಲ್ಲಿ ಒಂದಾಗಿದ್ದಾರೆ. ಒಂದೇ ವೇದಿಕೆಯನ್ನು ಏರಿದ್ದಾರೆ. ಇದು ಬೆರಗುಗೊಳಿಸುವ ಅಚ್ಚರಿ. ಈಚೆಗೆ ಪ್ರತಿಕ್ರಯಿಸುವ ಆಸಕ್ತಿಯನ್ನೇ ಕಳೆದುಕೊಂಡ ನನ್ನನ್ನು ಈ ಇಬ್ಬರ ಹೇಳಿಕೆಗಳು ನನ್ನ ಮೌನ, ಸೋಮಾರಿತನವನ್ನು ಮರೆಯುವಂತೆ ಮಾಡಿದೆ. ಹೀಗಾಗಿ ಈ ಪ್ರತಿಕ್ರಿಯೆ.

ಖಾಸಗಿ ರಂಗದಲ್ಲಿ ದಲಿತರಿಗೆ ಮೀಸಲಾತಿ ನೀಡಬೇಕೆಂದು ಮೊದಲು ಕೂಗು ಹಾಕಿದ್ದು, ರಾಂ ವಿಲಾಸ್ ಪಾಸ್ವಾನ್. ಇದು 3-4 ವರ್ಷಗಳ ಮಾತಾಯಿತು. ಈಚೆಗೆ ಕೆಲವು ಹಿಂದುಳಿದ ವರ್ಗದವರೂ ಖಾಸಗಿ ರಂಗದಲ್ಲಿ ಮೀಸಲಾತಿ ಬೇಕೆನ್ನುವ ಕೂಗಿಗೆ ದನಿ ಕೂಡಿಸಿವೆ. ಈ ತರಹದ ಹೇಳಿಕೆಗಳು ಬಹುಪಾಲು ರಾಜಕೀಯವಾದ್ದರಿಂದ, ಓಟಿಗಾಗಿ ಮಾಡುವುದರಿಂದ ಜೊತೆಗೆ ಚರ್ಚಿಸಲೂ ಅಸಾಧ್ಯವಾದ ಮುಕ್ತ ವಾತಾವರಣ ಇಲ್ಲವೇ ಆಗಿರುವುದರಿಂದ ಇದರ ಬಗ್ಗೆ ಆಳವಾದ ಚರ್ಚೆ ಆಗಿಲ್ಲ. ಆಗುವ ಸಂಭವವೂ ಇಲ್ಲ. ಈಗ ದೇವನೂರು ಮಹಾದೇವ ಹೇಳಿದ್ದರಿಂದ ಒಂದಿಷ್ಟು ಚರ್ಚೆ ಸಾಧ್ಯವಾಗಿದೆ.

ಖಾಸಗಿ ರಂಗದಲ್ಲಿ ಮೀಸಲಾತಿ ಸಾಧ್ಯವೇ? ದಲಿತರು ಈ ಪರಿಸ್ಥಿತಿಗೆ ಏಕೆ ತಳ್ಳಲ್ಪಟ್ಟಿದ್ದಾರೆ? ಖಾಸಗಿ ರಂಗದತ್ತ ತಿರುಗಿ ನೋಡದೆ ಸ್ವಾಭಿಮಾನಿಗಳಾಗಿ ಬದುಕುವ ವಾತಾವರಣದ ಸೃಷ್ಟಿ ಅಸಾಧ್ಯವೇ? ಇವುಗಳಿಗೆ ಉತ್ತರ ಹುಡುಕುವುದು ಇಲ್ಲಿನ ಪ್ರಯತ್ನ.

ಮೀಸಲಾತಿಯ ಪರವಾಗಿ ವಾದಿಸುವವರು, ಬಹು ಸಂದರ್ಭದಲ್ಲಿ, ಮೀಸಲಾತಿಯ ಸೌಲಭ್ಯವನ್ನು ಪಡೆದವರು ಮಾತ್ರ. ಮೀಸಲಾತಿಯ ಕಲ್ಪನೆಯನ್ನೇ ಕಾಣದ, ಅದರ ಬಗ್ಗೆ ಅರಿತೇ ಇರದ ಬಹು ಸಂಖ್ಯಾತ ದಲಿತರು ಅದರ ಪರವಾಗಿ ವಾದಿಸಲು ಹೇಗೆ ಸಾಧ್ಯ ಎಂಬುದು ಮೀಸಲಾತಿವಾದಿಗಳ ತಕ್ಷಣದ ಪ್ರತಿಕ್ರಿಯೆ.

ಖಾಸಗಿ ರಂಗದಲ್ಲಿ ಮೀಸಲಾತಿಯ ಬೇಡಿಕೆ ಹುಟ್ಟಿರುವುದು, ಈವರೆಗೆ ಇದ್ದ ಮೀಸಲಾತಿ ಹುದ್ದೆಗಳು ಕಡಿಮೆಯಾಗುತ್ತಿರುವುದು, ಒಟ್ಟು ಹುದ್ದೆಗಳ ಸಂಖ್ಯೆಯೇ ಇಳಿಯುತ್ತಿರುವಾಗ, ಮೀಸಲಾತಿ ಸಂಖ್ಯೆಯೂ ಇಳಿಯುತ್ತಿರುವುದು ಒಂದಕ್ಕೊಂದು ಪೂರಕ. ಇದನ್ನು ಖಾಸಗೀಕರಣ ಮತ್ತು ಉದಾರೀಕರಣದ ಹಿನ್ನಲೆಯಲ್ಲಿ ಅರ್ಥ ಮಾಡಿಕೊಳ್ಳದಿದ್ದರೆ, ದಲಿತ ನಾಯಕರ ಕೂಗು ಅನರ್ಥವಾಗುತ್ತದೆ.

ಮೀಸಲಾತಿಯು ದಲಿತರಲ್ಲಿ ಮಧ್ಯಮ ಮತ್ತು ಕೆಳ-ಮಧ್ಯಮ ವರ್ಗವನ್ನು ಹುಟ್ಟಿಹಾಕಿದೆ. ವಿದ್ಯಾವಂತ, ನಗರೀಕೃತ, ವೇತನ ಅವಲಂಬಿತ ಇತರೆ ಜಾತಿಯ ಕೆಳ



ಡಬ್ಲ್ಯುಟಿಒ. ವರ್ಲ್ಡ್ ಬ್ಯಾಂಕ್‌ಗಳಂತಹ ಬೃಹತ್ ಸಂಸ್ಥೆಗಳ ನಿರ್ದೇಶನದಲ್ಲಿ ಬೆಳೆಯುತ್ತಿರುವ ಖಾಸಗಿ ರಂಗ ಎಲ್ಲವನ್ನೂ ನುಂಗಿ ಹಾಕುವ ಭಯಾನಕ ಭೂತ. ಕೇವಲ ಕಾಂಟ್ರ್ಯಾಕ್ಟ್ ಮೇಲೆ ಕೆಲಸಕ್ಕೆ ತೆಗೆದುಕೊಳ್ಳುವ, ಬೇಡವಾದಾಗ ಕಿತ್ತೊಗೆಯುವ, ತನಗಿಷ್ಟ ಬಂದಾಗ ಮುಚ್ಚುವ ಈ ಖಾಸಗಿ ಕ್ಷೇತ್ರ ತನ್ನ ಲಕ್ಷಣಗಳಿಗೆ ಸರಿಹೊಂದದ ಬ್ರಾಹ್ಮಣನನ್ನು ಕತ್ತರಿಸಿ ಹಾಕುತ್ತದೆ. ಜೊತೆಗೆ ತನ್ನ ಚೌಕಟ್ಟಿಗೆ ಸರಿಹೊಂದುವ ದಲಿತನನ್ನು ನವ ಬ್ರಾಹ್ಮಣನನ್ನಾಗಿಸುತ್ತದೆ. ಖಾಸಗಿ ಕ್ಷೇತ್ರದ ಕಟ್ಟು-ನಿಟ್ಟುಗಳು ಎಷ್ಟು ಕಠೋರವೋ, ಅಲ್ಲಿನ ನಯ-ನಾಜೂಕುಗಳು, ಹಿಕಮತ್ತುಗಳು, ಕುಟಿಲತೆಗಳು ತನಗೆ ಬೇಡವಾದವರನ್ನು ಅವರ ಆತ್ಮಹತ್ಯೆಯಲ್ಲಿ ಕೊನೆಗೊಳಿಸುತ್ತದೆ. ಆತ್ಮಹತ್ಯೆಯ ಪ್ರಕ್ರಿಯೆ ದಲಿತ-ದೀನ-ಬ್ರಾಹ್ಮಣರನ್ನು ವಿಂಗಡಿಸಿ ನೋಡುವುದಿಲ್ಲ.

○ ಎನ್.ಕೆ. ಮೋಹನರಾಂ

ಮಧ್ಯಮ ವರ್ಗಕ್ಕೂ, ದಲಿತ ಮಧ್ಯಮ ವರ್ಗಕ್ಕೂ ಅಂತರ ಭಿನ್ನ ಲಕ್ಷಣಗಳೇನೂ ಇಲ್ಲ. ಆದ್ದರಿಂದ ಅಸ್ಥಿರತೆ, ಅನಿಶ್ಚತತೆಗಳು ದಲಿತರಿಗೆ ಮಾತ್ರ ಸೀಮಿತವಾಗದೆ, ಉದಾರೀಕರಣ ಎಲ್ಲ ಜಾತಿಯ ಕೆಳ ಮಧ್ಯಮ ವರ್ಗದವರ ದುಃಸ್ವಪ್ನವಾಗಿದೆ ಎಂಬುದನ್ನು ಅರ್ಥ ಮಾಡಿಕೊಂಡರೆ ಮಾತ್ರ ಸಮಸ್ಯೆಯನ್ನು ಪರಿಹರಿಸಬಲ್ಲದು.

ಈ ಖಾಸಗಿ ಕ್ಷೇತ್ರ ಮೀಸಲಾತಿವಾದಿಗಳು ಎಲ್ಲವನ್ನೂ ಸರಳೀಕರಿಸುತ್ತಾರೆ. ಖಾಸಗಿ ಕ್ಷೇತ್ರ ಎಂಬುದು ದೇವನೂರು ತಿಳಿದಂತೆ ನಮ್ಮ ವಿಶ್ವ ವಿದ್ಯಾಲಯಗಳು ಅಥವಾ ವಿಧಾನಸೌಧದಂತಲ್ಲ. ಡಬ್ಲ್ಯುಟಿಒ. ವರ್ಲ್ಡ್ ಬ್ಯಾಂಕ್‌ಗಳಂತಹ ಬೃಹತ್ ಸಂಸ್ಥೆಗಳ ನಿರ್ದೇಶನದಲ್ಲಿ ಬೆಳೆಯುತ್ತಿರುವ ಖಾಸಗಿ ರಂಗ ಎಲ್ಲವನ್ನೂ ನುಂಗಿ ಹಾಕುವ

ಭಯಾನಕ ಭೂತ. ಕೇವಲ ಕಾಂಟ್ರಾಕ್ಟ್ ಮೇಲೆ ಕೆಲಸಕ್ಕೆ ತೆಗೆದುಕೊಳ್ಳುವ, ಬೇಡವಾದಾಗ ಕಿತ್ತೊಗೆಯುವ, ತನಗಿಷ್ಟ ಬಂದಾಗ ಮುಚ್ಚುವ ಈ ಖಾಸಗಿ ಕ್ಷೇತ್ರ ತನ್ನ ಲಕ್ಷಣಗಳಿಗೆ ಸರಿಹೊಂದದ ಬ್ರಾಹ್ಮಣನನ್ನು ಕತ್ತರಿಸಿ ಹಾಕುತ್ತದೆ. ಜೊತೆಗೆ ತನ್ನ ಚೌಕಟ್ಟಿಗೆ ಸರಿಹೊಂದುವ ದಲಿತನನ್ನು ನವ ಬ್ರಾಹ್ಮಣನನ್ನಾಗಿಸುತ್ತದೆ. ಖಾಸಗಿ ಕ್ಷೇತ್ರದ ಕಟ್ಟುನಿಟ್ಟುಗಳು ಎಷ್ಟು ಕಠೋರವೋ, ಅಲ್ಲಿನ ನಯನಾಜೂಕುಗಳು, ಹಿಕಮತ್ತುಗಳು, ಕುಟಿಲತೆಗಳು ತನಗೆ ಬೇಡವಾದವರನ್ನು ಅವರ ಆತ್ಮಹತ್ಯೆಯಲ್ಲಿ ಕೊನೆಗೊಳಿಸುತ್ತದೆ. ಆತ್ಮಹತ್ಯೆಯ ಪ್ರಕ್ರಿಯೆ ದಲಿತ-ದೀನ-ಬ್ರಾಹ್ಮಣರನ್ನು ವಿಂಗಡಿಸಿ ನೋಡುವುದಿಲ್ಲ.

ಖಾಸಗಿ ರಂಗದ ಆಕರ್ಷಣೆ ಎಷ್ಟು ಬಲಯುತವಾಗಿದೆಯೆಂದರೆ ಇಲ್ಲಿ ಕೆಲಸ ಮಾಡುವ ಹಿಂದುಳಿದವರು, ದಲಿತರು ತಮ್ಮ ಪೂರ್ವಾಪರವನ್ನು ಮರೆತು ಬಿಟ್ಟು, ಇಲ್ಲಿನ ನಯವಂತಿಕೆಗೆ ಮರುಳಾಗುತ್ತಾರೆ. ಇದನ್ನು ತಿಳಿಯಬೇಕಾದರೆ ಇನ್‌ಫೋಸಿಸ್, ವಿಪ್ರೋ ಸಂಸ್ಥೆಗಳಲ್ಲಿ ಕೆಲಸ ಮಾಡುವ ಗುಲ್ಬರ್ಗ, ಬಿಜಾಪುರದಂತಹ ಹಿಂದುಳಿದ ಪ್ರದೇಶಗಳ ಬಡ ಕುಟುಂಬದ ಹುಡುಗರನ್ನು ನೋಡಬೇಕು. ಬ್ರಾಹ್ಮಣ, ದಲಿತ, ವೀರಶೈವ, ಹಿಂದುಳಿದ ಎಲ್ಲ ಜಾತಿಗೆ ಸೇರಿದ ಹುಡುಗರು ಒಂದೆರೆಡು ವರ್ಗಗಳಲ್ಲಿ ನಾಜೂಕಯ್ಯರಾಗಿದ್ದಾರೆ. ಸುಕೋಮಲರಾಗಿದ್ದಾರೆ. ಅಮೆರಿಕ ಜಗತ್ತಿನ ಇಂಗ್ಲೀಷ್ ಮಾತನಾಡುತ್ತಾರೆ. ಅತ್ಯಂತ ದುಬಾರಿ ಬಟ್ಟೆಗಳನ್ನೂ ಧರಿಸುತ್ತಾರೆ. ತಂದೆ-ತಾಯಿ, ಊರು-ಕೇರಿ ಎಲ್ಲರನ್ನೂ ಮರೆಯುತ್ತಾರೆ. ಪ್ರತಿಭೆಯ ಮೇಲೆಯೇ ಆಯ್ಕೆ ಆದದ್ದರಿಂದ ಇವರಲ್ಲಿ ದಲಿತ ಪ್ರಜ್ಞೆಯಾಗಲಿ, ಬಡತನದ ಸಂತೋಷವಾಗಲಿ ಇಲ್ಲವಾಗಿದೆ. ಇಲ್ಲಿ ಜಾತಿ ಮುಖ್ಯವಾಗಿಲ್ಲ. ಇದೇ ಸಮೀಕರಣವನ್ನು ಬೆಂಗಳೂರಿನ ಅತಿ ಪ್ರತಿಷ್ಠಿತ ಇಂಗ್ಲೀಷ್ ಶಾಲೆ, ಸೋಫಿಯಾಸ್‌ನಲ್ಲಿ ಓದುವ ಎಸ್.ಎಂ. ಕೃಷ್ಣ, ಶಾಮನೂರು ಶಿವಶಂಕರಪ್ಪ ಮತ್ತು ಕೆ.ಎಚ್. ರಂಗನಾಥ್ ಮೊಮ್ಮಕ್ಕಳಿಗೂ ಅನ್ವಯಿಸುತ್ತದೆ. ಖಾಸಗೀ ರಂಗದ ವಶೀಕರಣವೇ ಅದು.

ಇದೇ ವಿಷಯಕ್ಕೆ ಸಂಬಂಧಿಸಿದಂತೆ ಮತ್ತೊಂದು ಸಂಗತಿಯನ್ನು ಗಮನಿಸಬೇಕು. ಈ ವರ್ಷ ಕರ್ನಾಟಕ ಸರಕಾರ ಎಲ್ಲ ವೆಚ್ಚವನ್ನು ಭರಿಸಿ ಸುಮಾರು 25 ದಲಿತ ವಿದ್ಯಾರ್ಥಿಗಳನ್ನು ಅಮೆರಿಕದ ಕಾಲೇಜುಗಳಿಗೆ ವಿದ್ಯಾಭ್ಯಾಸಕ್ಕೆಂದು ಕಳಿಸಿದೆ. ಇವರಲ್ಲಿ ಒಂದಿಬ್ಬರನ್ನು ಬಿಟ್ಟರೆ ಬಹುತೇಕರು ಅಲ್ಲಿಯೇ ನೆಲಸುತ್ತಾರೆ. 60ರ ದಶಕದಲ್ಲಿ ಬ್ರಾಹ್ಮಣರು, 70ರಲ್ಲಿ ಲಿಂಗಾಯಿತರು, 80-90ರಲ್ಲಿ ಒಕ್ಕಲಿಗರು, ಹಿಂದುಳಿದವರು ಮತ್ತಿತರರು ಮಾಡಿದ್ದು ಇದನ್ನೇ. ಈಗ 21ನೆಯ ಶತಮಾನದಲ್ಲಿ ದಲಿತರು ಅಮೆರಿಕಾವಾಸಿಗಳಾಗುತ್ತಿದ್ದಾರೆ. ಅಥವಾ ಅಲ್ಲಿಂದ ಬರುವ ಒಂದಿಬ್ಬರು ಖಾಸಗಿ ಸಂಸ್ಥೆಗಳ ಸೇವೆಯಲ್ಲಿ ನಿರತರಾಗಿ ತಂಪಾಗಿರುತ್ತಾರೆ. ದಲಿತ ನಾಯಕರುಗಳು ತಮ್ಮ ಅಂಕಿ-ಅಂಶಗಳಲ್ಲಿ ಈ ಯಶೋಗಾಥೆಯನ್ನು ಸೇರಿಸಬಹುದು ಅಷ್ಟೆ. ಇಲ್ಲಿಗೆ ಚಂದಮಾಮ ಕತೆ ಮುಗಿಯುತ್ತದೆ.

ಈ ವರ್ಷ ಕರ್ನಾಟಕ ಸರಕಾರ ಎಲ್ಲ ವೆಚ್ಚವನ್ನು ಭರಿಸಿ ಸುಮಾರು 25 ದಲಿತ ವಿದ್ಯಾರ್ಥಿಗಳನ್ನು ಅಮೆರಿಕದ ಕಾಲೇಜುಗಳಿಗೆ ವಿದ್ಯಾಭ್ಯಾಸಕ್ಕೆಂದು ಕಳಿಸಿದೆ. ಇವರಲ್ಲಿ ಒಂದಿಬ್ಬರನ್ನು ಬಿಟ್ಟರೆ ಬಹುತೇಕರು ಅಲ್ಲಿಯೇ ನೆಲಸುತ್ತಾರೆ. 60ರ ದಶಕದಲ್ಲಿ ಬ್ರಾಹ್ಮಣರು, 70ರಲ್ಲಿ ಲಿಂಗಾಯಿತರು, 80-90ರಲ್ಲಿ ಒಕ್ಕಲಿಗರು, ಹಿಂದುಳಿದವರು ಮತ್ತಿತರರು ಮಾಡಿದ್ದು ಇದನ್ನೇ.

ನನ್ನ ವಾದ ಮೀಸಲಾತಿ ವಿರೋಧಿ ಎಂಬ ತೀರ್ಮಾನಕ್ಕೆ ಬರುವಂಥದಲ್ಲ. ಮೀಸಲಾತಿ ಬೇಕು. ಆದರೆ ಕಾಲ ಬದಲಾದಂತೆ ಅದರ ಪೂರೈಕೆಗಳು ಬದಲಾಗಬೇಕು. ಅದು ಬಿಟ್ಟು, ಅಮೆರಿಕಾಕ್ಕೆ ಹೋಗುವ ವೀಸಾದಲ್ಲಿ ಮೀಸಲಾತಿ ಕೊಡಿ, ಪಂಚತಾರಾ ಹೋಟೆಲ್ಲುಗಳಲ್ಲಿ ರಿಯಾಯ್ತಿ ಕೊಡಿ ಅಂತೆಲ್ಲ ಮಟ್ಟಕ್ಕೆ ಹೋದರೆ ಹೇಗೆ?

ಆದ್ದರಿಂದ ಮೀಸಲಾತಿ ಪರಿಣಾಮ ಕಾರಿಯಾಗಬೇಕಾದರೆ ಅಥವಾ ದಲಿತರು ಗೌರವಯುತವಾಗಿ ನೆಲೆಸಬೇಕಾದರೆ ಕೇಳಬೇಕಾದ್ದು, ಮೀಸಲಾತಿಯನ್ನಲ್ಲ. ಬದಲಿಗೆ, ಇಂದಿನ ಮುಖ್ಯ ಪ್ರಣಾಳಿಕೆಯಾಗ ಬೇಕಾಗಿರುವುದು ಖಾಸಗಿ ರಂಗದ ವಿರುದ್ಧ ಹೋರಾಟ. ನಮ್ಮ ವಿಶ್ವವಿದ್ಯಾಲಯಗಳು, ಸರಕಾರಿ ಸಂಸ್ಥೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳ ಘನತೆಯನ್ನು ಎತ್ತಿ ಹಿಡಿಯುವುದು. ಅವುಗಳನ್ನು ಪುನಃಶ್ಚೇತನಗೊಳಿಸುವುದು. ಅವುಗಳನ್ನು ಬಹುಕಾಲ ಬದುಕುವಂತೆ ಮಾಡುವಂತೆ ಅಣಿಗೊಳಿಸಬೇಕಿದೆ.

ಇದು ಯಾಕೆ? ಮೀಸಲಾತಿಯ ಉಳಿವು ಇರುವುದು ಸರಕಾರ ಮತ್ತು ಸಾರ್ವಜನಿಕ ಸಂಸ್ಥೆಗಳಲ್ಲಿ. ಕಳೆದ 50 ವರ್ಷಗಳಲ್ಲಿ ಇವುಗಳನ್ನು ಪೊಗದಸ್ತಾಗಿ ಬಳಸಿಕೊಂಡ ಒಂದು ಜನಾಂಗ, ತಮ್ಮ ಅವಶ್ಯಕತೆಗಳು ಮುಗಿಯುತ್ತಿದ್ದಂತೆ, ಇವರಿಗೆ ಸರಕಾರ ಉದ್ದಿಮೆಗಳು ಉಂಡ ಬಾಳ ಎಲೆ ಆಯಿತು. ರೋಗಗ್ರಸ್ತವಾದವು. ಬಾಗಿಲುಗಳು ಮುಚ್ಚಿದವು. ದಲಿತರುಗಳು ಈ ಸಂಸ್ಥೆಗಳಲ್ಲಿ ಮುಖ್ಯ ಹುದ್ದೆಗಳನ್ನಲಂಕರಿಸುವ ಕಾಲ ಇದಾಗಿತ್ತು. ಎಂಬುದು ಮುಖ್ಯ. ಇಷ್ಟೇ ಏಕೆ? ದಲಿತರು ಪ್ರೊಫೆಸರ್‌ಗಳಾಗುವ ಈ ದಿನಗಳಲ್ಲಿ. ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರಗಳು ಪಾಳು ಬೀಳುತ್ತವೆ. ನಮ್ಮ ಗೆಳೆಯ ಸಿದ್ದಲಿಂಗಯ್ಯ, ಮಾಲಗತ್ತಿ ಮುಂತಾದವರು ಅಧ್ಯಯನ ಕೇಂದ್ರಗಳ ನಿರ್ದೇಶಕರಾಗುವ ವೇಳೆಗೆ ಉತ್ಸಾಹದಿಂದ ವಿದ್ಯಾರ್ಥಿಗಳು ಬರುವ ಕಾಲ ಆಗಿಹೋಯಿತು. ಇಲ್ಲೂ ಖಾಸಗಿ ಶಿಕ್ಷಣ ಸಂಸ್ಥೆಗಳು ಶಿಕ್ಷಣ ಪರಿಸರವನ್ನು ಹಾಳು ಮಾಡಿವೆ. ರಾಷ್ಟ್ರೀಕೃತ ಬ್ಯಾಂಕುಗಳ ಪರಿಸ್ಥಿತಿ ಇನ್ನೂ ಹದಗೆಟ್ಟಿದೆ. ಇದೀಗ ಉನ್ನತ ಹುದ್ದೆಗೆ ಏರಿರುವ ದಲಿತ ಅಧಿಕಾರಿಗಳು, ಸ್ವಯಂ ನಿವೃತ್ತಿ, ಖಾಸಗೀಕರಣವಾದ ಭರಾಟೆಯಲ್ಲಿ ತತ್ತರಿಸಿ ಹೋಗಿದ್ದಾರೆ. ಬ್ಯಾಂಕುಗಳ ಶಾಖೆಗಳನ್ನು ಮುಚ್ಚುವ ಪ್ರಕ್ರಿಯೆ ಆರಂಭವಾಗಿದೆ. ದೂರ ಸಂಪರ್ಕ ಇಲಾಖೆ, ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ, ಹಿಂದೂಸ್ತಾನ್ ಪೆಟ್ರೋಲಿಯಂ, ಏರ್ ಇಂಡಿಯಾ ಮುಂತಾದ ಸಂಸ್ಥೆಗಳು ಹರಾಜಿಗೆ ಸಿದ್ಧವಾಗಿವೆ. ಇವುಗಳನ್ನು ಕೊಳ್ಳಲು ಅಮೆರಿಕದ ಬಹುರಾಷ್ಟ್ರೀಯ ಕಂಪನಿಗಳು ಹಣವನ್ನು ಎಕ್ಕುವ ರಣಹದ್ದುಗಳಂತೆ ಹಾರಾಡುತ್ತಿವೆ. ಈಗ ನಡೆಸಬೇಕಾದ ಹೋರಾಟ ಈ ಸಾರ್ವಜನಿಕ ಸಂಸ್ಥೆಗಳ ಪರವಾಗಿ ಆಗಬೇಕಿದೆ. ಇಂದು ದಲಿತರು ದೇಶದ ಎಲ್ಲ ಕಾರ್ಮಿಕ, ಮಧ್ಯಮ ವರ್ಗದ ಹೋರಾಗಳು ಈ ನಿಟ್ಟಿನಲ್ಲಿ ನಡೆಯಬೇಕಿದೆ. ಅದು ಬಿಟ್ಟು, ಖಾಸಗಿ ರಂಗದಲ್ಲಿ ಮೀಸಲಾತಿ ಕೇಳುವುದು ಹಾಸ್ಯಾಸ್ಪದವಾಗುತ್ತದೆ.

ಇದನ್ನು ಸ್ಪಷ್ಟವಾಗಿ ಹೇಳಬೇಕೆಂದರೆ, 40ರ ದಶಕದಲ್ಲಿ ಬೆಂಗಳೂರು ನಗರ ಒಂದರಲ್ಲೇ ಸುಮಾರು ಒಂದೂವರೆ ಲಕ್ಷ ಹುದ್ದೆಗಳು ಸಾರ್ವಜನಿಕ ಉದ್ದಿಮೆಗಳಲ್ಲಿ ಇದ್ದವು. ರಾಜ್ಯ ಮತ್ತು ಕೇಂದ್ರ ಸರಕಾರಗಳೆರಡೂ ಇದರಲ್ಲಿ ಸೇರುತ್ತವೆ. ಇದರಲ್ಲಿ ಸುಮಾರು 33 ಸಾವಿರ ಹುದ್ದೆಗಳು ದಲಿತರಿಗೆ ಮೀಸಲಾಗಿತ್ತು. ಇದೇ ಮುಂದುವರೆದಿದ್ದರೆ ಈ ವೇಳೆಗೆ ಸುಮಾರು 3 ಲಕ್ಷ ಹುದ್ದೆಗಳು ಸಾರ್ವಜನಿಕ ರಂಗದಲ್ಲಿ ಇರಬೇಕಿತ್ತು ಹಾಗೂ ದಲಿತರಿಗೆ 66 ಸಾವಿರ ಹುದ್ದೆಗಳು ಮೀಸಲಾಗಿರಬೇಕಿತ್ತು. ಆದರೆ ಕೇವಲ 15 ರಿಂದ 18 ಸಾವಿರ ಹುದ್ದೆಗಳು ಮಾತ್ರ ದಲಿತರಿಗೆ ಲಭ್ಯವಿದೆ. ಹೀಗಾಗಿ ಸಾರ್ವಜನಿಕ ಸಂಸ್ಥೆಗಳು, ಸರಕಾರಿ ಶಿಕ್ಷಣ ಸಂಸ್ಥೆ ಮತ್ತು ವಿಶ್ವವಿದ್ಯಾಲಯಗಳನ್ನು ಬಲಪಡಿಸದೆ, ಖಾಸಗಿ ರಂಗದಲ್ಲಿ ಮೀಸಲಾತಿ ಕೇಳುವುದು ದುರಂತವೇ ಸರಿ.

ಇದರೊಂದಿಗೆ ಎಲ್ಲ ದಲಿತ ಮಿತ್ರರಲ್ಲಿ ಒಂದು ವೈಯಕ್ತಿಕ ಸಂಗತಿಯನ್ನು ಹಂಚಿಕೊಳ್ಳಬಯಸುತ್ತೇನೆ. ಹುದ್ದೆಗಳು ಕಡಿಮೆಯಾಗುತ್ತಿವೆ. ಮೇಲು ಜಾತಿಯ ಜನ ಖಾಸಗಿ ರಂಗಕ್ಕೆ ಸಮೂಹ ವಲಸೆಹೊರಟಿದ್ದಾರೆ. ಇರುವ ಅತ್ಯಲ್ಪ ಸರಕಾರಿ ಹುದ್ದೆಗಳಿಗೆ ಅಭ್ಯರ್ಥಿಗಳು ಹೆಚ್ಚಾಗುತ್ತಿದ್ದಾರೆ. ಕೆಲಸ ಸಿಗದ ಅತೃಪ್ತರು ತಮ್ಮ ಹತಾಶೆಯನ್ನು ಬಲ-ಎಡ, ಉತ್ತರ-ದಕ್ಷಿಣ ಎಂಬ ಒಡಕುಗಳ ಮೂಲಕ ಕೂಗು ಹಾಕುತ್ತಾರೆ. ಇದನ್ನು ತಪ್ಪಿಸಲು ಇರುವ ಒಂದೇ ಮಾರ್ಗವೆಂದರೆ ಮುಂದುವರೆದ ದಲಿತಗೆಳೆಯರು, ಹಿಂದುಳಿದ ದಲಿತರು ಹುದ್ದೆ ಪಡೆಯುವಂತಾಗಲು ತಾವೇ ಒಂದು ಸೂತ್ರವನ್ನು ಸೂಚಿಸಬೇಕು. ಅದು ಕೊನೆ ಪದದ ಅಥವಾ ಮುಂದುವರೆದ ದಲಿತರು ಎಂದೋ ಏನೋ ಆಗಬಹುದು. ಕೆ.ಎಚ್. ರಂಗನಾಥ್, ಖರ್ಗೆ, ಶ್ರೀನಿವಾಸ ಪ್ರಸಾದರ ಮಕ್ಕಳಿಗೆ ಮೀಸಲಾತಿ ಬೇಡ ಎನ್ನುವುದಾದರೆ ದಲಿತ ಐ.ಎ.ಎಸ್., ಐ.ಪಿ.ಎಸ್. ಮತ್ತಿತರ ಅಧಿಕಾರಿಗಳ ಮಕ್ಕಳೂ ಇದರಲ್ಲಿ ಸೇರುವಂತಾಗಬೇಕು. ದೇಶದಲ್ಲಿ ಪರಿಸ್ಥಿತಿ ಹದಗೆಡುತ್ತಿರುವಾಗ ಇದು ಅನಿವಾರ್ಯ. ಆಗುವ ದುರಂತವನ್ನೂ ತಪ್ಪಿಸಬೇಕಿದೆ. ಪರಿಸ್ಥಿತಿ ಉತ್ತಮಗೊಂಡಾಗ ಮತ್ತೆ ಮರು ಚಿಂತನೆ ನಡೆಸಬಹುದು.

ಈ ಲೇಖನ ಬರೆಯುತ್ತಿರುವಾಗ ಎರಡು ಸುದ್ದಿಗಳು ಗಮನಕ್ಕೆ ಬಂದಿವೆ. ಒಂದು, ಮೇ 21ರಂದು ಖಾಸಗೀಕರಣ ವಿರೋಧಿಸಿ ಬಹುತೇಕ ಸಾರ್ವಜನಿಕ ಉದ್ದಿಮೆಗಳ ಬಂದ್ ಯಶಸ್ವಿಯಾಗಿದೆ. ಮೇ 20ರ ಪತ್ರಿಕೆಯಲ್ಲಿ, ಕೋಲಾರದ ದಲಿತನೊಬ್ಬ ಹಸಿವು ತಾಳಲಾರದೆ, ಬ್ಲೇಡಿನಿಂದ ಕರುಳನ್ನು ಕುಯ್ದುಕೊಂಡು ಸತ್ತ ಸುದ್ದಿ ಪ್ರಕಟವಾಗಿದೆ. ●

ವಾತ, ಒಣ ಕೆಮ್ಮಿಗೆ ಗೋಮಾಂಸದ ಔಷಧ

'ಎಲ್ಲ ಬೃಹತ್ ಮಾರ್ಗಗಳಲ್ಲಿ ಪ್ರತಿ ಎರಡೆರಡು ಯೋಜನೆಗಳಿಗೊಂದರಂತೆ ಅವನು ಅತಿಥಿ ಗೃಹಗಳನ್ನು ಸ್ಥಾಪಿಸಿದ್ದ. ಪ್ರತಿಯೊಂದು ಅತಿಥಿಗೃಹಕ್ಕಾಗಿ ಭಾರಿ ಸಂಖ್ಯೆಯಲ್ಲಿ ದನ ಕರುಗಳನ್ನು, ಕುರಿ ಮೇಕೆಗಳನ್ನು ಸಾಕಿಕೊಂಡು ಬರುವ ವ್ಯವಸ್ಥೆಯನ್ನು ಮಾಡಲಾಗಿತ್ತು. ಅತಿಥಿ ಗೃಹಗಳ ಗೋಪಾಲಕರಿಂದ ಹಾಗೂ ಅವರ ದನಕರುಗಳಿಂದ ಅರಣ್ಯಗಳು ಗುಂಜಾಯಮಾನವಾಗಿರುತ್ತಿದ್ದವು...ಉಳಿದ ಪರಿಕರಗಳನ್ನು ಒದಗಿಸುವ ಜೊತೆಗೆ ಅಷ್ಟೊಂದು ಪ್ರಮಾಣದಲ್ಲಿ ಹಸುಗಳನ್ನು ಕೊಂದು, ಅವುಗಳ ದೊಡ್ಡ ದೊಡ್ಡ ಮಾಂಸದ ಖಂಡಗಳನ್ನು ದೊಡ್ಡ ದೊಡ್ಡ ತಾಮ್ರದ ಪಾತ್ರೆಗಳಲ್ಲಿ ಬೇಯಿಸಲಾಗುತ್ತಿತ್ತು...ಹೀಗೆ ಕೊಲ್ಲಲಾದ ದನಕರುಗಳ ಚರ್ಮವನ್ನು ಒಂದೆಡೆ ಜೋಡಿಸಿ ಇಡಲಾಗುತ್ತಿತ್ತು'.

ಪಂಡಿತ ರಾಹುಲ ಸಾಂಕೃತ್ಯಾಯನರು ವಧ್ಯಯಶ್ವನ ಮಗನಾದ ಋಗ್ವೇದದ ನಾಯಕ ದಿವೋದಾಸನ ಅತಿಥಿಗೃಹವನ್ನು ವರ್ಣಿಸುವುದು ಹೀಗೆ. ದಿವೋದಾಸನು ತಂಬಿಟ್ಟು, ಗೋಮಾಂಸ, ಸೋಮರಸಾದಿಗಳೊಂದಿಗೆ ಅತಿಥಿ ಸತ್ಕಾರ ಕಾರ್ಯವನ್ನು ನೆರವೇರಿಸುತ್ತಿದ್ದ. ಈ ಕಾರಣದಿಂದ ಋಗ್ವೇದದಲ್ಲಿ ದಿವೋದಾಸನನ್ನು 'ಅತಿಥಿಗ್ವ'ನೆಂದು ಕರೆಯಲಾಗಿದೆ. (ದಿವೋದಾಸಾತಿಥಿಗ್ವಸ್ಯರಾಧ...ಋಗ್ವೇದ 6.47.22) ಅತಿಥಿಸತ್ಕಾರವನ್ನು ಗೋಮಾಂಸದಿಂದಲೇ ನೆರವೇರಿಸಬೇಕಾಗಿದ್ದುದರಿಂದ ಅತಿಥಿಯನ್ನು 'ಗೋಘ್ನ'ನೆಂದು 'ಅಷ್ಟಾಧ್ಯಾಯಿ'ಯಲ್ಲಿ ಪಾಣಿನಿಯು ಕರೆದಿದ್ದಾನೆ.

ಇವೆಲ್ಲಾ ಅತಿಥಿ ಸತ್ಕಾರದ ಬಗ್ಗೆ ತಿಳಿಸುವುದರೊಂದಿಗೆ ಗೋವು ಆರ್ಯರ ಆಹಾರವಾಗಿತ್ತು ಎಂಬುದನ್ನೂ ತಿಳಿಸುತ್ತವೆ. ಇದನ್ನು ಇನ್ನೂ ಸ್ಪಷ್ಟೋಕ್ತಿಯಲ್ಲಿ ಹೇಳಬೇಕೆಂದರೆ, ತೈತ್ತರೀಯ ಬ್ರಾಹ್ಮಣವು 'ಅಥೋ ಅನ್ನಂ ವೈ : ಗೌ : (ಗೋವು ಒಂದು ಆಹಾರ) ಎನ್ನುತ್ತದೆ. ರಾಮಾಯಣದಲ್ಲಿ ಭಾರದ್ವಾಜನು ಕೊಬ್ಬಿದ ಗೋವಿನ ಕರುವನ್ನು ವಧಿಸಿ ಸಂಪಾದಿಸಿದ ಮಾಂಸದೊಂದಿಗೆ ಶ್ರೀರಾಮನನ್ನು ಸ್ವಾಗತಿಸುತ್ತಾನೆ.

ಇಂಥ ಹಲವು ಆಧಾರಗಳನ್ನು ಇಲ್ಲಿ ಕೊಡಬಹುದು. ಇವೆಲ್ಲವುಗಳಿಂದ ಗೋವು ಆರ್ಯರ ಆಹಾರವಾಗಿತ್ತೆಂದು ದೃಢಪಡುತ್ತದೆ.

ಇನ್ನು ಪ್ರಾಚೀನ ಭಾರತದ ವೈದ್ಯಕೀಯ ವಿಭಾಗಕ್ಕೆ ಹೋದರೆ, ಅಲ್ಲೂ ಗೋಮಾಂಸದ ಬಗೆಗಿನ ವಿಶೇಷವಾದ ಮಮತೆಯೇನೂ ಕಂಡು ಬರುವುದಿಲ್ಲ. ಇದನ್ನು ಸಮರ್ಥಿಸಲು ಒಂದೆರಡು ಉಲ್ಲೇಖಗಳು ಸಾಕು :

೧. ವಾತವು ಅತ್ಯಧಿಕವಾಗಿದ್ದಾಗ, ಬಿಟ್ಟು ಬಿಟ್ಟು ಜ್ವರ ಬರುತ್ತಿದ್ದಾಗ, ಒಣಕೆಮ್ಮು ಇದ್ದಾಗ, ಜೀರ್ಣಾಗ್ನಿಯು ಬಹುವಾಗಿ ವರ್ಧಿಸಿದಾಗ ಮಾಂಸಖಂಡಗಳು ಕ್ಷೀಣಿಸುತ್ತಿದ್ದಾಗ ಗೋಮಾಂಸವು ವಿಹಿತವಾಗಿರುತ್ತದೆ.

ನಿಸರ್ಗ ಸಹಜವಾಗಿ ಹಿಂಸಾವಿನೋದಿ ಎಂದು ಯಾರನ್ನು ಕರೆಯುತ್ತಾರೋ ಅವನು ಒಂದು ವೇಳೆ ಹಿಂಸೆಗೊಳಗಾಗುವವನ ಸ್ಥಾನದಲ್ಲಿ ತನ್ನನ್ನು ಕಲ್ಪಿಸಿಕೊಂಡರೆ ಖಂಡಿತವಾಗಿಯೂ ಅಹಿಂಸೆಯತ್ತ ಸೆಳೆಯಲ್ಪಡುತ್ತಾನೆ. ಆ ಅವಧಿಯಲ್ಲಿ ಗೋವಿನ ಪಾವಿತ್ರ್ಯದ ಕಲ್ಪನೆ ಸೃಷ್ಟಿಯಾದ ಸಂದರ್ಭದಲ್ಲಿ. ಬೌದ್ಧ ಮತ್ತು ಜೈನ ಧರ್ಮಗಳು ಸರಳವಾಗಿದ್ದು ಅಹಿಂಸಾ ಪ್ರಧಾನ ತತ್ವಗಳನ್ನು ಹೊಂದಿದ್ದ ಕಾರಣ ಬಹುಮಂದಿಯ ಮನಗೆಲ್ಲುವಲ್ಲಿ ಯಶಸ್ವಿಯಾದವು. ಇವುಗಳ ಪ್ರಹಾರದಿಂದ ತಪ್ಪಿಸಿಕೊಂಡು ಉಳಿವಿಗಾಗಿ ಸೆಣಸುತ್ತಿದ್ದ ವೈದಿಕ ಧರ್ಮಕ್ಕೆ ಅಹಿಂಸೆಯನ್ನು ತನ್ನಲ್ಲಿ ಅಳವಡಿಸಿಕೊಳ್ಳುವುದು ಅವಶ್ಯವೇ ಆಗಿದ್ದಿತು. ಆದರೆ ಯಾವುದು ಆತ್ಮಗೌರವದ ಸಂಕೇತವೆಂದು ಪರಿಗಣಿಸಲ್ಪಟ್ಟಿತ್ತೋ ಅದನ್ನು ಸಂಪೂರ್ಣವಾಗಿ ತಿರಸ್ಕರಿಸುವುದು ಅಸಾಧ್ಯವಾಗಿತ್ತು.

○ ಶ್ರೀಶ ಉಡುಪ

(ಚರಕ ಸಂಹಿತಾ 1.27 7.9)

೨. ವಾಯುವು ಪ್ರಕೋಪಕ್ಕೆ ಬಂದಿದ್ದರೆ ಶಾಲ್ಯಾನ್ನ ಮತ್ತು ತರಕಾರಿಗಳನ್ನು ಬೇಯಿಸಿದಂತೆ ಬೇಯಿಸಿ ಗೋವು...ಪ್ರಾಣಿಗಳ ಮಾಂಸರಸವನ್ನು ಕೊಡಬೇಕು. (ಚರಕ ಸಂಹಿತಾ 6-14.126-127)

ಯಜ್ಞಕ್ರಿಯೆಗಳತ್ತ ದೃಷ್ಟಿಹಾಯಿಸೋಣ. ಅಶ್ವಮೇಧಯಾಗದ ಅಂತ್ಯದಲ್ಲಿ 21 ಬರಡು ಹಸುಗಳನ್ನು ಬಲಿಕೊಡುತ್ತಿದ್ದರು. ರಾಜಸೂಯ, ವಾಜಪೇಯಿ ಯಾಗಗಳಲ್ಲೂ ಗೋವಧೆ, ಧಾರ್ಮಿಕ ಕ್ರಿಯೆಯ ಒಂದು ಪ್ರಮುಖ ಭಾಗವಾಗಿತ್ತು. ಶ್ರಾದ್ಧದಲ್ಲಿ ಇತರ ಪ್ರಾಣಿಗಳ ಬಲಿ ಹೇಗೋ ಹಾಗೇ ಗೋವಿನ ಬಲಿಯೂ ಅಗತ್ಯವಾಗಿತ್ತು. (ಆಪಸ್ತಂಭ ಧರ್ಮ ಸೂತ್ರ II 7.16.25)

ಈ ಮೇಲಿನವುಗಳು ಯಾವುವೂ ಗೋವಿಗೆ ಪಾವಿತ್ರ್ಯವನ್ನು ಆರೋಪಿಸಿಲ್ಲ ಹಾಗಾದರೆ ಗೋವಿನ ಪಾವಿತ್ರ್ಯದ ಕಲ್ಪನೆ ಎಲ್ಲಿಂದ ಕಾಣಿಸಿಕೊಂಡಿತು?

ದ್ವಂದ್ವ ನಿಲುವಿಗೆ ಪ್ರಸಿದ್ಧವಾದ ಮನುಸ್ಮೃತಿಯಲ್ಲಿ ಗೋವಿನ ಬಗ್ಗೆ ಕಂಡುಬಂದಿರುವ ದ್ವಂದ್ವ ಈ ಸಮಸ್ಯೆಯ ಪರಿಹಾರಕ್ಕೆ ಒಂದು ಸುಳಿವನ್ನು ಒದಗಿಸುತ್ತದೆ. ಅವನ್ನೀಗ ನೋಡೋಣ. ಮನುಸ್ಮೃತಿಯಲ್ಲಿ ವಧಿಸಬಹುದಾದ ಮತ್ತು ವಧಿಸತಕ್ಕಂತಹ ಪ್ರಾಣಿಗಳ ಪಟ್ಟಿಯನ್ನು ನೀಡಲಾಗಿದೆ. ಅದಕ್ಕೆ ಗೋವು ಸೇರಿಲ್ಲ. ಅದೇ ಮನುಸ್ಮೃತಿ ಗೋಮಾಂಸವನ್ನು ಮುಟ್ಟಿದವನು ಜಾತಿ ಭ್ರಷ್ಟನಾಗಿದ್ದಾನೆ. (11.60) ಎಂದಿದೆ. ಇನ್ನೊಂದು ದ್ವಂದ್ವ ನಿಲುವೆಂದರೆ ಮನು ಯಾಗದ ಸಂದರ್ಭದಲ್ಲಿ ಮಾಡಲಾಗುವ ಗೋವಧೆಯನ್ನು ವಧೆಯಲ್ಲ ಎನ್ನುತ್ತಾನೆ (5.39)

ಹಾಗಾದರೆ ಯಾಕಾಗಿ ಗೋವಿನ ಪಾವಿತ್ರ್ಯದ ಕಲ್ಪನೆ ಹುಟ್ಟಿಕೊಂಡಿತು?

ವರ್ಣಾ ಶ್ರಮಧರ್ಮಕ್ಕನುಸಾರವಾಗಿ ನಾಲ್ಕು ಸ್ತರಗಳ ವ್ಯವಸ್ಥೆಯಾಗಿ ರೂಪುಗೊಂಡಿದ್ದ ಸಾಮಾಜಿಕ ಸಂದರ್ಭದಲ್ಲಿ ಪುರೋಹಿತಶಾಹಿ ವರ್ಗವು ಮೇಲು ಸ್ತರವನ್ನು ಆಕ್ರಮಿಸಿಕೊಂಡು ಉಳಿದೆಲ್ಲಾ ಸ್ತರಗಳಿಗಿಂತ ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯಿತು.

ಇನ್ನು, ಪಶುಪಾಲನೆಯ ವೃತ್ತಿಯನ್ನು ನಿರ್ವಹಿಸುತ್ತಿದ್ದ ಆರ್ಯರ ಬದುಕಿನಲ್ಲಿ ಸಹಜವಾಗಿಯೇ ಗೋವುಗಳು ಇತರ ಎಲ್ಲಾ ಪ್ರಾಣಿಗಳಿಗಿಂತ ಉನ್ನತ ಸ್ಥಾನವನ್ನು ಪಡೆದಿದ್ದವು. ವಿನಿಮಯ ಮಾಧ್ಯಮವಾಗಿ ಮತ್ತು

ಹತ್ತೊಂಭತ್ತನೇ ಮತ್ತು ಇಪ್ಪತ್ತನೇ ಗೋವಿಗೆ ಆರೋಪಿಸಿದ ಪಾವಿತ್ರ್ಯ ಗುರುತರದ್ದೇನೂ ಆಗಿರಲಿಲ್ಲ. ಕೋಮುವಾದಿ ಮನೋಭಾವನೆ, ಚಟುವಟಿಕೆಗಳ ಬೆಳವಣಿಗೆಯೊಂದಿಗೆ ಗೋವಿನ 'ದೈವತ್ವ'ವೂ ಬೆಳೆದು ಬಂತೆಂಬುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ.

ಸಾಂಪತ್ತಿಕ ರೂಪವನ್ನು ಹೊಂದಿ ಆರ್ಯರ ದೈನಂದಿನ ಜೀವನದಲ್ಲಿ ಗೋವು ಪ್ರಮುಖ ಪಾತ್ರವನ್ನು ಗಳಿಸಿತು. ಗುಪ್ತರ ಮತ್ತು ಗುಪ್ತೋತ್ತರ ಕಾಲಾವಧಿಯಲ್ಲಿ ಗೋ-ಬ್ರಾಹ್ಮಣಹಿತವನ್ನು ಜಂಟಿ ಹಾಕುವ ಪ್ರವೃತ್ತಿ ಬೆಳೆಯಿತು. ಅಲ್ಲಿಂದ ಗೋವನ್ನು ಆಹಾರವನ್ನಾಗಿ ಸ್ವೀಕರಿಸುವುದು ವರ್ಜ್ಯವೆಂದು ಪರಿಗಣಿಸಲಾಯಿತು. ಅಂಥವರನ್ನು ಚಾಂಡಾಲರೆಂದು ಕರೆಯಲಾಯಿತು.

ಆದರೆ ಇಲ್ಲಿ ಧರ್ಮಶಾಸ್ತ್ರಕಾರರು ಯಾವುದನ್ನು ಅಪೌರುಷೇಯವೆಂದು ಪರಿಗಣಿಸುತ್ತಿದ್ದಾರೋ ಆ ವೇದಗಳನ್ನು ಗೋವಿನ ವಿಷಯದಲ್ಲಿ ಯಾಕೆ ಧಿಕ್ಕರಿಸಿದರು ಎಂಬ ಪ್ರಶ್ನೆ ಏಳುತ್ತದೆ.

ನಿಸರ್ಗ ಸಹಜವಾಗಿ ಹಿಂಸಾವಿನೋದಿ ಎಂದು ಯಾರನ್ನು ಕರೆಯುತ್ತಾರೋ ಅವನು ಒಂದು ವೇಳೆ ಹಿಂಸೆಗೊಳಗಾಗುವವನ ಸ್ಥಾನದಲ್ಲಿ ತನ್ನನ್ನು ಕಲ್ಪಿಸಿಕೊಂಡರೆ ಖಂಡಿತವಾಗಿಯೂ ಅಹಿಂಸೆಯತ್ತ ಸೆಳೆಯಲ್ಪಡುತ್ತಾನೆ. ಆ ಅವಧಿಯಲ್ಲಿ ಗೋವಿನ ಪಾವಿತ್ರ್ಯದ ಕಲ್ಪನೆ ಸೃಷ್ಟಿಯಾದ ಸಂದರ್ಭದಲ್ಲಿ. ಬೌದ್ಧ ಮತ್ತು ಜೈನ ಧರ್ಮಗಳು ಸರಳವಾಗಿದ್ದು ಅಹಿಂಸಾ ಪ್ರಧಾನ ತತ್ವಗಳನ್ನು ಹೊಂದಿದ್ದ ಕಾರಣ ಬಹುಮಂದಿಯ ಮನಗೆಲ್ಲುವಲ್ಲಿ ಯಶಸ್ವಿಯಾದವು. ಇವುಗಳ ಪ್ರಹಾರದಿಂದ ತಪ್ಪಿಸಿಕೊಂಡು ಉಳಿವಿಗಾಗಿ ಸೆಣಸುತ್ತಿದ್ದ ವೈದಿಕ ಧರ್ಮಕ್ಕೆ ಅಹಿಂಸೆಯನ್ನು ತನ್ನಲ್ಲಿ ಅಳವಡಿಸಿಕೊಳ್ಳುವುದು ಅವಶ್ಯವೇ ಆಗಿದ್ದಿತು. ಆದರೆ ಯಾವುದು ಆತ್ಮಗೌರವದ ಸಂಕೇತವೆಂದು ಪರಿಗಣಿಸಲ್ಪಟ್ಟಿತ್ತೋ ಅದನ್ನು ಸಂಪೂರ್ಣವಾಗಿ ತಿರಸ್ಕರಿಸುವುದು ಅಸಾಧ್ಯವಾಗಿತ್ತು. (ಈ ದ್ವಂದ್ವಕ್ಕೆ ಸಿಲುಕಿಕೊಂಡಿದ್ದ ಮನು ಅದನ್ನೇ ತನ್ನ ಧರ್ಮ ಗ್ರಂಥದಲ್ಲಿ ಪ್ರಕಟಗೊಳಿಸಿದ್ದಾನೆ) ಹೀಗಾಗಿ ಹಿಂದೂ ಧರ್ಮ ಅಹಿಂಸೆಯನ್ನು ಸಂಪೂರ್ಣವಾಗಿ ನೆಚ್ಚಿಕೊಳ್ಳಲು ನಿರಾಕರಿಸಿತು ಮತ್ತು ಲಾಭದಾಯಕವಾಗಿದ್ದ ಗೋವನ್ನು ಆಹಾರಯೋಗ್ಯ ಸ್ಥಾನದಿಂದ ದೂರೀಕರಿಸಿತು. ಈ ರೀತಿಯಾಗಿ ಗೋವು ಹಿಂದೂ ಧರ್ಮದ ಪುನರುತ್ಥಾನಕ್ಕೆ ಮತ್ತು ಅದೇ ವೇಳೆಯಲ್ಲಿ ಇತರ ಧರ್ಮಗಳ ಅದರಲ್ಲೂ ವಿಶೇಷವಾಗಿ ಬೌದ್ಧಧರ್ಮದ ಮೇಲೆ ಪ್ರಹಾರ ವೆಸಗಲು ಆಯುಧವಾಗಿ ಬಳಕೆಯಾಯಿತು.

ಆದರೆ ಹತ್ತೊಂಭತ್ತನೇ ಮತ್ತು ಇಪ್ಪತ್ತನೇ ಶತಮಾನದಲ್ಲಿ ಗೋವಿಗೆ ಆರೋಪಿಸಿದ ಪಾವಿತ್ರ್ಯ ಗುರುತರದ್ದೇನೂ ಆಗಿರಲಿಲ್ಲ. ಕೋಮುವಾದಿ ಮನೋಭಾವನೆ, ಚಟುವಟಿಕೆಗಳ ಬೆಳವಣಿಗೆಯೊಂದಿಗೆ ಗೋವಿನ 'ದೈವತ್ವ'ವೂ ಬೆಳೆದು ಬಂತೆಂಬುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. ಯಾಕಾಗಿ ಗೋವೇ ವರ್ಜ್ಯವಾಗಿದೆ? ವಿಷ್ಣುವಿನ ಅವತಾರಗಳೆಂದು ನಂಬಲಾದ ಹಂದಿ, ಮೀನು ಇತ್ಯಾದಿಗಳೇಕೆ ವರ್ಜ್ಯವಲ್ಲ?

ಯಾಕೆಂದರೆ ಅವುಗಳನ್ನು ಕೋಮುವಾದೀ ರಾಜಕೀಯದ ದಾಳಗಳನ್ನಾಗಿಸಲಾಗದು? ಮತ್ತು ಅನ್ಯಕೋಮಿನ ಬಗ್ಗೆ ಅಸಹಿಷ್ಣುತೆಯನ್ನು ಬೆಳೆಸಲು ಅವು ಸಹಕಾರಿಯಾಗಲಾರವೇನೋ?

ಇವೆಲ್ಲಾ ಏನನ್ನು ಸೂಚಿಸುತ್ತವೆ? ಗೋಹತ್ಯಾ ನಿಷೇದಕ್ಕೂ ಕೋಮುವಾದಕ್ಕೂ ನೇರ ಸಂಬಂಧವಿದೆ ಎಂದಲ್ಲವೇ? 'ಗೋ ಬ್ರಾಹ್ಮಣ ಹಿತ'ದ ಧೂರ್ತ ಹಿನ್ನೆಲೆಯನ್ನು ಹೊಂದಿರುವ ಗೋಪಾವಿತ್ರ್ಯದ ಕಲ್ಪನೆಗೂ ಚಾತುರ್ವರ್ಣ್ಯ ಸಮಾಜ ವ್ಯವಸ್ಥೆಯ ಅಸ್ತಿತ್ವಕ್ಕೂ ನೇರ ನಂಟಿದೆಯಲ್ಲವೇ? ಲಕ್ಷ ಲಕ್ಷ ಜನ ನಿರ್ಗತಿಕರಾಗಿದ್ದಾಗ್ಯೂ ಬೀದಿ ಬೀದಿಗಳಲ್ಲೂ ಗೋಶಾಲೆಗಳನ್ನು ನಿರ್ಮಿಸಲು ಹೊರಟವರೂ ಧರ್ಮಾತ್ಮರೇ ಅಥವಾ ಮುಸುಕಿನೊಳಗೆ ಜ್ವಾಜಲ್ಯಮಾನ ಕ್ರೌರ್ಯಾಗ್ನಿಯನ್ನು ಧರಿಸಿಕೊಂಡವರೇ ಮತ್ತು ಧಿಕ್ಕಾರ ಯೋಗ್ಯಹೀನ ವ್ಯಕ್ತಿಗಳೇ? ಅಂದರೆ ನಾವು ಗೋಹತ್ಯಾ ನಿಷೇಧ ಕಾನೂನನ್ನು ಬೆಂಬಲಿಸಿದರೆ ಏನನ್ನು ಬೆಂಬಲಿಸಿದಂತಾಗುತ್ತದೆ? ಎತ್ತ ಸಾಗಿದಂತಾಗುತ್ತದೆ? ನಾವೇನನ್ನು ಬಯಸುತ್ತೇವೆ?- ಕರಾಳ ಭವಿಷ್ಯವನ್ನೋ ಅಥವಾ... ●

ಪರಾಮರ್ಶಿಕ ಗ್ರಂಥಗಳು :

1. The myth of the holy cow - D.N. Jha
2. ಭಾರತೀಯ ವಿಜ್ಞಾನದ ಹಾದಿ - ಜಿ. ರಾಮಕೃಷ್ಣ
3. 'ದಿವೋದಾಸ'-ಪಾಡಿತ ರಾಹುಲ ಸಾಂಕೃತ್ಯಾಯನ



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ *ಆಹ್ವಾನಿಸುತ್ತದೆ.*

ಪ್ರಕಾಶಕರು/ಲೇಖಕರು ಪ್ರಕಟಿತ ಕೃತಿಯ 2 ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ : 'ಸಂವಾದ' ಮಾಸ ಪತ್ರಿಕೆ ಅಂಚೆ ಪೆಟ್ಟಿಗೆ ಸಂಖ್ಯೆ : 9143, ಹೇರೋಹಳ್ಳಿ
ಮಾಗಡಿರಸ್ತೆ, ವಿಶ್ವನೀಡಂ ಅಂಚೆ, ಬೆಂಗಳೂರು - 560 091
ದೂರವಾಣಿ : 3287943 / 3281667

ಅಧಿಕಾರವನ್ನು ಮೆಟ್ಟಿನಿಲ್ಲಿ; ಅಯ್ಯನ್‌ಕಾಳಿ

ಅಯ್ಯನ್ ಕಾಳಿ ಎರಡು ಬಿಳಿ ಎತ್ತುಗಳನ್ನು ಮತ್ತು ಗಾಡಿಯನ್ನು ಕೊಂಡುತಂದ. ಮತ್ತು ಅವುಗಳ ಕುತ್ತಿಗೆಯ ಸುತ್ತ ದೊಡ್ಡ ತಾಮ್ರದ ಗೆಜ್ಜೆಗಳನ್ನು ಕಟ್ಟಿದ. ಸವರ್ಣೀಯರಿಗೆ ಈ ಪುಲಯನ ಹಮ್ಮಿನಿಂದ ದಿಗಿಲು ಹುಟ್ಟಿತು. ಇವನು ದೋತಿ, ಅಂಗವಸ್ತ್ರದ ಹೊದಿಕೆ (ಶಾಲು)ಯನ್ನು ಭುಜಕ್ಕೆ ಸುತ್ತಿಕೊಳ್ಳುತ್ತಿದ್ದ ಮತ್ತು ತಲ್ಪಾವು (ರುಮಾಲು)ನ್ನು ಕಟ್ಟಿಕೊಳ್ಳುತ್ತಿದ್ದ, ಗಾಡಿಯನ್ನು ಓಡಿಸಿಕೊಂಡು ಸಣ್ಣ ಮಾರ್ಕೆಟ್ಟಿನತ್ತ ಸಾಗುತ್ತಿದ್ದ. ಅವನು ಮನೆಗೆ ಹಿಂದಿರುಗುತ್ತಿರುವಾಗ, ಗಟ್ಟಿಮುಟ್ಟಾದ ಸವರ್ಣೀಯರು ಅವನನ್ನು ತಡೆಯುತ್ತಾರೆ. ಏನಯ್ಯ? ನೀನೂ ಮಲೀಮಲಾ ಪಂಚೆಯನ್ನು ಧರಿಸುತ್ತೀಯೇನು? ಎಂದು ಅರಚುತ್ತಾರೆ. ಅಯ್ಯನ್‌ಕಾಳಿ ತನ್ನ ನಡುವಿಗೆ ಸಿಕ್ಕಿಸಿದ್ದ ಉದ್ಧವಾದ ಕತ್ತಿಯನ್ನು ಎಳೆದು ಬೀಸುತ್ತಾ ಏರಿಕೆಯ ಧ್ವನಿಯಲ್ಲಿ, ತನ್ನನ್ನು ಯಾರಾದರೂ ತಡೆದಲ್ಲಿ ಅವರಿಗೆ ಈ ಕತ್ತಿಯ ತುದಿಯಿಂದ ತಕ್ಕ ಶಾಸ್ತಿಯಾಗುತ್ತದೆ ಎಂದು ಕೈಗಳನ್ನು ಬೀಸುತ್ತಾನೆ.

ಮೂಲ : **ಚಿಂತಾರಸರಾ** ಅನು : **ಡಿ.ದಾ.ಚಿ.**



28ನೇ ಆಗಸ್ಟ್ 1863ರಂದು ಟ್ರಾವೆಂಕೋರದಲ್ಲಿನ ತಿರುವನಂತರಪುರಂನ ಉತ್ತರಕ್ಕೆ 13 ಕಿ.ಮೀ. ದೂರದಲ್ಲಿರುವ ವೆಂಗನೂರ್ ಹಳ್ಳಿಯ ಅಯ್ಯನ್ ಮತ್ತು ಮಾಲರಿಗೆ ಕಾಳಿ ಜನಿಸಿದ (ಇಂದಿನ ಕೇರಳವು ದಕ್ಷಿಣ ಟ್ರಾವಲಂಕೋರ, ಕೇಂದ್ರಕೊಚ್ಚಿ ಮತ್ತು ಉತ್ತರ ಮಲಬಾರ್ ಸೇರಿ ರಚಿತವಾಗಿದೆ). ನಂತರದಲ್ಲಿ ಇವನನ್ನು ಅಯ್ಯನ್‌ಕಾಳಿ ಎಂದು ಕರೆಯಲಾಯಿತು. ಪುಲಯ ಜಾತಿಯ (ಕೃಷಿ ಕಾರ್ಮಿಕರು) ಅಯ್ಯನ್ ಮತ್ತು ಮಾಲರ ಏಳು ಜನ ಮಕ್ಕಳಲ್ಲಿ ಇವನು ಒಬ್ಬನಾಗಿದ್ದ.

ಅಯ್ಯನ್‌ಕಾಳಿ ಎತ್ತರವಾದ, ಗಟ್ಟಿ ಮೈಕಟ್ಟಿನ ಸುಂದರ ಯುವಕನಾಗಿ ಬೆಳೆದ. ಇವನು ಯುದ್ಧ ಕ್ರೀಡೆಗಳಲ್ಲಿ ತನ್ನ ದೈಹಿಕ ಸಾಮರ್ಥ್ಯ ಮತ್ತು ದಕ್ಷತೆಗೆ ಹೆಸರಾಗಿದ್ದವನು. ಒಂದು ದಿನ ಇವನು ತನ್ನ ಗೆಳೆಯರೊಂದಿಗೆ ಫುಟ್‌ಬಾಲ್ ಆಡುತ್ತಿದ್ದಾಗ, ಅಯ್ಯನ್‌ಕಾಳಿ ಹೊಡೆದ ಬಾಲು ನಾಯರ್ ಮನೆಯ ಹೆಂಚಿನ ಮೇಲೆ ಬಿತ್ತು. ನಾಯರ್ ಸವರ್ಣ (ಜಾತಿ ಹಿಂದೂ) ಯುವಕರ ಜತೆಗೆ ಆಡಬೇಡವೆಂದು ಇವನಿಗೆ ಎಚ್ಚರಿಕೆ ನೀಡುತ್ತಾರೆ. ಇವನು ಅವರ ಜತೆ ಆಡುವುದಿಲ್ಲವೆಂದು ಪ್ರತಿಜ್ಞೆ ಕೈಗೊಳ್ಳುತ್ತಾನೆ. ಗಾಢ ಆಲೋಚನೆಗೆ ತೊಡಗಿಸಿಕೊಳ್ಳುತ್ತಾನೆ. ಒಂದು ತಿಂಗಳ ಧ್ಯಾನದಿಂದ ಹೊರ ಬಂದ ಈತ ಬುದ್ಧನಂತೆ ಅಸ್ಪೃಶ್ಯರಿಗಾಗಿ ನಾಗರಿಕ ಹಕ್ಕುಗಳೆಂಬ ರಹಸ್ಯ ಕಾರ್ಯಯೋಜನೆಯೊಂದಿಗೆ ಕ್ರಿಯಾಶೀಲನಾಗುತ್ತಾನೆ.

ಅಯ್ಯನ್‌ಗೆ ಗೋವಿಂದ ಪಿಳ್ಳೈ ಎಂಬ ಒಳ್ಳೆಯ ಜಮೀನ್ದಾರನು ಹಿತರಕ್ಷಕನಾಗಿರುತ್ತಾನೆ, ಜಮೀನ್ದಾರರು ಅಯ್ಯನ್‌ನ ನೆರವಿನೊಂದಿಗೆ ಕಾಡುಗಳನ್ನು ಕಡಿದು ಬೇಸಾಯ ಭೂಮಿಯನ್ನಾಗಿಸಿದ. ನಂತರ, ಅವನು ಒಂದು ಜಾಗವನ್ನು ಅಯ್ಯನ್‌ಗೆ ಬಹುಮಾನವಾಗಿ ಕೊಟ್ಟ. ಒಬ್ಬ ಪುಲಯನ್ ಜಾತಿಯವನು ಭೂಒಡೆತನ ಹೊಂದಿದ್ದು ಭೂಮಾಲೀಕರಲ್ಲಿ ಅಸಮಾಧಾನಕ್ಕೆಡೆಕೊಡುತ್ತದೆ.

1888ರಲ್ಲಿ ಅಯ್ಯನ್‌ಕಾಳಿ ಕಪ್ಪು ಬಣ್ಣದ ಸುಂದರಿ ಚೆಲ್ಲಮ್ಮಳನ್ನು ಮದುವೆಯಾದ. ಇವರಿಗೆ ಏಳು ಜನ ಮಕ್ಕಳು. ಒಬ್ಬಳೇ ಮಗಳಾದ ತಂತಮ್ಮ ಟಿ.ಟಿ. ಕೇಶವಶಾಸ್ತ್ರಿಯನ್ನು ಮದುವೆಯಾದಳು. ಇವರು ಕೇರಳ ವಿಧಾನ ಸಭಾಧ್ಯಕ್ಷರಾಗಿದ್ದರು.

ಇವನು ಮತ್ತು ಇವನ ಸ್ನೇಹಿತರು ರಾಜಾ ಹರಿಶ್ಚಂದ್ರ ಮತ್ತು ತಮ್ಮ ಸ್ವಂತ ಸೃಜನೆಯ ಕೆಲವು ನಾಟಕಗಳನ್ನು ಅಭಿನಯಿಸುತ್ತಿದ್ದರು. ನಾಟಕಗಳು ಟ್ರಾವೆಂಕೋರ್ ರಾಜ್ಯ ಮತ್ತು ನೆರೆರಾಜ್ಯಗಳಾದ ಕೊಚ್ಚಿ ಮತ್ತು ಮಲಬಾರಿನ ಅಸ್ಪೃಶ್ಯತಾ ಸಮುದಾಯವನ್ನು ಜಾಗೃತಗೊಳಿಸುವ ಸಾಮಾಜಿಕ ಪ್ರತಿಭಟನೆಯ ಸಾಕಷ್ಟು ಅಂಶಗಳನ್ನು ಒಳಗೊಂಡಿರುತ್ತಿದ್ದವು.

ಅಯ್ಯನ್ ಕಾಳಿ ಎರಡು ಬಿಳಿ ಎತ್ತುಗಳನ್ನು ಮತ್ತು ಗಾಡಿಯನ್ನು ಕೊಂಡುತಂದ. ಮತ್ತು ಅವುಗಳ ಕುತ್ತಿಗೆಯ ಸುತ್ತ ದೊಡ್ಡ ತಾಮ್ರದ ಗೆಜ್ಜೆಗಳನ್ನು ಕಟ್ಟಿದ. ಸವರ್ಣೀಯರಿಗೆ ಈ ಪುಲಯನ ಹಮ್ಮಿನಿಂದ ದಿಗಿಲು ಹುಟ್ಟಿತು. ಇವನು ದೋತಿ, ಅಂಗವಸ್ತ್ರದ ಹೊದಿಕೆ (ಶಾಲು)ಯನ್ನು ಭುಜಕ್ಕೆ ಸುತ್ತಿಕೊಳ್ಳುತ್ತಿದ್ದ ಮತ್ತು ತಲ್ಪಾವು (ರುಮಾಲು)ನ್ನು ಕಟ್ಟಿಕೊಳ್ಳುತ್ತಿದ್ದ, ಗಾಡಿಯನ್ನು ಓಡಿಸಿಕೊಂಡು ಸಣ್ಣ ಮಾರ್ಕೆಟ್ಟಿನತ್ತ ಸಾಗುತ್ತಿದ್ದ.

ಅವನು ಮನೆಗೆ ಹಿಂದಿರುಗುತ್ತಿರುವಾಗ, ಗಟ್ಟಿಮುಟ್ಟಾದ ಸವರ್ಣೀಯರು ಅವನನ್ನು ತಡೆಯುತ್ತಾರೆ. ಏನಯ್ಯ? ನೀನೂ ಮಲೀಮಲಾ ಪಂಚೆಯನ್ನು ಧರಿಸುತ್ತೀಯೇನು? ಎಂದು ಅರಚುತ್ತಾರೆ.

ಅಯ್ಯನ್‌ಕಾಳಿ ತನ್ನ ನಡುವಿಗೆ ಸಿಕ್ಕಿಸಿದ್ದ ಉದ್ಧವಾದ ಕತ್ತಿಯನ್ನು ಎಳೆದು ಬೀಸುತ್ತಾ ಏರಿಕೆಯ ಧ್ವನಿಯಲ್ಲಿ, ತನ್ನನ್ನು ಯಾರಾದರೂ ತಡೆದಲ್ಲಿ ಅವರಿಗೆ ಈ ಕತ್ತಿಯ ತುದಿಯಿಂದ ತಕ್ಕ ಶಾಸ್ತಿಯಾಗುತ್ತದೆ ಎಂದು ಕೈಗಳನ್ನು ಬೀಸುತ್ತಾನೆ.

ಆ ದಿನ ಅವನು ಅಸ್ಪೃಶ್ಯರಿಗೆ ಅದುವರೆಗೆ ನಿಷೇಧಿಸಲಾಗಿದ್ದ ನಾಗರಿಕ ಹಕ್ಕನ್ನು ಚಲಾಯಿಸುತ್ತಾನೆ. ಆತನ ಎತ್ತಿನ ಗಾಡಿಯ ನಿನಾದವು ದಿನದಿಂದ ದಿನಕ್ಕೆ ಬೀದಿಯಲ್ಲಿ ಮತ್ತು ಮಾರುಕಟ್ಟೆಯಲ್ಲಿ ಹೆಚ್ಚಾಗುತ್ತ ಹೋಗುತ್ತದೆ. ಇವನ ಯಶಸ್ಸು ಇತರ ದಲಿತರನ್ನು ಸ್ವಾಭಿಮಾನ ಮತ್ತು ಜಾಗೃತಿಯನ್ನು ಹುಟ್ಟು ಹಾಕಿದರೆ, ಸವರ್ಣೀಯರನ್ನು ಕನಲಿಸಿತು.

ಚಾಲಿಯಾರ್ ದಂಗೆ :

ಕಾಳಿ ಬೀದಿಯಲ್ಲಿ ಗಾಡಿಯಲ್ಲಿ ಹೋಗುತ್ತಿರುವಾಗ,

ಇತರ ಕೆಳಜಾತಿಯವರು ಅಲ್ಲಿ ಹೋಗಲು ಬಿಡುತ್ತಿರಲಿಲ್ಲ. ಹಾಗಾಗಿ ಇವನು ಪುಥನ್ ಮಾರ್ಕೆಟ್ಟಿನವರೆಗೆ 'ಸ್ವಾತಂತ್ರ್ಯಕ್ಕಾಗಿ ನಡಿಗೆ' ಕೈಗೊಳ್ಳುತ್ತಾನೆ. ಅವರು ಬಲರಾಮ್‌ಪುರಂನ ಚಾಲಿಯಾರಾ ಬೀದಿ ತಲುಪುವಾಗ, ಅವರನ್ನು ಮುಂದೆ ಹೋಗದಂತೆ ತಡೆಯಲು ಸವರ್ಣ ಗುಂಪು ಕಾಯುತ್ತಿತ್ತು. ಈ ದಂಗೆಯಲ್ಲಿ ಎರಡು ಪಕ್ಷದವರ ರಕ್ತ ಹರಿಯಿತು. ಇದು ದಲಿತರ ಮೊದಲ ಶಸ್ತ್ರಾಸ್ತ್ರ ದಂಗೆ.

ಕಾಳಿಯು ಅನುಕಂಪಕ್ಕಾಗಿ ಕಾಯಲಿಲ್ಲ.

ಚಾಲಿಯಾರಾ ದಂಗೆಯಿಂದ ಪ್ರೇರಿತರಾದ ಯುವಕರು ಬೀದಿಗಿಳಿದರು. ಮನಕ್ಕಾಡು, ಕಾಳಾಕೊಟ್ಟಂ, ಶನಿಯಪುರಂ ಮತ್ತು ರಾಜಧಾನಿಯ ಸುತ್ತಮುತ್ತಲ ಇತರ ಪ್ರದೇಶಗಳಲ್ಲಿ ನ್ಯಾಯಯುತವಾದ ಮೂಲಭೂತ ಹಕ್ಕುಗಳಲ್ಲಿ ಗೆಲುವು ಪಡೆದರು. ಸವರ್ಣೀಯರು 'ಸ್ವಾತಂತ್ರ್ಯ ಚಳುವಳಿ'ಯನ್ನು ಹತ್ತಿಕ್ಕಲು ಪ್ರಯತ್ನಿಸಿದರು. ಅಶಾಂತಿ ಹರಡಿತು.

ಈ ಮಧ್ಯೆ, ಥಾಮಸ್ ಟೀಚರನ ನಾಯಕತ್ವದಲ್ಲಿ ಅಸ್ಪೃಶ್ಯತೆಯ ಮತ್ತು ಮಾನವ ಹಕ್ಕುಗಳ ನಿರಾಕರಣೆಯನ್ನು ವಿರೋಧಿಸಲು ವೇದಿಕೆಯನ್ನು ಮಾಡುತ್ತಾರೆ. ಅದರಲ್ಲಿ ನಂದನಾಕೋಡೆ ಹೆವ್ರಿ, ಮೂಲಕೊನಂ ಹ್ಯಾರಿಸಾ, ಬ್ಲಿಂಕ್ ಥಾಮಸ್ ಟೀಚರ್ ಮುಂತಾದವರಿದ್ದರು.

ಸ್ವಾಮಿಗೆ ಕಾಳಿ ಮತ್ತು ಅವನ ಗುಂಪಿನಿಂದ ಹಾರ್ದಿಕ ಸ್ವಾಗತ ದೊರೆಯಿತು. ಅವನು ಕಪ್ಪು ಜನರೊಂದಿಗೆ ಮಾತುಕತೆ ನಡೆಸಿ, ಅವರ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡ. 'ದಲಿತರು ತಮ್ಮ ಸ್ವಂತ ಪ್ರಯತ್ನಗಳಿಂದ ಅರಿವು ಪಡೆದು, ಸಂಘಟಿತರಾಗಿ ಮೇಲೆ ಬರಬೇಕು ತಮ್ಮದೇ ಆದ ನಾಯಕತ್ವವನ್ನು ಬೆಳೆಸಬೇಕು' ಎಂದ.

ಸ್ವಾಮಿ ಹೇಳಿದ 'ನಿಮ್ಮ ನಾಯಕನು ಬರೆಯಲು ಮತ್ತು ಓದಲು ತಿಳಿದುಕೊಂಡಿರಬೇಕು' ಎಂದಾಗ ಕಾಳಿ ಅಸಹಾಯಕನಾದ. ಅವರಲ್ಲಿ ಯಾರೊಬ್ಬರೂ ಓದಲು ಮತ್ತು ಬರೆಯಲು ಬರುತ್ತಿರಲಿಲ್ಲ. ತೈ-ವಿಲಗಪ್ಪು ಕಾಳಿ (ಟಿ. ಕಾಳಿ) ಎಂಬವನೊಬ್ಬ ಸ್ವಲ್ಪಮಟ್ಟಿಗೆ ತಾನು ರಹಸ್ಯವಾಗಿ ಕಲಿತು ಓದಲು, ಬರೆಯಲು ತಿಳಿದುಕೊಂಡಿದ್ದ. ಸ್ವಾಮಿ ಅವನನ್ನು ನಾಯಕನೆಂದು ಹೇಳಿದ...

ಎಲ್ಲ ಜಾತಿಗಳಿಂದಲೂ ಕ್ರೈಸ್ತ ಧರ್ಮಕ್ಕೆ ಭಾರೀ ಮತಾಂತರವಾಗುತ್ತಿತ್ತು. ಹೊಸದಾಗಿ ಮತಾಂತರ ಗೊಂಡವರು ಮತಾಂತರ ಗೊಳ್ಳದಿರುವವರನ್ನು ಮುಗ್ಧರು, ನಂಬಿಕೆಯಿಲ್ಲದವರು, ಹೊರಗಿನವರೆಂದು ಕರೆದು ಅವರಿಂದ ದೂರವಾಗುತ್ತಾರೆ. ಅಯ್ಯನ್‌ಕಾಳಿ ಮತಾಂತರವಾದ ಮತ್ತು ಮತಾಂತರವಾಗದ ಎಲ್ಲ ದಲಿತರು ಒಂದಾಗಬೇಕೆನ್ನುತ್ತಾನೆ.

ಎಸ್‌ಜೆಪಿಯ ಸ್ಥಾಪನೆ : ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಹೊಸಬರು ಮತಾಂತರವಾಗದವರನ್ನು ಅಪಹಾಸ್ಯಕ್ಕೀಡು ಮಾಡುತ್ತಾರೆ. ಬೇಗನೆ ಖಚಿತವಾದ ಒಂದು ಸಂಗತಿಯೆಂದರೆ ಮತಾಂತರವು ಆಧ್ಯಾತ್ಮಿಕ ನೆಲೆಯಲ್ಲಷ್ಟೇ ಉಪಯೋಗವಾಗಿತ್ತು. ಯಾವುದೇ ಆರ್ಥಿಕ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಚರ್ಚು ಬಗೆಹರಿಸುವುದಿಲ್ಲ. ಚರ್ಚು ಮತ್ತು ಹಿಂದೂ ಮಠದ ಸ್ವಾಮೀಜಿಯಿಂದ ದೂರ ಉಳಿಯಲು ನಿಶ್ಚಯಿಸುತ್ತಾನೆ.



ರೇಖಾಚಿತ್ರ : ಸೆಂಥಿಲ್ ಸೆಲ್ವನ್

1907ರಲ್ಲಿ ದಲಿತ ಕ್ರಿಶ್ಚಿಯನ್ನರನ್ನು ಮತ್ತು ದಲಿತರನ್ನು ಒಟ್ಟುಗೂಡಿಸಲು ಸಾಧು ಜನ ಪರಿಪಾಲನ ಸಂಘಂನ್ನು ಸ್ಥಾಪಿಸಿದ. ಎಸ್‌ಜೆಪಿ ಸ್ಥಾಪನೆಯಾದ ಅನೇಕ ವರ್ಷಗಳ ನಂತರ ಹಿಂದುಳಿದ ಜಾತಿಗಳಿಗೆ ಶ್ರೀ ನಾರಾಯಣ ಧರ್ಮ ಪರಿಪಾಲನ ಸಂಘಂ (ಎಸ್‌ಎನ್‌ಡಿಪಿ)ನ್ನು (ಉತ್ತರದಲ್ಲಿ ತೀಯಾ ಮತ್ತು ದಕ್ಷಿಣ ಕೇರಳದಲ್ಲಿ ಇಳವಾ) ರೂಪುಗೊಳ್ಳುತ್ತದೆ. ಈ ಹೆಸರುಗಳಲ್ಲಿನ ಸಮಾನ ಸಂಗತಿಯು ಹೇಳುವುದೇನೆಂದರೆ ಟ್ರಾವೆಂಕೋರ್ ರಾಜ್ಯದ ಎಲ್ಲ ಶೋಷಿತರು ಒಂದಾಗಬೇಕೆಂದು ಪರಿಭಾವಿಸಿದ್ದ.

ಆತ್ಮವಿಶ್ವಾಸ, ಧೈರ್ಯ ಮತ್ತು ಆಜ್ಞಾ ಶಕ್ತಿಯನ್ನು ಹೊಂದಿದ ಅಯ್ಯನ್‌ಕಾಳಿಯು ಎಸ್‌ಜೆಪಿಯ ಮುಂದಿರುವ ಸಹಜ ನಾಯಕನಾಗಿ ಆಯ್ಕೆಗೊಳ್ಳುತ್ತಾನೆ. ಇವನು ಯಾವುದೇ ನಿರ್ದಿಷ್ಟ ಜಾತಿಯ ನಾಯಕನಾಗಿರಲಿಲ್ಲ. ಎಲ್ಲ ದಲಿತರ ಉದ್ಧಾರ ಮತ್ತು ಸಂರಕ್ಷಣೆಯ ಉದ್ದೇಶ ಹೊಂದಿದ್ದ.

ಎಸ್‌ಜೆಪಿಯು ತನ್ನ ಸದಸ್ಯರಿಗೆ ವಾರಕ್ಕೆ ಆರು ದಿನ. ಕೆಲಸ ಮಾಡುವ ಠರಾವನ್ನು ಜಾರಿಗೊಳಿಸಿತು. ಭಾನುವಾರ ವಿಶ್ರಾಂತಿ ಮತ್ತು ತಮ್ಮ ಸಮಸ್ಯೆಗಳ ಬಗ್ಗೆ ಚರ್ಚಿಸುವುದಕ್ಕೆ ಸಭೆಗಳನ್ನು ನಡೆಸಲು ಮೀಸಲಿಡಲಾಯಿತು. ಈ ಸಭೆಗಳಿಗೆ ಮಹಿಳೆಯರು ಮತ್ತು ಪುರುಷರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಹಾಜರಾತಿ ಶುಲ್ಕವಾಗಿ ಪುರುಷರಿಗೆ ಅರ್ಧಚಕ್ರ ಮತ್ತು ಮಹಿಳೆಯರಿಗೆ ಕಾಲು ಚಕ್ರವೆಂದು ಸಂಗ್ರಹಿಸಲಾಯಿತು. (14-5 ಚಕ್ರಂ-1ರೂಪಾಯಿ)

ಮೊದಲ ಕೃಷಿ ಮುಷ್ಕರ : ಎಸ್‌ಜೆಪಿ.ಯು ಶಾಲೆಗಳಲ್ಲಿ ದಲಿತ ಮಕ್ಕಳಿಗೆ ಶಿಕ್ಷಣಕ್ಕೆ ಅನುಮತಿ ನೀಡಬೇಕೆಂದು ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿತು. 1907ರಲ್ಲಿ ಸರ್ಕಾರವು ಶಾಲೆಗಳಿಗೆ ದಲಿತ ಮಕ್ಕಳನ್ನು ಸೇರಿಸುವುದಕ್ಕೆ ಆದೇಶವನ್ನು ಜಾರಿ ಮಾಡಿತು. ಟ್ರಾವಂಕೋರಿನ ದಿವಾನರಾದ ಪಿ. ರಾಜಗೋಪಾಲಾಚಾರಿಯವರ ಬೆಂಬಲ ಇದಕ್ಕಿತ್ತು. ಆದರೆ ಅಧಿಕಾರಿಗಳು ಅನುಷ್ಠಾನಗೊಳ್ಳುವಿಕೆಯನ್ನು ನಿರಾಕರಿಸುತ್ತಾರೆ. ಅಯ್ಯನ್‌ಕಾಳಿಗೆ ಅದ್ಹೇಗೋ ಈ ಆದೇಶದ ಬಗ್ಗೆ ಗೊತ್ತಾಗಿ, ಶಿಕ್ಷಣ ಇಲಾಖೆಯ ಪ್ರಾಧಿಕಾರಿಗಳಲ್ಲಿ ಆದೇಶವನ್ನು ಜಾರಿಗೊಳಿಸುವಂತೆ ಕೇಳಿದ. ಶಾಲೆಗಳ ಬಾಗಿಲುಗಳನ್ನು ತಟ್ಟಿದ. ಶಾಲಾ ಆಡಳಿತವು ಜಮೀನ್ದಾರರನ್ನು ಒಳಗೊಂಡಿರುವುದರಿಂದ ಆದೇಶವನ್ನು ಜಾರಿಗೊಳಿಸಲು ನಿರಾಕರಿಸಿತು.

'ನೀವು ನಮ್ಮ ಮಕ್ಕಳ ಓದಿಗೆ ಅನುಮತಿಸದಿದ್ದರೆ, ನಿಮ್ಮ ಹೊಲಗಳಲ್ಲಿ ಕಳೆಗಳನ್ನು ಬೆಳೆಯಬಹುದು' ಎಂದು ಎಚ್ಚರಿಸಿದ. ಆತ ಭೂಮಾಲೀಕ ಮತ್ತು ಕಾರ್ಮಿಕರ ಮಧ್ಯೆ ಇದ್ದ ಕೊನೆಯ ಸಂಬಂಧವನ್ನು ಛಿದ್ರೀಕರಿಸುತ್ತಾನೆ. ಅವನ ಇನ್ನೊಂದು ಬೇಡಿಕೆಯೆಂದರೆ, 'ಕೆಲಸವಿಲ್ಲದ ಅವಧಿಯ ಸಂದರ್ಭದಲ್ಲಿ ಕಾರ್ಮಿಕರಿಗೆ ಸಂಬಳ ನೀಡಿ 'ಉದ್ಯೋಗವನ್ನು ಕಾಯಂಗೊಳಿಸಿ' ಎಂಬುದಾಗಿತ್ತು.

ಇತರ ಬೇಡಿಕೆಗಳೆಂದರೆ ಬಲಿಪಶುವಾಗಿಸುವುದನ್ನು ನಿಲ್ಲಿಸುವುದು; ತಪ್ಪು ಮೊಕದ್ದಮೆಗಳಲ್ಲಿ ಕಾರ್ಮಿಕರನ್ನು ಸಿಲುಕಿಸಬಾರದು; ಕಾರ್ಮಿಕರನ್ನು ಶಿಕ್ಷಿಸುವುದನ್ನು ನಿಲ್ಲಿಸುವುದು; ಚಲನ ಸ್ವಾತಂತ್ರ್ಯ; ಮಕ್ಕಳಿಗೆ ಶಾಲಾ ಪ್ರವೇಶವನ್ನು ನೀಡುವುದು; ಭೂಮಾಲೀಕರು ಇದನ್ನು ಸಮರ್ಥಿಸಲಿಲ್ಲ. ಅವರ ಮಧ್ಯೆಯ ಬಿರುಕು ತುಂಬಾ ದೂರಕ್ಕೆ ಸಾಗಿತ್ತು.

ಅಯ್ಯನಾಕಾಳಿ ಪುಲಯ ಹಾಗೂ ಇತರ ಕೃಷಿ ಕಾರ್ಮಿಕರಿಗೆ ಮುಷ್ಕರಕ್ಕೆ ಕರೆ ನೀಡುತ್ತಾನೆ. ಇದೊಂದು ಚಾರಿತ್ರಿಕ ಕರೆಯಾಗಿದ್ದು, ಇಡೀ ಜಗತ್ತಿನಲ್ಲೇ ಮೊದಲ ಕೃಷಿ ಮುಷ್ಕರವೆಂದು ಘೋಷಿತವಾಗುತ್ತದೆ. ಅಲ್ಲಿ ಮೆರವಣಿಗೆಗಳಿಲ್ಲ. ಜೀಪುಗಳಿಲ್ಲ, ಮೈಕ್ರೋಫೋನುಗಳಿಲ್ಲ, ಕರಪತ್ರಗಳು ಅಥವಾ ಬ್ಯಾನರುಗಳು ಇಲ್ಲ. ಆದರೂ ಚಾಂಡಾಲ, ಕನ್ಯಾಪುರಂ, ಪಳ್ಳಿಚಾಲಾ ಮತ್ತು ಮೂಡಪ್ಪಾರದಿಂದ ವಿಲ್ಲಿಂಜೋನಾನವರೆಗೂ ಯಾವುದೇ ಕಾರ್ಮಿಕ ಭೂಮಿಯಲ್ಲಿ ಕಾಣಿಸಿಕೊಳ್ಳಲಿಲ್ಲ. ಮೊದಮೊದಲಿಗೆ ಭೂಮಾಲೀಕರು ಇದರ ಬಗ್ಗೆ ನಗಲಾರಂಭಿಸುತ್ತಾರೆ. ಅವರ ಲೆಕ್ಕಾಚಾರವೆಂದರೆ, ಶೇಖರಿಸಿಟ್ಟ ಕಾಳು ಮುಗಿದಲ್ಲಿ ಕಾರ್ಮಿಕರು ಮತ್ತೆ ಕೆಲಸಕ್ಕೆ ಬರಲಾರಂಭಿಸುತ್ತಾರೆ ಎಂಬುದಾಗಿತ್ತು.

ಪುತಾಳಂ ಕೃಷ್ಣ ಪಿಳ್ಳೈ ಎಂಬ ಭೂಮಾಲೀಕ ಒಂದು ಗುಂಪನ್ನು ಕಟ್ಟಿ ಕೆಲಸಗಾರರನ್ನು ಪ್ರಚೋದಿಸಿ ಸಿಕ್ಕಿದೆಡೆಯಲ್ಲಿ ಹೊಡೆಯಲಾರಂಭಿಸುತ್ತಾನೆ. 'ಇನ್ನು ಕೈಕಟ್ಟಿ ಕುಳಿತು ನೋಡಲು ಸಾಧ್ಯವಿಲ್ಲ'ವೆಂದು 12 ಮಂದಿ ಭೂಮಾಲೀಕರು ಕೆಸರಿನಲ್ಲಿಳಿದು ಕೆಲಸ ಆರಂಭಿಸುತ್ತಾರೆ. ಅವರಿಗೆ ಸಾಧ್ಯವಾಗುವುದಿಲ್ಲ.

ಅವರು ಕೆಲವು ಕಾರ್ಮಿಕರನ್ನು ಹೊಲಗಳಲ್ಲಿ ಕೆಲಸ ಮಾಡಲು ಹಿಂಬದಿಯಿಂದ ಉಪಯೋಗಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಆದರೆ ಅಯ್ಯನ್‌ಕಾಳಿ ಸೇನೆಯಿಂದ ಪ್ರತಿರೋಧವನ್ನು ಅನುಭವಿಸುತ್ತಾರೆ. ಇದು ಕಾರ್ಮಿಕರು ಮತ್ತು ಭೂಮಾಲೀಕರ ಮಧ್ಯೆ ಹಿಂಸಾತ್ಮಕ

ಮುಖಾಮುಖಿಕ್ಕೆಡೆ ಮಾಡುತ್ತದೆ. ಭೂಮಾಲೀಕರ ಪ್ರಚೋದನೆಯಿಂದ ಕೆಲವು ಕಾರ್ಮಿಕರ ಮಧ್ಯೆ ವಿರಸವುಂಟಾಗುತ್ತದೆ. ಕಾರ್ಮಿಕರು ಬೇಗನೆ ಅದರೊಳಗಿನ ಕುತಂತ್ರವನ್ನು ಕಂಡು ರಾಜಿಮಾಡಿಕೊಳ್ಳುವುದಿಲ್ಲ. ಭೂಮಿ ಅರಣ್ಯಮಯವಾಗುತ್ತದೆ.

ಆಂತರಿಕ ಯುದ್ಧ : ಹಸಿವು ಕಾರ್ಮಿಕರನ್ನು ಕೇಕರಿಸುತ್ತಿತ್ತು. ಭೂಮಾಲೀಕರು ಭತ್ತ ನಾಟಿ ಮಾಡಿದರು. ಈ ನಾಟಿಯ ಸಮಯ ಮೀರಿದ್ದರಿಂದ ಅದರಲ್ಲಿ ಕಾಳು ಉತ್ಪತ್ತಿಯಾಗಲಿಲ್ಲ. ಈ ಭೂಮಾಲೀಕರ್ಯಾರೂ ಬಿಸಿಲಿನಲ್ಲಿ ಕೆಲಸ ಮಾಡುವ ರೂಢಿಯಲ್ಲಿರಲಿಲ್ಲ. ಅವರಿಗೆ ಅನಾರೋಗ್ಯದ ಸಮಸ್ಯೆ ಎದುರಾಯಿತು.

ಯಾವಾಗ ಕೆಲವು ಭೂಮಾಲೀಕರು ರಾಜೀಗೆ ಪ್ರಯತ್ನಪಟ್ಟರೋ ಆಗ ಕಾರ್ಮಿಕರು ಅಧಿಕ ಕೂಲಿಯನ್ನು ಕೇಳಿದರು. ಕೂಡಿಟ್ಟ ಕಾಳು ಬರಿದಾದಂತೆ ಎರಡು ಕಡೆಯವರು ತೊಂದರೆಯನ್ನು ಅನುಭವಿಸುತ್ತಾರೆ. ನಾಶವೆನ್ನುವುದು ಶೋಷಕ ಮತ್ತು ಶೋಷಿತರಿಬ್ಬರನ್ನು ಆವರಿಸುತ್ತದೆ.

ಅಡಿಗೆ ಮನೆಯ ಒಲೆ ಉರಿಯುತ್ತಿಲ್ಲ. ತೀವ್ರವಾದ ಹಸಿವು ಕಾರ್ಮಿಕರನ್ನು ದಿಕ್ಕೆಡಿಸಿತು. ಈಗ ಅಯ್ಯನ್‌ಕಾಳಿ ತನ್ನ ಆಟವನ್ನು ಶುರುಮಾಡುತ್ತಾನೆ. ಆತ ವಿಲ್ಲಿಂಜೋನನ ಮೀನು ಕಾರ್ಮಿಕರನ್ನು ಭೇಟಿಯಾಗಿ, ಅವರೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತಾನೆ. ಒಂದು ಕುಟುಂಬದಿಂದ ಒಬ್ಬರಂತೆ ಈ ಮೀನು ದೋಣಿಗಳಲ್ಲಿ ಸೇರಿ ದಿನದ ಕೊನೆಗೆ ಹಿಡಿದ ಮೀನಿನಲ್ಲಿ ತಮ್ಮ ಪಾಲನ್ನು ಮುಷ್ಕರ ಮುಗಿಯುವವರೆಗೂ ಪಡೆಯುವುದೆಂದು ನಿರ್ಧಾರವಾಗುತ್ತದೆ.

ತಮ್ಮ ಅವಲಂಬಿತರಿಂದ ಭೂಮಾಲೀಕನಿಗೆ ಸೋಲು ಹತ್ತಿರವಾಗುತ್ತಿತ್ತು. ಅವರೆಲ್ಲ ಅಸಹಾಯಕ ಸಿಟ್ಟಿಗೆ ಒಳಗಾಗುತ್ತಾರೆ. ಅವರು ಅನೇಕ ಕಾರ್ಮಿಕರನ್ನು ಹಿಂಸಿಸುತ್ತಾರಲ್ಲದೆ ಅವರ ಗುಡಿಸಲುಗಳಿಗೆ ಬೆಂಕಿಯನ್ನು ಹಚ್ಚುತ್ತಾರೆ. ಇತ್ತ ಅಯ್ಯನ್‌ಕಾಳಿ ಕಮಾಂಡೋಗಳು ಒಳನಾಡಿನ ಭೂಮಾಲಿಕರ ಮನೆಯೊಳಗೂ ಬೆಂಕಿ ಹಚ್ಚುತ್ತಾರೆ. ಇದು ಅವರ ಬೆನ್ನಲ್ಲಿ ನಡುಕವನ್ನುಂಟುಮಾಡುತ್ತದೆ. ಅವರಿಗೆ ಎಲ್ಲಿಂದ? ಯಾವಾಗ? ಆಕ್ರಮಣ ನಡೆಯುತ್ತದೆಂದು ಗೊತ್ತಾಗಲಿಲ್ಲ.

ಬೇಗನೆ ಈ ಪರಿಸ್ಥಿತಿ ಬದಲಾಗಿ ರಾಜೀಯತ್ತ ವಾಲುತ್ತಾರೆ. ಅಯ್ಯನ್‌ಕಾಳಿ ಬಯಸಿದಂತೆ ಭೂಮಾಲೀಕರು ಅವನತ್ತ ಬರುತ್ತಾರೆ. ಶಾಂತಿ ಮಾತುಕತೆಯಾಗುತ್ತದೆ. ದಿವಾನರು ಒಬ್ಬ ಮ್ಯಾಜಿಸ್ಟ್ರೇಟನನ್ನು ಎರಡು ಪಕ್ಷಗಳ ಮಧ್ಯೆ ಒಪ್ಪಂದಕ್ಕೆ ಮಧ್ಯವರ್ತಿಯಾಗಲು ಕಳುಹಿಸುತ್ತದೆ. ಕೂಲಿಯನ್ನು ಹೆಚ್ಚಿಸಲು ಅವರು ಒಪ್ಪುತ್ತಾರೆ. ಶಾಲಾಪ್ರವೇಶ ಹಾಗೂ ಪ್ರಯಾಣ ಹಕ್ಕುಗಳನ್ನು ನಿಯಮದಲ್ಲಿ ಒಪ್ಪುತ್ತಾರೆ.

ಈ ವಿಜಯದ ನಂತರ ಭೂಮಾಲೀಕರು ಮುಂಬಯಿಯ ಭೂಪಾತಕರಂತೆ ಸುಫಾರಿ ತಂತ್ರವನ್ನು ಹೂಡುತ್ತಾರೆ. ಅಯ್ಯನ್‌ಕಾಳಿಯನ್ನು ಜೀವ ಸಹಿತ ತರಲು 2000ರೂ. ಶವ ತಂದಲ್ಲಿ 1000ರೂ. ಎಂದು ಘೋಷಿಸುತ್ತಾರೆ.

ಎರಡು ಕಡೆಯಿಂದಲೂ ರಕ್ತಪಾತವಾಗುತ್ತದೆ. ಆದರೆ ಅಯ್ಯನ್‌ಕಾಳಿ ಎದೆಗುಂದದೆ ತನ್ನ ಗುಂಪಿನ ಎದುರು ನಡೆಯುತ್ತಾನೆ. ಆತನ ಅಂಗರಕ್ಷಕನಾದ ದಾವೂವಾಚಪುರಂನ ಯಾಕೂಬ್ ಒಬ್ಬ ಗೂಂಡಾನಾಗಿದ್ದ. ಆ ಪ್ರದೇಶದ ದೊಡ್ಡ ಮಂದಿಯೊಡನೆ ಆತ ಮುಖಾಮುಖಿಯಾಗಿದ್ದ. ಪೊಲೀಸರು ಅವನನ್ನು ಬಂಧಿಸುತ್ತಾರೆ. ಹೀಗೆ ಈ ಪ್ರಕ್ರಿಯೆಯಲ್ಲಿ ಕ್ಯಾಪ್ಟನ್ ವೇಲು ಪಿಳ್ಳೈ ತನ್ನ ಕೈಯನ್ನು ಕಳೆದುಕೊಳ್ಳುತ್ತಾನೆ. ಅಯ್ಯನ್‌ಕಾಳಿ ಬಂಧನದ ವಿರುದ್ಧ ಪ್ರತಿಭಟಿಸುತ್ತಾನಲ್ಲದೆ ಪೊಲೀಸ್ ಠಾಣೆಯ ಎದುರು ಆತನ ಬಿಡುಗಡೆಯ ತನಕ ಸತ್ಯಾಗ್ರಹವನ್ನು ಹೂಡುತ್ತಾನೆ.

ಶಾಲಾಪ್ರವೇಶ : ಶಿಕ್ಷಣ ನಿರ್ದೇಶಕನಾದ ಮೀಸೆಲನು, ದಿವಾನನು ತಾನು ಸಹಿ ಮಾಡಿದ ಆದೇಶದ ಬಗ್ಗೆ ಅವನಿಗೆ ನೆನಪಿಸುತ್ತಾನೆ. ಈ ಆದೇಶಕ್ಕೆ ಸಹಿ ಮಾಡಿದ ಮೂರು ವರ್ಷಗಳ ನಂತರ, ದಲಿತರನ್ನು ಶಾಲೆಗಳಿಗೆ ಸೇರಿಸಿಕೊಳ್ಳಲಾಯಿತು. 1910ರಲ್ಲಿ ಇದನ್ನು ಸಾರ್ವಜನಿಕರಿಗೆ ಬಿಡುಗಡೆ ಮಾಡುತ್ತಾರೆ. ಸ್ವದೇಶಾಭಿಮಾನಿ ಸಂಪಾದಕನಾದ ರಾಮಕೃಷ್ಣ ಪಿಳ್ಳೈ ಈ ಕಾಯಿದೆಯ ವಿರುದ್ಧ ಹೀಗೆ ಬರೆಯುತ್ತಾನೆ. "ಅನೇಕ ತಲೆಮಾರುಗಳಿಂದ ಬುದ್ಧಿಯನ್ನು ಕೃಷಿಮಾಡುವವರೊಟ್ಟಿಗೆ ಹೊಲಗಳಲ್ಲಿ ಕೃಷಿ ಮಾಡುವವರನ್ನು, ಸೇರಿಸುವುದು ಒಂದು ಕುದುರೆಯನ್ನು ಎಮ್ಮೆಯನ್ನು ಒಂದೇ ನೊಗಕ್ಕೆ ಸೇರಿಸಿದಂತೆ" ಇಂಥ ಪ್ರತಿಕ್ರಿಯೆ ಬಂದದ್ದು ಮೊದಲ ಬಾರಿಗೆ ಕಾರ್ಲ್‌ಮಾರ್ಕ್ಸ್‌ನ ಜೀವನಚರಿತ್ರೆಯನ್ನು ಮಲಯಾಳಂನಲ್ಲಿ ಪ್ರಕಟಿಸಿದವನಿಂದ.

ತನ್ನ ಬೆಂಬಲಿಗರೊಡನೆ ಅಯ್ಯನ್‌ಕಾಳಿ ಬಲರಾಂಪುರಂನ ಉರುಟಾ ಅಂಬಾಲಂ ಶಾಲೆಯ ಹತ್ತಿರ ಬರುತ್ತಾನೆ. ಪೂಜಾರಿ ಅಯ್ಯನ್‌ನ ಐದು ವರ್ಷದ ಮಗಳು ಪಂಚಮಿಗೆ ಪ್ರವೇಶ ಬೇಕಾಗಿತ್ತು. ಸವರ್ಣೀಯ ಗೂಂಡಾಗಳು ಅಲ್ಲಿ ಕಾಯ್ದಿರುತ್ತಾರೆ. ತೀವ್ರವಾದ ಹೋರಾಟ ನಡೆಯುತ್ತದೆ.

ಇದೇ ಸಂದರ್ಭದಲ್ಲಿ ಪುಲಯ ಹಾಗೂ ನಾಯರ್ ಮಧ್ಯೆ ಒಂದು ದಂಗೆ ಆರಂಭವಾಗುತ್ತದೆ. ನಾಯರ್ ಜನರು ಪುಲಯ ಗುಡಿಸಲುಗಳನ್ನು ನಾಶಪಡಿಸುತ್ತಾರಲ್ಲದೆ ಅವರ ಕೋಳಿ, ಮೇಕೆ, ಎತ್ತುಗಳನ್ನು ಕೊಂಡೊಯ್ಯುತ್ತಾರೆ. ಮಹಿಳೆಯರನ್ನು ಅವಮಾನಕ್ಕೊಳಪಡಿಸುತ್ತಾರೆ. ಮತ್ತು ಗಂಡಸರನ್ನು ಹಿಂಸಿಸುತ್ತಾರೆ. ಇದರಿಂದ ತಪ್ಪಿಸಿಕೊಳ್ಳಲು ಅನೇಕರು ಹೊಲಗಳಿಗೆ ಓಡಿಹೋಗಿ ಬಚ್ಚಿಟ್ಟುಕೊಳ್ಳುತ್ತಾರೆ. ಈ ದಂಗೆ ಏಳು ದಿನಗಳಲ್ಲಿ ತಾತ್ಕಾಲಿಕವಾಗಿ ವಿರುಟ್ ಅಂಬಾಲಂನಲ್ಲಿ ಕೊನೆಗೊಳ್ಳುತ್ತಾರಾದರೂ ಅದರ ಪರಿಣಾಮ ಮಾತ್ರ ಮರಿಯಾಮುಟ್ಟಂ, ವೆಂಗನೂರ್, ಪೆರಂಬದೂರು, ಕುನತಕಾಲಾ ಮುಂತಾದೆಡೆಗಳಲ್ಲಿ ಪುನರಾವರ್ತಿಸುತ್ತದೆ. ಹಿಂದುಳಿದ ಜಾತಿಯವರಿಂದ ಇಳವೆರ್ ಕೂಡಾ ಸವರ್ಣೀಯ ಗುಂಪಿನೊಡನೆ ಕೈಜೋಡಿಸುತ್ತಾರೆ. ದರ್ಬಾರಿನ ಅಧಿಕೃತ ಚರಿತ್ರೆಕಾರ ಹೀಗೆಂದು ಬರೆಯುತ್ತಾನೆ. "ಅದೊಂದು ಆ ಕಾಲದ ಅತ್ಯಂತ ಭಯಾನಕ ದಂಗೆಯಾಗಿತ್ತು".

ಪುಲಯ ದಂಗೆಯೊಂದು ಪ್ರಸಿದ್ಧವಾದ ದಂಗೆ. ಈ ದಂಗೆಯ ನಂತರ (ಇದು ಜಾತಿವಾದಿಗಳ ಸಿಪಾಯಿ ದಂಗೆಗಿಂತ ಮುಂಚೆ ನಡೆದಿದ್ದರಿಂದ ನಿಜವಾಗಿಯೂ ಮೊದಲ ಸ್ವಾತಂತ್ರ್ಯ ಹೋರಾಟವೇ ಆಗಿದೆ) ಒಂದು ಮುಕ್ತ ಸಮಾಜಕ್ಕಾಗಿ ದಲಿತರ ಹೋರಾಟವು ತೀವ್ರವಾಗುತ್ತದೆ.

(ಸೌಜನ್ಯ : ದಿ ದಲಿತ್)

ಸಂವಾದ

ಪ್ರಿಯ ಓದುಗರೇ,

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನ ವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಠಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ಅಭಿವ್ಯಕ್ತಿ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

ಬಿಡಿ ಪ್ರತಿ : ಹತ್ತು ರೂಪಾಯಿಗಳು (ರೂ. 10/-) ವಾರ್ಷಿಕ : ಒಂದು ನೂರು ರೂಪಾಯಿಗಳು (ರೂ. 100/-)

ಆಜೀವ : ಐದು ಸಾವಿರ ರೂಪಾಯಿಗಳು (ರೂ. 5,000/-)

ಚಂದಾ ಹಣವನ್ನು ಅಂಚೆ ಮೂಲಕ ಕಳುಹಿಸುವವರು ಡಿಡಿ, ಎಂ.ಓ, ಮೂಲಕ ಮಾತ್ರ ಕಳುಹಿಸಬೇಕು

ಚಂದಾ ವಿವರ

ಚಂದಾ ಕಳಿಸಬೇಕಾದ ವಿಳಾಸ : ಸಂವಾದ ಮಾಸ ಪತ್ರಿಕೆ
ಬಾಬಾಸಾಹೇಬ್ ಅಂಬೇಡ್ಕರ್ ಸ್ಮಾರಕ ಕೇಂದ್ರ
ಅಂಚೆ ಪೆಟ್ಟಿಗೆ ಸಂಖ್ಯೆ : 9143, ಹೇರೋಹಳ್ಳಿ, ಮಾಗಡಿರಸ್ತೆ
ವಿಶ್ವನೀಡಂ ಅಂಚೆ, ಬೆಂಗಳೂರು - 560 091

ನಿಂತ ರಾತ್ರಿ



ಈ ರಾತ್ರಿ ನಿನ್ನೆಯ ಹಾಗೆ
ಮಾತಾಡುತ್ತಿಲ್ಲ
ಹುಳುವಾಗಿ ಹಾಡುತ್ತಿಲ್ಲ ಮೊಲವಾಗಿ ಓಡುತ್ತಿಲ್ಲ
ಬೇಲಿಯ ಮರೆಯ ಬೆಳದಿಂಗಳಾಗಿ
ಕಾಡುತ್ತಿಲ್ಲ

ಕೊಂದಿದ್ದಾರೆ;
ವಿಷ ಬೀಜಗಳ ಮಾರಿ ತಮ್ಮ ಖುಷಿಗೆ ತಾವು
ಕೊಂಡವರು
ತಮ್ಮ ಕಣ್ಣೊಳಗಿನ ನೀರು ನೆಲ ಬೇರುಗಳ
ನೀಗಿಕೊಂಡವರು
ವೃದ್ಧ ವೃದ್ಧೆ ಅಂಥ ಅವರ ಸಂತಾನಗಳೂ
ತಿರುಗುತ್ತಿವೆ;
ಸ್ಮಶಾನದಲಿ ಚಿತೆ ಉರಿಸಿ
ಉಸಿರಿಗಾಗಿ

ಇಂಥ ನಿಂತ ರಾತ್ರಿ
ಕಂಡವರು ಉಳಿವರೇ...

ಓ ನನ್ನ ದೇಹವೇ
ನೀನು ಹುಶಾರಾಗಿರು
ನನ್ನ ಕೂಗು ಕೇಳಿಸಿದರೂ ಕದ ತೆರೆಯದೆ
ಕಠೋರವಾಗಿರು
ನನ್ನಂತೆ ನಿನ್ನಂತೆ ಕೂಗಿ ಕೊಲ್ಲುವ
ಕಲೆಗಾರರಿವರು

ಅಮೃತ ಶಿಲೆ ಬೆಳ್ಳಿ ಬಂಗಾರದ
ಕಂಭಗಳ ನೆಟ್ಟು
ಹಕ್ಕಿ ಮಕ್ಕಳ ಎಲುಬಿನಲಿ
ತೋರಣವ ಕಟ್ಟಿ
ತಮ್ಮ ಸಮಾಧಿಯನು ತಾವೇ ಸಿಂಗರಿಸಿಕೊಳ್ಳುವ
ಈ ಶಿಲ್ಪಿಗಳು
ಹುಡುಕುತ್ತಿದ್ದಾರೆ ವಿದ್ಯುತ್ ಬೆಳಕಿನಲಿ
ನನ್ನನ್ನೂ ನಿನ್ನನ್ನೂ

ಖಡ್ಗ ತ್ರಿಶೂಲ ಬಾಂಬುಗಳ ಜೊತೆ
ಹೆಣದ ಎಡೆಮಡಗಿ
ಭಜಿಸುತ್ತಿದ್ದಾರೆ ದೇವರನು
ಚಿತೆ ಕೆಡುವ ಮಳೆ
ಸುರಿಯದಿರಲೆಂದು

ಇಂಥ ನಿಂತ ರಾತ್ರಿ
ಕಂಡವರು ಉಳಿವರೇ...

ಓ ನನ್ನ ದೇಹವೇ
ನೀನು ಹುಶಾರಾಗಿ
ಮಲಗಿರು
ಕನಸಾಗಿ ಉರಿಯುತ್ತಿರು
ಬೆಳಗಿನವರೆಗು
ಕಾಡು ಮಲ್ಲಿಗೆಯೊಳಗೆ,
ಬೆಳದಿಂಗಳ ಹಿಡಿದು ನಿನ್ನ ಬಳಿಗೆ ಹೊರಟ ನಾನು
ಇವರ ಕಣ್ಣಿಗೆ ಬಿದ್ದಿರುವೆ
ಎಲ್ಲೆಂದರಲ್ಲಿ ನೆಲವಾಗಿ ಬಿದ್ದ ನಾತದ ತೊಗಲಿನಡಿ
ಹುಳುವಾಗಿ ಹುದುಗಿರುವೆ

ಓ ನನ್ನ ದೇಹವೇ
ಇವರು ನನ್ನ ಮೇಲೆಯೇ ನಿಂತು ತಮ್ಮ ಗೋರಿಗೆ
ಗುಂಡಿ ತೋಡುತ್ತಿದ್ದಾರೆ
ನೀನು ಹುಶಾರಾಗಿರು

ನಾನು ಬೆಳಗಾದರೆ ಬರುವೆ

○ ಎನ್.ಕೆ. ಹನುಮಂತಯ್ಯ

ದಲಿತರು ಮತ್ತು ಆದಿವಾಸಿಗಳು

ಹಿಂದುತ್ವದ ಕಾಲಾಳು ಸೈನಿಕರು



ಇತ್ತೀಚೆಗೆ ಗುಜರಾತಿನಲ್ಲಿ ನಡೆದ ಮುಸ್ಲಿಂರ ನರಮೇಧ ನಮ್ಮ ದುರಂತಮಯ ರಾಜಕೀಯ ನೀತಿಯ ಬಗ್ಗೆ ಮಹತ್ವದ ತಿಳುವಳಿಕೆಯನ್ನು ಹೊರಗೆಡಹಿದೆ. ಈ ಹತ್ಯೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಿದ್ದು ಹಾಗೂ ಪುನರ್ವಸತಿಯ ಕ್ರಮಗಳನ್ನು ಅಮುಕಿದ ಸಂಘ ಪರಿವಾರದ ಯಶಸ್ಸನ್ನು ಹೊರತುಪಡಿಸಿದಲ್ಲಿ, ತಿಳಿದುಬರುವ ಆತಂಕದ ಸಂಗತಿಯೆಂದರೆ ಬಡ ದಲಿತರು ಮತ್ತು ಆದಿವಾಸಿಗಳು ಹಿಂದುತ್ವದ ಕಾಲಾಳು-ಸೈನಿಕರಂತೆ ಭಾಗಿಯಾಗಿ, ಹಿಂದೂ ರಾಷ್ಟ್ರಯೋಜನೆಯ ಕೆಟ್ಟ ಕಾಯಕವನ್ನು ಮಾಡುತ್ತಿರುವುದು. ಇದರ ಪ್ರಮುಖ ನಾಯಕತ್ವ ಮೇಲ್ಜಾತಿಯವರ ಕೈಯಲ್ಲಿದ್ದರೆ, ಬೀದಿಯಲ್ಲಿನ ಹಿಂಸೆಯನ್ನು ಹುಟ್ಟುಹಾಕಲು ಉಪಜಾತಿಗಳಿಂದ ಆಯ್ಕೆ ಮಾಡುವುದರ ಮೂಲಕ ಲೂಟಿ ಮತ್ತು ಹಿಂಸೆಯನ್ನು ಅವರ ಮೂಲಕವೇ ನಡೆಸಲಾಗುತ್ತದೆ. ಈ ಹಿಂದುತ್ವ ರಾಜಕಾರಣದ ಬಲಿಪಶುಗಳಾದ ಇವರನ್ನು ಆರ್‌ಎಸ್‌ಎಸ್ "ಒಂದು ರಾಜ್ಯದಲ್ಲಿ ಹಿಂದೂ ರಾಷ್ಟ್ರ"ವನ್ನು ಸ್ಥಾಪಿಸಲು ಸಂಘಟಿಸಿದ್ದಾದರೂ ಹೇಗೆ? ಹಿಂದುತ್ವ ರಾಜಕಾರಣದ ಪ್ರಯೋಗ ಶಾಲೆಯನ್ನಾಗಿ ಆ ರಾಜ್ಯವನ್ನು ಆಯ್ದುಕೊಂಡು, ಅಲ್ಪಸಂಖ್ಯಾತ ಸಮುದಾಯದ ವಿರುದ್ಧ ಭೀಕರ ಘಟನೆಗಳನ್ನು ಎಸಗಲು ಕಸಕ್ಕಿಂತ ಕಡೆಯಾದವರು, ತುಳಿತಕ್ಕೊಳಗಾದವರು, ಬಡವರು ಮತ್ತು ದರಿದ್ರರನ್ನು ಪ್ರೇರೇಪಿಸಿದ್ದಾದರೂ ಹೇಗೆ?

ಮೂಲ : **ರಾಮ್ ಪುನಿಯಾನಿ**   ಅನು : ಡಿ.ದಾ.ಚಿ.

ಕರ ಸೇವೆಗಾಗಿ ಮತ್ತು ತದನಂತರದ ರಾಮಮಂದಿರ ನಿರ್ಮಾಣ ಪ್ರಚಾರಕ್ಕಾಗಿ ದಲಿತರನ್ನು ಅಧಿಕವಾಗಿ ಮತ್ತು ತೀವ್ರವಾಗಿ ಸಂಘಟಿಸಲಾಯಿತು. ಬಹುಮಂದಿ ದಲಿತರು ರಾಮ ಸೇವಕರಂತೆ ಅಯೋಧ್ಯೆಗೆ ಭೇಟಿ ನೀಡಲು ಹಣವನ್ನು ನೀಡಲಾಯಿತು.

ಮುಸ್ಲಿಂರ ವಿರುದ್ಧದ ಕಾರ್ಯಕ್ರಮಗಳಲ್ಲಿ ದಲಿತರು ಮತ್ತು ಆದಿವಾಸಿಗಳನ್ನು ಸೆಳೆದುಕೊಳ್ಳಲು ಅನೇಕ ಕಾರಣಗಳಿವೆ. ಅವುಗಳಲ್ಲಿ ಮುಖ್ಯ ಸಂಗತಿಗಳೆಂದರೆ, ಗುಜರಾತಿನ ಹೆಗ್ಗಳಿಕೆಯ ಉದ್ಯಮವೆಂದು ಹೆಸರಾದ ಜವಳಿ ಉದ್ಯಮ, ಕ್ರಮೇಣ ನಷ್ಟವನ್ನು ಅನುಭವಿಸುತ್ತಾ ಬಹು ಸಂಖ್ಯಾತ ಜನರನ್ನು ನಿರುದ್ಯೋಗಿಗಳನ್ನಾಗಿ ಮಾಡುತ್ತದೆ. ಈ ಗುಂಪುಗಳನ್ನು ಹಿಂಸೆಯಲ್ಲಿ ತೊಡಗಲು ಮತ್ತು ಸಂಘ ಪರಿವಾರದ ನರಹತ್ಯೆಯ ತಂತ್ರೋಪಾಯಕ್ಕಾಗಿ ಆಯ್ದುಕೊಳ್ಳಲಾಗುತ್ತದೆ. 1980ರ ದಶಕದಲ್ಲಿ ಮತ್ತು 1990ರ ದಶಕದಲ್ಲಿ ಈ ಜವಳಿ ಉದ್ಯಮವನ್ನು ಮುಚ್ಚಿದ್ದರಿಂದಾಗಿ 100,000ಕ್ಕೂ ಹೆಚ್ಚು ಜನ ನಿರುದ್ಯೋಗಿಗಳಾಗುತ್ತಾರೆ. ಇದಲ್ಲದೆ, ಅಲ್ಲಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೂಲಭೂತ ವ್ಯವಸ್ಥೆಯೇ ಕುಸಿಯುತ್ತದೆ. ಅಹಮದಾಬಾದಿನ ಕಾರ್ಮಿಕ ವರ್ಗದ ದಿವಾಳಿತನಕ್ಕೆ ಮತ್ತು ದಾರಿದ್ರ್ಯಕ್ಕೂ ಕಾರಣವಾಗುತ್ತದೆ. ಸಮಾಜಶಾಸ್ತ್ರಜ್ಞ ಜಾನ್ ಬ್ರೆಮನ್‌ಗೆ, ಅವರು ನರಹತ್ಯೆಯಲ್ಲಿ ಸಹಕರಿಸಲು ಸಂಘ ಪರಿವಾರದ ಅಂಗ ಸಂಸ್ಥೆಗಳು ಸಂಘಟಿಸಿದ್ದು ಅಚ್ಚರಿಯೆಂದು ಕಾಣಿಸುವುದಿಲ್ಲ. ಏಕೆಂದರೆ ಅವರೆಲ್ಲಾ ಅವಗಣಿತ ಉಪಜಾತಿಗಳಾಗಿದ್ದವು. (ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, 20-26 ಏಪ್ರಿಲ್ 2002) ಅವರಿಗೆ ಶಿಕ್ಷೆಯಾಗುವುದಿಲ್ಲವೆಂದೂ, ಲೂಟಿ ಮಾಡಿದೆಲ್ಲಾ ಅವರದ್ದೆಂದು ನಂಬಿಸಲಾಗುತ್ತದೆ.

ಹಾಗೆಯೇ ಮುಸ್ಲಿಂರ ವಿರುದ್ಧ ಹಿಂಸೆ ಮತ್ತು ಲೂಟಿಯಲ್ಲಿ ತೊಡಗಲು ಅಧಿಕ ಮಂದಿ ಆದಿವಾಸಿಗಳನ್ನು ಸಂಘಟಿಸಲಾಗುತ್ತದೆ. ಇಲ್ಲಿ ಗಮನಿಸತಕ್ಕ ಮುಖ್ಯ ಸಂಗತಿಯೆಂದರೆ ಹಿಂಸೆಗೊಳಗಾದವರ್‍ಯಾರು ಆದಿವಾಸಿಗಳನ್ನು ಆಕ್ರಮಣಕ್ಕೆ ಹೊಣೆಗಾರರೆಂದು ಪರಿಗಣಿಸಿಲ್ಲ. ಅವರು ಅಲ್ಪಸಂಖ್ಯಾತರ ವಿರುದ್ಧ ಕ್ರೀಯಾಶೀಲರಾಗಲು ಅವರನ್ನು ಭಯ ಮತ್ತು ಹಣದ ಮೂಲಕ ಬಲೆಗೆ ಹಾಕಿಕೊಳ್ಳಲಾಗುತ್ತದೆ. ಅಲ್ಲದೆ, ವಿಶೇಷವಾಗಿ ಬೇರೆಯವರಿಗಿಂತ ಹೆಚ್ಚಾಗಿ ಆದಿವಾಸಿಗಳು ಇತರ ಯಾವುದೇ ಅಪರಾಧದಲ್ಲಿ ತೊಡಗದೆ ಲೂಟಿಮಾಡುವುದರಲ್ಲಿ ಹೆಚ್ಚಾಗಿ ತೊಡಗಿದ್ದರು. ಈ ನರಮೇಧಕ್ಕೆ ಪೂರ್ವಭಾವಿಯಾಗಿ ಆದಿವಾಸಿಗಳ ಮನಸ್ಸನ್ನು ಎಚ್ಚರಿಕೆಯಿಂದ ಮುಸ್ಲಿಂ ವಿರುದ್ಧದ ಭಾವನೆಗಳನ್ನು ಪೋಷಿಸಲಾಗುತ್ತದೆ. ಹಿಂದೂ ಬನಿಯಾ ಮಾರ್ವಾಡಿಗಳು 120%ರಂತೆ ಬಡ್ಡಿಗೆ ನೀಡುತ್ತಿದ್ದ ಸಾಲವನ್ನು 80%ಗೆ ಇಳಿಸಿ, ಬೋಹ್ರ ಮುಸ್ಲಿಂರು (120% ಬಡ್ಡಿಗೆ ನೀಡುತ್ತಿದ್ದರಿಂದ) ತಮಗಿಂತ ಹೆಚ್ಚು ಶೋಷಣೆ ಮಾಡುವವರೆಂದು ಬಿಂಬಿಸಲಾಯಿತು.

ಹಿನ್ನೆಲೆ : ಗುಜರಾತಿನಲ್ಲಿ ನಡೆದ ನರಮೇಧ ಹಾಗೂ ಅದರಲ್ಲಿ ದಲಿತರು ಮತ್ತು ಆದಿವಾಸಿಗಳು ಕಾಲಾಳು ಸೈನಿಕರಾಗಿ ತೊಡಗಿಸಿಕೊಳ್ಳಲು ಕಾರಣಗಳೆಂದರೆ ಗುಜರಾತಿನ ಸಾಮಾಜಿಕ-ಆರ್ಥಿಕ ಸಂಗತಿಗಳೇ ಆಗಿವೆ. ಕುತೂಹಲಕರ ಸಂಗತಿಯೆಂದರೆ ಗುಜರಾತಿನಲ್ಲಿ ಹಲವಾರು ದಶಕಗಳು ಕಳೆದರೂ ಅಲ್ಲಿ ಯಾವುದೇ ರೀತಿಯ ದೊಡ್ಡ

ಸುಧಾರಣಾ ಚಳುವಳಿ ನಡೆದಿಲ್ಲ. 1920ರ ಸಂದರ್ಭದಲ್ಲಿ ನೆರೆಯ ಮಹರಾಷ್ಟ್ರದಲ್ಲಿ ಬ್ರಾಹ್ಮಣೇತರ ಚಳುವಳಿ ಕಾಣಿಸಿಕೊಂಡು ಅದು ಪ್ರಜಾಸತ್ತಾತ್ಮಕ ನಾಗರೀಕ ಸಮಾಜದ ಪ್ರಕ್ರಿಯೆಗೆ ಎಡೆಮಾಡಿಕೊಟ್ಟಿತು.

ಒಟ್ಟಾರೆಯಾಗಿ, ಗುಜರಾತ್ ಬಲಪಂಥೀಯ ರಾಜಕಾರಣದ ತವರಾಗಿ, ಸಾಂಪ್ರದಾಯಿಕ ಸಾಮಾಜಿಕ ಶಕ್ತಿಗಳು ಅಲ್ಲಿನ ಪರಿಸ್ಥಿತಿಯನ್ನು ನಿಗ್ರಹಿಸಿವೆ. ಅಲ್ಲಿಯೇ ಸ್ವತಂತ್ರ ಪಕ್ಷ (ದೊಡ್ಡ ಬಂಡವಾಳಶಾಹಿ ಬೆಂಬಲಿಗನಾಗಿದ್ದು, ಸಾರ್ವಜನಿಕ ಉದ್ದಿಮೆಗಳನ್ನು ವಿರೋಧಿಸುತ್ತದೆ)ವು ತನ್ನ ಠಿಕಾಣಿಯನ್ನು ಊರಿದ್ದು, ದುರಂತವೆಂದರೆ ದಲಿತ ಚಳುವಳಿಯಿಂದಾಗಲೀ ಅಥವಾ ಕಮ್ಯುನಿಸ್ಟ್ ಆಂದೋಲನದಿಂದಾಗಲೀ ಬಲವಾದ ನಾಯಕತ್ವ ಅಥವಾ ನಾಯಕರು ಅಲ್ಲಿ ಉದಯಿಸಲಿಲ್ಲ. ಹೀಗಿರುವಲ್ಲಿ ಬಲಪಂಥೀಯ ರಾಜಕಾರಣ ಭದ್ರಕೋಟೆಯು 1970ರಿಂದೀಚೆಗೆ ಕ್ಷತ್ರಿಯ, ಹರಿಜನ, ಆದಿವಾಸಿ, ಮುಸ್ಲಿಂರ ಒಕ್ಕೂಟದಿಂದಾಗಿ ಭಯದಿಂದ ಅಲುಗಾಡತೊಡಗುತ್ತದೆ. ಮೇಲ್ಜಾತಿಯವರು ಮೀಸಲಾತಿ ವಿರೋಧಿ ಗಲಭೆಗಳ ಮೂಲಕ ಆ ಒಕ್ಕೂಟಕ್ಕೆ ಪೆಟ್ಟು ನೀಡಲು ಪ್ರಯತ್ನಿಸಿದ್ದರು. ಅಚ್ಯುತ್ ಯಜ್ಞಿಕ್ ಅವರು (ದಿ ಪೆಥಾಲಜಿ ಆಫ್ ಗುಜರಾತ್, ಸೆಮಿನಾರ್, 2002) ಗುರುತಿಸುವಂತೆ ಶಿಕ್ಷಿತ ಮಧ್ಯಮ ವರ್ಗದವರಾದ ಬ್ರಾಹ್ಮಣ, ಬನಿಯ ಮತ್ತು ಪಟೇದಾರರು ಮೀಸಲಾತಿ ವಿರುದ್ಧ ಆಂದೋಲನವನ್ನು ತೀವ್ರವಾಗಿ ಆರಂಭಿಸುತ್ತಾರೆ. ಸವರ್ಣೀಯರು ಮತ್ತು ದಲಿತರ ನಡುವಿನ ಈ ಸಂಘರ್ಷವು ಮುಖ್ಯವಾಗಿ ಆರಂಭವಾದದ್ದು ಅಹಮದಾಬಾದಿನ ಕೈಗಾರಿಕಾ ಪ್ರದೇಶದ ಅಂಚಿನಲ್ಲಿ ಆದರೆ ಅದು ಕ್ರಮೇಣವಾಗಿ ಜಾತಿ ಯುದ್ಧವಾಗಿ ಬದಲಾಗುತ್ತದೆಯಲ್ಲದೆ, ಆಗಿನ 19 ಜಿಲ್ಲೆಗಳ 18 ಪಟ್ಟಣ ಪ್ರದೇಶಗಳಿಗೆ ವ್ಯಾಪಿಸುತ್ತದೆ. ಉತ್ತರ ಮತ್ತು ಕೇಂದ್ರ ಭಾಗದ ಗುಜರಾತಿನಲ್ಲಿ ಭೂಮಾಲೀಕರಾಗಿರುವ ಪಟೇದಾರರು ಹಳ್ಳಿಗಳಲ್ಲಿ ದಲಿತ ಬಸ್ತಿಗಳನ್ನು ಸುಟ್ಟು ಹಾಕುತ್ತಾರೆ.

ಇದೇ ಜಾತಿ ಸಂಘರ್ಷ 1985ರಲ್ಲಿ ಎರಡನೇ ಬಾರಿ ಮೀಸಲಾತಿ ವಿರೋಧಿ ಹೋರಾಟವಾಗಿ ಕಾಣಿಸಿಕೊಳ್ಳುತ್ತದೆ. ಬಿ.ಜೆ.ಪಿ. ಪಕ್ಷವು ಮೇಲ್ಜಾತಿ ನಾಯಕತ್ವದಿಂದಲೇ ಕೂಡಿದ್ದು ಚುನಾವಣಾ ಯಶಸ್ಸಿಗಾಗಿ ತನ್ನ ಸಾಮಾಜಿಕ ತಳಹದಿಯನ್ನು ಗಟ್ಟಿಯಾಗಿಸಿಕೊಳ್ಳುವ ಹವಣಿಕೆಯಲ್ಲಿರುತ್ತದೆ. ದಲಿತರು ಮತ್ತು ಇತರೆ ಹಿಂದುಳಿದ ಜಾತಿಗಳನ್ನು ಅವರು ಭಿನ್ನ ಯಾತ್ರೆಗಳ ಮೂಲಕ ತಮ್ಮ ಬಗಲಿಗೆ ಹಾಕಿಕೊಂಡರು. ಅಡ್ವಾನಿಯವರ ರಥಯಾತ್ರೆ ದಲಿತರು ಮತ್ತು ಮುಸ್ಲಿಂ ನಡುವೆ ತೀವ್ರ ಹೊಡೆದಾಟಕ್ಕೆಡೆ ಮಾಡುತ್ತದೆ. ಯಜ್ಞಿಕ್‌ರವರು ಗುರುತಿಸುವಂತೆ 'ಹಿಂದೂ' ಆದಿವಾಸಿಗಳು ಮತ್ತು ಕ್ರಿಶ್ಚಿಯನ್ ಆದಿವಾಸಿಗಳ ನಡುವೆ ಭೇದವನ್ನುಂಟು ಮಾಡುವುದರಲ್ಲಿ ಆರ್.ಎಸ್.ಎಸ್. ಯಶಸ್ವಿಯಾಗುತ್ತದೆ. ಅಂದರೆ ಆಧುನಿಕ ಮೌಲ್ಯಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವಗಳು ಸಾಂಸ್ಥಿಕ ರೂಪಗಳಲ್ಲಿ ಹೆಚ್ಚು ಸುಧಾರಣೆಯಿಲ್ಲದೆ ಕಳೆಗುಂದುತ್ತವೆ. ಇಂಥ ಸಂದರ್ಭದಲ್ಲಿ ಹಿಂದುತ್ವವು ದಲಿತರು ಮತ್ತು ಇತರ ಹಿಂದುಳಿದ ಜಾತಿಗಳಿಗೆ ಕೊರತೆಯಿದ್ದ ಐಡೆಂಟಿಟಿಯನ್ನು ಒದಗಿಸುತ್ತದೆ. ಈ ಪ್ರಕ್ರಿಯೆಯ ಉಗ್ರರೂಪವನ್ನು ಮಂಡಲ್ ಸಮಿತಿ ವರದಿಯು ಜಾರಿಯಾದಾಗ ನೋಡಬಹುದು. ಈ ಶೋಷಕ ಜಾತಿಗಳ ಪ್ರತಿಕ್ರಿಯೆಯನ್ನು ವಾಜಪೇಯಿಯವರು ಹೀಗೆ ಪ್ರತಿನಿಧಿಸುತ್ತಾರೆ. 'ನಾವು ಮಂಡಲ್‌ಗೆ ಬದಲಾಗಿ ಕಮಂಡಲ (ಧಾರ್ಮಿಕ ಸಂಗತಿಗಳನ್ನು) ಜಾರಿಯಾಗಿಸುತ್ತೇವೆ"-ಎನ್ನುತ್ತಾರೆ.

ಅತಿಮುಖ್ಯ ಸಂಗತಿಯೆಂದರೆ ಸಂಘ ಪರಿವಾರದವರಿಗೆ ಗುಜರಾತ್ ಒಂದು 'ಮಾದರಿ' ಜಾಗವಾಗುತ್ತದೆ. ಇದನ್ನು ಸುಮ್ಮಸುಮ್ಮನೆ ಪ್ರಯೋಗಶಾಲೆಯೆಂದು ಭಾವಿಸಲಾಗದು. ಕಳೆದು ಮೂರು ದಶಕಗಳಿಂದಲೂ ಗುಜರಾತಿನ ಸಾಮಾಜಿಕ ವಿಭಾಗಗಳಲ್ಲಿ ಮರುಸಂಘಟಿಸುವಿಕೆ ತೀವ್ರವಾಗಿ ನಡೆಯುತ್ತಿತ್ತು. ನಗರೀಕರಣದ ಜೊತೆಗೆ ಗುಜರಾತಿನ ಶ್ರೀಮಂತ ರೈತರೂ ಸಹ ಸ್ಥಾನವನ್ನು ಭದ್ರಗೊಳಿಸಿ ಪ್ರಕ್ರಿಯೆಗೊಳಗಾಗುತ್ತಾರೆ. ಈ ಪಟೇದಾರ್ ಜಾತಿ (ವಾಣಿಜ್ಯ ಬೇಸಾಯ ರೈತರು)ಯು ಧಾರ್ಮಿಕ ವಿಧಿ-ಆಚರಣೆಗಳನ್ನು ಕುತಂತ್ರದಿಂದ ಬಳಸಿ, ತಮ್ಮನ್ನೇ ಉನ್ನತೀಕರಿಸುತ್ತದೆ. ಈ ಮಧ್ಯಮವರ್ಗ (ಬ್ರಾಹ್ಮಣ-ಬನಿಯಾ) ಹಾಗೂ ಪಟೇದಾರ್‌ಗಳ ಧ್ರುವೀಕರಣವು 1980ರ ಸಂದರ್ಭದಲ್ಲಿ ನಡೆದು, ಕೆಳಜಾತಿಗಳಿಗೆ ಮೀಸಲಾತಿ ನೀಡುವುದರ ವಿರುದ್ಧ ಜೊತೆಗೂಡುತ್ತವೆ.

1980ರಲ್ಲಿ ಕೆಳಜಾತಿಗಳ ವಿರುದ್ಧ ಜಾತಿ ಹಿಂಸೆಯು ಗುಜರಾತಿನಲ್ಲಿ ತೀವ್ರವಾಗಿ ನಡೆಯುತ್ತದೆ. ಇದು ಮುಖ್ಯವಾಗಿ ದಲಿತರ ವಿರುದ್ಧ ಇದ್ದು, ಅದಕ್ಕಾಗಿ ಹಿಂದುತ್ವ ಶಕ್ತಿಗಳು 1980ರ ಸಂದರ್ಭದಲ್ಲಿ ಮೀಸಲಾತಿ ವಿರುದ್ಧ ತಂತ್ರವನ್ನು ಬಳಸುತ್ತವೆ. ಅವರ ವಾದವೆಂದರೆ ಸರ್ಕಾರದಲ್ಲಿರುವ ಈ ಅಳಿಯಂದಿರು ಅದಕ್ಷತೆಯಿಂದ ಕೂಡಿದ್ದು, ತಮ್ಮ ಮಕ್ಕಳು ನಿಜವಾದ 'ಮೆರಿಟ್' ಹೊಂದಿದ್ದರೂ ಸಹ ಸರ್ಕಾರಿ ನೌಕರಿ ಮತ್ತು ವೃತ್ತಿಪರ ಶಿಕ್ಷಣದಲ್ಲಿ ಯಾವುದೇ ಅವಕಾಶವನ್ನು ಪಡೆಯುತ್ತಿಲ್ಲ. ಈ ಮೀಸಲಾತಿ ವಿರುದ್ಧದ ಹೋರಾಟಗಳು ಶೋಷಕ ಜಾತಿಗಳ ಬಲವನ್ನು ಹೆಚ್ಚಿಸಿತ್ತಲ್ಲದೆ, ಮೇಲ್ಮುಖ ಚಲನೆಯಲ್ಲಿದ್ದ ಮಧ್ಯಮ ವರ್ಗಗಳ ಸ್ಥಾನವನ್ನು ಗಟ್ಟಿಗೊಳಿಸಿದವು. ಈ ಹಿಂದೂ-ಜಾತಿಗಳ ಹಿಂಸೆಯನ್ನು ಸಂಘ ಪರಿವಾರದವರು ಖುದ್ದಾಗಿ ನಿಂತು ಬೆಂಬಲಿಸುತ್ತವೆ. ತಂತ್ರೋಪಾಯಗಳನ್ನು ಬಳಸುತ್ತಾ ಈ ಪರಿವಾರದವರು ಹಿಂದೂ ಸಮಾಜದಲ್ಲಿ ಮೇಲ್ಮುಖ ಚಲನೆಯಲ್ಲಿದ್ದ ಒಂದು ವಿಭಾಗದ ದಲಿತರಿಗೂ ನೆರವಾಗುತ್ತಾರೆ. ಆದ್ದರಿಂದ ಗುಜರಾತಿನಲ್ಲಿ ಸ್ಪಷ್ಟವಾಗಿ ಗುರುತಿಸುವುದಾದರೆ 'ಅನ್ಯ' (ಮುಸ್ಲಿಂ)ವನ್ನು ರೂಪಿಸುವಾಗ ಅದಕ್ಕೊಂದು ನಿಶ್ಚಿತ ಸಾಮಾಜಿಕ ಕ್ರಿಯೆ ಇರುವುದು. ಇಲ್ಲಿ, ಈ ಹಿಂದೆ, ದ್ವೇಷವು ದಲಿತರ ವಿರುದ್ಧ ಇತ್ತು. ಆದರೀಗ ಆ ಜಾಗದಲ್ಲಿ ಬಹು ಜಾಣ್ಮೆಯಿಂದ ಮುಸ್ಲಿಂರನ್ನು ಸ್ಥಾಪಿಸಲಾಗುತ್ತದೆ.

1980ರಲ್ಲಿ ಕೆಳಜಾತಿಗಳ ವಿರುದ್ಧ ಜಾತಿ ಹಿಂಸೆಯು ಗುಜರಾತಿನಲ್ಲಿ ತೀವ್ರವಾಗಿ ನಡೆಯುತ್ತದೆ. ಇದು ಮುಖ್ಯವಾಗಿ ದಲಿತರ ವಿರುದ್ಧ ಇದ್ದು, ಅದಕ್ಕಾಗಿ ಹಿಂದುತ್ವ ಶಕ್ತಿಗಳು 1980ರ ಸಂದರ್ಭದಲ್ಲಿ ಮೀಸಲಾತಿ ವಿರುದ್ಧ ತಂತ್ರವನ್ನು ಬಳಸುತ್ತವೆ. ಅವರ ವಾದವೆಂದರೆ ಸರ್ಕಾರದಲ್ಲಿರುವ ಈ ಅಳಿಯಂದಿರು ಅದಕ್ಷತೆಯಿಂದ ಕೂಡಿದ್ದು, ತಮ್ಮ ಮಕ್ಕಳು ನಿಜವಾದ 'ಮೆರಿಟ್' ಹೊಂದಿದ್ದರೂ ಸಹ ಸರ್ಕಾರಿ ನೌಕರಿ ಮತ್ತು ವೃತ್ತಿಪರ ಶಿಕ್ಷಣದಲ್ಲಿ ಯಾವುದೇ ಅವಕಾಶವನ್ನು ಪಡೆಯುತ್ತಿಲ್ಲ. ಈ ಮೀಸಲಾತಿ ವಿರುದ್ಧದ ಹೋರಾಟಗಳು ಶೋಷಕ ಜಾತಿಗಳ ಬಲವನ್ನು ಹೆಚ್ಚಿಸಿತ್ತಲ್ಲದೆ, ಮೇಲ್ಮುಖ ಚಲನೆಯಲ್ಲಿದ್ದ ಮಧ್ಯಮ ವರ್ಗಗಳ ಸ್ಥಾನವನ್ನು ಗಟ್ಟಿಗೊಳಿಸಿದವು. ಈ ಹಿಂದೂ-ಜಾತಿಗಳ ಹಿಂಸೆಯನ್ನು ಸಂಘ ಪರಿವಾರದವರು ಖುದ್ದಾಗಿ ನಿಂತು ಬೆಂಬಲಿಸುತ್ತವೆ. ತಂತ್ರೋಪಾಯಗಳನ್ನು ಬಳಸುತ್ತಾ ಈ ಪರಿವಾರದವರು ಹಿಂದೂ ಸಮಾಜದಲ್ಲಿ ಮೇಲ್ಮುಖ ಚಲನೆಯಲ್ಲಿದ್ದ ಒಂದು ವಿಭಾಗದ ದಲಿತರಿಗೂ ನೆರವಾಗುತ್ತಾರೆ. ಆದ್ದರಿಂದ ಗುಜರಾತಿನಲ್ಲಿ ಸ್ಪಷ್ಟವಾಗಿ ಗುರುತಿಸುವುದಾದರೆ 'ಅನ್ಯ' (ಮುಸ್ಲಿಂ)ವನ್ನು ರೂಪಿಸುವಾಗ ಅದಕ್ಕೊಂದು ನಿಶ್ಚಿತ ಸಾಮಾಜಿಕ ಕ್ರಿಯೆ ಇರುವುದು. ಇಲ್ಲಿ, ಈ ಹಿಂದೆ, ದ್ವೇಷವು ದಲಿತರ ವಿರುದ್ಧ ಇತ್ತು. ಆದರೀಗ ಆ ಜಾಗದಲ್ಲಿ ಬಹು ಜಾಣ್ಮೆಯಿಂದ ಮುಸ್ಲಿಂರನ್ನು ಸ್ಥಾಪಿಸಲಾಗುತ್ತದೆ. ಅಲ್ಲಿ ದಲಿತರು ಈ 'ಹೊಸದಾದ ಅನ್ಯ'ದ ವಿರುದ್ಧ ತಿರುಗಿ ಬೀಳುತ್ತಾರೆ. ಹೀಗೆ ಭಯದ ವಾತಾವರಣವನ್ನು ಸೃಷ್ಟಿಸಿ ಸಾಮಾಜಿಕ ಶ್ರೇಣೀಕರಣದ ಯತಾಸ್ಥಿತಿಯನ್ನು ಉಳಿಸಿಕೊಳ್ಳಲಾಗುತ್ತದೆ.

ಈ ಸಮಾಜಿಕ ತಳಹದಿಗೆ ಭದ್ರತೆಯನ್ನು ಒದಗಿಸಿದ್ದು ವಿ.ಹೆಚ್.ಪಿ.ಯ ಯಾತ್ರೆಗಳು ಮತ್ತು ಪ್ರಚಾರಗಳು, ಈ ಸಂದರ್ಭದಲ್ಲಿ ಸಂಘ ಪರಿವಾರದವರ ಐಡಿಯಾಲಜಿಯನ್ನು ಪರಿಣಾಮಕಾರಿಯಾಗಿ ಬಳಸಲಾಗುತ್ತದೆ. ಅದು ಎರಡು ಹಂತಗಳಲ್ಲಿ ಕ್ರಿಯಾಶೀಲವಾಗುತ್ತದೆ. ಅದು ಐಡಿಯಾಲಜಿಕಲ್ ನೆಲೆಯಲ್ಲಿ ಯಾರು ಮುಸ್ಲಿಂ ಹಾಗೂ ಕ್ರಿಶ್ಚಿಯನ್‌ರಲ್ಲವೋ ಅವರನ್ನು ಹಿಂದೂಗಳನ್ನಾಗಿಸಿತು. ಈ ನಕಾರಾತ್ಮಕ ವ್ಯಾಖ್ಯಾನಕ್ಕೆ ಮತ್ತೊಂದು ತಿರುವನ್ನು

ಕೊಟ್ಟು, ಹಿಂದೂಗಳು ದನ, ರಾಮ, ವೇದಗಳು, ಗೀತೆ ಮತ್ತು ಆಚಾರ್ಯರನ್ನು ಪೂಜಿಸುತ್ತಾರೆಂದು ಪ್ರಚಾರ ಮಾಡಲಾಗುತ್ತದೆ. ಇದರಿಂದಾಗಿ ಎಲ್ಲಾ ಆದಿವಾಸಿಗಳು ಮತ್ತು ದಲಿತರು ಈ ಸಂಕೇತಗಳನ್ನು ಮತ್ತು ಸಿದ್ಧಾಂತಗಳನ್ನು ಸ್ವೀಕರಿಸಲೇಬೇಕಾಗುತ್ತದೆ. ಇದು ತಳಸ್ತರದ ದೊಡ್ಡ ಗುಂಪುಗಳಿಗೆ ಹೊಸ ಐಡೆಂಟಿಟಿಯನ್ನು ನೀಡುತ್ತದೆ. ಹಾಗಾಗಿ ವನವಾಸಿ ಕಲ್ಯಾಣ ಆಶ್ರಮಗಳು, ಶಿಶು ಮಂದಿರಗಳು ಹಾಗೂ ಇತರ ಸಂಘಟನೆಗಳು ಅಧಿಕವಾಗುವಾಗ ಅಲ್ಲಿ ಪ್ರಮುಖ ಸಾಮಾಜಿಕ ಸುಧಾರಣೆಗಳಿಲ್ಲದೆ ಸಾಂಸ್ಕೃತಿಕ ಶೂನ್ಯ ಜಾಗ ತೆರೆದಿರುತ್ತದೆ.

ಇಲ್ಲಿನ ಪ್ರಮುಖ ಸವಾಲೆಂದರೆ, ಗ್ಯಾನ್‌ಶ್ಯಾಮ್ ಶಾಹ್‌ರ ಪ್ರಕಾರ (ಎಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ 15 ಏಪ್ರಿಲ್ 2002) ಮೇಲ್ಜಾತಿ ವರ್ಗಗಳ ಪ್ರಾಧಾನ್ಯತೆಯನ್ನು ತೊಂದರೆಗೊಳಪಡಿಸದೆ ಎಲ್ಲಾ ಹಿಂದೂಗಳ ಮಧ್ಯೆ ಐಕ್ಯತೆಯನ್ನು ಹಿಂದುತ್ವವಾದಿಗಳು ಮಾಡಬೇಕಾಗಿತ್ತು. ಹಿಂದೂ ಮಹಾಸಭಾ 1920ರ ಸಂದರ್ಭದಲ್ಲಿ ಭಾರತ್ ಹಿಂದ್ ಮಿಲನ್ ಮಂದಿರ್ (ಭಾರತೀಯ ಹಿಂದೂ ಮಿಲನ ಮಂದಿರ)ನ್ನು ಕಟ್ಟಲು ಬಯಸುತ್ತದೆ ಮತ್ತು 1970 ನಂತರ ಅವರು ಗುಜರಾತಿನಲ್ಲಿ ಹೆಚ್ಚು ಕ್ರೀಯಾಶೀಲರಾಗುತ್ತಾರೆ. ಅದರೊಡನೆ ಅವರು ಅನೇಕ ಚಟುವಟಿಕೆಗಳ ಮೂಲಕ ಭಿನ್ನ ಪಂಗಡಗಳನ್ನು ಒಂದುಗೂಡಿಸಲು ತೊಡಗುತ್ತಾರೆ ಮತ್ತು ಧಾರ್ಮಿಕ ಆಚರಣೆಗಳನ್ನು ಸಂಘಟಿಸುತ್ತಾ, ಅವರು ಬಡವರಿಗಾಗಿ ಕಲ್ಯಾಣ ಮತ್ತು ಪುನರ್ವಸತಿ ಕೆಲಸಗಳನ್ನು ಕೈಗೊಳ್ಳುತ್ತಾರೆ. ಈ ಸಂಘಟನೆಗಳ ಪ್ರಧಾನ ಉದ್ದೇಶವೆಂದರೆ ಮೇಲ್ಜಾತಿ ಮತ್ತು ಕೆಳಜಾತಿಗಳ ನಡುವೆ ಐಕ್ಯತೆ ಮತ್ತು ಸೌಹಾರ್ದತೆಯನ್ನು ಬೆಳೆಸುವುದೇ ಆಗಿತ್ತು.

ಇದಕ್ಕೆ ಪೂರಕವಾಗಿ ಆರ್.ಎಸ್.ಎಸ್. 'ಸಾಮಾಜಿಕ ಸಂರಸ್ತಾ ಮಂಚ್' ಎನ್ನುವ ಸಂಘಟನೆಯನ್ನು ಹುಟ್ಟುಹಾಕುತ್ತದೆ. ಅದರ ಮೂಲಕ ಅಂಬೇಡ್ಕರ್‌ವಾದಿಗಳನ್ನು ಹಾಗೂ ಇತರ ದಲಿತ ಗುಂಪುಗಳನ್ನು ಆಕರ್ಷಿಸಿ, ಹಿಂದೂ ಐಕ್ಯತೆಯನ್ನು ವೃದ್ಧಿಗೊಳಿಸಲಾರಂಭಿಸುತ್ತದೆ. ಇಲ್ಲಿ ಮತ್ತೆ ಪ್ರತ್ಯೇಕವಾದ ಎರಡು ತಂತ್ರಗಳನ್ನು ಅನುಸರಿಸಲಾಗುತ್ತದೆ. ಒಂದು ದಲಿತರಿಗಾಗಿ, ಮತ್ತೊಂದು ಇತರ ಆದಿವಾಸಿಗಳಿಗಾಗಿ. ಇವುಗಳೆರಡಲ್ಲೂ ಸಾಮಾನ್ಯ ಸಂಗತಿಯೆಂದರೆ ಅವರ ಭೌತಿಕ (ಮೂಲಭೂತ ಅವಶ್ಯಕತೆಗಳು) ಸಮಸ್ಯೆಗಳನ್ನು ಎಂದು ಪರಿಹರಿಸುವುದಿಲ್ಲ. ಬದಲು ಸಾಂಸ್ಕೃತಿಕ ಐಡೆಂಟಿಟಿಯನ್ನು ಬಲಪಡಿಸುತ್ತಾ ಅದನ್ನು ಮಂಚೂಣಿಗೆ ತರಲಾಗುತ್ತದೆ. ದಲಿತರ ನಡುವೆ ಉದಯದಲ್ಲಿದ್ದ ಹೊಸ ಮಧ್ಯಮ ವರ್ಗವು ಹಿಂದೂ ಸಾಮಾಜಿಕ ಸ್ತರದಲ್ಲಿ ಉನ್ನತ ಸ್ಥಾನವನ್ನು ಬಯಸುತ್ತಿತ್ತು. ಸಂಸ್ಕೃತೀಕರಣ ಪ್ರಕ್ರಿಯೆಯು ದಲಿತರು ಮೇಲ್ಜಾತಿಯವರನ್ನು ಅನುಸರಿಸುವಂತೆ ಮಾಡುತ್ತದೆ. ಹೀಗೆ ಮಾಡುವಾಗ ಅನುಕೂಲವಂಚಿತ ತಮ್ಮ ಬಾಂಧವರನ್ನು ಅವರು ಮರೆತು ಬಿಡುತ್ತಾರೆ. ಸ್ವ ಅಧ್ಯಾಯ, ಆಶ್ರಮ ಬಾಪುಗಳು, ಸ್ವಾಮಿ ನಾರಾಯಣ

ರೀತಿಯ ಪಂಗಡಗಳು ಹಾಗೂ ಪಾಂಡುರಂಗ ಶಾಸ್ತ್ರಿಗಳು ಅನುಕೂಲ ಸಿಂಧು ಮಧ್ಯಮ ವರ್ಗಗಳ ಬೆಂಬಲದಿಂದ ಮೇಲಿನ ವಂಚಿತ ಜನರನ್ನು ಅಧಿಕವಾಗಿ ಗುಜರಾತಿನಲ್ಲಿ ಪ್ರಭಾವಕ್ಕೊಳಪಡಿಸಿವೆ. ತುಂಬಾ ದುಃಖದ ಸಂಗತಿಯೆಂದರೆ ಅವರು ಹಳೆಯ ಬ್ರಾಹ್ಮಣಿಕಲ್ ಮೌಲ್ಯಗಳನ್ನೇ ಆಧುನಿಕ ಮುಖವಾಡ ಧರಿಸಿ, ಆಕರ್ಷಕವಾದ ರೀತಿಯಲ್ಲಿ ಆಚರಣೆಗೆ ತರುತ್ತಾರೆ. ಈ ಗುಂಪುಗಳು ಹಿಂದುತ್ವದ ಆಲೋಚನೆಯನ್ನು ಹರಡುತ್ತಾ ಭಿನ್ನ ಸಮುದಾಯಗಳನ್ನು ಬೇಧಿಸಿ, ಹಿಂದುತ್ವದ ಹೆಮ್ಮೆಯನ್ನು ಎಲ್ಲಾ ಕಡೆ ಜಾರಿಯಾಗಿಸುತ್ತಾರೆ. ಜೋಸೆಫ್ ಮಕ್ವಾನ್ (ಆಕ್ರಮಣಕ್ಕೊಳಗಾದ ಸಮಾಜ, ಸೆಮಿನಾರ್, ಮೇ 2002) ಹೇಳುವಂತೆ, ಅಂಬೇಡ್ಕರ್ ಹಿಂಬಾಲಕರು ಸಂಪತ್ತು ಮತ್ತು ಅಧಿಕಾರದಿಂದ ತುಂಬಿದವರಾಗಿ ಬಿ.ಜೆ.ಪಿ.ಯತ್ತ ವಾಲುತ್ತಾರೆ. ಯಾರು ಆರ್.ಎಸ್.ಎಸ್‌ನೊಂದಿಗೆ ಹೊಂದಾಣಿಕೆ ಮಾಡಿಕೊಂಡರೋ, ಅವರೂ ಸಹ ಅಧಿಕಾರವನ್ನು ಪಡೆಯುತ್ತಾರೆ. ಆರ್.ಎಸ್.ಎಸ್. ಯೋಜನೆಯ ಈ ಎಲ್ಲ ತಂತ್ರಗಳ ಮೂಲ ಗುರಿಯೆಂದರೆ ಎಲ್ಲಾ ಜಾತಿಗಳನ್ನು ಮುಸ್ಲಿಂರು ಮತ್ತು ಕ್ರಿಶ್ಚಿಯನ್ನರಿಂದ ದೂರವಾಗಿಸುವುದೇ ಆಗಿತ್ತು.

ಇಂಥ ಸಂದರ್ಭದಲ್ಲಿ ಕ್ರಿಶ್ಚಿಯನ್ ಮಿಶಿನರಿ ವಿರುದ್ಧದ ಪ್ರಚಾರವನ್ನು ಆರಂಭಿಸುತ್ತಾರೆ. ಈ ದೇಶದಲ್ಲಿ ಜೀವಿಸುವವರೆಲ್ಲಾ ಹಿಂದೂಗಳೆನ್ನುವ ವಾಸ್ತವ ತರ್ಕ, ಸತ್ಯ ಎಂದು ವಾದಿಸಲಾಗುತ್ತದೆ. ಯಾರು 'ಅನ್ಯ' ಅಥವಾ 'ವಿದೇಶಿ' ಧರ್ಮಗಳಿಗೆ ಮತಾಂತರಗೊಳ್ಳುತ್ತಾರೋ, ಅವರೆಲ್ಲಾ ಹಣ ಅಥವಾ ಇತರೆ ಪ್ರಯೋಜನಗಳಿಗಾಗಿ ಹಾಗೆ ಮಾಡುತ್ತಾರೆಂದು ಸೂಚಿಸಲಾಗುತ್ತದೆ.

ಹಿಂದೂ ಧರ್ಮ ಇತರ ಧರ್ಮಗಳಿಗಿಂತ ಶ್ರೇಷ್ಠವಾಗಿದ್ದು, ಅದಕ್ಕೆ ಮತಾಂತರದಲ್ಲಿ ನಂಬಿಕೆ ಇಲ್ಲ ಮತ್ತು ಮಾಡುವುದಿಲ್ಲ. ಇಲ್ಲಿ ಎರಡು ಹಕ್ಕಿಗಳನ್ನು ಒಮ್ಮೆಗೆ ಕೊಲ್ಲಲಾಗುತ್ತದೆ. ಹಿಂದೂ ಧರ್ಮವೆನ್ನುವ ಬ್ರಾಹ್ಮಣ ಮತ, ಮತಾಂತರವನ್ನು ನಿಜವಾಗಿಯೂ ಮಾಡುವುದಿಲ್ಲ. ಅದೊಂದು ಪ್ರತ್ಯೇಕ ಸಂಗತಿ. ಆದರೆ ಕೆಳಜಾತಿಗಳು ಬ್ರಾಹ್ಮಣ-ಮೇಲ್ಜಾತಿಯವರು ಮಾಡುತ್ತಿರುವ ಸಾಮಾಜಿಕ ಅನ್ಯಾಯದಿಂದ ಮುಕ್ತರಾಗಲು ಮತಾಂತರಗೊಳ್ಳಲು ಇಷ್ಟಪಡುತ್ತಾರೆ. ಇಲ್ಲಿನ ಜಾಣ್ಮೆಯ ವಾದವೆಂದರೆ 'ಎಲೈಟ್ ಪ್ರತ್ಯೇಕತೆ' (ಶ್ರೀಮಂತಿಕೆಯ ಪ್ರತ್ಯೇಕತೆ) ಎನ್ನುವುದು ಮೌಲ್ಯವೆಂದು ನಂಬಿಸಲಾಗುತ್ತದೆ. ಆದ್ದರಿಂದ ಯಾರ್‍ಯಾರು ಮತಾಂತರಗೊಂಡಿದ್ದಾರೋ, ಅವರೆಲ್ಲಾ ಮುಗ್ಧರಾಗಿದ್ದು, ಆಸೆಯುಟ್ಟಿಸಿದ್ದರಿಂದ ಮತಾಂತರಗೊಳ್ಳುತ್ತಾರಾದ್ದರಿಂದ, ಅವರನ್ನು 'ಹೊಸತಾಗಿ' ರೂಪಿಸಿರುವ ವಿಧಿ-ಆಚರಣೆಗಳ ಮೂಲಕ 'ಮರು ಮತಾಂತರ' ಮಾಡಿ, ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳಲಾಗುತ್ತದೆ. ಹಾಗೆ ಮಾಡುವಾಗ ಜನರಿಗೆ ತಮ್ಮ ಹಳೆಯ ದೈವಗಳನ್ನು ಬಿಟ್ಟು, ರಾಮ, ಗೀತೆ ಮತ್ತು ಆಚಾರ್ಯ (ಪೂಜಾರಿಗಳು)ರ ಮೌಲ್ಯಗಳನ್ನು ಅನುಸರಿಸಲು ಕಲಿಸಬೇಕು. ಈ ನಿಟ್ಟಿನಲ್ಲಿ ಕ್ರಿಶ್ಚಿಯನ್ ಮಿಶಿನರಿಗಳಿಗೆ ಪಾಠ ಕಲಿಸಲು 'ಬೈಬಲ್'ಗಳನ್ನು ಸುಡುವುದು, ಕನ್ಯಾಸ್ತ್ರೀಯರನ್ನು ಅತ್ಯಾಚಾರಕ್ಕೊಳಪಡಿಸುವುದು, ಪಾದ್ರಿಗಳನ್ನು ಹೊಡೆಯುವುದು.

ಸಾಂಸ್ಕೃತಿಕ ಆಕ್ರಮಣ : ಈ ಕ್ರಿಯೆಯ ಪ್ರಮುಖ ಜಾಗ ಗುಜರಾತ್ ಆಗಿದ್ದರೂ ಸಹ ಭಾರತದ ಇತರೆಡೆಗಳಲ್ಲಾ ಈ ಪ್ರಕ್ರಿಯೆಯನ್ನು ಕಾಣಬಹುದಾಗಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಈ ಹೊಸದಾಗಿ ರೂಪಿಸಿರುವ ರೂಪಕಗಳು ಸ್ಥಳೀಯ ಸಾಂಸ್ಕೃತಿಕ ಚಿಹ್ನೆಗಳನ್ನು ಪಲ್ಲಟಗೊಳಿಸಿವೆ. 1992ರ ಸೂರತ್ ಗಲಭೆಗಳನ್ನು ಸ್ಥೂಲವಾಗಿ ಗಮನಿಸುವ ಇರ್ಫಾನ್ ಇಂಜಿನಿಯರ್ (ಸೂರತ್ ಗಲಭೆಗಳು, ಶೋಧನೆ ಮತ್ತು ವಿಶ್ಲೇಷಣೆ, ಸಮಾಜ ಮತ್ತು ಸೆಕ್ಯುಲರಿಸಂ ಕೇಂದ್ರ, 1993) ಹೇಳುವುದೇನೆಂದರೆ ಸೂರತ್‌ನಲ್ಲಿದ್ದ ಸಾಂಪ್ರದಾಯಿಕ ಹಿಂದುಳಿದ ಜಾತಿಗಳಾದ ಮಚ್ಚಿ, ಕಾರ್ವರಾನ ಮತ್ತು ಘಂಜಿ ಜಾತಿಗಳ ಯುವ ಜನರನ್ನು ಬಿಜೆಪಿಗಳು ಕೋಮುವಾದಿಗಳನ್ನಾಗಿಸುವ ಪ್ರಚಾರ ಕೈಗೊಂಡರು. ಈ ಹಿಂದೆ, ಅವರೆಲ್ಲಾ ಕಾಂಗ್ರೆಸ್‌ನ ಕಟ್ಟಾ ಬೆಂಬಲಿಗರಾಗಿದ್ದರು. ಆದರೀಗ ಅದರಿಂದ ದೂರ ಸರಿದರು.

ಈ ಸಮುದಾಯಗಳ ಇತ್ತೀಚಿನ ವರ್ಷಗಳಲ್ಲಿ ಸಂಪತ್ತನ್ನು ಗಳಿಸಿಕೊಂಡು, ಹೊಸ ಅಧಿಕಾರ ಸಂಬಂಧಗಳಿಗಾಗಿ ಮತ್ತು ವ್ಯಾಪ್ತಿಯುಳ್ಳ ಐಡೆಂಟಿಟಿಗಳಿಗಾಗಿ ಹುಡುಕಾಟ ನಡೆಸಲಾರಂಭಿಸಿದವು. ಅವರು ತಮ್ಮ ಪರಂಪರೆ-ಆಚರಣೆಗಳನ್ನು ಹಾಗೂ ಕುಲ ದೈವಗಳನ್ನು ಬಿಟ್ಟು ಮೇಲ್ಜಾತಿಯವರ ರೂಢಿಗಳನ್ನು ಅನುಸರಿಸತೊಡಗಿದರು. ಬಿಜೆಪಿಯವರು ಯಶಸ್ವಿಯಾಗಿ ತಮ್ಮ ಹಿಂದುತ್ವ ಐಡಿಯಾಲಜಿಯನ್ನು ಪ್ರಚಾರ ಮಾಡುವುದರ ಮೂಲಕ ಇವರಿಗೆ ಬೇಕಾದ ವ್ಯಾಪಕ ಐಡೆಂಟಿಟಿಯನ್ನು ನೀಡಿದರು. ಇದಕ್ಕೆ ರಾಷ್ಟ್ರೀಯ ಮತ್ತು



ದೇಶಪ್ರೇಮದ ಬಣ್ಣವನ್ನು ಹಚ್ಚಿ ಪ್ರಚಾರಾಂದೋಲನವನ್ನು ಕೈಗೊಳ್ಳಲಾಗುತ್ತದೆ. ಹೀಗೆ ಕೆಲವು ವಿಧಿ-ಆಚರಣೆಗಳನ್ನು ಬಿಟ್ಟುಕೊಡುವ ಸುಧಾರಣಾ ಚಳುವಳಿಯು ಮತ್ತೊಂದು ವ್ಯಾಪಕ ಐಡೆಂಟಿಟಿಯ ಬಯಕೆಯುನ್ನು ಬೆಳೆಸಿ, ಕ್ರಮೇಣ ಈ ಸಮುದಾಯಗಳು ಕೋಮುವಾದಿಗಳಾಗುತ್ತವೆ.

ಇವರ ಮಧ್ಯೆ ಶಿಕ್ಷಣವೂ ಸಹ ಬೆಳೆಯಲಾರಂಭಿಸಿದೆ. ಇದರೊಡನೆ ಅವರ ಆರ್ಥಿಕ ನೆಲೆಯು ವ್ಯಾಪಕಗೊಂಡು ಹೊಸ ಕ್ಷೇತ್ರಗಳಿಗೂ ವಿಸ್ತರಿಸಿಕೊಳ್ಳುತ್ತದೆ. ಹೀಗೆ ಅವರು ತಮ್ಮ ಅಧಿಕಾರ ವಲಯವನ್ನು ವಿಸ್ತರಿಸಿಕೊಳ್ಳಲು ತೊಡಗುತ್ತಾರೆ. ಹಿಂದೆ ಕಾಂಗ್ರೆಸ್‌ನ ಮಿತಿಗೊಳಪಟ್ಟ ರಾಜಕೀಯ ವ್ಯವಸ್ಥೆ ಬಿಟ್ಟು, ಬೆಳೆಯುತ್ತಿದ್ದ ಬಿ.ಜೆ.ಪಿ.ಯು ಅವರಿಗೆ ಬೇಕಾದ ಹೊಸ ಅವಕಾಶಗಳು ಮತ್ತು ಹೆಚ್ಚಿನ ಪಾಲ್ಗೊಳ್ಳುವಿಕೆಯನ್ನು ನೀಡುತ್ತದೆ.

ಅತಿ ಸಾಮಾನ್ಯ ಲಕ್ಷಣವೆಂದರೆ ವಿನಾಯಕ ಮೂರ್ತಿಗಳ ಮೂಲಕ ಹಿಂದುತ್ವದ ಪ್ರಚಾರವನ್ನು ವ್ಯಾಪಕಗೊಳಿಸಲಾಗುತ್ತದೆ. ದಕ್ಷಿಣ ರಾಜ್ಯಗಳಲ್ಲಿ ವಿಹೆಚ್‌ಪಿ ಹಾಗೂ ಇತರೆ ಸಂಘ ಪರಿವಾರದ ಸಂಘಟನೆಗಳು ವೈದಿಕ ವಿಧಿಗಳನ್ನು ಜನಪ್ರಿಯಗೊಳಿಸುತ್ತಾ, ಈಗಾಗಲೇ ಇರುವ ಅವೈದಿಕ ರೂಢಿ-ಸಂಪ್ರದಾಯಗಳನ್ನು ಬ್ರಾಹ್ಮಣೀಕರಿಸುತ್ತವೆ. ಈ ಬ್ರಾಹ್ಮಣ ಸಂಸ್ಕೃತಿಯೊಳಗೆ ಇತರ ಎಲ್ಲಾ ಸಂಸ್ಕೃತಿಗಳನ್ನು ಸೆಳೆದುಕೊಳ್ಳುವ ಸಂಘ ಪರಿವಾರದ ತಂತ್ರೋಪಾಯಗಳನ್ನು ಅನೇಕ ಸಮಾಜಶಾಸ್ತ್ರೀಯ ಅಧ್ಯಯನಗಳು ತೋರಿಸಿವೆ. ಇದಲ್ಲದೆ, ಪರಿವಾರದವರು ಇತರೆ ಅನುಕೂಲಗಳಾದ ರಾತ್ರಿಶಾಲೆ, ಯುವಜನ ಶಿಬಿರಗಳು, ಇತ್ಯಾದಿಗಳ ಮೂಲಕವೂ ದಲಿತ ಐಡೆಂಟಿಟಿಯನ್ನು ಏಕಾತ್ಮಕ ಹಿಂದೂ ಐಡೆಂಟಿಟಿಯೊಳಗೆ ಜೀರ್ಣಿಸಿಕೊಳ್ಳಲಾಗುತ್ತದೆ. ಹಾಗಾಗಿ ಅನೇಕ ದಲಿತರು ತಮ್ಮ ಐಡೆಂಟಿಟಿಗಳನ್ನು ಒತ್ತೆಯಿಟ್ಟು, ತಾವೆಲ್ಲಾ ಹಿಂದೂಗಳೆಂದು ಕರೆದುಕೊಳ್ಳುತ್ತಿದ್ದಾರೆ. (ಎಸ್. ಆನಂದಿ, ಪೈಪೋಟಿಯಲ್ಲಿರುವ ಐಡೆಂಟಿಟಿಗಳು, ಐಎಸ್.ಐ, ಡೆಲ್ಲಿ, 1995) ದ್ರಾವಿಡ ಚಳುವಳಿ ಹಳಸಾಗುತ್ತಾ, ಎಐಡಿಎಂಕೆಯೊಳಗೆ ಮಸಕಾಗಿ ಬಿಡುತ್ತದೆ ಹಾಗೂ ಪ್ರಸ್ತುತ ಡಿಎಂಕೆಯು ಬ್ರಾಹ್ಮಣ್ಯದ ಪ್ರಭಾವಕ್ಕೆ ಶರಣಾಗಿರುವುದನ್ನು ಇಲ್ಲಿ ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಈ ಆಕ್ರಮಣಕಾರಿ ಪ್ರವೃತ್ತಿ ಮೂರು ಹಂತಗಳಲ್ಲಿ ಕ್ರಿಯಾಶೀಲವಾಗಿದೆ. ಐಡಿಯಾಲಾಜಿಕಲ್ ಹಂತದಲ್ಲಿ ಸಂಘ ಪರಿವಾರದವರು ಜಾತಿ ಪದ್ಧತಿಯಲ್ಲಿ ನಂಬಿಕೆ ಇಡುವುದಿಲ್ಲವೆಂದು ಹೇಳುತ್ತದೆ. ಮತ್ತು ಮುಂದೆ ಸಾಗಿ ಜಾತಿ ಪದ್ಧತಿಯ ಉಗಮವು ಮನುಸ್ಮೃತಿಯ ನಿಯಮಗಳಿಂದ ಆದುದಲ್ಲ. 'ವಿದೇಶಿ' ಧರ್ಮಗಳ ಪ್ರಭಾವದಿಂದ ಎಂದು ಹೇಳುತ್ತದೆ. ಈ ಥಿಯರಿಯ ಪ್ರಕಾರ ಆಕ್ರಮಣಕಾರಿ ಮುಸ್ಲಿಂದೊರೆಗಳು ಎಲ್ಲರನ್ನೂ ಬಲ ಪ್ರಯೋಗದ ಮೂಲಕ ಮತಾಂತರಗೊಳಿಸುತ್ತಾರೆ. ಯಾರು ಅದನ್ನು ವಿರೋಧಿಸುತ್ತಾರೊ, ಅವರು ಚಿತ್ರ ಹಿಂಸೆಯನ್ನು ಅನುಭವಿಸಬೇಕಿತ್ತಾದ್ದರಿಂದ ಕಾಡಿನೊಳಗೆ ನುಸುಳಿಕೊಂಡರು. ಇವರೇ ಅನಂತರದಲ್ಲಿ 'ಅಸ್ಪೃಶ್ಯ'ರಾಗುತ್ತಾರೆ. ಅಲ್ಲದೆ ಜಾತಿ ಪದ್ಧತಿಯ ಬಗೆಗಿನ ಅಂಬೇಡ್ಕರ್‌ರವರ ಚಿಂತನೆಗಳು ಹಾಗೂ ಆರ್‌ಎಸ್‌ಎಸ್ ಆಲೋಚನೆಗಳು ಒಂದೇ ಎಂದು ವಾದಿಸಲಾಗುತ್ತದೆ.

ಹೀಗೆ ಅವರಿಬ್ಬರ ಮಧ್ಯೆಯಿರುವ ವೈರುಧ್ಯವನ್ನು ಜನರಿಂದ ಬಹು ಜಾಣ್ಮೆಯಿಂದ ಮುಚ್ಚಿಡಲಾಗುತ್ತದೆ. ಡಾ|| ಅಂಬೇಡ್ಕರ್‌ರವರು ಮನುಸ್ಮೃತಿಯನ್ನು ಸುಡುತ್ತಾರಲ್ಲದೆ, ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿಯು ಕಾರ್ಯ ನಿರ್ವಹಿಸುತ್ತಾರೆ. ಆದರೆ ಆರ್‌ಎಸ್‌ಎಸ್ ಮನುಸ್ಮೃತಿಯನ್ನು ಎತ್ತಿಹಿಡಿದು, ಸಂವಿಧಾನವನ್ನು ತಿರಸ್ಕರಿಸಲು ಕರೆ ನೀಡುತ್ತದೆ.

ಬಹು ಹಿಂದೆಯೇ ಸಾಮಾಜಿಕ ಹಂತದಲ್ಲಿ, ಹಿಂದೂ ಮಹಾಸಭೆಯು ಭಾರತ್ ಸೇವಾಶ್ರಮವನ್ನು ಹಾಗೂ ಹಿಂದೂ ಮಿಲನ ಮಂದಿರವನ್ನೂ ಸ್ಥಾಪಿಸುತ್ತದೆ. ಇತ್ತೀಚೆಗೆ ಆರ್‌ಎಸ್‌ಎಸ್ ದಲಿತರಿಗಾಗಿ ಅನೇಕ ಸಂಸ್ಥೆಗಳನ್ನು ಸ್ಥಾಪಿಸಿದೆ. ಈ ಸಂಘ-ಸಂಸ್ಥೆಗಳು ಒಂದೇ ತತ್ತ್ವವಾದ 'ಜಾತಿ ವಿರೋಧಿ ಹೋರಾಟಗಳು' ಸರಿಯಿಲ್ಲವೆನ್ನುವುದರ ಸುತ್ತ ಕ್ರಿಯಾಶೀಲವಾಗುತ್ತದೆಯಲ್ಲದೆ 'ಜಾತಿ ಸೌಹಾರ್ದತೆ'-ಸಾಮಾಜಿಕ ಸಾಮರಸ್ಯ'ಬೇಕಾಗಿದೆ ಎನ್ನುತ್ತದೆ. ಇದು ಮೀಸಲಾತಿಯ ಉಪಯೋಗ ಪಡೆದ ಅನೇಕ ಮಧ್ಯಮ ವರ್ಗದ ದಲಿತರನ್ನು ನಂಬುವಂತೆ ಮಾಡಿದೆ. ಹೀಗೆ ಆರ್‌ಎಸ್‌ಎಸ್ ಒಂದು ರೀತಿಯ ಹಿಂದೂ ಐಡೆಂಟಿಟಿಯನ್ನು ಒಂದು ವಿಭಾಗದ ದಲಿತರಿಗೆ ನೀಡಿ, ಅವರ ಮೇಲ್ಮುಖ ಚಲನೆಗೆ ನೆರವಾಗಿದೆ.

ಈ ಎಲ್ಲಾ ಸಂಘ-ಸಂಸ್ಥೆಗಳು ಹಿಂದೂಕರಣದ ಅನೇಕ ಜನಪ್ರಿಯ ಹಬ್ಬಗಳನ್ನು ಸಂಘಟಿಸುತ್ತಾ ಸಹಪಂಕ್ತಿಯೂಟವನ್ನು ಏರ್ಪಡಿಸಿ, ದಲಿತ ಗುಂಪುಗಳು ಸಮಾಜದಲ್ಲಿ ಒಪ್ಪಿತವೆಂಬಂತೆ ಕಾರ್ಯಕ್ರಮಗಳನ್ನು ಸಂಘಟಿಸುತ್ತವೆ. ಫೂಲೆ ಮತ್ತು ಅಂಬೇಡ್ಕರವರನ್ನು ಆರಾಧಿಸುವ ಕುರುಡು ನಂಬಿಕೆಯನ್ನು ಪರಿಣಾಮಕಾರಿಯಾಗಿ ಬ್ರಾಹ್ಮಣೀಕರಣಕ್ಕೊಳಪಡಿಸಲಾಗಿದೆ. ಸಂಘ-ಪರಿವಾರಕ್ಕೆ ಅವರ ಉಪದೇಶಗಳನ್ನು ಮರೆತು, ಅಂಥ ವ್ಯಕ್ತಿಗಳನ್ನು ಪೂಜಿಸುವುದರಿಂದ ಯಾವುದೇ ಸಮಸ್ಯೆಯಾಗುವುದಿಲ್ಲ.

ದಲಿತರಾದ ನಾವು ಛಿದ್ರಗೊಂಡು ಬೀಳುತ್ತೇವೆ : ಈ ತಂತ್ರೋಪಾಯಗಳ ಯಶಸ್ಸಿಗೆ ಕಾರಣವೆಂದರೆ ದಲಿತ ಚಳುವಳಿಯನ್ನು ವಿಭಾಗಿಸಿರುವುದು. ಫೂಲೆಯವರು ದಲಿತರಿಗೆ ಬೇಕಾಗಿರುವ ಎರಡು ಅಗತ್ಯಗಳನ್ನು 'ಭೌತಿಕ ಮತ್ತು ಸ್ವಾಭಿಮಾನ'-ಗುರುತಿಸಿದ್ದಾರೆ. ಅವರು ಪರಿಭಾವಿಸಿದ ರೈತ ಚಿತ್ರಣ 'ಶೂದ್ರ ಮತ್ತು ರೈತ' ಎನ್ನುವುದು ಶೋಷಿತ ಗುಂಪುಗಳ ಸಾಮಾಜಿಕ ಸ್ಥಿತಿಯನ್ನು ಗಾಢವಾಗಿ ಅರ್ಥೈಸಿದೆ. 'ಶೇತ್ಕಾರ್ಯಾಚೆ ಅಸರ್' (ಬೇಸಾಯಗಾರರ ಚಾಡಿ) ಎನ್ನುವ ಅವರ ಕೃತಿ, ದಲಿತರ ಸ್ಥಿತಿಯನ್ನು ಅವರು ಅರ್ಥೈಸಿರುವುದಕ್ಕೆ ಹಿಡಿದ ಕನ್ನಡಿಯಾಗಿದೆ. ಹಾಗೆಯೇ ಡಾ|| ಅಂಬೇಡ್ಕರ್‌ರವರೂ ಸಹ, ದಲಿತ ಚಳುವಳಿ ಭೌತಿಕ ಮತ್ತು ಐಡೆಂಟಿಟಿ ಸಂಗತಿಗಳನ್ನಾಧಿರಸಿರಬೇಕೆಂಬುದನ್ನು ಗುರುತಿಸುತ್ತಾರೆ. ಅದಕ್ಕಾಗಿ ಅವರು ಸ್ವತಂತ್ರ ಕಾರ್ಮಿಕ ಪಕ್ಷವನ್ನು ಕಟ್ಟುತ್ತಾರಲ್ಲದೆ, ಸಾರ್ವಜನಿಕ ನೀರಿಗಾಗಿ ನಡೆದ ಮಹಾಡ್ ಚಳುವಳಿಯನ್ನು ಕುರಿತು ಮಾತನಾಡುವಾಗ ಮತ್ತು ಸಾಮಾಜಿಕ-ಸಮಾನತೆಗಾಗಿ ಕಾಲರಾಮ ದೇವಾಸ್ಥಾನ ಪ್ರವೇಶವನ್ನು ಕೈಗೊಂಡಾಗಲಾಗಲೀ ಆ ಸಂಗತಿಗಳನ್ನು ಅವರು ಗುರುತಿಸುತ್ತಾರೆ. ಅನಂತರದಲ್ಲಿ ದಾದಾ ಸಾಹೇಬ್ ಗಾಯಕ್‌ವಾಡ್‌ರವರು ಭೂಹಕ್ಕುಗಳಿಗಾಗಿ ನಡೆಸಿದ ಹೋರಾಟದ ಸಂದರ್ಭದಲ್ಲೂ ದಲಿತ ಚಳುವಳಿಯ ಒಂದು ಸಮಗ್ರ ಅಗತ್ಯದ ಹುಟ್ಟನ್ನು ನಾವು ಕಾಣಬಹುದು. 1970ರ ಆರಂಭದಲ್ಲಿ ದಲಿತ ಪ್ಯಾಂಥರ್ ಗುಂಪಿನವರು ಅತ್ಯುತ್ಕೃಷ್ಟ ಪ್ರಣಾಳಿಕೆಯನ್ನು ಹೊರ ತಂದು, ಅದನ್ನು ಹೋರಾಟದ ರಾಜಕಾರಣಕ್ಕೆ ಬದಲಾಯಿಸಿಕೊಳ್ಳುವ ಮೊದಲೇ ಚಳುವಳಿಯ ನಾಯಕರು ಮೇಲ್ಜಾತಿ-ವರ್ಗಗಳ ಪಕ್ಷಗಳ ತೊಡೆಯ ಮೇಲೆ ಸಿಂಗರಿಸಿದ್ದರು.

ದಲಿತ ರಾಜಕಾರಣದ ದಿಗಂತದ ಮೇಲೆ ಉದಯಿಸಿದ ಕಾನ್ಸಿರಾವ್, 'ಪೂರ್ಣತೆ'ಯ ಭರವಸೆಯನ್ನು ಮೂಡಿಸಿದ್ದರು. ಆದರೆ ಅವರು ಸಂಘ ಪರಿವಾರದ ಮತಾಂಧತೆಯನ್ನು ಅರಿಯುವಲ್ಲಿ ಸೋಲುತ್ತಾರಲ್ಲದೆ,

(21ನೇ ಪುಟಕ್ಕೆ)

ಅಸ್ಪೃಶ್ಯತೆ ಸೃಷ್ಟಿಯ ಕಾರಣ ಅರಸುತ್ತಾ...

'ಅಸ್ಪೃಶ್ಯತೆ' ಭಾರತಕ್ಕೆ ಅಂಟಿದ ಒಂದು ಅಮಾನವೀಯ ಶಾಪ. ಜೀವ-ಜೀವಗಳಲ್ಲಿ ಕೃತಕ ಶ್ರೇಷ್ಠತೆ-ಕನಿಷ್ಠತೆಗಳನ್ನು ಕಲ್ಪಿಸಿ, ಅದನ್ನು ಜನನನಿಷ್ಠ ನೆಲೆಯಲ್ಲಿ ಮುನ್ನಡೆಸಿದ, ಕರ್ಮ ಸಿದ್ಧಾಂತದಲ್ಲಿ ಗಟ್ಟಿಗೊಳಿಸಿದ ದೂರ್ತಪದ್ಧತಿಯಿಂದಾಗಿ ಭಾರತ ಅನೈಕ್ಯತೆಯ ತವರುಮನೆಯಾಯಿತು. ಈ 'ಅಸ್ಪೃಶ್ಯತೆ' ಸೃಷ್ಟಿಯ ಕಾರಣ, ಪರಿಣಾಮ, ನಿವಾರಣೆಯ ಹೋರಾಟಕ್ಕೆ ಇರುವ ಚರಿತ್ರೆ ಅಧ್ಯಯನಯೋಗ್ಯವೆನಿಸಿದೆ.

1. ಅಸ್ಪೃಶ್ಯತೆ ಸೃಷ್ಟಿಯ ಕಾರಣಗಳು

ಜಾತಿ ಮತ್ತು ಅಸ್ಪೃಶ್ಯತೆಗಳ ಸೃಷ್ಟಿಯ ಕುರಿತು ಅನೇಕ ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಇವೆಲ್ಲವನ್ನು ಕ್ರೋಢೀಕರಿಸಿದರೆ ಇಲ್ಲಿ ಒಟ್ಟು ಆರು ಬಗೆಗಳು ಕಾಣುತ್ತವೆ. ಅವು: ಜನಾಂಗ ಭೇದ, ವೃತ್ತಿ ಭೇದ, ಆಹಾರ ಭೇದ, ಶರೀರದ ವರ್ಣಭೇದ, ವರ್ಣಸಂಕರ ಭೇದ ಮತ್ತು ಧರ್ಮಗಳ ಉಗಮ, ಇವುಗಳ ಬಗ್ಗೆ ಇಲ್ಲಿ ಹೀಗೆ ಚರ್ಚಿಸಬಹುದು.

ಜನಾಂಗ ಭೇದ : ಅಸ್ಪೃಶ್ಯತೆಯ ಉಗಮಕ್ಕೆ ಜನಾಂಗೀಯ ಭೇದ ಕಾರಣವಾಯಿತೆ? ಎಂಬ ಪ್ರಶ್ನೆ ಎತ್ತಿಕೊಂಡು ಡಾ. ಅಂಬೇಡ್ಕರ್‌ರವರ ಪೂರ್ವದಲ್ಲಿ 'ಸ್ಟಾನ್ಲಿ ರೈಸ್' ಮಾತ್ರ ಅಧ್ಯಯನ ಮಾಡಿದ್ದಾರೆ.

ಇವರ ಪ್ರಕಾರ ಭಾರತದ ಮೇಲೆ ಎರಡು ಆಕ್ರಮಣಗಳು ಜರುಗಿವೆ. ಮೊದಲನೆಯದು ಭಾರತದ ಮೇಲೆ ದ್ರಾವಿಡರ ಆಕ್ರಮಣ. ಇವರು ಭಾರತದಲ್ಲಿ ಮೊದಲಿನಿಂದಲೂ ಇದ್ದ ದ್ರಾವಿಡೇತರ ಮೂಲನಿವಾಸಿಗಳನ್ನು ಜಯಿಸಿದರು. ಹೀಗೆ ಸೋತ ಮೂಲನಿವಾಸಿಗಳು ಅಸ್ಪೃಶ್ಯ ನೆಲೆಗೆ ತಳ್ಳಲ್ಪಟ್ಟರೆಂಬುದು ರೈಸ್‌ರ ಸಿದ್ಧಾಂತ. ಬಳಿಕ ಭಾರತದ ಮೇಲೆ ಆರ್ಯರು ಎರಗಿ, ದ್ರಾವಿಡರನ್ನು ಸೋಲಿಸಿದರು. ಹೀಗೆ ಸೋಲಿಸಿದ ಆರ್ಯರು, ಸೋತ ದ್ರಾವಿಡರನ್ನು ಹೇಗೆ ನಡೆಸಿಕೊಂಡರೆಂಬುದನ್ನು ರೈಸ್ ಹೇಳುವುದಿಲ್ಲ.

ಪ್ರಾಚೀನ ಭಾರತದ ಚರಿತ್ರೆಯನ್ನು ಅಧ್ಯಯನ ಮಾಡುವವರಿಗೆ ಬಹಳ ಮುಖ್ಯವಾಗಿ ನಾಲ್ಕು ಹೆಸರುಗಳು ಎದುರಾಗುತ್ತವೆ. ಆರ್ಯರು, ದ್ರಾವಿಡರು, ದಾಸರು ಮತ್ತು ನಾಗರು. ಈ ಹೆಸರುಗಳು ಏನನ್ನು ಸೂಚಿಸುತ್ತವೆ ಎಂಬುದರ ಬಗ್ಗೆ ಇಲ್ಲಿ ವಿವೇಚಿಸಬಹುದಾಗಿದೆ. ಇವು ಬೇರೆ ಬೇರೆ ಜನಾಂಗದ ಹೆಸರುಗಳೋ? ಅಥವಾ ಒಂದೇ ಜನಾಂಗದ ಬೇರೆ ಬೇರೆ ಹೆಸರುಗಳೋ? ಎಂಬ ಪ್ರಶ್ನೆಯನ್ನು ಎತ್ತಿಕೊಂಡ ವಿದ್ವಾಂಸರು, ಸಾಮಾನ್ಯವಾಗಿ ಇವೆಲ್ಲ ಬೇರೆ ಬೇರೆ ಜನಾಂಗಗಳೆಂದು ಭಾವಿಸಿರುವುದುಂಟು.

ಆದರೆ "...ದ್ರಾವಿಡರು ಮತ್ತು ನಾಗರು ಎಂಬ ಎರಡು ಬೇರೆ ಬೇರೆ ಹೆಸರುಗಳು ಒಂದೇ ಜನಾಂಗದವರನ್ನು ಕುರಿತಾದವು ಎಂಬುದಂತೂ ನಿಜಸ್ಥಿತಿ" ಎಂಬುದು ಡಾ. ಬಾಬಾಸಾಹೇಬ ಅಂಬೇಡ್ಕರ್‌ರವರ ಅಭಿಪ್ರಾಯವಾಗಿದೆ. ಈ ವಿಷಯ ಕುರಿತು ಆಳವಾದ ಅಧ್ಯಯನ ನಡೆಸಿರುವ ಸಿ.ಎಫ್. ಓಲ್ಧಾಮ್ ಅವರು "ಪ್ರಾಚೀನ ಕಾಲದಿಂದ ದ್ರಾವಿಡ ಜನರನ್ನು ಚೇರರು, ಚೋಳರು ಮತ್ತು ಪಾಂಡ್ಯರೆಂದು ವಿಂಗಡಿಸಲಾಗಿದೆ. ಚೇರ ಅಥವಾ ಸೇರ (ಪ್ರಾಚೀನ ತಮಿಳಿನಲ್ಲಿ ಸರ್ಪ) ಎಂಬುದು ನಾಗ ಎಂಬುದಕ್ಕೆ ದ್ರಾವಿಡ ಸಮಾನಾರ್ಥಕ ಪದ"ವೆಂದು ಈ ಹೇಳಿಕೆ ಪರ್ಯಾಯವಾಗಿ ಡಾ. ಅಂಬೇಡ್ಕರರ ವಾದವನ್ನು ಬೆಂಬಲಿಸುತ್ತದೆ. ದಾಸರು ಎಂಬುದು ಈ ನಾಗರಿಗಿದ್ದ ಇನ್ನೊಂದು ಹೆಸರೆಂದು ವಿದ್ವಾಂಸರು ಒಪ್ಪಿಕೊಂಡಿದ್ದಾರೆ.

ಆದ್ದರಿಂದ 'ದಾಸರು', 'ನಾಗರು' ಎಂಬಿವು ದ್ರಾವಿಡರ ಪರ್ಯಾಯನಾಮಗಳಾಗಿವೆ. ಇವನ್ನು ಬಿಟ್ಟರೆ ಆರ್ಯರು ಇನ್ನೊಂದು ಜನಾಂಗವಾಗಿದೆ. ಹೀಗೆ ಈ ಎರಡು ಜನಾಂಗಗಳ (ಆರ್ಯ, ದ್ರಾವಿಡ) ಘರ್ಷಣೆಯಲ್ಲಿ ಸ್ಪೃಶ್ಯ-ಅಸ್ಪೃಶ್ಯ ಶ್ರೇಣಿ ನಿರ್ಮಾಣವಾಯಿತೆಂಬ ವಾದ ಇದಾಗಿದೆ.

ವೃತ್ತಿಭೇದ : ಅಸ್ಪೃಶ್ಯತೆಯ ಉಗಮಕ್ಕೆ ವೃತ್ತಿಯೇ ಕಾರಣವಾಗಿದೆಯೆಂಬ ಸಿದ್ಧಾಂತವನ್ನು ಕೆಲವರು ಮಂಡಿಸುತ್ತಾರೆ. ವೇದಗಳಲ್ಲಿ ನಾಲ್ಕು ವರ್ಣಗಳ ಮತ್ತು ಅನೇಕ ವೃತ್ತಿಗಳ (ಬಡಗಿ, ಚಮ್ಮಾರ, ವೈದ್ಯ, ಅಕ್ಕಸಾಲಿ, ರಥಕಾರ, ಇತ್ಯಾದಿ) ಉಲ್ಲೇಖ ಬರುತ್ತದೆ. ಆಗ ಯಾವನೇ ವ್ಯಕ್ತಿ ಯಾವುದೇ ವೃತ್ತಿ ಮಾಡಬಹುದೆಂಬ ಸ್ವಾತಂತ್ರ್ಯವಿದ್ದಂತೆ ಕಾಣುತ್ತದೆ. 'ನಾನು ಕವಿ, ನನ್ನ ತಂದೆ ವೈದ್ಯ, ನನ್ನ ತಾಯಿ ಕಾಳುಗಳನ್ನು ಕಲ್ಲಿನಲ್ಲಿ ಬೀಸುವವಳು' ಎಂಬ ವಿವರಣೆ ಇದಕ್ಕೆ ಸಾಕ್ಷಿಯಾಗಿದೆ. ಭಗವದ್ಗೀತೆಯಲ್ಲಿ 'ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ" ಎಂಬುದೂ ಇದನ್ನೇ ಧ್ವನಿಸುತ್ತದೆ.

ಪ್ರಾಚೀನ ಭಾರತದ ಚರಿತ್ರೆಯನ್ನು ಅಧ್ಯಯನ ಮಾಡುವವರಿಗೆ ಬಹಳ ಮುಖ್ಯವಾಗಿ ನಾಲ್ಕು ಹೆಸರುಗಳು ಎದುರಾಗುತ್ತವೆ. ಆರ್ಯರು, ದ್ರಾವಿಡರು, ದಾಸರು ಮತ್ತು ನಾಗರು. ಈ ಹೆಸರುಗಳು ಏನನ್ನು ಸೂಚಿಸುತ್ತವೆ ಎಂಬುದರ ಬಗ್ಗೆ ಇಲ್ಲಿ ವಿವೇಚಿಸಬಹುದಾಗಿದೆ. ಇವು ಬೇರೆ ಬೇರೆ ಜನಾಂಗದ ಹೆಸರುಗಳೋ? ಅಥವಾ ಒಂದೇ ಜನಾಂಗದ ಬೇರೆ ಬೇರೆ ಹೆಸರುಗಳೋ? ಎಂಬ ಪ್ರಶ್ನೆಯನ್ನು ಎತ್ತಿಕೊಂಡ ವಿದ್ವಾಂಸರು, ಸಾಮಾನ್ಯವಾಗಿ ಇವೆಲ್ಲ ಬೇರೆ ಬೇರೆ ಜನಾಂಗಗಳೆಂದು ಭಾವಿಸಿರುವುದುಂಟು.

○ ಡಾ|| ಸಾವುಕಾರ ಎಸ್. ಕಾಂಬಳೆ

ಈ ವೇದಕಾಲದ ಬಳಿಕ ಸ್ಮೃತಿಗಳ ಕಾಲಕ್ಕೆ ಬರುತ್ತಲೇ, ಜನ್ಮದಿಂದಲೇ ವರ್ಣ ಗುರುತಿಸುವ ಕ್ರಮ ಆರಂಭವಾಗಿ, ಎಲ್ಲ ವೃತ್ತಿಗಳು ಕ್ರಮೇಣ ಜಾತಿಗಳಾಗಿ ಬೆಳೆಯತೊಡಗಿದವು. ಉತ್ತಮ ವೃತ್ತಿಯವ ಶ್ರೇಷ್ಠ, ಕೀಳು ವೃತ್ತಿಯವ ಕನಿಷ್ಠನೆಂಬ ಭಾವನೆ ಬೆಳೆದು, ಬ್ರಾಹ್ಮಣ ಮೇಲು, ಶೂದ್ರ ಕೀಳು ಎಂಬ ಕ್ರೂರ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿತು. ಕಾಲ ಕ್ರಮೇಣ ಅನೇಕ ನಿಯಮಗಳು ಹುಟ್ಟಿ, ಇದು ಇನ್ನೂ ಭದ್ರವಾಯಿತೆಂಬುದು ಈ ವಾದದ ಸ್ವರೂಪವಾಗಿದೆ.

ಆಹಾರ ಭೇದ : ಅಸ್ಪೃಶ್ಯತೆಯ ಉಗಮಕ್ಕೆ ಆಹಾರ ಭೇದ ಕಾರಣವಾಯಿತೆ? ಒಂದು ವೇಳೆ ಆಹಾರ ಕಾರಣವಾದರೆ ಮೂಲತಃ ಮಾಂಸ ತಿನ್ನುತ್ತಲಿದ್ದ ಬ್ರಾಹ್ಮಣರು ಯಾಕೆ ಅಸ್ಪೃಶ್ಯರಾಗಲಿಲ್ಲ? ಕೆಳವರ್ಗದವರು ಮಾತ್ರ ಅಸ್ಪೃಶ್ಯರಾದುದು ಏಕೆ? ಎಂಬ ಪ್ರಶ್ನೆಗಳನ್ನು ಕೆಲವರು ಮಂಡಿಸುತ್ತಾರೆ.

ಅಸ್ಪೃಶ್ಯತೆಯ ಉಗಮಕ್ಕೆ ಹಸುವಿನ ಮಾಂಸ ಭಕ್ಷಣೆ ಭಾಗಶಃ ಕಾರಣವಾಗಿದೆ. ಹಸುವಿನ ಮಾಂಸ ಭಕ್ಷಣೆಯಿಂದಲೇ ನತದೃಷ್ಟರನ್ನು ಅಸ್ಪೃಶ್ಯರನ್ನಾಗಿ ಕಾಣಲಾಗಿದೆ ಎಂಬುದು ತಕ್ಕಮಟ್ಟಿಗೆ ನಿಜ. ಆದರೆ, ಬ್ರಾಹ್ಮಣರು ಪ್ರಾಚೀನ ಕಾಲದಲ್ಲಿ ಯಜ್ಞಯಾಗಗಳ ನೆಪದಲ್ಲಿ ಸಾವಿರಾರು ಹಸುಗಳ ಮಾಂಸ ಭಕ್ಷಿಸುತ್ತಿದ್ದರೂ ಇವರನ್ನು ಅಸ್ಪೃಶ್ಯಸ್ಥಾನಕ್ಕೆ ತಳ್ಳಲಿಲ್ಲ. ಏಕೆಂದರೆ, ಬ್ರಾಹ್ಮಣರು ಹಸುವಿನ ಮಾಂಸ ತಿನ್ನುವುದರ ಜೊತೆಗೆ ಅಧಿಕಾರ ಮತ್ತು ಪ್ರಭುತ್ವ ಕಳೆದುಕೊಂಡಿರಲಿಲ್ಲ. ಆದ್ದರಿಂದ ಇವರನ್ನು ಅಸ್ಪೃಶ್ಯರೆಂದು ಯಾರೂ ಕಾಣಲಿಲ್ಲ. ಅತಿಶೂದ್ರರು ಮಾಂಸ ತಿನ್ನುವುದು ಮಾತ್ರ ಉಳಿಸಿಕೊಂಡು, ರಾಜ್ಯಾಧಿಕಾರವನ್ನು ಬಿಟ್ಟುಕೊಟ್ಟರು. ಯಾವ ಸಮುದಾಯ ರಾಜ್ಯಾಧಿಕಾರವನ್ನು ಕಳೆದುಕೊಳ್ಳುತ್ತದೆಯೋ ಆ ಸಮುದಾಯವು ಗುಲಾಮ ಸಮುದಾಯವಾಗುತ್ತದೆ ಮತ್ತು ಭಾರತದಂಥ ಭಾವನಿಷ್ಠ ರಾಷ್ಟ್ರದಲ್ಲಿ ಅಂಥ ಗುಲಾಮರು ಅಸ್ಪೃಶ್ಯರಾಗಿ ಜೀವಿಸುತ್ತಾರೆ-ಎಂದು ಈ ಸಿದ್ಧಾಂತದವರು ಹೇಳುತ್ತಾರೆ.

ಶರೀರದ ವರ್ಣಭೇದ : ಸ್ಮೃತಿಕಾರರ ಅಭಿಪ್ರಾಯದಂತೆ ವರ್ಣ ಶಬ್ದವು 'ವೃ-ವರಣೇ' ಧಾತುವಿನಿಂದ ನಿಷ್ಪನ್ನವಾಗಿದೆ. ಇಲ್ಲಿ 'ವೃ' ಎಂಬುದಕ್ಕೆ ಆಚ್ಛಾದನವೆಂದು ಅರ್ಥ. ಅಂದರೆ ಶರೀರದ ಆಚ್ಛಾದನವಾದ ಶ್ವೇತ, ರಕ್ತ, ಪೀತ, ಕೃಷ್ಣ, ಅಂದರೆ ಬಿಳಿಯ, ಕೆಂಪು, ಹಳದಿ, ಕಪ್ಪು ಚರ್ಮವನ್ನವಲಂಬಿಸಿಯೂ ಅಸ್ಪೃಶ್ಯತೆ ಹುಟ್ಟಿಕೊಂಡಿತೆಂದು ಕೆಲವರು ಹೇಳುತ್ತಾರೆ. ಬ್ರಾಹ್ಮಣ-ಬಿಳಿಯ (ಶ್ವೇತ), ಕ್ಷತ್ರಿಯ-ಕೆಂಪು (ರಕ್ತ), ವೈಶ್ಯ-ಹಳದಿ (ಪೀತ), ಶೂದ್ರ-ಕಪ್ಪು (ಕೃಷ್ಣ) ಈ ರೀತಿ ವರ್ಗೀಕರಣ ಮಾಡಿದುದನ್ನು ಕಾಣುತ್ತೇವೆ. ಒಟ್ಟಾರೆ, ತಮ್ಮ ಬಣ್ಣವೇ ಶ್ರೇಷ್ಠವೆಂಬ ಪ್ರತಿಷ್ಠೆಯಿಂದಾಗಿ ಈ ಭೇದ ಸಂಸ್ಕೃತಿ ಹುಟ್ಟಿಕೊಂಡು, ಕಪ್ಪು ವರ್ಣದವರು ಕೀಳಾಗಿ ಪರಿಗಣಿಸಲ್ಪಟ್ಟರೆಂದು, ಈ ವಾದವನ್ನು ಕೆಲವು ವಿದ್ವಾಂಸರು ಮಂಡಿಸಿದ್ದಾರೆ.

ವರ್ಣಸಂಕರ : ಆರಂಭದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರವೆಂಬ ನಾಲ್ಕು ವರ್ಣಗಳು

ಅಸ್ಪೃಶ್ಯತೆಯ ಉಗಮಕ್ಕೆ ವೃತ್ತಿಯೇ ಕಾರಣವಾಗಿದೆಯೆಂಬ ಸಿದ್ಧಾಂತವನ್ನು ಕೆಲವರು ಮಂಡಿಸುತ್ತಾರೆ. ವೇದಗಳಲ್ಲಿ ನಾಲ್ಕು ವರ್ಣಗಳ ಮತ್ತು ಅನೇಕ ವೃತ್ತಿಗಳ (ಬಡಗಿ, ಚಮ್ಮಾರ, ವೈದ್ಯ, ಅಕ್ಕಸಾಲಿ, ರಥಕಾರ, ಇತ್ಯಾದಿ) ಉಲ್ಲೇಖ ಬರುತ್ತದೆ. ಆಗ ಯಾವನೇ ವ್ಯಕ್ತಿ ಯಾವುದೇ ವೃತ್ತಿ ಮಾಡಬಹುದೆಂಬ ಸ್ವಾತಂತ್ರ್ಯವಿದ್ದಂತೆ ಕಾಣುತ್ತದೆ. 'ನಾನು ಕವಿ, ನನ್ನ ತಂದೆ ವೈದ್ಯ, ನನ್ನ ತಾಯಿ ಕಾಳುಗಳನ್ನು ಕಲ್ಲಿನಲ್ಲಿ ಬೀಸುವವಳು' ಎಂಬ ವಿವರಣೆ ಇದಕ್ಕೆ ಸಾಕ್ಷಿಯಾಗಿದೆ. ಭಗವದ್ಗೀತೆಯಲ್ಲಿ 'ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ" ಎಂಬುದೂ ಇದನ್ನೇ ಧ್ವನಿಸುತ್ತದೆ.

ಅಸ್ತಿತ್ವದಲ್ಲಿದ್ದರೂ ಈ ಗೆರೆಗಳನ್ನು ದಾಟಿ ಘಟಿಸಿದ ರಕ್ತಸಂಬಂಧ ಕಾರಣವಾಗಿ, ಒಂದಿಷ್ಟು ಮಿಶ್ರಜಾತಿಗಳು ಹುಟ್ಟಿದವೆಂಬ ಇನ್ನೊಂದು ಅಭಿಪ್ರಾಯವನ್ನು ವಿದ್ವಾಂಸರು ಸ್ಥಾಪಿಸಿದ್ದಾರೆ. ಇದಕ್ಕೆ ಅವರು ಸ್ಮೃತಿಗಳ ಆಧಾರ ನೀಡುತ್ತಾರೆ. ಅಲ್ಲಿ-

ವೈಶ್ಯ+ಶೂದ್ರಸ್ತ್ರೀ = 'ಕರಣ'ಜಾತಿ
ಬ್ರಾಹ್ಮಣ + ವೈಶ್ಯಸ್ತ್ರೀ = 'ಅಂಭಷ್ಠ' ಜಾತಿ
ಕ್ಷತ್ರಿಯ +ಶೂದ್ರಸ್ತ್ರೀ = 'ಉಗ್ರ' ಜಾತಿ
ವೈಶ್ಯ + ಕ್ಷತ್ರಿಯಸ್ತ್ರೀ = 'ಮಾಗಧ' ಜಾತಿ
ಕ್ಷತ್ರಿಯ+ವೈಶ್ಯಸ್ತ್ರೀ = 'ಮಹಿಷ' ಜಾತಿ
ವೈಶ್ಯ+ಕ್ಷತ್ರಿಯಸ್ತ್ರೀ='ಕ್ಷತಾ' ಜಾತಿ
ಕ್ಷತ್ರಿಯ+ಬ್ರಾಹ್ಮಣಸ್ತ್ರೀ = 'ಸೂತ' ಜಾತಿ
ವೈಶ್ಯ + ಬ್ರಾಹ್ಮಣಸ್ತ್ರೀ = 'ವೈದೇಹಿಕ' ಜಾತಿ
ಮಾಹಿಷ + ಕರಣಸ್ತ್ರೀ = 'ರಥಕಾರ' ಜಾತಿ
ಶೂದ್ರ + ಬ್ರಾಹ್ಮಣಸ್ತ್ರೀ = 'ಚಂಡಾಲ' ಜಾತಿ

ಹೀಗೆ ವರ್ಣಗಳ ರಕ್ತ ಮಿಶ್ರಣದಿಂದ ಮಿಶ್ರಜಾತಿಗಳೂ, ಈ ಮಿಶ್ರಜಾತಿಗಳ ರಕ್ತಮಿಶ್ರಣದಿಂದ ಉಪಜಾತಿಗಳೂ ಬೆಳೆಯುತ್ತ ಬಂದವೆಂದು ಸ್ಮೃತಿಗಳು ಸೂಚಿಸುತ್ತವೆ.

ಧರ್ಮಗಳ ಉಗಮ : ಭಾರತದಲ್ಲಿ ಕಾಲಕಾಲಕ್ಕೆ ಧರ್ಮ ಧುರೀಣರು ಹುಟ್ಟಿ ಜೀವ, ದೇವ, ಜಗತ್ತು ವಿಚಾರವಾಗಿ ತಮ್ಮದೇ ಆದ ತತ್ವವನ್ನು ಸಾರಿದರು. ಈ ತತ್ವವನ್ನು ಒಪ್ಪಿಕೊಂಡು ದೀಕ್ಷೆ ಪಡೆದ ಜನ ಸಮುದಾಯ, ಒಂದು ಜಾತಿಯಾಗಿ ರೂಪಗೊಂಡಿತು. ಈ ಹಿನ್ನೆಲೆಯಲ್ಲಿ ಜೈನ, ಸಿಖ್, ಲಿಂಗಾಯತ ಮೊದಲಾದ ನಿರ್ದಿಷ್ಟ ಸಿದ್ಧಾಂತವನ್ನುಳ್ಳ ಧರ್ಮಗಳು ಹುಟ್ಟಿ, ಜಾತಿಗಳಾಗಿ ಕಾಣಿಸಿಕೊಂಡವು. ಇಂಥ ಸಿದ್ಧಾಂತಗಳಿಗೆ ಹೊರಗೆ ಉಳಿದ ಬೇರೆ ಬೇರೆ ಜನವರ್ಗ ಕೀಳಾಗಿ ಪರಿಗಣಿಸಲ್ಪಟ್ಟಿದ್ದು, ಶೂದ್ರ, ಅತಿ ಶೂದ್ರಗಳೆಂಬ ವಿಚಾರಗಳು ಆಕಾರ ಪಡೆದವು.

ಹೀಗೆ ಸ್ಪೃಶ್ಯ-ಅಸ್ಪೃಶ್ಯತೆಯ ವಿಚಾರವಾಗಿ ಆರು ಅಭಿಪ್ರಾಯಗಳು ವಿದ್ವಾಂಸರಿಂದ ಮಂಡಿಸಲ್ಪಟ್ಟಿದ್ದು, ಇವುಗಳಲ್ಲಿ ಯಾವುದೇ ಒಂದು ಕಾರಣದಿಂದ ಜಾತಿಗಳು ಹುಟ್ಟಿಕೊಂಡಂತಿಲ್ಲ. ಈ ಆರೂ ತಮ್ಮ ತಮ್ಮ ಕಾಣಿಕೆ ಸಲ್ಲಿಸುತ್ತ ಬರುವಲ್ಲಿ, ಜಾತಿ ವ್ಯವಸ್ಥೆ ಅಮೀಬಾದಂತೆ ವಿಭಜಿಸಿದಂತೆಲ್ಲ ದ್ವಿಗುಣಗೊಳ್ಳುತ್ತ ಬಂದಿದೆಯೆಂದು ಹೇಳಬಹುದು.

ಭಾರತದಲ್ಲಿ ವರ್ಣ-ಜಾತಿಗಳಿಗೂ ಪುನರ್ ಜನ್ಮಕ್ಕೂ ಕರ್ಮಸಿದ್ಧಾಂತಕ್ಕೂ ವೃತ್ತಿಗಳಿಗೂ ಸ್ಮೃತಿಕಾರರು ಸಂಬಂಧ ಕಲ್ಪಿಸಿದ ಒಂದು ವಿಚಿತ್ರ 'ವಾದ' ಸ್ಥಾಪನೆಗೊಳ್ಳುವಲ್ಲಿ, ಈ ಜಾತಿ ಜಾಲ ವಿಸ್ತಾರವಾಗಿ, ಭದ್ರವಾಗಿ ಬೆಳೆದು ನಿಂತಿತು. ಈ ಹಿನ್ನೆಲೆಯಲ್ಲಿ ಭಾರತದಲ್ಲಿಯೇ ೬೦೦೦ಕ್ಕೂ ಹೆಚ್ಚು ಜಾತಿಗಳು ಹುಟ್ಟಿಕೊಂಡು, ಅಸ್ತಿತ್ವದಲ್ಲಿವೆಯೆಂದು ವಿದ್ವಾಂಸರು ಹೇಳುತ್ತಾರೆ. 'ಜಾತಿಗಳು ನಾಶವಾದರೆ ಹಿಂದೂ ಧರ್ಮವೇ ನಾಶವಾಗುತ್ತದೆ' ಎಂಬಷ್ಟರ ಮಟ್ಟಿಗೆ ಭಾರತದಲ್ಲಿ ಜಾತಿ ವ್ಯವಸ್ಥೆ ಹೆಣೆದುಕೊಂಡು ನಿಂತಿದೆ.

ಹೀಗೆ ಈ ಕ್ರೂರ ವ್ಯವಸ್ಥೆ ಭಾರತೀಯರನ್ನು ಅಖಂಡವಾಗಿ ರೂಪಿಸದೆ, ಜಾತಿ ಹೆಸರಿನಲ್ಲಿ ಛಿದ್ರಗೊಳಿಸಿದ ಕಾರಣ, ಇವರು ವೈಯಕ್ತಿಕವಾಗಿ ಸಬಲರು, ಸಾಮಾಜಿಕವಾಗಿ ದುರ್ಬಲರು ಎಂಬ ಅಪಖ್ಯಾತಿಗೆ ಗುರಿಯಾದರು.

೨. ಅಸ್ಪೃಶ್ಯತೆಯ ಪರಿಣಾಮಗಳು

ಕ್ರಿ.ಶ. 2ನೆಯ ಶತಮಾನದಲ್ಲಿ ಮನುಸ್ಮೃತಿ ರಚಿಸಲ್ಪಟ್ಟರೂ ಅದು ಪೂರ್ಣ ಅನುಷ್ಠಾನಕ್ಕೆ ಬಂದದು ಗುಪ್ತರ ಕಾಲದಲ್ಲಿ-ಎನ್ನುವುದು ನಿರ್ವಿವಾದ. ಸ್ಮೃತಿ ಎಂದರೆ ಸಂವಿಧಾನವೆಂದೇ ತಿಳಿಯಬೇಕು. ಗುಪ್ತರ ಕಾಲಕ್ಕಾಗಲೇ ೧೫೭ ಸ್ಮೃತಿಗಳು ರಚಿಸಲ್ಪಟ್ಟಿದ್ದವು. ಅವುಗಳಲ್ಲಿ 'ಮನುಸ್ಮೃತಿ' ಮತ್ತು 'ಸಾಮವತ ಭಾರ್ಗವ' ಸ್ಮೃತಿಗಳು ಪ್ರಸಿದ್ಧವಾಗಿವೆ. ಸುಮತಿ ಭಾರ್ಗವನೆಂಬ ಸಾಮವೇದಿ ಬ್ರಾಹ್ಮಣನ ಕೈಯಿಂದ ಮನಸ್ಮೃತಿಯನ್ನು 'ಸಾಮವತ ಭಾರ್ಗವ' ಹೆಸರಿನಿಂದ ಪುನರ್ ರಚಿಸುವ ಮೂಲಕ ಅಸ್ಪೃಶ್ಯರ ವಿಷಯದಲ್ಲಿ ಕಾನೂನನ್ನು ರೂಪಿಸಿ, ಅದನ್ನು ಜಾರಿಗೊಳಿಸುವಲ್ಲಿ ಬ್ರಾಹ್ಮಣರು ಯಶಸ್ವಿಯಾದರು. ಶೂದ್ರ ಮತ್ತು ಅತಿ ಶೂದ್ರರಿಗೆ ಸ್ಮೃತಿಗಳು ಹೇರಿದ ನಿಯಮ ಹೀಗಿವೆ;

೧. ವಿದ್ಯೆಯ ಹಕ್ಕು ಇಲ್ಲ
೨. ಸಂಪತ್ತಿನ ಹಕ್ಕು ಇಲ್ಲ
೩. ಆಯುಧಗಳನ್ನು ಹೊಂದುವ ಹಕ್ಕು ಇಲ್ಲ
೪. ಮಂತ್ರಿ ಸಂಪುಟದಲ್ಲಿ ಅಷ್ಟಮಂತ್ರಿಗಳು ಬ್ರಾಹ್ಮಣರೇ ಇರಬೇಕು. ಇದೇ ರೀತಿ ಕಾರ್ಯಾಂಗದಲ್ಲಿಯೂ ಮುಖ್ಯವಾಗಿ ಬ್ರಾಹ್ಮಣರೇ ಇರಬೇಕು.
೫. ಮುಖ್ಯ ನ್ಯಾಯಾಧೀಶನು ಬ್ರಾಹ್ಮಣನೇ ಆಗಿರಬೇಕು.
೬. ಸೇನೆಯ ಎಲ್ಲ ದಂಡನಾಯಕರು ಬ್ರಾಹ್ಮಣರೇ ಇರಬೇಕು.
೭. ರಾಜ ಯಾವತ್ತೂ ಕ್ಷತ್ರಿಯನೇ ಆಗಿರಬೇಕು.

(34ನೇ ಪುಟಕ್ಕೆ)

ಉಳಿವಿಗಾಗಿ ಒಟ್ಟಾಗಬೇಕಾದ ಅನಿವಾರ್ಯತೆ



ದಲಿತರಿಗೆ ಈ ವಾಸ್ತವದ ಅರಿವು ಆಗಬೇಕು. ಪುರೋಹಿತ ಶಾಹಿಯ ಹುನ್ನಾರದ ಸಂಚು ಇವರಿಗೆ ತಿಳಿಯಬೇಕು. ವಾಸ್ತವವಾಗಿ ದಲಿತರು ಮತ್ತು ಹಿಂದುಳಿದವರು ಅಲ್ಪಸಂಖ್ಯಾತರಾದ ಮುಸ್ಲಿಂ ಮತ್ತು ಕ್ರೈಸ್ತರಿಗೆ ಹೆಚ್ಚು ಸಮೀಪದವರು. ಇತಿಹಾಸದ ಪುಟಗಳನ್ನು ತಿರುವಿ ಹಾಕಿದಂತೆ ನಮಗೆ ಈ ವಾಸ್ತವ ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತದೆ. ಇಲ್ಲಿನ ಮುಸ್ಲಿಮರಾಗಲೀ ಕ್ರೈಸ್ತರಾಗಲೀ ವಿದೇಶೀ ಮೂಲದವರಲ್ಲ. ಸಮಾನತೆ ಮತ್ತು ಸೋದರತೆಯನ್ನು ಸಾರುವ ಹೊಸ ಸಿದ್ಧಾಂತಗಳು ಇಸ್ಲಾಂ ಮತ್ತು ಕ್ರೈಸ್ತ ಧರ್ಮದಲ್ಲಿ ಇರುವುದನ್ನು ಕಂಡು ನಮ್ಮ ಹಿರಿಯರು ಈ ಮತವನ್ನು ಒಪ್ಪಿಕೊಂಡರು. ಇದರ ಅರಿವಿಲ್ಲದ ಬಹಳಷ್ಟು ಮಂದಿ ಇವತ್ತಿಗೂ ದಲಿತರಾಗಿ ಶ್ರೇಣೀಕೃತ ಜಾತಿ ವ್ಯವಸ್ಥೆಯ ಬಲಿಪಶುಗಳಾಗಿ ಅಸಾಹಯಕರಾಗಿ ನಲುಗುತ್ತಲೇ ಇದ್ದಾರೆ. ಎಷ್ಟೋ ಮಂದಿ ಮಾದಕ ವಸ್ತುಗಳ ಚಟಕ್ಕೆ ಬಲಿಯಾದವರಂತೆ ಪುರೋಹಿತ ಶಾಹಿಯ ಸೋಗಲಾಡಿತನದ ಮಾತಿಗೆ ಮರುಳಾಗಿ ಅವರ ದುಷ್ಟಮುಷ್ಟಿಯ ತೊಗಲು ಬೊಂಬೆಗಳಾಗಿಯೇ ಉಳಿದುಬಿಡುತ್ತಾರೆ.

○ ಪಾ. ಸಂಜೀವ ಬೋಳಾರ

ಜಗತ್ತಿನ ಇಂದಿನ ವಿದ್ಯಮಾನಗಳ ಕುರಿತು ಯೋಚಿಸಿ ನೋಡಿ. ಸದ್ದಾಮ್ ಹುಸೇನರನ್ನು ಹದ್ದುಬಸ್ತಿನಲ್ಲಿ ಇಡುವ ನೆಪದಲ್ಲಿ ಅಮೇರಿಕಾದ ಅಧ್ಯಕ್ಷ ಜಾರ್ಜ್ ಬುಶ್ ಜಗತ್ತನ್ನೇ ಮಣಿಸಲು ಸಜ್ಜಾಗಿ ಬಿಟ್ಟಿದ್ದಾರೆ. ತನ್ನ ಮಣ್ಣಿನಲ್ಲಿಯೆ ಇದನ್ನೆಲ್ಲ ನೋಡಿಕೊಳ್ಳಲೆಂದು ಹುಟ್ಟಿಕೊಂಡು ಸಂಸ್ಥೆ ಒಂದಿದೆ. ಅದರ ಅಧಿಕಾರವನ್ನು ತಾನು ಕಸಿದುಕೊಳ್ಳಬಾರದು. ಹಾಗೆ ಮಾಡಿದರೆ ಸಭ್ಯತೆಯನ್ನು ಹರಾಜಿಗೆ ಹಾಕಿದಂತೆ ಆಗುತ್ತದೆ ಎನ್ನುವ ಸಾಮಾನ್ಯ ಪರಿಜ್ಞಾನವೂ ಇಲ್ಲದೆ ಈತ ರೋಪು ಹಾಕುತ್ತಿರುವುದನ್ನು ಕಾಣುವಾಗ ನಿಜಕ್ಕೂ ದಿಗಿಲಾಗುತ್ತದೆ. ಮನಸ್ಸು ದುಗುಡದಿಂದ ಮುದುಡಿಕೊಳ್ಳುತ್ತದೆ. ಭದ್ರತಾ ಸಮಿತಿಯ ಖಾಯಂ ಸದಸ್ಯರಾದ ಫ್ರಾನ್ಸ್ ಮತ್ತು ರಷ್ಯಾದ ಬುದ್ಧಿ ಮಾತನ್ನು ಕೇಳಿಸಿಕೊಳ್ಳಲಾರದಷ್ಟು ಈತನ ಮನಸ್ಸು ಕೆಟ್ಟು ರಾಡಿಯಾಗಿ ಹೋಗಿದೆ. ಕೋಫಿ ಅನ್ನಾನ್ ತರದ ಸಭ್ಯ ಮನುಷ್ಯನ ಮುಖದಲ್ಲಿ ದುಗುಡ ಹೆಪ್ಪುಗಟ್ಟಿದೆ. ಆದರೆ ಜಾರ್ಜ್ ಬುಶ್ ಮಾತ್ರ ತುಡುಗು ಹೋರಿಯಂತೆ ಗುಟುರು ಹಾಕುತ್ತಲೇ ಇದ್ದಾರೆ. ಈತನ ವರ್ತನೆಗೂ ಗಲ್ಲಿಗಳಲ್ಲಿ ಹಫ್ತಾ ವಸೂಲಿ ಮಾಡಿ ಮಜಾ ಉಡಾಯಿಸುವ ಸಮಾಜ ಕಂಟಕನಿಗೂ ಹೆಚ್ಚಿನ ಅಂತರವೇನೂ ಇಲ್ಲ. ಈ ತರದ ವ್ಯಕ್ತಿಗಳಿಗೆ ಒಳ್ಳೆಯ ಮಾತು, ಹಿತನುಡಿ ಅರ್ಥವಾಗುವುದಿಲ್ಲ. ಮಿಕ್ಕವರೆಲ್ಲ ಒಂದಾಗಿ ದಿಟ್ಟತನದಿಂದ ಎದುರಿಸಿದಾಗ ಮಾತ್ರ ಇವರು ಬಾಲ ಮುದುಡಿ ಜಾಗ ಖಾಲಿ ಮಾಡುತ್ತಾರೆ. ತನ್ನ ಪುಕ್ಕಲು ತನವನ್ನು ಬಿಟ್ಟುಬಿಟ್ಟು ಮಿಕ್ಕ ರಾಷ್ಟ್ರಗಳು ಒಂದಾಗಿ ಈ ರೀತಿಯ ಕ್ರಿಮಿನಲ್‌ಗಳನ್ನು ಎದುರಿಸಿದರೆ ಮಾತ್ರ ಈ ಸರ್ವಾಧಿಕಾರಿ ಪ್ರವೃತ್ತಿಗೆ ಮಂಗಳ ಹಾಡಲು ಸಾಧ್ಯ.

ನಮ್ಮ ದೇಶದ ವಿದ್ಯಮಾನಗಳ ಕುರಿತು ಗಮನ ಹರಿಸಿದಾಗಲೂ ನಮಗೆ ತಟ್ಟನೆ ಗೋಚರಿಸುವುದು ಸಮಾಜ ಕಂಟಕರ ತುಡುಗುತನ. ಸಾವಿರಾರು ವರ್ಷಗಳಿಂದ ಹಾಯಾಗಿ ನೆಮ್ಮದಿಯಿಂದ ಬದುಕುತ್ತಿದ್ದ ನಾಗರಿಕರು ಈಗ ಜೀತಭೀತಿಯಿಂದ ಥರಥರ ನಡುಗುವ ಪರಿಸ್ಥಿತಿ ನಿರ್ಮಾಣವಾಗಿ ಬಿಟ್ಟಿದೆ. ಈ ದೇಶದ ಮೂಲ ನಿವಾಸಿಗಳಾದ ಪರಿಶಿಷ್ಟರು ದಲಿತರು ಮತ್ತು ಹಿಂದುಳಿದವರು ಈ ಗೊಂದಲದ ಕಾರಣವನ್ನು ತಿಳಿಯದೆ ಕಕ್ಕಾಬಿಕ್ಕಿಯಾಗಿದ್ದಾರೆ. ನೂರರಲ್ಲಿ ಒಂದರಷ್ಟೂ ಇಲ್ಲದ ಮಂದಿ ಈ ಅಮಾಯಕರ ತಲೆಯಲ್ಲಿ ಕೋಮುವಾದದ ವಿಷ ತುಂಬಿ ಇವರನ್ನು ದಿಕ್ಕುಗೆಡಿಸಿಬಿಟ್ಟಿದ್ದಾರೆ. ವೇದ, ಉಪನಿಷತ್ತು, ಪುರಾಣಗಳ ಗುತ್ತಿಗೆ ಹಿಡಿದವರಂತೆ ದರ್ಪದಿಂದ ವರ್ತಿಸುವ ಪುರೋಹಿತಶಾಹಿಗೆ ಈ ದಲಿತರ ಮೇಲೆ ನಿಜವಾದ ಪ್ರೀತಿ ಬಿಡಿ, ಅನುಕಂಪವೂ ಇಲ್ಲ. ತಾವು ದೇವಮಾನವರು. ತಮ್ಮ ಪಲ್ಲಕ್ಕಿ ಹೊತ್ತು ಬೆನ್ನು ಬಾಗಿಸಿ ಸತ್ತು ಸುಣ್ಣವಾಗುವುದು ಈ ದಲಿತರ ಕರ್ಮ ಎಂದು ನಂಬಿರುವ ಪುರೋಹಿತ ಶಾಹಿ, ಈ ಹಿಂದುಳಿದ ವರ್ಗವನ್ನು ತಮಗೆ ಸಮಾನರು ಎಂದು ಯೋಚಿಸಲೂ ಸಿದ್ಧರಿಲ್ಲ. ಅಷ್ಟು ಮಾತ್ರವಲ್ಲ, ಈ ಬಡಪಾಯಿಗಳು ತಮ್ಮನ್ನು ಮನುಷ್ಯರಂತೆ ಕಾಣುವ ಇತರ ಧರ್ಮಗಳಿಗೆ ವಲಸೆ ಹೋಗುವುದು ಹಿಡಿಸುವುದಿಲ್ಲ. ಅಬ್ರಹಾಂ ಲಿಂಕನ್‌ರ ಕಾಲದಲ್ಲಿ ಅಮೇರಿಕಾದ ಬಿಳಿಯರು ಅಲ್ಲಿನ ಕರಿಯನ್ನು ನಡೆಸಿಕೊಂಡ ರೀತಿಗೂ ಈ ವರ್ತನೆಗೂ ಹೆಚ್ಚಿನ ಅಂತರವೇನೂ ಇಲ್ಲ. ತಾವು ಇವರನ್ನು ಸರಿ ಸಮಾನರು ಎಂದು ಕಾಣುವುದು ಬಿಡಿ, ಮನುಷ್ಯ ಪ್ರಾಣಿಗಳು ಎಂದೂ ಒಪ್ಪಿಕೊಳ್ಳಲು ಸಿದ್ಧವಿಲ್ಲದ ಪುರೋಹಿತ ಶಾಹಿ ಮತಾಂತರಕ್ಕೂ ಅಡ್ಡಿಪಡಿಸಿ ಇವರನ್ನು ಕತ್ತಲೆಯ ಮಡುವಿನಲ್ಲಿ ನರಳುವಂತೆ ಮಾಡಿದೆ.

ಇಲ್ಲಿನ ದಲಿತರಿಗೆ ಈ ವಾಸ್ತವದ ಅರಿವು ಆಗಬೇಕು. ಪುರೋಹಿತ ಶಾಹಿಯ ಹುನ್ನಾರದ ಸಂಚು ಇವರಿಗೆ ತಿಳಿಯಬೇಕು. ವಾಸ್ತವವಾಗಿ ಇಲ್ಲಿನ ದಲಿತರು ಮತ್ತು ಹಿಂದುಳಿದವರು ಇಲ್ಲಿನ ಅಲ್ಪಸಂಖ್ಯಾತರಾದ ಮುಸ್ಲಿಂ ಮತ್ತು ಕ್ರೈಸ್ತರಿಗೆ ಹೆಚ್ಚು ಸಮೀಪದವರು. ಇತಿಹಾಸದ ಪುಟಗಳನ್ನು ತಿರುವಿ ಹಾಕಿದಂತೆ ನಮಗೆ ಈ ವಾಸ್ತವ ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತದೆ. ಇಲ್ಲಿನ ಮುಸ್ಲಿಮರಾಗಲೀ ಕ್ರೈಸ್ತರಾಗಲೀ ವಿದೇಶೀ ಮೂಲದವರಲ್ಲ. ಸಮಾನತೆ ಮತ್ತು ಸೋದರತೆಯನ್ನು ಸಾರುವ ಹೊಸ ಸಿದ್ಧಾಂತಗಳು ಇಸ್ಲಾಂ ಮತ್ತು ಕ್ರೈಸ್ತ ಧರ್ಮದಲ್ಲಿರುವುದನ್ನು ಕಂಡು ನಮ್ಮ ಹಿರಿಯರು ಈ ಮತವನ್ನು ಒಪ್ಪಿಕೊಂಡರು. ಇದರ ಅರಿವಿಲ್ಲದ ಬಹಳಷ್ಟು ಮಂದಿ ಇವತ್ತಿಗೂ ದಲಿತರಾಗಿ ಶ್ರೇಣೀಕೃತ ಜಾತಿ ವ್ಯವಸ್ಥೆಯ ಬಲಿಪಶುಗಳಾಗಿ ಅಸಾಹಯಕರಾಗಿ ನಲುಗುತ್ತಲೇ ಇದ್ದಾರೆ. ಎಷ್ಟೋ ಮಂದಿ ಮಾದಕ ವಸ್ತುಗಳ ಚಟಕ್ಕೆ ಬಲಿಯಾದವರಂತೆ ಪುರೋಹಿತ ಶಾಹಿಯ ಸೋಗಲಾಡಿತನದ ಮಾತಿಗೆ ಮರುಳಾಗಿ ಅವರ ದುಷ್ಟಮುಷ್ಟಿಯ ತೊಗಲು ಬೊಂಬೆಗಳಾಗಿಯೇ ಉಳಿದುಬಿಡುತ್ತಾರೆ. ಊಳಿಗಮಾನ್ಯ ವ್ಯವಸ್ಥೆಯಲ್ಲಿ ನಂಬಿಕೆ ಇರುವ ವಟು ಪರಂಪರೆ ತಮ್ಮ ಸ್ವಂತ ಶಕ್ತಿಯಿಂದ ತಮ್ಮ ಬಗೆಗೆ ಅಂಕೆ ಸಂಖ್ಯೆಗಳ ತಪ್ಪು ಲೆಕ್ಕಾಚಾರ ಕೊಟ್ಟು ತಾವು ಬಹು ಸಂಖ್ಯೆಯ ಮಂದಿ ಎಂದು ಸಾಧಿಸಲು ಯಾವಾಗಲೂ ಸಾಧ್ಯವಿಲ್ಲ. ಎಲ್ಲರೂ ತಮ್ಮವರು, ತಾನು ಅವರ ಪರವಾಗಿ ಕೆಲಸ ಮಾಡುವ ಮಿದುಳು. ಇವರೆಲ್ಲ ತಮ್ಮ ಅಣತಿಯಂತೆ ನಡೆದುಕೊಳ್ಳುವ ಅಂಗಾಂಗಗಳು. ಗೌರವ, ಅಧಿಕಾರ, ಸವಲತ್ತುಗಳೆಲ್ಲ ತಮಗೇ ಬರಬೇಕು ಎಂದುಕೊಳ್ಳುತ್ತಾ ಇವರು ಬಹು ಜನರ ಹೆಸರಲ್ಲಿ ಸಕಲ ಸೌಭಾಗ್ಯವನ್ನು ಅನುಭವಿಸುತ್ತಲೇ ಬಂದಿದ್ದಾರೆ. ಭುಜದಿಂದ

ಹುಟ್ಟಿದವರು, ಹೊಟ್ಟೆಯಿಂದ ಹೊರ ಬಂದವರು, ಪಾದಗಳಿಂದ ಜೀವ ತಳೆದವರು ಎಂದೆಲ್ಲ ಕಾಗಕ್ಕ-ಗುಬ್ಬಕ್ಕನ ಕತೆಗಳನ್ನು ಹೆಣೆದು ದಲಿತರನ್ನು ಮತ್ತು ಹಿಂದುಳಿದವರನ್ನು ವಂಚಿಸಿ ಅವರು ಅನುಭವಿಸಬೇಕಾಗಿದ್ದ ಸವಲತ್ತುಗಳನ್ನು ಈ ವರ್ಗ ತಮ್ಮದಾಗಿಸಿಕೊಂಡಿದೆ ಎನ್ನುವ ವಾಸ್ತವ ದಲಿತರಿಗೆ ಮತ್ತು ಹಿಂದುಳಿದವರಿಗೆ ಅರಿವಾಗುವ ತನಕ ಈ ತೊಗಲು ಗೊಂಬೆಯ ಆಟ ನಡೆಯುತ್ತಲೇ ಇರುತ್ತದೆ. ಬೌದ್ಧಿಕ ದರೋಡೆ ಮುಂದುವರಿಯುತ್ತದೆ.

ಸರಿ ಸುಮಾರು ಹದಿಮೂರು ಕೋಟಿಯಷ್ಟಿರುವ ಮುಸಲ್ಮಾನರನ್ನು ಭಯೋತ್ಪಾದಕರು ಮತ್ತು ಜೀವವಿರೋಧಿಗಳು ಎಂದು ಚಿತ್ರಿಸಿ ಇವರನ್ನು ಇಲ್ಲಿನ ಮೂಲ ನಿವಾಸಿಗಳಾದ ಪರಿಶಿಷ್ಟರು ಮತ್ತು ದಲಿತರಿಂದ ದೂರ ಇರಿಸುವ ತಂತ್ರದಲ್ಲಿ ಇವರು ಜಯಗಳಿಸಿರುವುದರಿಂದ ಈ ತಂತ್ರವನ್ನು ಇವರು ಸಕಲ ರೋಗ ನಿವಾರಕ ಮತ್ತು ಸಕಲ ಸಿದ್ಧಿದಾಯಕ ಎಂದು ಭ್ರಮಿಸಿದ್ದಾರೆ. ಇದರಿಂದ ಇಲ್ಲಿನ ಅಲ್ಪಸಂಖ್ಯಾತರು ನಿಜಕ್ಕೂ ಗೊಂದಲದಲ್ಲಿ ಸಿಲುಕಿದ್ದಾರೆ. ದೇಶಪ್ರೇಮದ ಹೆಸರಲ್ಲಿ ಅನ್ಯ ಧರ್ಮಗಳನ್ನು ದ್ವೇಷಿಸುವುದು ನಾಗರಿಕತೆಯ ಲಕ್ಷಣ ಅಲ್ಲ ಎನ್ನುವ ಪ್ರಾಥಮಿಕ ಅರಿವೂ ಇಲ್ಲದ ಈ ಮಂದಿ ದೇಶದ ನೆಮ್ಮದಿಯನ್ನೇ ಕೆಡಿಸಿ ಬಿಡುತ್ತಿದ್ದಾರೆ. ಇತಿಹಾಸದ ಪುಟಗಳನ್ನು ಹರಿದು ಹಾಕಿ ಆ ಜಾಗದಲ್ಲಿ ಕಾಗಕ್ಕ-ಗುಬ್ಬಕ್ಕನ ಕತೆಗಳನ್ನು ಅಂಟಿಸಿ ಜನ ಅಲ್ಪ ಸಂಖ್ಯಾತರನ್ನು ಖಳನಾಯಕರಂತೆ, ರಾಷ್ಟ್ರಘಾತುಕರಂತೆ ನೋಡುವ ಸಂಚು ನಡೆಯುತ್ತಾ ಇದೆ. ಹೀಗಾಗಿ ಜನ ಸಾಮಾನ್ಯರ ಮಟ್ಟಿಗೆ ನೆಮ್ಮದಿ ಎನ್ನುವುದು ಮರಳುಗಾಡಿನ ಮರೀಚಿಕೆಯಾಗಿ ಬಿಟ್ಟಿದೆ.

ಈ ಸಂಕ್ರಮಣ ಕಾಲದಲ್ಲಿ ಇಲ್ಲಿನ ಮುಸ್ಲಿಮರಾಗಲೀ, ಕ್ರೈಸ್ತರಾಗಲೀ ಅಥವಾ ಇತರ ಅಲ್ಪಸಂಖ್ಯಾತರೇ ಇರಲಿ ಒಂದು ವಿಷಯವನ್ನು ಮರೆಯಬಾರದು. ನಾವು ಈ ದೇಶದಲ್ಲಿ ಎಂದೆಂದೂ ಒಂಟಿಯಲ್ಲ. ತಮ್ಮದೇ ರಕ್ತ ಮಾಂಸವನ್ನು ಹಂಚಿಕೊಂಡ ದಲಿತರು, ಹಿಂದುಳಿದವರು, ಪಂಚಮರು ತಮ್ಮ ಸೋದರರು. ಜೊತೆಗೆ ಸಹಜೀವನ ವ್ಯವಸ್ಥೆಯಲ್ಲಿ ನಂಬಿಕೆ ಇರುವ ಇತರರೂ ನಮ್ಮೊಂದಿಗೆ ಇದ್ದಾರೆ. ತಾವೆಲ್ಲ ಒಂದಾಗಿ ಈ ಮಣ್ಣಿನ ನಿಜವಾದ ವಾರಸುದಾರರು ತಾವು ಎನ್ನುವುದನ್ನು ಮನವರಿಕೆ ಮಾಡಿಕೊಂಡರೆ ವಟು ಪರಂಪರೆಯ ಸಂಚು ಸೂಜಿ ಸೋಂಕಿದ ಬೆಲೂನಿನಂತೆ ಒಡೆದು ಹೋಗುತ್ತದೆ. ನಾವು ಒಟ್ಟಾಗಿ ಈ ದೌರ್ಜನ್ಯವನ್ನು ಎದುರಿಸದೆ ಹೋದುದರಿಂದ ಇಷ್ಟೆಲ್ಲ ಅನಾಹುತಗಳಿಗೆ ಕಾರಣವಾಯಿತು. ಒಗ್ಗಟ್ಟು ಇಂದಿನ ಅನಿವಾರ್ಯತೆ. ಗುಂಪಿಗೆ ನುಗ್ಗಿ ತನಗೆ ಇಷ್ಟಬಂದಂತೆ ಜಾನುವಾರುಗಳನ್ನು ತಿಂದು ಹಾಕುತ್ತಿದ್ದ ಹೆಬ್ಬುಲಿಯನ್ನು ಎದುರಿಸಲು ದನಗಳೆಲ್ಲ ಒಗ್ಗಟ್ಟಾಗಿ ವ್ಯತ್ಯಾಕಾರವಾಗಿ ನಿಂತು ಹುಲಿಯನ್ನು ಸೋಲಿಸಿದ ಪಂಚತಂತ್ರದ ಕತೆಯನ್ನು ನೆನಪಿಸಿಕೊಳ್ಳಿ. ಐಕ್ಯಗಾನ ನಮ್ಮ ಬೀಜ ಮಂತ್ರವಾಗಬೇಕು. ಸಿದ್ಧಾಂತಗಳಲ್ಲಿ ನಮ್ಮೊಳಗೆ ಭಿನ್ನತೆ ಇರಬಹುದು. ಅದು ಸಹಜ ಕೂಡಾ. ಆದರೆ ನಾವೆಲ್ಲ ಈ ಮಣ್ಣಿನ ಮಕ್ಕಳು. ಈ ನೆಲದ ವಾರಸುದಾರರು. ನಮ್ಮನ್ನು ಒಡೆದು ಲಾಭಗಿಟ್ಟಿಸುವ ಸ್ವಾರ್ಥಿಗಳ ಸಂಚಿಗೆ ಬಲಿಪಶುವಾದದ್ದು ಸಾಕೇ ಸಾಕು. ನಮ್ಮ ಅಜ್ಞಾನದಿಂದ ಹೀಗಾಯಿತು ಎನ್ನುವುದನ್ನು ಮರೆಯಬಾರದು.

ಪುರೋಹಿತಶಾಹಿ ಅನುಸರಿಸುವುದು ಈ ಒಡೆದು ಆಳುವ ತಂತ್ರವನ್ನು. ಮುಸಲ್ಮಾನರು, ಕ್ರೈಸ್ತರು, ದಲಿತರು, ಶೂದ್ರರು, ಪರಿಶಿಷ್ಟವರ್ಗದವರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಒಂದಾಗಬೇಕು. ಜೊತೆಗೆ ಶಿಕ್ಷಣದ ಕಡೆಗೂ ಸಾಕಷ್ಟು ಗಮನ ಕೊಡಬೇಕು. ಪುರೋಹಿತ ಶಾಹಿಯ ಸಂಚನ್ನು ವಿಫಲಗೊಳಿಸಿ ಇಲ್ಲಿನ ಬಹುಸಂಖ್ಯಾತರಾದ ಮುಸ್ಲಿಮರು, ಕ್ರೈಸ್ತರು ಮತ್ತು ಶೂದ್ರರು ಗೌರವದಿಂದ ಬದುಕುವ ಹಕ್ಕಿಗಾಗಿ ಒಂದಾಗಬೇಕು. ಇವರೆಲ್ಲ ಒಂದಾದರೆ ಖಂಡಿತ ಬಹುಸಂಖ್ಯಾತರಾಗುತ್ತಾರೆ. ಆಗ ಇಲ್ಲಿನ ಮುಸಲ್ಮಾನರನ್ನು ಕ್ರೈಸ್ತರನ್ನು ವಿದೇಶೀಯರು ಎಂದು ಲೇವಡಿ ಮಾಡುತ್ತಿದ್ದ ಮಂದಿಯ ಗಂಟಲು ನಿಂತು ಹೋಗುತ್ತದೆ. ಒಟ್ಟಾಗುವುದು ಎಂದರೆ ಮತಾಂತರ ಎಂದೇನೂ ಅರ್ಥವಲ್ಲ. ತಮ್ಮ ಮತದಲ್ಲಿದ್ದುಕೊಂಡೇ ಒಂದು ಕೂಡು ಕುಟುಂಬದ ಸದಸ್ಯರಂತೆ ಬದುಕಲು ಖಂಡಿತ ಸಾಧ್ಯ. ಮುಖ್ಯವಾಗಿ ನಮ್ಮ ಸುತ್ತ ಗೋಡೆ ಕಟ್ಟುವ ಕೆಲಸವನ್ನು ನಿಲ್ಲಿಸಬೇಕು. ವಿಶ್ವಾಸ-ಪ್ರೀತಿಯ ಹೊಸ ಗಾಳಿ, ಸೋದರತೆಯ ಬೆಳಕು ಹರಿಯುವ ಅವಕಾಶ ಮಾಡಿಕೊಡಬೇಕು. ಪುರೋಹಿತ ಶಾಹಿಯ ಸಂಚನ್ನು ವಿಫಲಗೊಳಿಸಬೇಕು. ಡಾ|| ಬಿ.ಆರ್. ಅಂಬೇಡ್ಕರ್ ನೋವಿನಿಂದ ಹೇಳಿದ ಈ ಮಾತನ್ನು ನೆನಪಿಡಿ. "That religion which forbids humanitarian behaviour between men is not a religion but a penalty".

"ಮಾನವೀಯ ಅಂತಃಕರಣದಿಂದ ಕಾಣಲು ಅಡ್ಡಿಯಾಗುವ ಧರ್ಮ, ಧರ್ಮವೇ ಅಲ್ಲ" ಎಂದಿದ್ದರು ಅಂಬೇಡ್ಕರ್. ಯಾರ ಧರ್ಮ ಅಮಾನವೀಯ ಹೇಳಿ? ಯಾವ ಧರ್ಮ ಜೀವ ವಿರೋಧಿ! ನಾವೆಲ್ಲ ಮಾನವರು. ನಮ್ಮಲ್ಲಿ ಹರಿಯುವುದು ಒಂದೇ ರಕ್ತ. ●

(ಸೌಜನ್ಯ : ಸನ್ಮಾರ್ಗ)

ಹಿಂದುತ್ವದ ಕಾಲಾಳು ಸೈನಿಕರು

(17ನೇ ಪುಟದಿಂದ)

ಅವರ ಮತ್ತು ಇತರ ಪಕ್ಷಗಳ ಭಿನ್ನತೆಗಳನ್ನು ವಿಶ್ಲೇಷಿಸದೆ, ಅವಕಾಶವಾದಿ ಹೊಂದಾಣಿಕೆಯನ್ನು ಬಿಜೆಪಿಯವರೊಡನೆ ಮಾಡಿಕೊಳ್ಳುತ್ತಾರೆ. ದಲಿತ ನಾಯಕತ್ವದಲ್ಲಿ ಉಂಟಾಗಿರುವ ತೀವ್ರವಾದ ವಿಂಗಡನೆಗಳು ದಲಿತ ಸಮಸ್ಯೆಗಳನ್ನು ಏಕಮುಖವಾಗಿ ಗ್ರಹಿಸಿರುವುದಕ್ಕೆ ಸಾಕ್ಷಿಯಾಗಿವೆ. ಕಳೆದ ಕೆಲವು ದಶಕಗಳಿಂದೀಚೆಗೆ ದಲಿತ ಐಡೆಂಟಿಟಿಯನ್ನು ಕುರಿತ ಸಂಗತಿಗಳಿಗೆ ಪ್ರಾಮುಖ್ಯತೆಯನ್ನು ನೀಡಿ, ಅವರ ಭೌತಿಕ ಅಗತ್ಯಗಳನ್ನು ಗಾಳಿಗೆ ತೂರಲಾಗಿದೆ. ಫೂಲೆ-ಅಂಬೇಡ್ಕರ್‌ರವರ ವಿಧಾನವು ಮೇಲಿನೆರಡೂ ಅಗತ್ಯಗಳನ್ನು ಮೇಳೈಸುತ್ತದೆಂಬುದನ್ನು ಮರೆಯಲಾಗಿದೆ. ಆದ್ದರಿಂದಾಗಿ, ದಲಿತ ಸಮುದಾಯಕ್ಕೆ ಬೇಕಾದ ದಿಕ್ಕುದೆಸೆಯನ್ನು ನೀಡಲಾಗದಿದ್ದಕ್ಕೆ ಇದೊಂದು ಪ್ರಮುಖ ಕಾರಣವಾಗುತ್ತದೆ. ಈ ಶೂನ್ಯ ಸ್ಥಿತಿಯೂ ಹಿಂದುತ್ವ ಐಡಿಯಾಲಜಿ ಜಾಗ ಪಡೆದುಕೊಂಡು, ದಲಿತರನ್ನು ಮತ್ತು ಆದಿವಾಸಿಗಳನ್ನು ಹಿಂದುತ್ವಕ್ಕೆ ಅಧೀನರನ್ನಾಗಿಸಿದೆ. ಹೀಗೆ ದಲಿತರು ಮತ್ತು ಆದಿವಾಸಿಗಳನ್ನು ಸಂಘ-ಪರಿವಾರದ ಹಿಂದೂ-ರಾಷ್ಟ್ರಕ್ಕಾಗಿ ಕಾಲಾಳು ಸೈನಿಕರನ್ನಾಗಿಸಿರುವುದನ್ನು ಎಲ್ಲರೂ ನೋಡಬಹುದಾಗಿದೆ.

ಒಂದು ಸೇರುವ ಅಗತ್ಯ : ಈ ದೇಶದಲ್ಲಿ ತೋರಿರುವ ಪ್ರಸ್ತುತ ವಿದ್ಯಮಾನಗಳಿಗೆ ಗುಜರಾತ್ ತೀವ್ರವಾದ ಅಭಿವ್ಯಕ್ತಿಯನ್ನು ನೀಡಿದೆ. ಈ ಮಧ್ಯೆ ಬೇರೆ ಬೇರೆ ಎಡೆಗಳಲ್ಲಿ ಭಿನ್ನ ಭಿನ್ನ ಶಕ್ತಿಗಳ ಮಧ್ಯೆ ಸಮತೋಲನ ಅಸಮಾನವಾಗಿದ್ದರೂ ಸಹ, ಅವುಗಳ ಬಾಹ್ಯರೂಪದಲ್ಲಿ ಸಮಾನತೆ ಕಾಣುತ್ತದೆ. ಅನೇಕ ಕಡೆಗಳಲ್ಲಿ ದಲಿತ-ಆದಿವಾಸಿ-ಬಹು ಜನರು ಉತ್ತಮ ಸಂಘಟನೆಗಳನ್ನು ಮತ್ತು ದೃಷ್ಟಿಕೋನಗಳನ್ನು ಹೊಂದಿವೆಯಾದರೂ, ಒಟ್ಟಾರೆಯಾದ ದಿಕ್ಕು-ದೆಸೆ ಇಲ್ಲದಿರುವುದರಿಂದ, ಅವು ಈ ಸಂಧಿಗ್ಧ ಸಮಯದಲ್ಲಿ ಸಂಘ-ಪರಿವಾರದ ಅಧೀನಕ್ಕೆ ಸಿಲುಕುತ್ತಿದ್ದೇವೆ. ಎಡಪಂಥೀಯ ರಾಜಕಾರಣದ ಅವನತಿಯು ಪ್ರಗತಿಪರ ಸಂಸ್ಕೃತಿಯ ಜಾಗವನ್ನು ಶೂನ್ಯವಾಗಿಸಿದ್ದು, ಅದನ್ನು ನವ ಬ್ರಾಹ್ಮಣಶಾಹಿ ಸಂಕೇತಗಳು ಆಕ್ರಮಿಸಿವೆ. ಸ್ವಲ್ಪಮಟ್ಟಿಗೆ ಇರುವ ಪ್ರಗತಿಪರ ಕೇಂದ್ರಗಳೂ ಸಹ ಬ್ರಾಹ್ಮಣೀಕರಣಕ್ಕೆ ಒಳಗಾಗಿವೆ.

ಇಂಥ ಹಿಮ್ಮುಖ ಸಂಸ್ಕೃತಿಗೆ ಜಾಗತಿಕ ಬೆಂಬಲವು ದೊರೆತ್ತಿದ್ದು, ಇವತ್ತಿನ ದುರಂತಮಯ ಪರಿಸ್ಥಿತಿಗೆ ಏಕಮುಖವಾಗಿ ಜಾರಿಯಾಗಿರುವ ಜಾಗತೀಕರಣವೂ ಸಹ ಕಾರಣವಾಗಿದೆ. ಭೌತಿಕ ಮತ್ತು ಐಡೆಂಟಿಟಿಗಳೆರಡರ ಅವಳಿ ಉದ್ದೇಶಗಳ ಬಗ್ಗೆ, ಅದರ ಸೂಕ್ತ ಕ್ರಿಯಾ ಯೋಜನೆಯ ಬಗ್ಗೆ ಸಾಕಷ್ಟು ಹೇಳಿಯಾಗಿದೆ. ಅದನ್ನು ಸಾಕಾರಗೊಳಿಸಲು ಭಿನ್ನ ವಿಧಾನಗಳು, ಹೋರಾಟಗಳು ಮತ್ತು ಆಂದೋಲನಗಳು ಬೇಕಾಗಿವೆ. ನಮ್ಮ ಸಂವಿಧಾನ, ಪ್ರಜಾಸತ್ತಾತ್ಮಕ ನೀತಿ ಮತ್ತು ಬಹುರೂಪಿ ನೆಲೆಗಳ ರಕ್ಷಣೆಗಾಗಿ ಒಂದು ವ್ಯಾಪಕವಾದ ಪ್ರಜಾಸತ್ತಾತ್ಮಕ ವೇದಿಕೆಯೂ ಸಹ ಅತ್ಯಗತ್ಯವಾಗಿದೆ.

ದಲಿತರ, ಆದಿವಾಸಿಗಳ, ಅಲ್ಪಸಂಖ್ಯಾತರ, ಮಹಿಳೆಯರ ಹಾಗೂ ಕಾರ್ಮಿಕರ ಮೂಲಭೂತ ಸಂಗತಿಗಳನ್ನು ಪಡೆದುಕೊಳ್ಳಲು ನಾವೆಲ್ಲಾ ಒಟ್ಟಾಗಿ ಸೇರಲು, ಗುಜರಾತ್ ಬಹುಶಃ ಕೊನೆಯ ಮತ್ತು ಅಂತಿಮ ಕರೆಯನ್ನಿತ್ತಿದೆ. ಸ್ವಲ್ಪ ತಡವಾದರೂ ಒಂದು ಸಾಮಾನ್ಯ ಶಕ್ತಿಯ/ವೇದಿಕೆಯ ಉದಯ ಅಗತ್ಯವಾಗಿದೆ ನಾಳೆ ಎನ್ನುವುದು ಎಂದಿಗೂ ಸಾಧ್ಯವಾಗದೇ ಹೋಗಬಹುದು.

(ಲೇಖಕರು 'ಏಕತಾ' ಎನ್ನುವ ಕೋಮು ಸೌಹಾರ್ದತೆ ಸಂಸ್ಥೆ, ಮುಂಬಯಿಯಲ್ಲಿ ಕೆಲಸ ಮಾಡುತ್ತಿದ್ದಾರೆ) ●

ಪ್ರಗತಿಗೆ ಮೀಸಲಾತಿ ಪರ್ಯಾಯವಲ್ಲ

○ ರಾಜಾ ಶೈಲೇಶ ಚಂದ್ರ ಗುಪ್ತ
ಕಾರ್ಯ ನಿರ್ವಾಹಕ ಸಂಪಾದಕ, ಪ್ರಜಾವಾಣಿ

ಪುರೋಹಿತಶಾಹಿಗಳ ಧಾರ್ಮಿಕ ಕಂದಾಚಾರಗಳು ಮತ್ತು ಪಟ್ಟಭದ್ರರ ಸಾಮಾಜಿಕ-ಆರ್ಥಿಕ ಅಸಮಾನತೆಗಳ ಸಂಕೋಲೆಗಳಿಗೆ ಸಿಕ್ಕು, ಶತಮಾನಗಳಿಂದಲೂ ಶೋಷಣೆಗೆ ಒಳಗಾಗಿ ನಲುಗುತ್ತಿದ್ದ ದಲಿತರು, ಅಂಬೇಡ್ಕರ್‌ರವರ ಹೋರಾಟ-ತ್ಯಾಗ ಮತ್ತು ಸಂವಿಧಾನಬದ್ಧ ಹಕ್ಕು-ಅವಕಾಶಗಳಿಂದಾಗಿ ಒಂದಿಷ್ಟು ಸ್ಥಾನ-ಮಾನಗಳನ್ನು ಪಡೆಯುವಂತಾಗಿದ್ದರೂ, ಇದರಿಂದ ಇಡೀ ದಲಿತ ಸಮುದಾಯದ ಪ್ರಗತಿಯಾಗಲೀ, ಬಾಬಾ ಸಾಹೇಬರ ಕನಸು ಹಾಗೂ ಸಂವಿಧಾನದ ಆಶಯವಾಗಲೀ ಈಡೇರಿದಂತಾಗಿಲ್ಲದಿರುವುದು ಇತಿಹಾಸದ ಅಣಕವೇ ಸರಿ.

ಒಂದು ಕಡೆ ಅಸ್ತಿತ್ವಕ್ಕೆ ಬಂದ ಸರ್ಕಾರಗಳು ದಲಿತರ ಬಗ್ಗೆ ಬರೀ ಭರವಸೆಗಳನ್ನು ನೀಡುತ್ತಾ, ಸಿಗುತ್ತಿದ್ದ ಅಷ್ಟಿಷ್ಟು ಅವಕಾಶಗಳೂ ಕೈಗೆಟುಕದಂತೆ ನೋಡಿಕೊಳ್ಳುತ್ತಾ, ತಮ್ಮ ಕುತಂತ್ರದಿಂದ ದಲಿತರ ಒಗ್ಗಟ್ಟಿಗೂ ಕಲ್ಲು ಹಾಕುತ್ತಿದ್ದರೆ, ಮತ್ತೊಂದು ಕಡೆ ಕೇವಲ ಕ್ಷುಲ್ಲಕ ಕಾರಣದಿಂದ ಬಲಿಷ್ಠರ ಕೈಗೊಂಬೆಗಳಾಗಿರುವ ದಲಿತ ಸಮುದಾಯದಲ್ಲೇ ಪರಸ್ಪರ ನಂಬಿಕೆ, ಒಗ್ಗಟ್ಟು ಮತ್ತು ಪ್ರಗತಿಯ ಆಶಯಗಳಿಗೆ ದಕ್ಕೆಯಾಗುವ ಪ್ರಸಂಗಗಳು ಹೆಚ್ಚುತ್ತಿರುವುದು ವಿಷಾದನೀಯ.

ಈ ಎಲ್ಲಾ ಒತ್ತಡಗಳ ಮಧ್ಯೆಯು ದಲಿತರು-ಹಿಂದುಳಿದವರು ಮತ್ತು ಅಲ್ಪಸಂಖ್ಯಾತರನ್ನು ಹೊಸ ಆಲೋಚನೆಗಳತ್ತ ಕೊಂಡೊಯ್ದು ಸಂಕಷ್ಟದಲ್ಲಿರುವ ಈ ವರ್ಗಗಳನ್ನು ಉತ್ತಮ ಬದುಕು, ಚಿಂತನೆ, ಸಂಘಟನೆ ಹಾಗೂ ಅಭಿವೃದ್ಧಿಯತ್ತ ಯೋಚಿಸುವಂತೆ ಮಾಡುವ ಉದ್ದೇಶ ಹೊತ್ತಿರುವ "ಸಂವಾದ"ವು ಸಮಾಜದ ಮುಖ್ಯವಾಹಿನಿಯಲ್ಲಿರುವ ಚಿಂತಕರಿಗೆ ಕೆಲವು ಪ್ರಶ್ನೆಗಳನ್ನು ಕೇಳಿತು. ಕೆಲವು ಸಂಚಿಕೆಗಳಲ್ಲಿ ಈ ಪ್ರಶ್ನೆಗಳಿಗೆ ಬಂದ ಉತ್ತರಗಳನ್ನು ಪ್ರಕಟಿಸುವ ಮೂಲಕ ಅರ್ಥಪೂರ್ಣ ಚರ್ಚೆಗೆ ಸಂವಾದ ವೇದಿಕೆಯಾಗಲಿದೆ. ಓದುಗರೂ ಈ ಚರ್ಚೆಯಲ್ಲಿ ಭಾಗವಹಿಸಬೇಕೆಂಬುದು ನಮ್ಮ ಆಶಯ.

ಪ್ರಶ್ನೆಗಳು

ಅ) ಅಂಬೇಡ್ಕರ್ ವಾದದ ಪ್ರಸ್ತುತತೆ ಬಗ್ಗೆ ನಿಮ್ಮ ಅಭಿಪ್ರಾಯವೇನು ಹಾಗೂ ಅಂಬೇಡ್ಕರ್ ವಾದದಿಂದ ಮಾತ್ರ ದಲಿತರ ವಿಮೋಚನೆ ಸಾಧ್ಯವೆ?

ಆ) ದಲಿತರು ಒಂದೇ ಸಮುದಾಯವಾಗಿ ಯೋಚಿಸಲು ಸಾಧ್ಯವಾಗುತ್ತಿಲ್ಲವೇಕೆ? ದಲಿತರ ರಾಜಕೀಯ ಗೊತ್ತುಗುರಿ ಹೇಗಿರಬೇಕು? ಬಿಎಸ್‌ಪಿ ದಲಿತರ ಹಿತ ಕಾಯಬಲ್ಲುದೆ?

ಇ) ಧಾರ್ಮಿಕವಾಗಿ ದಲಿತರ ಆಯ್ಕೆ ಏನು? ದಲಿತರು ಹಿಂದೂ ಸಮಾಜದೊಳಗೇ ಇದ್ದು ಗೌರವಯುತ ಅಸ್ತಿತ್ವ ಪಡೆಯಲು ಸಾಧ್ಯವೆ? ಅಥವಾ ಮತಾಂತರ ದಲಿತರ ಸಮಸ್ಯೆಗೆ ಪರಿಹಾರವೇ?

ಈ) ಮೀಸಲಾತಿಯಿಂದ ದಲಿತರಲ್ಲಿ ಸ್ಪರ್ಧಾತ್ಮಕ ಮನೋಭಾವ ಕಡಿಮೆಯಾಗುತ್ತಿದೆಯೆ? ದಲಿತರ ಪ್ರಗತಿಗೆ ಮೀಸಲಾತಿಯೇ ಪರ್ಯಾಯವೇ? (18%ನೊಳಗೇ ಸಿಕ್ಕಿಕೊಂಡು 82% ಅವಕಾಶಗಳಿಂದ ವಂಚಿತರಾಗುತ್ತಿಲ್ಲವೇ?)

ಉ) ಜಾಗತೀಕರಣದಿಂದ ದಲಿತರ ಬದುಕು ಬದಲಾದೀತೆ? ಸಮಾಜದ ಮುಖ್ಯವಾಹಿನಿಯಲ್ಲಿ ದಲಿತರು ತಮ್ಮ ಗೌರವಯುತ ಪಾಲು ಪಡೆಯಲು ಏನು ಮಾಡಬೇಕು?

ಅ) ಗಾಂಧೀಜಿ ಹೇಗೋ ಹಾಗೆ ಅಂಬೇಡ್ಕರ್ ಸಹಾ ಇವತ್ತು ಹಲವು ದಿಕ್ಕಿನಲ್ಲಿ ಅಪ್ರಸ್ತುತರಾಗುತ್ತಿರುವುದು ನಿಜ. ಕಾಲ, ಜನಜೀವನ, ಆರ್ಥಿಕಾಭಿವೃದ್ಧಿ ಕುರಿತ ವಿಚಾರಲಹರಿ ಎಲ್ಲವೂ ಈಗ ಬದಲಾಗಿರುವುದು ಇದಕ್ಕೆ ಕಾರಣ. ಆದರೆ ಸಾಮಾಜಿಕ ನ್ಯಾಯ ಸಂದಾಯ, ಶೋಷಣೆಯಿಂದ ಮುಕ್ತಿ ಮುಂತಾದ ಮೌಲ್ಯಗಳು ಎಂದಿಗೂ ಪ್ರಸ್ತುತ ಹೀಗಾಗಿ ಅಸಮಾನತೆ ಪೂರ್ತಿ ತಪ್ಪುವ ತನಕ ಈ ಮೌಲ್ಯಗಳು ಪ್ರಸ್ತುತವೇ ಆಗಿರುತ್ತವೆ. ಅಂಬೇಡ್ಕರ್ ವಾದಕ್ಕೆ ಜೋತು ಬಿದ್ದು ಬರಿದೆ ಹಕ್ಕುಗಳಿಗಾಗಿ ಹೋರಾಡುವುದರಿಂದ ದಲಿತರ ವಿಮೋಚನೆ ಸಾಧ್ಯವಿಲ್ಲ. ವಿದ್ಯೆಯನ್ನು, ಅರ್ಹತೆಯನ್ನು, ಮುನ್ನುಗ್ಗಿ ಪೈಪೋಟಿ ಎದುರಿಸುವ ಗುಣವನ್ನು ಮೇಲ್ವರ್ಗದವರಿಗೆ ಸರಿಸಮವಾಗಿ ಗಳಿಸಿ, 'ಜೊತೆಗೆ' ಹಕ್ಕಿಗಾಗಿ ಹೋರಾಡಬೇಕು ಎನ್ನುವುದನ್ನು ಮನವರಿಕೆ ಮಾಡಿಕೊಂಡರೆ ದಲಿತರ ಸಾಧನೆಯ 'ವೇಗ' ಏರುತ್ತದೆ.

ಆ) ದಲಿತರು ಒಂದೇ ಸಮುದಾಯವಾಗಿ ಯೋಚಿಸಲು ಸಾಧ್ಯವಾಗದೆ ಇರುವುದಕ್ಕೆ ಕಾರಣಗಳು ಹಲವಾರು. ಶೈಕ್ಷಣಿಕವಾಗಿ ಸಮುದಾಯವು 'ಇಡಿಯಾಗಿ' ಮೇಲೇರಲು ಸಾಧ್ಯವಾಗುತ್ತಿಲ್ಲ. ಅದು ಒಂದು ಕಾರಣ. ಇತರ ಜನ ಸಮುದಾಯಗಳು ಸಹಾ ದಲಿತರ ಏಳಿಗೆಯ 'ಪರ'ವಾದ ನಿಲುವು ತಳೆಯುತ್ತಿಲ್ಲ. ಅದಕ್ಕಿಂತ ಹೆಚ್ಚಾಗಿ ದಲಿತರ ನಡುವೆ ತಾವು ನಾಯಕರಾಗಬೇಕು ಎಂದು ತವಕಿಸುವವರು ತಮ್ಮದೇ ಕಾರಣಗಳಿಂದಾಗಿ ಒಂದೇ ಸಮುದಾಯವಾಗಿ ಯೋಚಿಸುವುದಕ್ಕೆ ನಿರಾಕರಿಸುತ್ತಿದ್ದಾರೆ. ಅಷ್ಟಾಗಿ ತಿಳಿವಳಿಕೆ ಹೊಂದದೇ ಇರುವ ತಮ್ಮ ಬಂಧುಗಳ ಅಮಾಯಕತೆಯನ್ನೇ ಬಂಡವಾಳ ಮಾಡಿಕೊಳ್ಳುವ ಈ ಜನ ಸ್ವತಃ ಶೋಷಕರಾಗುವುದೂ ಉಂಟು. ರಾಜಕೀಯ ಪಕ್ಷಗಳು ಸಹಾ ತಂತಮ್ಮ ಅನುಕೂಲಕ್ಕಾಗಿ ದಲಿತರನ್ನು, ದಲಿತ ಹಿತವನ್ನು ಹಿಗ್ಗಾಮುಗ್ಗ ಎಳೆದಾಡುತ್ತವೆ. ಪ್ರತಿ ರಾಜಕೀಯ ಪಕ್ಷದಲ್ಲೂ ದಲಿತರನ್ನು ಹಾಗೂ ದಲಿತ ಹಿತವನ್ನು ಪ್ರತಿನಿಧಿಸುವ ಹಾಗೂ ಪೋಷಿಸುವ ಜನರಿದ್ದಾರೆ. ಅಂಥವರು, ದಲಿತರಾಗಿರಬಹುದು ಇಲ್ಲವೇ ಇತರ ಹಿಂದುಳಿದವರೇ ಆಗಿರಬಹುದು, ಅವರು ನಾಯಕತ್ವದ ಹಾಗೂ ಪಕ್ಷರಾಜಕಾರಣದ ಲಾಭ ಪಡೆಯುವಾಗ ಪೂರ್ತಿ ಸ್ವಾರ್ಥಿಗಳಾಗಬಾರದು. ಸದಾಕಾಲ ದಲಿತ ಹಿತವನ್ನು ಕಾಯಬೇಕು. ವಿವಿಧ ಪಕ್ಷಗಳು ಹೇಗೆ ದಲಿತರನ್ನು ಕೈಬಿಡಲಾಗದೋ ಹಾಗೆಯೇ ಎಲ್ಲ ಕಡೆ ತಾವು ಇರಬೇಕೆಂಬುದು ದಲಿತರ ಧೋರಣೆಯೂ ಆಗಬೇಕು. ಬಿಎಸ್‌ಪಿಯು ನಾಯಕರ ವ್ಯಕ್ತಿಗತ ವರ್ಚಸ್ಸನ್ನು ಪೋಷಿಸುವ ಧಾಟಿಯಲ್ಲಿ ಹೊರಟಿರುವುದರಿಂದ ಅದು ದಲಿತರ ಹಿತ ಕಾಯಬಲ್ಲುದೋ ಎಂಬ ಬಗೆಗೆ ನನಗೂ ಅನುಮಾನವಿದೆ.

ಇ) ಧಾರ್ಮಿಕವಾಗಿ ತಮಗೊಂದು 'ಆಯ್ಕೆ' ಎಂಬುದಿದೆ ಎಂದು ಭಾವಿಸಬೇಕಾದರೂ ಏಕೆ? ದಲಿತರು ಸಹಾ ಧರ್ಮ ಎಂಬುದು ವ್ಯಕ್ತಿಗತ ವಿಷಯ ಎಂದು ಮನಗಾಣಬೇಕು. ಇಡೀ ಸಮುದಾಯವೇ ಒಂದು ಧರ್ಮಕ್ಕೆ ಕಟ್ಟು ಬೀಳಬೇಕು; ಇಲ್ಲವೇ ಸಾಮೂಹಿಕವಾಗಿ ಮತಾಂತರಕ್ಕೆ ಒಪ್ಪಬೇಕು ಎಂಬ ವಿಚಾರವೇ ತಪ್ಪಬೇಕು. 'ಹಿಂದೂ ಸಮಾಜದೊಳಗೇ ಇದ್ದು ಗೌರವಯುತ ಅಸ್ತಿತ್ವ' ಸಾಧಿಸಬೇಕೆನ್ನುವ ಆಶಯವೇ ದಲಿತರನ್ನು ಹಿಂದೂ ಸಮುದಾಯಕ್ಕೆ ಮಾತ್ರ ಸೀಮಿತಗೊಳಿಸುತ್ತದೆ. ಮುಸ್ಲಿಮರಲ್ಲಿ, ಕ್ರೈಸ್ತರಲ್ಲಿ ಇತರ ಸಮುದಾಯಗಳಲ್ಲಿ ದಲಿತರಿಲ್ಲವೆ? ಅವರು ಹೇಗೆ ಹಿಂದೂ ದಲಿತರಿಗಿಂತ

ಪ್ರತ್ಯೇಕರಾಗಬಲ್ಲರು? ಯಾವುದೇ ಒಂದು ಸಮುದಾಯದೊಳಗೆ 'ಗೌರವಯುತ ಅಸ್ತಿತ್ವ' ಪಡೆಯಬೇಕು ಎನ್ನುವುದು ತುಂಬ ಸಾಮಾನ್ಯೀಕರಿಸಿದ ವಿಚಾರವಾಗುತ್ತದೆ. ಸ್ಪಷ್ಟವಾಗಿ, ನಿಖರವಾಗಿ ವಿಚಾರ ಮಾಡಿದಂತೆ ಆಗುವುದಿಲ್ಲ. ಎಲ್ಲ ಸಮುದಾಯಗಳಿಗೂ ದಲಿತರನ್ನು ನೋಡುವ ತವಕ, 'ಗೌರವಯುತ ಅಸ್ತಿತ್ವ' ಎನ್ನುವುದನ್ನು ಎಲ್ಲ ಸಮುದಾಯಗಳ ಸಂಬಂಧ ಒಂದೇ ಸ್ತರದಲ್ಲಿ ಪ್ರಸ್ತಾಪಿಸಲು ಸಾಧ್ಯವಾಗುವವರೆಗೆ ಮತಾಂತರವು ದಲಿತರ ಪಾಲಿಗೆ ಪರಿಹಾರೋಪಾಯ ಆಗಲು ಸಾಧ್ಯವೇ ಇಲ್ಲ. ಬಾಣಲೆಯಿಂದ ಬೆಂಕಿಗೆ ಅಲ್ಲವಾದರೂ ಇನ್ನೊಂದು ಬಾಣಲೆಗೆ ಬಿದ್ದಂತೆ ಆಗುವುದಿಲ್ಲ ಎನ್ನಲು ಏನು ಖಾತರಿ?

ಋ) ಖಂಡಿತವಾಗಿ ಮೀಸಲಾತಿಯು ಸ್ಪರ್ಧಾತ್ಮಕ ಮನೋಭಾವಕ್ಕೆ ತಡೆ ಒಡ್ಡುತ್ತದೆ. ದಲಿತರ 'ಪ್ರಗತಿಗೆ, ಮೀಸಲಾತಿ' ಪರ್ಯಾಯ ಎನಿಸಿತು. ಮೀಸಲಾತಿಯ ಸೋಂಕೇ ಇಲ್ಲದ ಕೆಲವು ಕ್ಷೇತ್ರಗಳಲ್ಲಿ ಸ್ವಂತ ಸಾಮರ್ಥ್ಯ ಮತ್ತು ಶಕ್ತಿಯಿಂದ ಮೇಲೆ ಬಂದವರು ಮೀಸಲಾತಿ ಲಾಭ ಪಡೆದವರ ಜೊತೆ ತಮ್ಮನ್ನು ಸಮೀಕರಿಸಲು ಒಪ್ಪುವುದಿಲ್ಲ. ದಲಿತರೆಂಬ ಕಾರಣಕ್ಕೆ ತಮಗೆ ಮಣೆ ಹಾಕುವವರಿಂದ ದೂರವೇ ಉಳಿಯುತ್ತಾರೆ. ದಲಿತರೆಂಬ ಕಾರಣಕ್ಕೆ ಪುರಸ್ಕರಿಸುವುದಾಗಿ ಯಾರಾದರೂ ಹೇಳಿದರೆ ಅದನ್ನು ನಿರಾಕರಿಸುತ್ತಾರೆ. ಇಂಥವರ ಸಂತತಿ ಸಾವಿರವಾಗಬೇಕು. ಮೀಸಲಾತಿ ತನಗೆ ಬೇಡ ಎನ್ನುವ ದಲಿತನೇ ನಿಜವಾಗಿ ಮಹಾನ್. ಅತಿಯಾಗಿ ಮುದ್ದುಮಾಡಲಾದ ಮಗು ಹೇಗೆ ಹಾಳಾಗುವುದೋ ಅಂಥ ಪರಿಣಾಮವನ್ನೇ ಮೀಸಲಾತಿ ಉಂಟು ಮಾಡುತ್ತದೆ. ಅದೇ ವಿಪರ್ಯಾಸ. ಮೀಸಲಾತಿಗೆ ಮಾತ್ರ ಮನಸೋತವರು ಅವಕಾಶಗಳಿಂದ ವಂಚಿತರಾಗುತ್ತಿರುವುದು ನಿಜ.

> ದಲಿತರು ಸಹಾ ಧರ್ಮ ಎಂಬುದು ವ್ಯಕ್ತಿಗತ ವಿಷಯ ಎಂದು ಮನಗಾಣಬೇಕು. ಇಡೀ ಸಮುದಾಯವೇ ಒಂದು ಧರ್ಮಕ್ಕೆ ಕಟ್ಟು ಬೀಳಬೇಕು; ಇಲ್ಲವೇ ಸಾಮೂಹಿಕವಾಗಿ ಮತಾಂತರಕ್ಕೆ ಒಪ್ಪಬೇಕು ಎಂಬ ವಿಚಾರವೇ ತಪ್ಪಬೇಕು. 'ಹಿಂದೂ ಸಮಾಜದೊಳಗೇ ಇದ್ದು ಗೌರವಯುತ ಅಸ್ತಿತ್ವ' ಸಾಧಿಸಬೇಕೆನ್ನುವ ಆಶಯವೇ ದಲಿತರನ್ನು ಹಿಂದೂ ಸಮುದಾಯಕ್ಕೆ ಮಾತ್ರ ಸೀಮಿತಗೊಳಿಸುತ್ತದೆ.

ಎ) ಮೀಸಲಾತಿ ಹೊರತಾದ ಶೇ. 82 ಅವಕಾಶಗಳು ಸೃಷ್ಟಿಯಾಗುವುದೇ ಖಾಸಗೀಕರಣ ಮತ್ತು ಜಾಗತೀಕರಣಗಳು ವಿಜೃಂಭಿಸಿದಾಗ, ಈಗ ಹಾಗೂ ಭವಿಷ್ಯದಲ್ಲಿ ಸರ್ಕಾರಿ ವ್ಯವಸ್ಥೆಗೆ ಮನ್ನಣೆ ಕಡಿಮೆ. ಫಲಿತಗಳನ್ನು ಖಚಿತವಾಗಿ ಕೊಡಬಲ್ಲವರಿಗೆ ಮಾತ್ರ ಪೈಪೋಟಿ ಪ್ರಪಂಚದಲ್ಲಿ ಮನ್ನಣೆ. ಮೀಸಲಾತಿಗೆ ಮಾತ್ರ ಜೋತು ಬಿದ್ದವರು ಪೈಪೋಟಿಯನ್ನು ಯಶಸ್ವಿಯಾಗಿ ಎದುರಿಸಲಾರರು. ಸ್ವಸಾಮರ್ಥ್ಯ ಬೆಳೆಸಿಕೊಂಡವರು ಮಾತ್ರವೇ, ಮೀಸಲಾತಿ ಇಲ್ಲದಿದ್ದರೂ ಪರವಾಗಿಲ್ಲ ಎಂದು ಹೇಳಬಲ್ಲವರು ಮಾತ್ರವೇ ಶೇ. 82 ಅವಕಾಶ ವ್ಯಾಪ್ತಿಗೆ ಬರಬಲ್ಲರು. ●

ಸಂಪತ್ತಿನಲ್ಲಿ ದಲಿತರ ಪಾಲೆಷ್ಟು ?

○ ಡಾ|| ನಟರಾಜ್ ಹುಳಿಯಾರ್
ಸಾಹಿತಿಗಳು, ಚಿಂತಕರು

ಅ) ಅಂಬೇಡ್ಕರ್‌ವಾದವನ್ನು ಕೊಂಚ ತೆಳುಗೊಳಿಸಿ ಒಂದು ರಾಷ್ಟ್ರಮಟ್ಟದ ಪಕ್ಷವೇ ಬೆಳೆಯುತ್ತಿರುವಾಗ, ಈ ವಾದದ ಪ್ರಸ್ತುತತೆಯನ್ನು ಕುರಿತು ಯಾರೂ ಆತಂಕ ಪಡುವ ಅಗತ್ಯವಿಲ್ಲ. ಇಪ್ಪತ್ತೈದು ಕೋಟಿ ದಲಿತರನ್ನು ಪ್ರತಿನಿಧಿಸುವ ದಲಿತ ಸಂಘಟನೆಗಳು ಭಾರತದುದ್ದಕ್ಕೂ ಒಡೆದುಹೋಗಿದ್ದರೂ ಅವು ಅಂತಿಮವಾಗಿ ಅಂಬೇಡ್ಕರ್‌ವಾದವನ್ನೇ ಮಾತಾಡುತ್ತಿವೆ ಹಾಗೂ ಈಚಿನ ಜಗಜೀವನರಾಂವಾದಿಗಳೂ ಸೇರಿದಂತೆ ಇವರೆಲ್ಲಾ ಅಂಬೇಡ್ಕರ್ ಹಾದಿಗೇ ಬಂದು ಸೇರುತ್ತಾರೆ. ಜೊತೆಗೆ ಅಂಬೇಡ್ಕರ್‌ವಾದ ಇಡೀ ದೇಶದಲ್ಲಿ ಸಾಹಿತ್ಯ ಚಳುವಳಿಯೊಂದನ್ನೇ ರೂಪಿಸಿ ಲಕ್ಷಾಂತರ ಜನರ ದಲಿತ ಪ್ರಜ್ಞೆಯನ್ನೂ, ಬಂಡಾಯವಾದಿ ಪ್ರಜ್ಞೆಯನ್ನೂ ರೂಪಿಸಿದೆ. ಕಳೆದ ಹತ್ತು ವರ್ಷಗಳಲ್ಲಿ 'ಬಹುಜನವಾದಿ' ಹಿಂದುಳಿದ ವರ್ಗಗಳ ಬುದ್ಧಿಜೀವಿಗಳು ಪುರಾಣಗಳನ್ನು, ಹಾಗೂ ಭಾರತದ ಮುಖ್ಯ ಬೆಳವಣಿಗೆಗಳನ್ನು ನೋಡುವ ಬಗೆ ಕೂಡ ಅಂಬೇಡ್ಕರ್ ಚಿಂತನೆಯಿಂದ ಪ್ರಭಾವಗೊಂಡಿದೆ. ಆದರೆ ಅಂಬೇಡ್ಕರ್ ವಾದದಲ್ಲೇ ಎಲ್ಲ ಪ್ರಶ್ನೆಗಳಿಗೂ ಉತ್ತರಗಳಿಲ್ಲ. ಕಾಲಕಾಲಕ್ಕೆ ನಾವು ಈ ಬೆಳಕಿನಿಂದ ಹೊಸ ದೀಪಗಳನ್ನು ಬೆಳಗಿಸಿಕೊಳ್ಳಬೇಕು.

ಆ) ಅಂಬೇಡ್ಕರ್ ಪ್ರತಿಮೆಗೆ ಹಾನಿಯಾದಂಥ ಸಾಂಕೇತಿಕ ಭಾವನಾತ್ಮಕ ಪ್ರಶ್ನೆ ಬಂದಾಗ ದಲಿತರು ಒಂದು ಸಮುದಾಯವಾಗಿ ಯೋಚಿಸಿರುವುದನ್ನು ನೋಡಿದ್ದೇವೆ. ಇದು ಕೂಡ ಹಿಂದೂ ಮನಸ್ಸು ಧಾರ್ಮಿಕ ಸಂಕೇತಗಳಿಗೆ ಹಾನಿಯಾದ ಭ್ರಮೆಯಲ್ಲಿ ವರ್ತಿಸುವಂತೆಯೇ ಇದೆ. ಆದರೆ ಕಂಬಾಲಪಲ್ಲಿಯಲ್ಲಿ ದಲಿತರನ್ನು ಜೀವಂತಸುಟ್ಟಾಗ ಎಲ್ಲ ಸಂಘಟನೆಗಳೂ ಒಟ್ಟಾಗಿ ವಿಧಾನಸೌಧದ ಮುಂದೆ ನಿಲ್ಲುವುದು ಮಾತ್ರ ಸಾಧ್ಯವಾಗಲಿಲ್ಲ. ಇಷ್ಟಾಗಿಯೂ ವರ್ಗಹಿತಾಸಕ್ತಿಯ ಪ್ರಶ್ನೆ ಬಂದಾಗ ದಲಿತರು ಒಂದು ಸಮುದಾಯವಾಗಿ ಯೋಚಿಸಿದ್ದಾರೆ. ಜೊತೆಗೆ, ದಲಿತ ವಿದ್ಯಾವಂತರಲ್ಲಿ ಬಹುತೇಕರು ಮತೀಯವಾದದ ವಿರುದ್ಧವಾಗಿರುವುದು ಕೂಡ ಒಂದು ಬಹುದೊಡ್ಡ ಮತೀಯವಾದಿ ವಿರೋಧಿ ಸಾಮುದಾಯಿಕ ದನಿಯನ್ನು ನಿರ್ಮಿಸಬಲ್ಲದು. ನಾವು, ನೀವು ಒಪ್ಪಲಿ ಬಿಡಲಿ, ಮುಂದಿನ ಏಳೆಂಟು ವರ್ಷಗಳಲ್ಲಿ ಭಾರತದ ದಲಿತವರ್ಗ ಬಿ.ಎಸ್.ಪಿ. ರಾಜಕಾರಣವನ್ನು ದೊಡ್ಡಮಟ್ಟದಲ್ಲಿ ಒಪ್ಪಲಿದೆಯೆಂದು ನನಗನ್ನಿಸುತ್ತದೆ. ರಾಜಕೀಯ ಪಕ್ಷಗಳು ಬ್ರಾಹ್ಮಣರ, ಠಾಕೂರರ, ಒಕ್ಕಲಿಗರ ಹಾಗೂ ಲಿಂಗಾಯತರ ಸ್ವಂತ ಪಕ್ಷಗಳಾಗಿ ಬೆಳೆಯುತ್ತಿರುವ ಈ ಕಾಲದಲ್ಲಿ ಮೊದಲ ಬಾರಿಗೆ ಅಧಿಕಾರದ ಹತ್ತಿರ ಬಂದಿರುವ ದಲಿತರು ತಮ್ಮದೇ ಆದ ಪಕ್ಷವೊಂದನ್ನು ಹಿಡಿಯುವುದು ಖಂಡಿತ. ಕಾರಣ, ಚರಿತ್ರೆಯ ಚಲನೆ ಜನರ ಭಾವುಕ ತುಡಿತಗಳಿಂದಲೂ ನಿರ್ಧಾರವಾಗುತ್ತಿರುತ್ತದೆ.

ಇ) ವೈಯಕ್ತಿಕವಾಗಿ ಧಾರ್ಮಿಕ ಮಾರ್ಗ ತರುವ ಬಿಡುಗಡೆಯ ಬಗ್ಗೆ ಹೆಚ್ಚು ಆಸಕ್ತಿಯಿಲ್ಲದ ನನಗೆ ಅಂಬೇಡ್ಕರ್ ಸೂಚಿಸಿದ ಧಾರ್ಮಿಕ ಮತಾಂತರದ ಮೂಲಕವೇ ದಲಿತರು ಅಸ್ಪೃಶ್ಯತೆಯಿಂದ ಪಾರಾದರೆಂಬುದೂ ಗೊತ್ತು. ಕ್ರೈಸ್ತ ಧರ್ಮಕ್ಕೆ ಹೋದ ದಲಿತರು ಒಂದೇ ತಲೆಮಾರಿನಲ್ಲಿ ಹೊಸ ವ್ಯಕ್ತಿತ್ವ ಪಡೆದಿರುವುದನ್ನೂ ನಾವು ನೋಡಿದ್ದೇವೆ. ಆಧುನಿಕ ವಿಚಾರಗಳಿಗೆ 'ಮತಾಂತರ'ಗೊಂಡ ದಲಿತರೂ ತಮ್ಮ ಸಮುದಾಯವನ್ನು ಮುನ್ನಡೆಸಿದ್ದಾರೆ. ಆದರೆ ಈ ಕಾಲದಲ್ಲಿ ಧರ್ಮದ ಮೂಲಕ ಸಾಧ್ಯವಾಗದ ಪ್ರಜ್ಞೆಯ ಪರಿವರ್ತನೆಯನ್ನು ಅಂಬೇಡ್ಕರ್, ಲೋಹಿಯಾ, ಗಾಂಧಿ, ಕುವೆಂಪು, ಲಂಕೇಶರ ಬರವಣಿಗೆ ಸಾಧಿಸಿದೆಯೆಂಬುದು ನನ್ನ ನಂಬಿಕೆ.

ಋ) ಜಾಗತೀಕರಣದ ಕಾಲದಲ್ಲಿ ಮೀಸಲಾತಿಗಿಂತ ಮುಖ್ಯವಾಗಿ 'ಈ ರಾಷ್ಟ್ರದ ಸಂಪತ್ತಿನಲ್ಲಿ ದಲಿತರ ಪಾಲೆಷ್ಟು?' ಎಂಬ ಪ್ರಶ್ನೆಯನ್ನು ದಲಿತ ಹಾಗೂ ದಲಿತೇತರ ಬುದ್ಧಿಜೀವಿಗಳು ಈಗ ಎತ್ತಲಾರಂಭಿಸಿದ್ದಾರೆ. ಮಧ್ಯಪ್ರದೇಶದ ಕಾಂಗ್ರೆಸ್ ಸರ್ಕಾರವೇ ಈ ಪ್ರಶ್ನೆಯನ್ನು ಕೈಗೆತ್ತಿಕೊಂಡಿದೆ. ಕಳೆದ ಏಪ್ರಿಲ್ ತಿಂಗಳ 19, 20ರಂದು ಬೆಂಗಳೂರಿನ ನ್ಯಾಷನಲ್ ಲಾ ಯೂನಿವರ್ಸಿಟಿಯಲ್ಲಿ ನಡೆದ ರಾಷ್ಟ್ರೀಯ ವಿಚಾರ ಸಂಕಿರಣ ಈ ಪ್ರಶ್ನೆಯನ್ನು ದೊಡ್ಡಮಟ್ಟದಲ್ಲಿ ಚರ್ಚಿಸಿತು.

ಎ) ಪ್ರೊ. ರವಿವರ್ಮಕುಮಾರ್ ಆಯೋಗ ಕೂಡ ಖಾಸಗಿ ವಲಯದ ಸ್ಟಾಕ್ಸ್ ಮತ್ತು ಶೇರುಗಳನ್ನು ದಲಿತರು ಹಾಗೂ ಹಿಂದುಳಿದವರಿಗೆ ಶೇಕಡಾವಾರು ಪ್ರಮಾಣದಲ್ಲಿ ಹಂಚುವ ಬಗ್ಗೆ ಸ್ಪಷ್ಟ ಶಿಫಾರಸುಗಳನ್ನು ಮಾಡಿದೆ. ಸರ್ಕಾರಿ ಬಂಡಾವಳ ಹಿಂತೆಗೆತದಿಂದ, ಖಾಸಗೀಕರಣದಿಂದ, ಮೂರು ಹಾಗೂ ನಾಲ್ಕನೇ ದರ್ಜೆಯ ಸರ್ಕಾರಿ ಹುದ್ದೆಗಳ ನೇಮಕಾತಿ ನಿಲುಗಡೆಯಿಂದ ದಲಿತರಿಗೆ ಬಿದ್ದಿರುವ ಹೊಡೆತ ಜಾಗತೀಕರಣದ ಫಲವಲ್ಲದೆ ಇನ್ನೇನು? ದಲಿತರ ಉದ್ಯೋಗ-ನಿರುದ್ಯೋಗ, ದಲಿತ ಕೂಲಿಕಾರರ ಸ್ಥಿತಿ ಇವನ್ನಾಧರಿಸಿ ಜಾಗತೀಕರಣವನ್ನು ಚರ್ಚಿಸಬೇಕೇ ಹೊರತು ವಿದೇಶದ ಹಣದಿಂದ ಪ್ರೇರಿತವಾದ ಸಂಸ್ಥೆಗಳ ವಾದಗಳ ಮೂಲಕ ಅಲ್ಲ. ●

ಇಡೀ ವ್ಯವಸ್ಥೆಯ ನಾಯಕತ್ವ ವಹಿಸಿಕೊಳ್ಳಬೇಕು

○ ಎಫ್.ಹೆಚ್. ಜಕ್ಕಪ್ಪನವರ
ಕಾರ್ಮಿಕ ಮುಖಂಡರು

1) ಸ್ವಾತಂತ್ರ್ಯ ಸಮರದ ಸಮಯದಲ್ಲಿ ಇಂದಿಗಿಂತ ಮೂಲಭೂತವಾದ ಜಾತೀವಾದ ತನ್ನ ಉತ್ತುಂಗದಲ್ಲಿತ್ತು. ಸ್ವಾತಂತ್ರ್ಯ ಸಮರದ ಸೇನಾನಿ ಮಹಾತ್ಮಗಾಂಧಿಯವರನ್ನೇ ಆಹುತಿ ತೆಗೆದುಕೊಂಡಿತು. ಸಾವಿರಾರು ಜನರು ಬಲಿಯಾದರು, ಲಕ್ಷ-ಲಕ್ಷ ಜನರು ನಿರಾಶ್ರಿತರಾದರು. ಸ್ವಾತಂತ್ರ್ಯ ಪಡೆದ ಭಾರತೀಯ ನಾಯಕರೇ ಮೌಂಟ್‌ಬ್ಯಾಟನ್‌ಗೆ ಅಧಿಕಾರ ನೀಡಿ ಪ್ರಕ್ಷುಬ್ಧ ವಾತಾವರಣವನ್ನು ನಿಯಂತ್ರಿಸಿದರು. ಇಂಥ ವಿಷಮ ಪರಿಸ್ಥಿತಿಯಲ್ಲಿ ಬಾಬಾ ಸಾಹೇಬ ಅಂಬೇಡ್ಕರ್ ಸ್ಪಷ್ಟ ಸಿದ್ಧಾಂತದ ಪ್ರಜಾಪ್ರಭುತ್ವ ವ್ಯವಸ್ಥೆಯ ಜಾರಿಗಾಗಿ ಸಂವಿಧಾನ ರಚಿಸುವಲ್ಲಿ ಸಫಲರಾದರು ಅಷ್ಟೇ ಅಲ್ಲ ಸಮರ್ಥವಾಗಿ ಜಾರಿಗೊಳಿಸಿದರು. ಬಾಬಾ ಸಾಹೇಬ್ ಅಂಬೇಡ್ಕರ್ "ವೈಜ್ಞಾನಿಕ ಮಾನವೀಯತೆ"ಯ ಹರಿಕಾರ. ಮಾನವ ಸಮಾಜದ ಮೌಲ್ಯಗಳು ಕುಸಿದಾಗ ಅಂಬೇಡ್ಕರ್‌ವಾದವೇ ಮನುಷ್ಯ ಸಮಾಜವನ್ನು ಉಳಿಸಬಲ್ಲದು-ಬದುಕಿಸಬಲ್ಲದು. ಆದ್ದರಿಂದ, ಅಂಬೇಡ್ಕರ್‌ವಾದ ಸರ್ವಕಾಲಕ್ಕೂ ಪ್ರಸ್ತುತ.

ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರನ್ನು ಮಾನವ ಸಂಪನ್ಮೂಲದ ಒಂದು ಭಾಗವೆಂದು ಪರಿಗಣಿಸಿ ಅವರ ವಿಮೋಚನೆಗೆ ಪ್ರಯತ್ನಿಸಿದರು. ಪರಿಶಿಷ್ಟರಿಗೆ ಅಂಬೇಡ್ಕರ್ ವಾದವೇ ಆದಿ ಮತ್ತು ಅಂತ್ಯ.

2) ಮನುವಾದ ನಿರ್ಮಿಸಿದ ಶ್ರೇಣಿಕೃತ ಮನಸ್ಸಿನಲ್ಲಿಯೇ ಪರಿಶಿಷ್ಟರು ಯೋಚಿಸುತ್ತಿದ್ದಾರೆ. ಮನುವಾದದಿಂದ ಹೊರಬಂದು ಅಂಬೇಡ್ಕರ್‌ವಾದದ ಹಾದಿಯಲ್ಲಿ ಯೋಚನೆ ಮಾಡಿದರೆ ಪರಿಶಿಷ್ಟರನ್ನು ಒಂದು ಸಮುದಾಯವೆಂದು ನೋಡಬಹುದು. ಪರಿಶಿಷ್ಟರ ರಾಜಕೀಯ ಗುರಿ ಎಲ್ಲ ಸಮುದಾಯಗಳ ಆಶೆ-ಆಕಾಂಕ್ಷೆಗಳನ್ನು ಈಡೇರಿಸುವ ನಾಯಕತ್ವಕ್ಕೆ ಆಶೆ ಪಡಬೇಕು. ಮನಸ್ಸಿನಾಳದಲ್ಲಿ ಜಾತ್ಯಾತೀತನಾದ ಪರಿಶಿಷ್ಟ ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಡೀ ವ್ಯವಸ್ಥೆಯ ನಾಯಕತ್ವ ವಹಿಸಿಕೊಳ್ಳುವ ರಾಜಕೀಯ ಮಾಡಬೇಕು. ಬಿ.ಎಸ್.ಪಿ. ಒಂದು ರಾಜಕೀಯ ಪಕ್ಷವಾಗಿರುವುದರಿಂದ, ಪಕ್ಷದ ಬಗ್ಗೆ ಏನನ್ನೂ ಹೇಳಬಯಸುವುದಿಲ್ಲ.

3) ಧರ್ಮ ಮನುಷ್ಯತ್ವಕ್ಕೆ ಆದ್ಯತೆ ಕೊಡಬೇಕು-ಪಾಲಿಸಬೇಕು. ಇದು ಭಾರತೀಯ ಸಂವಿಧಾನ ಆಶಯವೂ ಕೂಡ. ಯಾವುದೇ ದೇಶದ ಜನ ಆಚರಿಸುವ ಧರ್ಮ ಆ ದೇಶದ ರಾಷ್ಟ್ರೀಯತೆಗೆ ಧಕ್ಕೆ ಉಂಟುಮಾಡಬಾರದು. ಆದ್ದರಿಂದ ಈ ಚೌಕಟ್ಟಿನಲ್ಲಿ ಪರಿಶಿಷ್ಟರು ಬಾಬಾಸಾಹೇಬ ಅಂಬೇಡ್ಕರ್-ಅವರು ತುಳಿದ ಹಾದಿಯನ್ನೇ ತುಳಿಯಬೇಕು; ಬುದ್ಧ ಧರ್ಮಕ್ಕೆ ಮರಳಿ ಬರಬೇಕು.

ಭಾರತೀಯರೆಲ್ಲರೂ ಹಿಂದೂಗಳಲ್ಲಿ, ಹಿಂದೂಗಳೆಲ್ಲ ಮನುವಾದಿಗಳಲ್ಲ, ಬ್ರಾಹ್ಮಣರೆಲ್ಲ ಮನುವಾದಿಗಳಲ್ಲ. ಜಾತೀವ್ಯವಸ್ಥೆ ವಿರೋಧಿಸುವ-ಮನುಷ್ಯತ್ವ ಪ್ರೀತಿಸುವ ಭಾರತೀಯರೆಲ್ಲರೂ ಅವರವರ ಧರ್ಮ ಹೊಂದಿದ್ದಾರೆ. ಇದರ ಕ್ರೋಡೀಕೃತ ವ್ಯವಸ್ಥೆಯೇ ಭಾರತೀಯತೆ. ಮಾಯವಾಗುತ್ತಿರುವ ಮನುಷ್ಯತ್ವವನ್ನು ರಾಷ್ಟ್ರ ರಕ್ಷಣೆಗಾಗಿ ಪರಿಶಿಷ್ಟರು ಬುದ್ಧ ಧರ್ಮಕ್ಕೆ ಮರಳಿ ಬರಬೇಕು ಅಷ್ಟೇ ಅಲ್ಲ-ಭಾರತವನ್ನು ಬುದ್ಧಮಯ ಮಾಡಬೇಕು. ಪರಿಶಿಷ್ಟರ ಗೌರವಯುತ ಬದುಕಿನ ಪ್ರಶ್ನೆಗಿಂತ ಮೂಲಭೂತವಾದಿಗಳು ಇಂದು ಇಡೀ ರಾಷ್ಟ್ರದ ಸಾರ್ವಭೌಮತ್ವಕ್ಕೇನೇ ಅಪಾಯ ತಂದು ಒಡ್ಡಿದ್ದಾರೆ. ಈ ದೇಶದ ಮೂಲನಿವಾಸಿಗಳಾದ ಪರಿಶಿಷ್ಟರ ಪಾತ್ರ ಈಗ ಈ ಅಧರ್ಮಿಯರು ವಿರುದ್ಧ ಹೋರಾಟ ಮಾಡಿ ಭಾರತೀಯ ಧರ್ಮ ವಹಿಸಬೇಕಾಗಿದೆ-ರಾಷ್ಟ್ರ ಉಳಿಸಬೇಕಾಗಿದೆ. ಪರಿಶಿಷ್ಟರು ಮತಾಂತರ ಮಾಡಬೇಕಿಲ್ಲ. ಪರಿಶಿಷ್ಟರು ಆದಿಯಲ್ಲಿ ಬೌದ್ಧಮತೀಯರಾಗಿದ್ದರು-ಇಂದು ಇದ್ದಾರೆ, ಆದರೆ, ಎಲ್ಲೋ ಕೊಂಡಿಗಳು ಕಳಚಿಹೋಗಿದೆ. ಅವುಗಳ ಮರು ಜೋಡಣೆ ಆಗಬೇಕು.

4) ಪರಿಶಿಷ್ಟರು ಮೀಸಲಾತಿಯನ್ನು ಒಂದು ಊರುಗೋಲಾಗಿ ಬಳಸಿದರೆ ಹೊರತು ಸಾಧನೆಯ ವಾಹನವನ್ನಾಗಿ ಅಲ್ಲ. ಆದ್ದರಿಂದ, ಮೀಸಲಾತಿ ವ್ಯವಸ್ಥೆ ಪರಿಶಿಷ್ಟರನ್ನು ನಾಗರೀಕ ಬದುಕಿನ ವೈಜ್ಞಾನಿಕ ಪೈಪೋಟಿಗೆ ಸಮರ್ಥರನ್ನಾಗಿಸಿದೆ. ಮೀಸಲಾತಿ ವಂಚಿತರಿಗೆ ನಿರ್ಮಿಸಿದ ಅವಕಾಶ ಮಾತ್ರ. ಪರಿಶಿಷ್ಟರ ಪ್ರಗತಿಯನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಮನೋಭಾವದಲ್ಲಿ ಮಾಡಬೇಕೇ ಹೊರತು-ಭಿಕ್ಷೆ ರೂಪದ ಭಾವನೆಯಿಂದಲ್ಲ. ಮೀಸಲಾತಿ ಸಮಾನ ಸಮಾಜ ನಿರ್ಮಾಣದ ಸಾಧಕ. ಅಂಥ ನಿರ್ಮಾಣವಾದರೆ ಮೀಸಲಾತಿ-ಫಲಾನುಭವಿಗಳೇ ಅದನ್ನು ತಿರಸ್ಕರಿಸುತ್ತಾರೆ.

5) ಜಾಗತೀಕರಣ ಮುಕ್ತ ವಾತಾವರಣಕ್ಕೆ ಅವಕಾಶ ಮಾಡಿಕೊಡುತ್ತದೆಂದು ಎಲ್ಲರ ವಾದ. ಆದರೆ ಇಲ್ಲಿ ಬಲಾಢ್ಯರದೇ ಆಕ್ರಮಣ. ಗಂಟಲು ಗಟ್ಟಿ ಇದ್ದವರದೇ ದರ್ಬಾರು. ಆದ್ದರಿಂದ, ಭಾರತೀಯ ವ್ಯವಸ್ಥೆಗೆ ಜಾಗತೀಕರಣ ಒಂದು ರೀತಿಯ ಮಾರಕವೇ. ಪರಿಶಿಷ್ಟರು ಈ ವ್ಯವಸ್ಥೆಯಲ್ಲಿ ಗೌರವಯುತವಾಗಿ ಬದುಕನ್ನು ಪಡೆಯುವುದು ಅಸಾಧ್ಯ.

ಪರಿಶಿಷ್ಟರು ಹೊಸ ಸವಾಲುಗಳನ್ನು ಸ್ವೀಕರಿಸಬೇಕು - ಸಮರ್ಥವಾಗಿ ಸುಧಾರಿಸಬೇಕು. ●

ಮತಾಂತರ ದಲಿತರ ಸಮಸ್ಯೆಗೆ ಪರಿಹಾರವಲ್ಲ



○ ಟಿ. ನಾರಾಯಣಸ್ವಾಮಿ
ದಲಿತ ಮುಖಂಡರು

1) ದಲಿತ ಸಮುದಾಯಗಳ ಉನ್ನತಿ ಮತ್ತು ಪ್ರಗತಿಯ ದೃಷ್ಟಿಕೋನದಲ್ಲಿ ಅಂಬೇಡ್ಕರ್ ವಾದಕ್ಕೆ ಸರಿಸಾಟಿ ಅಥವಾ ಪರ್ಯಾಯ ವ್ಯವಸ್ಥೆ ಇಂದಿನ ಆಡಳಿತದಲ್ಲಿಲ್ಲ. ಆದ್ದರಿಂದ ಅಂಬೇಡ್ಕರ್‌ವಾದ ಇಂದು-ಮುಂದು-ಎಂದೆಂದೂ ಪ್ರಸ್ತುತ. ಅಂಬೇಡ್ಕರ್‌ವಾದದಿಂದ ಮಾತ್ರವೇ ದಲಿತರ ವಿಮೋಚನೆ ಎನ್ನುವುದಕ್ಕಿಂತ, ಸ್ವತಂತ್ರ ಭಾರತದಲ್ಲಿ ಅನೇಕ ಸರ್ಕಾರಗಳು, ಬಂದು ಹೋದರೂ ದಲಿತರ ವಿಮೋಚನೆಗೆ ಪೂರಕವಾದ ಅಥವಾ ಪರ್ಯಾಯವಾದ ಒಂದು ನೀತಿಯನ್ನು ಯಾರೂ ಎಂದಿಗೂ ಯೋಚಿಸಲಾಗದ ಕಾರಣ, ಅಂಬೇಡ್ಕರ್‌ರವರೇ ದಲಿತ ವಿಮೋಚಕರಾಗಿದ್ದಾರೆ.

2) ದಲಿತರು ಈಚಿನ ದಿನಗಳಲ್ಲಿ ಸಂಪೂರ್ಣ ಸ್ವಾರ್ಥಗಳನ್ನು ಮೈಗೂಡಿಸಿಕೊಂಡು ವರ್ಣಾಶ್ರಮ ಧರ್ಮದ ಜಾತಿಗಳ ಜಾಡಿನಲ್ಲಿ ಜಾರಿ ಬಿದ್ದಿದ್ದಾರೆ. ಇದರಿಂದಾಗಿ ಸಮುದಾಯವಾಗಿ ದಲಿತ ಸಾರ್ವಭೌಮತ್ವ ಸಾಧಿಸುವಲ್ಲಿ ಸೋಲಾಗಿದೆ.

-ದಲಿತ ಶಕ್ತಿಗಳ ಧ್ರುವೀಕರಣ, ಸಹೋದರತ್ವ ಮತ್ತು ದಲಿತರ ಒಗ್ಗಟ್ಟು ದಲಿತರ ರಾಜಕೀಯದ ಗೊತ್ತು ಗುರಿಗಳನ್ನು ರೂಪಿಸುತ್ತದೆ.

-ಬಿ.ಎಸ್.ಪಿ. ಕ್ಷಣಿಕ ಲಾಭ ಬಯಸುತ್ತಾ ತನ್ನ ಶೀಲ ಕಳೆದುಕೊಂಡಿದೆ. ದಲಿತರಲ್ಲೆ ವಿಭಾಗಿಸಿ, ವರ್ಗೀಕರಿಸಿ ಕೊನೆಯ ಪಕ್ಷ ದಲಿತರ ಪಕ್ಷವಾಗುವ ಬದಲು ಕೇವಲ ಒಂದೆರೆಡು ರಾಜ್ಯಗಳಿಗೆ ಸೀಮಿತವಾಗುವುದರ ಜೊತೆಗೆ ದಲಿತರು ಅನ್ಯ ರಾಜಕೀಯ

ಅವಕಾಶವಾದಿ ರಾಜಕಾರಣ ಬೇಡ

○ **ಎಸ್. ಗಣೇಶನ್**, ಸಹಾಯಕ ಸಂಪಾದಕರು, ಪ್ರಜಾವಾಣಿ

1) ಶೋಷಿತರಿಗೆ ಸಮಾನತೆ, ಅಸ್ಪೃಶ್ಯತೆ ಮತ್ತು ಜಾತಿ ಮುಕ್ತ ಸಮಾಜ ಹಾಗೂ ಶೋಷಿತರ ಸಾರ್ವಭೌಮತ್ವದ ವಿಚಾರಗಳನ್ನು ಒಳಗೊಂಡ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ವಾದದ ಪ್ರಸ್ತುತತೆ ಸಾರ್ವಕಾಲಿಕವಾಗಿ ಅಗತ್ಯವಿದೆ. ಇದರಿಂದ ದಲಿತರ ವಿಮೋಚನೆ ಸಾಧ್ಯ ಎಂಬ ಆಶಯ ಉಂಟಾಗುತ್ತದೆ. ಆದರೆ ಅಸ್ಪೃಶ್ಯತೆ, ಜಾತಿ ವ್ಯವಸ್ಥೆಯ ಅಡಿಪಾಯ ಹೊಂದಿರುವ ಭಾರತೀಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯದ ವ್ಯವಸ್ಥೆಯಲ್ಲಿ ಅಂಬೇಡ್ಕರ್‌ವಾದದ ಕನಸು ಸಾಕಾರವಾಗುವುದು ಕಷ್ಟ.

2) ಭಾರತೀಯ ಸಾಮಾಜಿಕ ವ್ಯವಸ್ಥೆ ಮೂಲಭೂತವಾಗಿ ಮೇಲು-ಕೀಳು ಎಂಬ ಶ್ರೇಣೀಕೃತ ವ್ಯವಸ್ಥೆ ಆಗಿರುವುದರಿಂದ ಆ ಭಾವನೆ ದಲಿತ ವರ್ಗಗಳಲ್ಲಿಯೂ ಆಳವಾಗಿ ಬೇರು ಬಿಟ್ಟಿರುವುದರಿಂದ ದಲಿತರು ಒಂದೇ ಸಮುದಾಯವಾಗಿ ಯೋಚಿಸಲು ಸಾಧ್ಯವಾಗುತ್ತಿಲ್ಲ ಎನಿಸುತ್ತದೆ. ಇದಕ್ಕೆ ಜೀವಂತ ಉದಾಹರಣೆ ಎಂದರೆ ದಲಿತ ಸಮುದಾಯದಿಂದ ಪ್ರತ್ಯೇಕವಾಗಿ ನಿಲ್ಲಲು ನಿರ್ಧರಿಸಿದಂತಿರುವ ಎಡಗೈ ಬಾಂಧವರು. "ದಲಿತರು ಎಂದು ನಾವು ಮೋಸ ಹೋಗಿದ್ದು ಸಾಕು; ಮಾದಿಗರೇ ಒಂದಾಗಿ; ಹೋರಾಟಕ್ಕೆ ಮುಂದಾಗಿ; ಮಾದಿಗರೇ ನಿಮ್ಮ ಜಾತಿಯನ್ನು ಕಟ್ಟಿ; ಜೈ ಮಾದಿಗ' ಎಂಬ ಗೋಡೆ ಬರಹಗಳು ಮತ್ತು ಘೋಷಣೆಗಳು ದಲಿತ ಸಮುದಾಯದ ಕಲ್ಪನೆ ಮತ್ತು ಚಿಂತನೆಯನ್ನು ಛಿದ್ರ ಛಿದ್ರ ಮಾಡುವಂತಹ ಅಪಾಯಕಾರಿ ಬೆಳವಣಿಗೆ.

3) ಈ ದೇಶ ದೊಡ್ಡದು. ಸಾವಿರಾರು ಜಾತಿಗಳು, ಹತ್ತಾರು ಧರ್ಮಗಳು, ನೂರಾರು ರಾಜಕೀಯ ಪಕ್ಷಗಳಿರುವಾಗ ದಲಿತರಿಗೆ ಪ್ರತ್ಯೇಕವಾಗಿ ರಾಜಕೀಯ ಮಾಡಲು ಸಾಧ್ಯವಿಲ್ಲ. ಮೇಲಾಗಿ ನಮ್ಮದು ಪ್ರಜಾಪ್ರಭುತ್ವ ವ್ಯವಸ್ಥೆ. ಈ ವ್ಯವಸ್ಥೆಯಲ್ಲಿ ಓಟಿಗೆ ತನ್ನದೇ ಆದ ಮೌಲ್ಯ ಇದೆ. ಬಾಬಾ ಸಾಹೇಬರು ದೊರಕಿಸಿಕೊಟ್ಟಿರುವ ಈ ಓಟಿನ ಶಕ್ತಿಯೇ ದಲಿತರನ್ನು ಕಾಪಾಡುತ್ತಿರುವುದು. ಅದಕ್ಕಾಗಿ ಓಟಿನ ಅಧಿಕಾರ ಇರುವುದು ಪ್ರಜಾಪ್ರಭುತ್ವ, ಸಮಾನ ಹಕ್ಕುಗಳನ್ನು ಹಾಗು ದಲಿತರ ಅಭಿವೃದ್ಧಿಗೆಂದು ತಾತ್ಕಾಲಿಕವಾಗಿ ವಿಶೇಷ ಸೌಲಭ್ಯ ಒದಗಿಸಿರುವ ಸಂವಿಧಾನವನ್ನು ರಕ್ಷಿಸುವ ರಾಜಕೀಯ ಪ್ರಜ್ಞೆ ಮತ್ತು ಜಾಗೃತಿ ದಲಿತರಿಗೆ ಅವಶ್ಯ. ಆಗ ಸಂವಿಧಾನ ದಲಿತರನ್ನು ರಕ್ಷಿಸುತ್ತದೆ.

ಇನ್ನು ಬಹುಜನ ಸಮಾಜ ಪಕ್ಷ ದಲಿತರ ಹಿತವನ್ನು ಕಾಯಬಲ್ಲುದೆ ಎಂಬುದು ಪ್ರಶ್ನೆ. ದಲಿತರ ಹಿತಕಾಯುವುದು ಬಿಎಸ್‌ಪಿ. ಆಶಯ. ಇದರಲ್ಲಿ ಎರಡು ಮಾತಿಲ್ಲ. ಆದರೆ ಅದಕ್ಕಾಗಿ ನೀತಿಯನ್ನು ಬಿಡಬೇಕಾಗಿಲ್ಲ. ಲಜ್ಜೆತನವನ್ನಾಗಲಿ, ಭ್ರಷ್ಟಾಚಾರವನ್ನಾಗಲಿ ಮಾಡಬೇಕಾಗಿಲ್ಲ. ಅನ್ಯಾಯದ ವಿರುದ್ಧ ಸಿಡಿದೇಳುವ, ನ್ಯಾಯಕ್ಕಾಗಿ ಹೋರಾಟ ಮಾಡುವ ನೈತಿಕ ಹಕ್ಕು-ಶಕ್ತಿ ಈ ದೇಶದಲ್ಲಿ ದಲಿತರಿಗೆ ಇರುವಷ್ಟು ಬೇರಾರಿಗೂ ಇಲ್ಲ. ಹೀಗಿರುವಾಗ ತತ್ವ ಬಿಟ್ಟು ಅವಕಾಶವಾದಿ ರಾಜಕಾರಣ ಮಾಡಬೇಕಾಗಿಲ್ಲ. ದುರದೃಷ್ಟಕರ ಬೆಳವಣಿಗೆ ಎಂದರೆ ಬಿಎಸ್‌ಪಿಗೆ ಇವುಗಳೇ ಅದರ ಸಿದ್ಧಾಂತವಾಗಿರುವುದು. ಉತ್ತರ ಪ್ರದೇಶದ ರಾಜಕೀಯ ವ್ಯವಸ್ಥೆ ಬಿಎಸ್‌ಪಿಗೆ ಹೇಳಿ ಮಾಡಿಸಿದಂತಿದೆ. ನಿನ್ನೆ ಸಮಾಜವಾದಿ ಪಕ್ಷ, ಕಾಂಗ್ರೆಸ್, ಅಕಾಲಿ ದಳ, ಇಂದು ಬಿಜೆಪಿ ಜೊತೆ, ಹೀಗೆ ಅವಕಾಶವನ್ನೇ ಹೊಂಚುಹಾಕುತ್ತಾ ಅಧಿಕಾರದ ಪಾಲು ಪಡೆಯುವುದು ಯಾವುದೇ ಒಂದು ರಾಜಕೀಯ ಪಕ್ಷದ ನಿಜವಾದ ಧ್ಯೇಯವಾಗಬಾರದು. ನಿಜ, ಬೇರೆ ಪಕ್ಷಗಳೇನು ಸಾಚಾ ಎಂದು ಹೇಳಲು ಬರುವುದಿಲ್ಲ. ಆದರೆ ಕನಿಷ್ಠ ರಾಜಕೀಯ ನೀತಿಯಾದರೂ ಬೇಡವೇ? ದಲಿತರ ಒಟ್ಟು ವಿಮೋಚನೆಗಾಗಿ ಹೋರಾಟ ಮಾಡಿದ ಬಾಬಾಸಾಹೇಬರು ಒಮ್ಮೆಯೂ ತಾವು ನಂಬಿದ ನೀತಿಯನ್ನು ಬಿಟ್ಟುಕೊಡಲಿಲ್ಲ. ಅವಕಾಶವಾದಿ ರಾಜಕೀಯ ಅಥವಾ ಭ್ರಷ್ಟಾಚಾರದ ಕಡೆ ತಿರುಗಿಯೂ ನೋಡಲಿಲ್ಲ. ಅವರ ಪರಿಶುದ್ಧ, ಪ್ರಾಮಾಣಿಕ ಮತ್ತು ದಿಟ್ಟ ಹೋರಾಟದಿಂದ ಇಂದು ದಲಿತರು ತಲೆ ಎತ್ತಿ ಬಾಳುವಂತಾಗಿಲ್ಲವೇ? ಆದ್ದರಿಂದ ದಲಿತರಿಗೆ ಬೇಕಾಗಿರುವುದು ಬಾಬಾಸಾಹೇಬ ಅಂಬೇಡ್ಕರ್ ಅವರ ಆದರ್ಶವೇ ಹೊರತು ಬಿಎಸ್‌ಪಿಯ ಕಾನ್ಷಿರಾಂ ಮತ್ತು ಮಾಯಾವತಿ ಅಲ್ಲ. ಇವರ ನೀತಿಗೆಟ್ಟ ರಾಜಕಾರಣದಿಂದ ಒಂದೆರಡು ದಿನ ಕೆಲವರಿಗೆ ಅನುಕೂಲವಾಗಬಹುದಷ್ಟೇ.

3) ಭಾರತದಲ್ಲಿ ದಲಿತರ ಬಗೆಗಿನ ಧರ್ಮಗಳ ದೃಷ್ಟಿಕೋನ ನೋಡಿದರೆ ಯಾವ ಧರ್ಮವೂ ದಲಿತರನ್ನು ಮೇಲೆತ್ತಲಾರದು. ಹಿಂದೂ ಧರ್ಮದಲ್ಲಿಯೇ ಗುರುತಿಸಿಕೊಳ್ಳುವ ಅಥವಾ ಬೇರೆ ಧರ್ಮಗಳಿಗೆ ಮತಾಂತರ ಆಗುವುದು ಎರಡೂ ದಲಿತರ ಸಮಸ್ಯೆಗೆ ಪರಿಹಾರವಾಗಿಲ್ಲ. ಆದ್ದರಿಂದ ದಲಿತರಿಗೆ ಧರ್ಮ ಎನ್ನುವುದು ಗೌಣ.

4) ಈ ಪ್ರಶ್ನೆ ಹತ್ತು ವರ್ಷಗಳ ಹಿಂದೆ ಅನ್ವಯಿಸುತ್ತಿತ್ತು. ಸ್ಪರ್ಧೆ ಎನ್ನುವುದು ಈಗ ಎಲ್ಲ ವರ್ಗಗಳಲ್ಲಿಯೂ ಉಂಟಾಗಿದೆ. ಇದು ಅನಿವಾರ್ಯ ಕೂಡ. ಈಗ ಬುದ್ಧಿ ಇದ್ದವ ಬದುಕುತ್ತಾನೆ ಎನ್ನುವ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆ ರೂಪುಗೊಂಡಿದೆ. ಆದ್ದರಿಂದ ದಲಿತರಿಗೆ ಮೀಸಲಾತಿಯೇ ಪರ್ಯಾಯವಲ್ಲ. ಆದರೆ ಸದ್ಯಕ್ಕೆ ಅನಿವಾರ್ಯ.

5) ಯಾರು ಒಪ್ಪಲಿ ಬಿಡಲಿ ಜಾಗತೀಕರಣ ಆರ್ಥಿಕ ವ್ಯವಸ್ಥೆ ಈಗ ಎಲ್ಲರ ಬದುಕಿನ ಮೇಲೆ ಸವಾರಿ ಮಾಡುತ್ತಿದೆ. ಈಜುವುದನ್ನು ಕಲಿತರೆ ಹೊಳೆ ದಾಟುವುದು ಕಷ್ಟವೇನಲ್ಲ. ಜಾಗತೀಕರಣದ ಪ್ರವಾಹದ ವಿರುದ್ಧ ಮೀಸಲಾತಿ, ವಿಶೇಷ ಸವಲತ್ತು ಮುಂತಾದ ಸ್ಪೂನ್ ಫೀಡಿಂಗ್ ಪದ್ಧತಿಯಿಂದ ಹೆಚ್ಚು ದಿನ ಬದುಕಲು ಆಗದು. ಹೊಸತನ್ನು ಕಲಿಯುವ, ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳುವ ಮತ್ತು ಹೊಸದನ್ನು ಸಾಧಿಸುವ ಮನೋಸ್ಥೈರ್ಯವನ್ನು ಮೈಗೂಡಿಸಿಕೊಳ್ಳುವುದು ಅನಿವಾರ್ಯ. ●

ವೇದಿಕೆಗಳಲ್ಲಿ ಮುಂಚೂಣಿ ನ್ಯಾಯಕತ್ವಕ್ಕೆ ಅಡ್ಡಿಯಾಗಿದೆ.

3) ಇದೊಂದು ಕ್ಲಿಷ್ಟ ಪ್ರಶ್ನೆ. ಪ್ರತಿಯೊಬ್ಬರೂ ಸ್ವತಂತ್ರರು, ಅಂಬೇಡ್ಕರ್‌ರವರು ಅಂದಿನ ಉಪಟಳಗಳನ್ನು ಸಹಿಸದೆ ಪರಿವರ್ತನೆಗೊಂಡರು. ಆದರೆ ಅವರ ವಾದಕ್ಕೆ ಎಲ್ಲರೂ ಕಟ್ಟು ಬೀಳಲಿಲ್ಲ ಆದ್ದರಿಂದ ಬೇರೆಯವರ ಆಯ್ಕೆಯನ್ನು ನಿರ್ಧರಿಸುವುದು ಸೂಕ್ತವಲ್ಲ.

ದಲಿತರು ಹಿಂದೂ ಧರ್ಮದಲ್ಲಿದ್ದುಕೊಂಡು ತಂತಮ್ಮ ಒಗ್ಗಟ್ಟು ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಛಲ ಸಾಧಿಸಿದರೆ ಗೌರವಯುತ ಅಸ್ತಿತ್ವ ಪಡೆಯಲು ಸಾಧ್ಯವಿದೆ.

ಮತಾಂತರ ಅಂಬೇಡ್ಕರ್‌ರವರಂತೆ ತೀರ್ಮಾನ ತೆಗೆದುಕೊಂಡರೆ ಅದರ ಅರ್ಥ ಬೇರೆ. ಆದರೆ ಅಲ್ಪ ಲಾಭ-ಸುಖಗಳಿಗಾಗಿ ತೆಗೆದುಕೊಳ್ಳುವ ಮತಾಂತರ ತೀರ್ಮಾನ ಸೋಲೊಪ್ಪಿಗೆಯ ತೀರ್ಮಾನ ಮತ್ತು ಹೇಡಿಗಳ ನಡವಳಿಕೆಯಾದೀತು. ಇದು ದಲಿತರ ಸಮಸ್ಯೆಗಳಿಗೆ ಪರಿಹಾರವು ಅಲ್ಲ ಏಕೆಂದರೆ, ವೀರಶೈವ ಧರ್ಮ ಸ್ವೀಕರಿಸಿದವರು ದಲಿತರಾಗಿಯೇ ಉಳಿದಿದ್ದಾರೆ, ಕ್ರೈಸ್ತ ಧರ್ಮ ಸೇರಿದವರು ದಲಿತ ಕ್ರೈಸ್ತರರಾಗಿದ್ದಾರೆ. ಮುಸ್ಲಿಂ ಧರ್ಮ ಪಡೆದವರು ದಲಿತ ಮುಸ್ಲಿಂರಾಗಿದ್ದಾರೆ.

4) ಮೀಸಲಾತಿ ಒಂದು ಸವಲತ್ತಾಗಿ ಬಳಕೆಯಾಗುತ್ತಿದೆ. ದಲಿತರಲ್ಲಿ ಮೀಸಲಾತಿ ಸ್ಪರ್ಧಾಶಕ್ತಿಯನ್ನು ಹೆಚ್ಚಿಸಿಲ್ಲ. ಅನ್ಯ ಜನರಿಗೆ ಮೀಸಲಾತಿಯನ್ನು ನೋಡಿ ಸಹಿಸಿಕ್ಕೊಳ್ಳಲಾಗದೆ ದಲಿತರೊಂದಿಗೆ ಒಳ-ವೈರತ್ವ ತೋರುತ್ತಿದ್ದಾರೆ.

ಮೀಸಲಾತಿಗಿಂತ ಪ್ರಗತಿ ಪರವಾದ ಯೋಜನೆ ರೂಪಿಸಿ ತುಳಿತಕ್ಕೊಳಗಾದ ಜನಾಂಗಗಳನ್ನು ಅನ್ಯರಿಗೆ ಸಮಾನಾಂತರವಾಗಿ ತರುವವರೆಗೆ ಮೀಸಲಾತಿಯೇ ಪರ್ಯಾಯ.

5) ಪ್ರಬುದ್ಧ ಮತ್ತು ಸಂಪೂರ್ಣ ಸಾಕ್ಷರತೆಯ ಸಮಾಜಕ್ಕೆ ಜಾಗತೀಕರಣದ ಫಲ ಸಿಗಬಹುದು. ಕತ್ತಲೆಯಲ್ಲೇ ಕೊಳೆಯುತ್ತಿರುವ ದಲಿತರ ಪಾಲಿಗೆ ಜಾಗತೀಕರಣ ಒಂದು ಜಾತೀಕರಣವಾಗಿ ಪರಿಣಮಿಸಿದೆ. ಇದರಿಂದ ದಲಿತರ ಬದುಕು ಬದಲಾಗುವುದು ಹೇಗೆ ಸಾಧ್ಯ?

ದಲಿತರು ಮುಖ್ಯವಾಹಿನಿಯಲ್ಲಿ ತಮ್ಮ ಗೌರವಯುತ ಪಾಲನ್ನು ಪಡೆಯಲು ಅಂಬೇಡ್ಕರ್‌ರವರ ಮೂಲ ಮಂತ್ರಗಳಾದ ಶಿಕ್ಷಣ-ಸಂಘಟನೆ-ಹೋರಾಟಗಳನ್ನು ಸಂಪೂರ್ಣ ಮೈಗೂಡಿಸಿಕೊಳ್ಳಬೇಕು ಮತ್ತು ವರ್ಗೀಕರಣಗಳನ್ನು ಮರೆತು, ಧೃವೀಕರಣಗಳ ಬಗ್ಗೆ ಚಿಂತಿಸಬೇಕು. ಆಗ ಮಾತ್ರ ದಲಿತರು ತಮ್ಮ ಗೌರವಯುತ ಪಾಲು ಪಡೆಯಲು ಸಾಧ್ಯ. ●

ಸ್ತ್ರೀವಾದದ ಜಾತಿಪ್ರಶ್ನೆ; ಪ್ರಗತಿಪರರ ಢೋಂಗಿತನ

ಇದು ಮಾರ್ಚ್ 10, 2001ರಂದು ಮರಾಠಿ ಪತ್ರಿಕೆಯಾದ 'ಸಾಧನ'ದಲ್ಲಿ ಪ್ರಕಟವಾದ ಲೇಖನದ ಅನುವಾದವಾಗಿದೆ. ರೇಖಾ ಠಾಕೂರ್ ಅವರು 1994ರಿಂದೀಚೆಗೆ ರಾಜಕೀಯವಾಗಿ ಕ್ರಿಯಾಶೀಲರಾಗಿದ್ದಾರೆ ಮತ್ತು ಇವರು, ಪ್ರಕಾಶ್ ಅಂಬೇಡ್ಕರ್‌ರವರ ನಾಯಕತ್ವದ ಭಾರತೀಯ ಪ್ರಜಾಸತ್ತಾತ್ಮಕ ಪಕ್ಷ-ಬಹುಜನ ಮಹಾಸಂಘದ ಮಹಾಕಾರ್ಯದರ್ಶಿಯಾಗಿದ್ದಾರೆ. ಮಾತ್ರವಲ್ಲದೆ ಪಕ್ಷದ ಮಹಿಳಾ ಅಗದಿಯ (ಮಹಿಳಾ ರಂಗ) ಸಂಚಾಲಕರೂ ಆಗಿದ್ದಾರೆ. ದಲಿತ-ಬಹುಜನ ಮಹಿಳೆಯರ ಸಂಗತಿಗಳ ವಿಭಿನ್ನ ಸ್ವರೂಪವನ್ನು ಹೆಚ್ಚಾಗಿ ಗಮನಿಸಿದ್ದಾರೆ. ಬ್ರಾಹ್ಮಣ ಮಹಿಳೆಯರಿಂದ ನಿಯಂತ್ರಿಸಲ್ಪಟ್ಟ ಪ್ರಧಾನವಾಹಿನಿಯ ಸ್ತ್ರೀವಾದಿ ಚಳುವಳಿಯು ಇದರ ಬಗ್ಗೆ ಅಸಡ್ಡೆ ತೋರಿಸಿರುವುದು ಸ್ಪಷ್ಟವಾಗಿದೆ.

ಮೂಲ : ರೇಖಾ ಠಾಕೂರ್
ಅನು : ಕೆ.ಪಿ. ರೈ

ಸಂಸತ್ತು ಮತ್ತು ವಿಧಾನ ಸಭೆಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯು ಸ್ವಾತಂತ್ರ್ಯಾನಂತರದ 50 ವರ್ಷಗಳಲ್ಲಿ ಶೇ. 4-ಶೇ. 7ರಷ್ಟನ್ನು ಮೀರಿಲ್ಲ. ಹಾಗಿದ್ದರೂ ಮಹಿಳೆಯರು ಮತ ಚಲಾಯಿಸುವ ತಮ್ಮ ಸಂವಿಧಾನಿಕ ಹಕ್ಕನ್ನು ಉತ್ಸಾಹದಿಂದ ಚಲಾಯಿಸುವುದು, ರಾಜಕೀಯದಲ್ಲಿ ಮಹಿಳೆಯರ ಕ್ರಿಯಾಶೀಲ ಪಾಲ್ಗೊಳ್ಳುವಿಕೆಯು ನಿರೀಕ್ಷೆಗಿಂತ ಕಮ್ಮಿಯಾಗಿದೆ. ಅನೇಕ ರಾಜಕೀಯ ಪಕ್ಷಗಳಲ್ಲಿ ತೀರ್ಮಾನ ಮಾಡುವ ಪ್ರಕ್ರಿಯೆಯಲ್ಲೂ ಅವರ ಪಾಲ್ಗೊಳ್ಳುವಿಕೆಯು ತೀರಾ ಮಿತಿಗೊಳಪಟ್ಟಿದೆ. ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯಲ್ಲಿ 19 ಸದಸ್ಯರ ಪೈಕಿ ಕೇವಲ ಇಬ್ಬರು ಮಹಿಳೆಯರಿದ್ದಾರೆ. ಬಿಜೆಪಿಯ ಕಾರ್ಯಕಾರಿ ಸಮಿತಿಯಲ್ಲಿ, 73 ಸದಸ್ಯರ ಪೈಕಿ ಒಂಬತ್ತು (ಶೇ. 12) ಮಹಿಳೆಯರು ಇರುವರು. ಜನತಾದಳದಲ್ಲಿ 75 ಜನರಿರುವ ಕಾರ್ಯಕಾರಿ ಸಮಿತಿಯಲ್ಲಿ 11 (ಶೇ. 14%) ಮಹಿಳೆಯರಿದ್ದಾರೆ. ಮಹಿಳೆಯರ ಮೀಸಲಾತಿ ವಿಷಯಕ್ಕೆ ತನ್ನ ಪೂರ್ಣ ಸಮ್ಮತಿಯನ್ನು ನೀಡುವುದಕ್ಕೆ ಹೆಸರಾದ ಭಾರತೀಯ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ 70 ಸದಸ್ಯರ ಕೇಂದ್ರ ಸಮಿತಿಯಲ್ಲಿ 5 ಜನ ಮಹಿಳೆಯರಿದ್ದಾರೆ. ಆದರೆ ಪಾಲಿಟ್‌ಬ್ಯೂರೋದಲ್ಲಿ ಒಬ್ಬ ಮಹಿಳೆಯೂ ಇಲ್ಲ. ಭಾರತೀಯ ಕಮ್ಯುನಿಸ್ಟ್ ಪಕ್ಷವು ತನ್ನ 125 ಸದಸ್ಯರ ರಾಷ್ಟ್ರೀಯ ಸಮಿತಿಯಲ್ಲಿ ಕೇವಲ ಆರು ಜನ ಮಹಿಳೆಯರು ಮಾತ್ರ ಇದ್ದಾರೆ.

ಈ ಅಂಕಿ ಅಂಶಗಳು ಭಾರತೀಯ ಮಹಿಳೆಯು ಅಸಹಾಯಕಳಾಗಿ ಶಕ್ತಿ ಇಲ್ಲದವಳಾಗಿ; ರಾಜಕೀಯಾಧಿಕಾರದಲ್ಲಿ ಸಣ್ಣ ಪಾಲನ್ನು ಪಡೆಯುವ ಅವಕಾಶವನ್ನು ಕಳೆದುಕೊಂಡಿದ್ದಾಳೆಂಬುದನ್ನು ತೋರಿಸುತ್ತದೆ. ಈ ಅಧಿಕಾರದ ಹುಚ್ಚು ವೇಗದಲ್ಲಿ ಸ್ಪರ್ಧಿಸಲು ಧೈರ್ಯ ತೋರಿದ ಕೆಲವು ಮಹತ್ವಾಕಾಂಕ್ಷಿಗಳು ಸ್ಪರ್ಧೆಯಲ್ಲಿ ಹೀನಾಯವಾಗಿ ಸೋಲುತ್ತಾರೆ. ಎಲ್ಲ ಕ್ಷೇತ್ರಗಳಲ್ಲಿ ಅಸ್ತಿತ್ವದಲ್ಲಿರುವ ಸಾಮಾಜಿಕ ಸಂರಚನೆ ಮತ್ತು ಮೌಲ್ಯ ವ್ಯವಸ್ಥೆಯು ರಾಜಕೀಯದಲ್ಲೂ ತನ್ನ ಪ್ರಭಾವವನ್ನು ಬೀರುತ್ತದೆ. ಶತಮಾನಗಳಿಂದ ಬಂದಿರುವಂಥ ಈ ಪುರುಷಾಧಿಪತ್ಯದ ಶೋಷಿತ ವ್ಯವಸ್ಥೆಯ ಶ್ರೇಣಿಯು ಒಂದು ಕಾನೂನಿನ ಘೋಷಣೆಯಿಂದ ಎಂದೂ ಹೋಗಲಾರದು. ಏಕೆಂದರೆ, ಒಂದು ಶ್ರೇಣೀಕೃತ ವ್ಯವಸ್ಥೆಯು ಅಧಿಕಾರ, ಸಂಪತ್ತು ಮತ್ತು ಸ್ಥಾನಮಾನಗಳನ್ನು ಹಳ್ಳಿಯಿಂದ ರಾಷ್ಟ್ರೀಯ ಮಟ್ಟದವರೆಗೂ ಅಸಮಾನವಾಗಿ ವಿಭಾಗಿಸುತ್ತದೆ. ಸ್ವಾತಂತ್ರ್ಯ ಬಂದು 54 ವರ್ಷಗಳು ಕಳೆದರೂ ಸಹ ಅತೀ ತುಳಿತಕ್ಕೊಳಗಾದ ಗುಂಪುಗಳು ಈ ಏಕೀಕೃತ ವ್ಯವಸ್ಥೆಯಿಂದ ಹೊರಬರಲು ಸಾಧ್ಯವಾಗಿಲ್ಲ. ಸಂವಿಧಾನವು ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ನೀಡಿದ್ದರೂ ಹಳೆಯ ವ್ಯವಸ್ಥೆಯಾದ ಶೋಷಣೆ ಮತ್ತು ಅಸಮಾನತೆಯು ಹಾಗೇ ಉಳಿದುಕೊಂಡಿದೆ ಎಂಬುದನ್ನು ಇದು ರುಜುವಾತುಪಡಿಸುತ್ತದೆ. ಈ ಸಾಮಾಜಿಕ ವ್ಯವಸ್ಥೆಯು ಮನುಸ್ಮೃತಿಯ ಮೂಲಕ ಸಾಮಾಜಿಕ ಸಮ್ಮಿಳನವನ್ನು ನಿಯಂತ್ರಿಸುತ್ತ ಬಂದು ಹೇಳುವುದೇನೆಂದರೆ 'ಅಧಿಕಾರದಲ್ಲಿ

ಮಹಿಳೆಯರಿಗೆ ಮತ್ತು ಶೂದ್ರರಿಗೆ ಯಾವುದೇ ಪಾಲನ್ನು ನೀಡುವಂತಿಲ್ಲ'.

ಅಧಿಕಾರಹೀನ ಸ್ತ್ರೀವಾದ : ಭಾರತದಲ್ಲಿ ಮನುವಾದಿ ಪ್ರೇರಿತ ಪುರುಷಾಧಿಪತ್ಯವು ಎರಡು ಹಂತಗಳಲ್ಲಿ ಕ್ರಿಯಾಶೀಲವಾಗಿದೆ; ಕುಟುಂಬದೊಳಗಿನ ಪುರುಷಾಧಿಪತ್ಯ ಮತ್ತು ಬ್ರಾಹ್ಮಣ್ಯ ಪುರುಷಾಧಿಪತ್ಯ ಎರಡನೆಯದು ಕುಟುಂಬದ ಹೊರಗಿನಿಂದ ಜಾತಿ ಶ್ರೇಣೀಕರಣದಲ್ಲಿ ಉನ್ನತ ಸ್ಥಿತಿಯಿಂದ ನಿಯಂತ್ರಿಸಲು ಪ್ರಯತ್ನಪಡುತ್ತದೆ. ಬ್ರಾಹ್ಮಣ ಪುರುಷಾಧಿಪತ್ಯವು ಎರಡು ವಿಸ್ತಾರ ವಿಧಾನಗಳ ಮೂಲಕ ವರ್ಣ ಶ್ರೇಣೀಕರಣ ಮತ್ತು ಅಸಮಾನತೆಯನ್ನು ಪೋಷಿಸುತ್ತದೆ. ಮೊದಲನೆಯದಾಗಿ, ಇದು ಶೂದ್ರ ಮತ್ತು ಬ್ರಾಹ್ಮಣೇತರ ಜಾತಿಗಳ ಮಹಿಳೆಯರ ಲೈಂಗಿಕತೆಯನ್ನು ನಿಯಂತ್ರಿಸುತ್ತಾ, ಅಬ್ರಾಹ್ಮಣ ಜಾತಿಗಳಿಗೆ ಸೇರಿದ ಮಹಿಳೆಯರನ್ನು ಅತ್ಯಾಚಾರಕ್ಕೊಳಪಡಿಸುತ್ತದೆ. ದಲಿತ ಮಹಿಳೆಯರ ಲೈಂಗಿಕ ಶೋಷಣೆಯನ್ನು ಹೇಯವಾದ ದೇವದಾಸಿ ಪದ್ಧತಿ ಮೂಲಕ ಮಾಡುತ್ತದೆ; ವೇಶ್ಯಾವಾಟಿಕೆಯ ಮೂಲಕ ಮಾಡುವ ಲೈಂಗಿಕ ಶೋಷಣೆಯಲ್ಲಿ ಮುಖ್ಯವಾಗಿ ಶೋಷಿತ ಜಾತಿಯ ಮಹಿಳೆಯರು ನಿರತರಾಗಿರುವರು. ಜಾತಿ ಪದ್ಧತಿಯ ಶಾಶ್ವತತೆಯನ್ನು ಅಂತರಜಾತೀಯ ಮದುವೆಗಳನ್ನು ನಿರ್ಬಂಧಿಸುವ ಮೂಲಕ ಮಾಡುತ್ತದೆ.

ಎರಡನೆಯದಾಗಿ, ಬ್ರಾಹ್ಮಣ ಪುರುಷಾಧಿಪತ್ಯವು ಆರ್ಥಿಕತೆ ಮತ್ತು ರಾಜಕೀಯವನ್ನು ನಿಯಂತ್ರಿಸುತ್ತದೆ. ಇದನ್ನು ಬಹುಜನ (ಅಬ್ರಾಹ್ಮಣ) ಮಹಿಳೆಯರು ಅಧಿಕಾರ ಅಥವಾ ಭೌತಿಕ ಸಂಪತ್ತನ್ನು ಹೊಂದುವ ಹಕ್ಕನ್ನು ನಿರಾಕರಿಸುವ ಮೂಲಕ ಮಾಡಲಾಗುತ್ತದೆ. ಬಹುಜನ ಮಹಿಳೆಯರ ಪೂರ್ಣ ಅಧಿಕಾರ ಹೀನತೆಯು ನಿರುದ್ಯೋಗ, ಬಡತನ, ಮೂಲ ಸೌಕರ್ಯಗಳ (ಆರೋಗ್ಯ, ಶಿಕ್ಷಣ, ನೈರ್ಮಲ್ಯ, ನೀರು) ಕೊರತೆ ಮುಂತಾದ ಸಮಸ್ಯೆಗಳ ಫಲಿತಾಂಶವಾಗಿದೆ.

ಸ್ತ್ರೀವಾದಿ ಚಳುವಳಿಯು ಕುಟುಂಬದೊಳಗೆ ಇರುವ ಪುರುಷಾಧಿಪತ್ಯದ ವಿರುದ್ಧ ತನ್ನ ಎಲ್ಲ ಗಮನವನ್ನು ಕೇಂದ್ರೀಕರಿಸುತ್ತದೆ. ಇದು, ಕೆಲಮಟ್ಟಿಗೆ, ಅತ್ಯಾಚಾರದಂಥ ಕೆಲವು ವಿಷಯಗಳ ಜತೆ ವ್ಯವಹರಿಸಲು ಪ್ರಯತ್ನಿಸುತ್ತದೆ. ಇದು ಬ್ರಾಹ್ಮಣ ಪುರುಷಾಧಿಪತ್ಯಕ್ಕೆ ಸಂಬಂಧಿಸಿದ್ದು, ಕುಟುಂಬದ ಹೊರಗೆ ಕೆಲಸ ಮಾಡುತ್ತಿದೆ (ಈ ಪ್ರಯತ್ನಗಳು ನಿಷ್ಪ್ರಯೋಜಕವೆಂದು ರುಜುವಾತಾಗಿದೆ. ಇದಕ್ಕೆ ಅಸ್ತಿತ್ವದಲ್ಲಿರುವ ಅಧಿಕಾರ ಸಂಬಂಧಗಳ ಜತೆ ಸಂಘರ್ಷವಿಲ್ಲ. ಇದರ ಪರಿಣಾಮವಾಗಿ ಅತ್ಯಾಚಾರ ಘಟನೆಗಳು ತೀವ್ರವಾಗಿದೆ).

ಕುಡಿತದ ವಿಷಯವನ್ನೇ ಉದಾಹರಣೆಗೆ ತೆಗೆದುಕೊಳ್ಳೋಣ. (ಪ್ರಧಾನವಾಹಿನಿಯ) ಸ್ತ್ರೀವಾದಿ ಚಳುವಳಿಯು ಕುಡಿತದ ಚಟವಿರುವ ಗಂಡಂದಿರ ವಿರುದ್ಧ ಅಥವಾ ಒಮ್ಮೊಮ್ಮೆ ಸಾರಾಯಿ ಅಂಗಡಿಗಳ ಮಾಲೀಕರ ವಿರುದ್ಧವೂ ಗಟ್ಟಿ ನಿಲುವನ್ನು ತಳೆಯುತ್ತದೆ. ಅಪರೂಪವಾಗಿ ಸರ್ಕಾರಿ ನೀತಿಗಳ ವಿರುದ್ಧ ಮಾತನ್ನಾಡುತ್ತದೆ. ಸರ್ಕಾರವು ಸಾರಾಯಿ ಉತ್ಪಾದಕರನ್ನು ನೇರವಾಗಿ ಪ್ರೋತ್ಸಾಹಿಸುತ್ತದೆ. ಯಾಕೆಂದರೆ ಅದರಿಂದ ಕಂದಾಯವನ್ನು ಸಂಗ್ರಹಿಸುತ್ತದೆ ಮತ್ತು ಲಕ್ಷಗಟ್ಟಳೆ ಕುಟುಂಬಗಳ ನಾಶಕ್ಕೆ ಕಾರಣೀಭೂತವಾಗುತ್ತದೆ. ಇಂತಹ ಸ್ತ್ರೀವಾದವು ಬ್ರಾಹ್ಮಣ ಪುರುಷಾಧಿಪತ್ಯದ ರಾಜಕೀಯ ಮತ್ತು ಆರ್ಥಿಕ ಪ್ರಾಬಲ್ಯದ ವಿರುದ್ಧ ಯಾವುದೇ ನಿಲುವನ್ನು ತೆಗೆದುಕೊಳ್ಳಲು ನಿರಾಕರಿಸುತ್ತದೆ. ಈ ಚಳುವಳಿಯು ರಾಜಕೀಯ ಕ್ರಿಯಾಶೀಲತೆಯ ಬಗ್ಗೆ ಗುಮಾನಿಯನ್ನು ವ್ಯಕ್ತಪಡಿಸುತ್ತದೆ. ಆದ್ದರಿಂದ, ನಿಜವಾಗಲೂ ಅಧಿಕಾರ ಸಂಬಂಧಗಳು ಬಂದಾಗ ರಾಜಕೀಯ ಕ್ರಿಯಾಶೀಲತೆಯೇ ಸಾಮಾಜಿಕ ಕ್ರಿಯಾಶೀಲತೆಯಾಗುತ್ತದೆ ಎಂಬುದನ್ನು ಗುರುತಿಸುವಲ್ಲಿ ಸೋಲುತ್ತದೆ. ಪ್ರಚಲಿತ ರಾಜಕೀಯ ವ್ಯವಸ್ಥೆಯಲ್ಲಿ ಹಿತಾಸಕ್ತಿ ಹೊಂದಿರುವವರು ಮಾತ್ರ ಅಂಥ ಐಷಾರಾಮವನ್ನು ಬಯಸುತ್ತಾರೆ. ಇದು ಮನು ಸೂತ್ರಗಳನ್ನೇ ಪರೋಕ್ಷವಾಗಿ ಸಮ್ಮತಿಸುತ್ತದೆ. ಮಹಿಳೆಯರನ್ನು ಅಧಿಕಾರದಿಂದ ದೂರವಿಡಬೇಕೆಂದು ಇದು ಹೇಳುತ್ತದೆ. ಸಣ್ಣ ಸಂಗತಿಯೆಂಬಂತೆ, ಈ ಚಳುವಳಿಯು ಶೋಷಿತ ಜಾತಿಯ ಮಹಿಳೆಯರ ವಿಷಯಗಳಾದ ಶಿಕ್ಷಣ, ಆರೋಗ್ಯ, ನೈರ್ಮಲ್ಯ, ನೀರು, ಬಡತನ ಅಥವಾ ನಿರುದ್ಯೋಗ ಮುಂತಾದ ವಿಷಯಗಳ ಬಗ್ಗೆ ಯಾವುದನ್ನು ತಳೆಯುತ್ತಿಲ್ಲ.

ಸ್ತ್ರೀವಾದವು ಬ್ರಾಹ್ಮಣ ಪುರುಷಾಧಿಪತ್ಯದ ರಾಜಕೀಯ ಮತ್ತು ಆರ್ಥಿಕ ಪ್ರಾಬಲ್ಯದ ವಿರುದ್ಧ ಯಾವುದೇ ನಿಲುವನ್ನು ತೆಗೆದುಕೊಳ್ಳಲು ನಿರಾಕರಿಸುತ್ತದೆ. ಈ ಚಳುವಳಿಯು ರಾಜಕೀಯ ಕ್ರಿಯಾಶೀಲತೆಯ ಬಗ್ಗೆ ಗುಮಾನಿಯನ್ನು ವ್ಯಕ್ತಪಡಿಸುತ್ತದೆ. ಆದ್ದರಿಂದ, ನಿಜವಾಗಲೂ ಅಧಿಕಾರ ಸಂಬಂಧಗಳು ಬಂದಾಗ ರಾಜಕೀಯ ಕ್ರಿಯಾಶೀಲತೆಯೇ ಸಾಮಾಜಿಕ ಕ್ರಿಯಾಶೀಲತೆಯಾಗುತ್ತದೆ ಎಂಬುದನ್ನು ಗುರುತಿಸುವಲ್ಲಿ ಸೋಲುತ್ತದೆ. ಪ್ರಚಲಿತ ರಾಜಕೀಯ ವ್ಯವಸ್ಥೆಯಲ್ಲಿ ಹಿತಾಸಕ್ತಿ ಹೊಂದಿರುವವರು ಮಾತ್ರ ಅಂಥ ಐಷಾರಾಮವನ್ನು ಬಯಸುತ್ತಾರೆ. ಇದು ಮನು ಸೂತ್ರಗಳನ್ನೇ ಪರೋಕ್ಷವಾಗಿ ಸಮ್ಮತಿಸುತ್ತದೆ.

ಈ ವಿಷಯಗಳು ಸಮಾಜದ (ಜಾತಿ) ಅಧಿಕಾರ ರಚನೆಯಲ್ಲಿ ಸಮಗ್ರಭಾಗವಾಗಿದ್ದು, ಕುಟುಂಬಕ್ಕೆ ಮಾತ್ರ ಸೀಮಿತವಾಗಿಲ್ಲ. ಅಸ್ತಿತ್ವದಲ್ಲಿರುವ ಅಧಿಕಾರ ಸಂಬಂಧಗಳನ್ನು ಪ್ರಶ್ನಿಸದೆ ಯಾವುದೇ ಸಾಮಾಜಿಕ ಬದಲಾವಣೆ ಸಾಧ್ಯವಿಲ್ಲವೆಂಬುದನ್ನು ಇದು ನಾಜೂಕಾಗಿ ನಿರಾಕರಿಸುತ್ತದೆ. ಆದಾಗ್ಯೂ, ಸ್ತ್ರೀವಾದಿ ಚಳುವಳಿಯು ಮೊದಲ ಬಾರಿಗೆ, ವಿಧಾನ ಸಭೆಗಳಲ್ಲಿ ಮತ್ತು ಸಂಸತ್ತಿನಲ್ಲಿ ಶೇ. 33ರಷ್ಟು ಖಚಿತಪಡಿಸುವುದಕ್ಕೆ ಮಹಿಳಾ ಮೀಸಲಾತಿಯ ಬಗ್ಗೆ ಎಚ್ಚೆತ್ತು ರಾಜಕೀಯದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯ ವಿಷಯದ ಬಗ್ಗೆ ದೃಢ ನಿಲುವನ್ನು ತಳೆದಿದೆ. ಮೀಸಲಾತಿಯೊಳಗೆ ಹಿಂದುಳಿದ ಮತ್ತು ಅಲ್ಪಸಂಖ್ಯಾತ ಮಹಿಳೆಯರಿಗೆ ಮೀಸಲಾತಿ ನೀಡಲು ಬ್ರಾಹ್ಮಣ ಸ್ತ್ರೀವಾದಿ ನಾಯಕತ್ವದ ವಿರೋಧವಿರುವುದರಿಂದ, ಸ್ತ್ರೀವಾದದ ಬಗ್ಗೆ ಬಹುಜನ ಮಹಿಳೆಯರು ಭ್ರಮನಿರಸನಗೊಂಡಿದ್ದಾರೆ.

ಇತಿಹಾಸದಿಂದ ಕಲಿತ ಪಾಠ : ಮಹಾತ್ಮಾಗಾಂಧಿ ಜ್ಯೋತಿರಾವ್ ಪೂಲೆಯವರು ಮಹಿಳೆಯರಿಗೆ ಮತ್ತು ಶೋಷಿತ ಜಾತಿಗಳವರಿಗೆ ಶಿಕ್ಷಣ ಚಳುವಳಿಯನ್ನು ಆರಂಭಿಸಿದರು. ಅವರ ಪ್ರಕಾರ ಜಾತಿ ಸಮಸ್ಯೆ ಮತ್ತು ಲಿಂಗ ತಾರತಮ್ಯವು ಒಂದರೊಳಗೊಂದು ಇರುವುದರಿಂದ ಅವನ್ನು ಒಂದೇ ಕಾಲದಲ್ಲಿ ಒಡೆದು ಹೊಸ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಬೇಕಾಗುವುದು. ಆದರೆ ಬೇಸರದ ಸಂಗತಿಯೆಂದರೆ, ಪೂಲೆಯ ನಂತರ ಮಹಿಳಾ ಶಿಕ್ಷಣ ಚಳುವಳಿಯನ್ನು ನಡೆಸಿದ ಸುಧಾರಣಾವಾದಿಗಳು, ಇದನ್ನು ಬ್ರಾಹ್ಮಣ ಮಹಿಳೆಯರಿಗೆ ಮಾತ್ರ ಮಿತಿಗೊಳಿಸಿದರು. ಇದರ ಪರಿಣಾಮವಾಗಿ, ಇದು ಸಾಮಾಜಿಕ ಮರುರಚನೆಯನ್ನು ಮಾಡುವ ತೀವ್ರ ಚಳುವಳಿಯಾಗದೆ, ಬರೀ ಬ್ರಾಹ್ಮಣ ಸುಧಾರಣಾ ಚಳುವಳಿಯಾಯಿತು ಮತ್ತು ಹೊಸದಾಗಿ ಶಿಕ್ಷಿತರಾದ ಬ್ರಾಹ್ಮಣ ಮಹಿಳೆಯರು ಬ್ರಾಹ್ಮಣರ ಎಲ್ಲ ಹಿಡಿತ..ಳನ್ನು ಮುಂದುವರಿಸಿದರು. ವಾಸ್ತವಿಕವಾಗಿ ಮಹಿಳೆಯರನ್ನು ವಿಮೋಚಿಸುವ ಮತ್ತು ಅವರನ್ನು ಶಿಕ್ಷಿತರನ್ನಾಗಿ ಮಾಡುವ ಬ್ರಾಹ್ಮಣ ಸುಧಾರಣಾವಾದಿಗಳ ಚಳುವಳಿಯ ಹಿಂದಿನ ಉದ್ದೇಶವು ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯ ಮೇಲೆ ಬ್ರಾಹ್ಮಣರ ಹಿಡಿತವನ್ನು ಮತ್ತಷ್ಟು ಭದ್ರಪಡಿಸುತ್ತದೆ. ಆದ್ದರಿಂದ, ಮಹಿಳೆಯರಿಗೆ ಶೇ. 33 ಮೀಸಲಾತಿ ನೀಡುವ ಸಂದರ್ಭದಲ್ಲಿ, ಶೋಷಿತ ಹಿಂದುಳಿದ ಜಾತಿಗಳಿಗೆ ಭಯವಿದೆ. ಅಲ್ಪಸಂಖ್ಯಾತ ಮತ್ತು ಹಿಂದುಳಿದ ಜಾತಿಗಳು ವಿಶೇಷ ಸೌಲಭ್ಯಗಳನ್ನು ಪಡೆಯಲಾಗುತ್ತಿಲ್ಲ. ಮಹಿಳಾ ಮೀಸಲಾತಿಯ ಪ್ರಮುಖ ಫಲಾನುಭವಿಗಳು ಬ್ರಾಹ್ಮಣ ಜಾತಿಗಳ ಮಹಿಳೆಯರೇ ಆಗಿರುವುದು ಅನಿವಾರ್ಯವಾಗಿದೆ. ಅದು ಹೀಗೆ ಬ್ರಾಹ್ಮಣರ ಪ್ರಾಬಲ್ಯವನ್ನು ಸ್ಥಿರೀಕರಿಸುತ್ತದೆ.

ಭಾರತದಲ್ಲಿ ಬ್ರಾಹ್ಮಣ ಪುರುಷಾಧಿಪತ್ಯವು, ಕಳೆದ 50 ವರ್ಷಗಳಿಂದ ದಲಿತ, ಆದಿವಾಸಿ ಮತ್ತು ಅಲ್ಪಸಂಖ್ಯಾತ ಪುರುಷ ಮತ್ತು ಮಹಿಳೆಯರನ್ನು ಅಧಿಕಾರದಿಂದ ಪರಾಧೀನ ಮಾಡಿಸುತ್ತಿದೆ. ಇದನ್ನು ಬ್ರಾಹ್ಮಣ ಯಾಜಮಾನ್ಯದ ಹಳೆಯ ವ್ಯವಸ್ಥೆಗಳ ಮೂಲಕ ಗಟ್ಟಿಗೊಳಿಸಲಾಗುತ್ತದೆ. ಅಲ್ಲದೆ, 150 ವರ್ಷಗಳ ವಸಾಹತು ಆಡಳಿತದಲ್ಲಿ, ಬ್ರಾಹ್ಮಣ ಶ್ರೀಮಂತರು ಅಧಿಕಾರದ ಬಗ್ಗೆ ನಿಯಂತ್ರಣ ಹೊಂದಿದ್ದಾರೆ ಮತ್ತು ಅದೇ ಸಮಯದಲ್ಲಿ ಆರ್ಥಿಕವಾಗಿ ಬಡವರು, ಸಾಮಾಜಿಕವಾಗಿ ಕೀಳರಿಮೆ ಹೊಂದಿದವರು ಮತ್ತು ರಾಜಕೀಯವಾಗಿ ಅಧಿಕಾರ ಇಲ್ಲದ ವರ್ಗಗಳು ಅಸಂಘಟಿತರಾಗಿ ಮತ್ತು ಅವ್ಯಕ್ತ ಸ್ಥಿತಿಯಲ್ಲೇ

ಉಳಿದುಕೊಂಡಿದ್ದಾರೆ. ಆದರೆ ಸಾಮಾಜಿಕ ಅರಿವು ಮತ್ತು ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳಲ್ಲಿ, 'ಹಿಂದುಳಿದ' ವರ್ಗಗಳು ಈ ಪರಿಸ್ಥಿತಿಯನ್ನು ನೀಗಿಕೊಳ್ಳಲು ನಿಧಾನವಾಗಿ ಪ್ರಯತ್ನಿಸುತ್ತಿದೆ. 1980ರ ಕೊನೆ ಹಾಗೂ 1990ರ ಮೊದಲಲ್ಲಿ ಬಂದ ಮಂಡಲ್ ಚಳುವಳಿಯು ಈ ಪ್ರಕ್ರಿಯೆಯ ಗತಿಯನ್ನು ತೀವ್ರಗೊಳಿಸಿದೆ ಮತ್ತು ರಾಜಕೀಯದಲ್ಲಿ 'ಹಿಂದುಳಿದ' ವರ್ಗಗಳ ಪಾಲ್ಗೊಳ್ಳುವಿಕೆಯನ್ನು ಸಹ ಹೆಚ್ಚಿಸಿದೆ. ವಾಸ್ತವಿಕವಾಗಿ ಸಂಸತ್ತಿನಲ್ಲಿನ ಅವರ ಪ್ರಮಾಣವು ಅವರ ಜನಸಂಖ್ಯೆಯ (52%) ಪ್ರಮಾಣಕ್ಕನುಗುಣವಾಗಿಲ್ಲ. ಇದು ಸಾಮಾಜಿಕ ಪರಿವರ್ತನೆಯು ಇನ್ನೂ ಪೂರ್ಣಗೊಳ್ಳಬೇಕಾಗಿದೆ ಎಂಬುದನ್ನು ಸೂಚಿಸುತ್ತದೆ. 'ಹಿಂದುಳಿದ' ವರ್ಗದ ಮಹಿಳೆಯು ಎರಡು ಪುರುಷಾಧಿಪತ್ಯದ ಬಲಿಪಶುವಾಗಿ, ಹಿಂದಕ್ಕೆ ಬಿದ್ದಿದ್ದಾಳೆ ಎಂಬ ವಿಷಯ ಆಶ್ಚರ್ಯಕರವಲ್ಲ. ಲೋಕಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯದ ಅಪಾರ ಕೊರತೆಯು 'ಹಿಂದುಳಿದ' ವರ್ಗದ ಮಹಿಳೆಯ ಅಸಡ್ಡೆಯಿಂದ ಕೂಡಿದ ಪಾಲ್ಗೊಳ್ಳುವಿಕೆಯಿಂದಾಗಿದೆ.

ಇಂದು, ಸಂಸತ್ತಿನ 43 ಮಹಿಳಾ ಸದಸ್ಯರ ಪೈಕಿ ಐವರು ಓಬಿಸಿ ಜಾತಿಗೆ ಸೇರಿದವರಾಗಿದ್ದಾರೆ. (1996ರ ಲೋಕಸಭೆಯಲ್ಲಿ ಒಟ್ಟು 39 ಸದಸ್ಯರಲ್ಲಿ ನಾಲ್ವರು ಓಬಿಸಿ ಜಾತಿಗೆ ಸೇರಿದವರಾಗಿದ್ದರು) ಹನ್ನೊಂದನೇ ಮತ್ತು ಹನ್ನೆರಡನೇ ಲೋಕಸಭೆಗಳಲ್ಲಿ ಮುಸ್ಲಿಂ ಸಮುದಾಯಕ್ಕೆ ಸೇರಿದ ಒಬ್ಬ ಮಹಿಳೆಯು ಇರಲಿಲ್ಲ. ಶೋಷಕ ಜಾತಿಯ ಮಹಿಳೆಯ ಪ್ರಮಾಣವು ಅವರ ವಾಸ್ತವಿಕ ಜನಸಂಖ್ಯೆಯ ಪ್ರಮಾಣಕ್ಕೆ ಸಮಾನವಾಗಿದೆ ಮತ್ತು ಓಬಿಸಿ ಮಹಿಳೆಯರ ಪ್ರಮಾಣವು 0.7% ದಿಂದ 0.8%ರಷ್ಟಿದೆ. ಇದು ಜನಸಂಖ್ಯೆಯಲ್ಲಿನ ಅವರ ವಾಸ್ತವಿಕ ಪ್ರಮಾಣಕ್ಕಿಂತ (26%) ಗಣನೀಯವಾಗಿ ಕಡಿಮೆಯಿದೆ ಎಂಬುದನ್ನು ತೋರಿಸುತ್ತದೆ.

ಅಧಿಕಾರದಲ್ಲಿ ಪಾಲು : ಪರಿಣಾಮಕಾರಿ ಪ್ರಜಾಪ್ರಭುತ್ವವು, ತೀರ್ಮಾನ ಮಾಡುವ ಪ್ರಕ್ರಿಯೆಯಲ್ಲಿ ಎಲ್ಲ ಸಾಮಾಜಿಕ ಗುಂಪುಗಳು ಸಮಾನ ಪಾಲನ್ನು ಹೊಂದಿರಬೇಕೆಂದು ಬಯಸುತ್ತದೆ. ಈ ಪಾಲ್ಗೊಳ್ಳುವಿಕೆಯು ಬರೀ ಸಾಂಕೇತಿಕ ಮಾತ್ರವಲ್ಲ. ವಾಸ್ತವಿಕವಾಗಿ, ಇದು ಕಳೆದ ಸಾವಿರ ವರ್ಷಗಳ ಅನ್ಯಾಯಗಳನ್ನು ತೊಡೆದುಹಾಕುತ್ತದೆ. ಅವರು ಜನಸಂಖ್ಯೆಯಲ್ಲಿ ಅವರ ವಾಸ್ತವಿಕ ಪ್ರಮಾಣಕ್ಕಿಂತ ಹೆಚ್ಚಿನ ಪಾಲನ್ನು ಪಡೆಯುವರು. ಆದರೆ ಕಳೆದ 50 ವರ್ಷಗಳಲ್ಲಿ ಇದು ಸಾಧ್ಯವಾಗಿಲ್ಲ. ವಾಸ್ತವವಾಗಿ, ಈ ಅನುಪಾತವು ತಲೆಕೆಳಗಾಗಿದೆ. ಶ್ರೀಮಂತ ವರ್ಗವು ಒಟ್ಟು ಜನಸಂಖ್ಯೆಯ ಶೇ. 15ರಷ್ಟಿದ್ದರೂ ಅಧಿಕಾರದಲ್ಲಿ ಶೇ. 85ರ ಪಾಲನ್ನು ಪಡೆದಿದೆ. ಹಿಂದುಳಿದ ವರ್ಗವು ಒಟ್ಟು ಜನಸಂಖ್ಯೆಯ ಶೇ. 85ರಷ್ಟಿದ್ದರೂ, ಅಧಿಕಾರದಲ್ಲಿ ಮಾತ್ರ ಶೇ. 15 ಪಾಲನ್ನು ಪಡೆದಿದೆ. ತೀರ್ಮಾನ ಮಾಡುವ ಪ್ರಕ್ರಿಯೆಯಲ್ಲಿನ ಈ ಅಸಮಾನತೆಯಿಂದಾಗಿ, ಧೋರಣೆ ತೀರ್ಮಾನಗಳು ಮತ್ತು ಆಡಳಿತವು, ಶೋಷಿತ ವರ್ಗಗಳ ಪ್ರಗತಿಯ 'ಹೇಳಿಕೊಳ್ಳುವಂಥ' ಕಾರ್ಯ ಮಾಡಿಲ್ಲ. ಇದರ ಪರಿಣಾಮವಾಗಿ, ಇಂಡಿಯಾವು ಅಭಿವೃದ್ಧಿ ಹೊಂದದೆ ಹಾಗೇ ಉಳಿದಿದೆ. ಭಾರತೀಯ ಸಮಾಜದಲ್ಲಿ ಈ ತೀವ್ರತರ ಅಸಮಾನತೆಯನ್ನು ನೀಗಿಸಲು ಸಕಾರಾತ್ಮಕ ಕ್ರಿಯೆಯ ನಿಯಮವನ್ನು ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಪರಿಗಣಿಸಲಾಯಿತು.

ಈ ಸಕಾರಾತ್ಮಕ ಧೋರಣೆಯು ಮುಕ್ತ ಸ್ಪರ್ಧೆಯಲ್ಲಿ ಹಿಂದುಳಿದಿರುವ ಇತರ ವಿಭಾಗಗಳಿಗೆ ಕೆಲವು ಮೀಸಲಾತಿ ಸ್ಥಾನಗಳನ್ನು ಕಾದಿರಿಸುತ್ತದೆ. ಈ ನೀತಿಗನುಸಾರವಾಗಿ ಸ್ಥಳೀಯ ಸ್ವಯಂ ಆಡಳಿತಗಳಲ್ಲಿ ವಿವಿಧ ಶೋಷಿತ ವರ್ಗಗಳಾಗಿ ಮೀಸಲಾತಿಯ ಸೌಲಭ್ಯಗಳನ್ನು 73ನೇ ಮತ್ತು 74ನೇ ಸಂವಿಧಾನದ ತಿದ್ದುಪಡಿಯ ಮೂಲಕ ಈಗಾಗಲೇ ಮಾಡಲಾಗಿದೆ. (24ನೇ ಏಪ್ರಿಲ್, 1993) ಈಗ ನಾವು, ಮಹಿಳೆಯು ಒಂದು ವರ್ಗವಾಗಿ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮೀಸಲಾತಿಯನ್ನು ಪಡೆಯತಕ್ಕದ್ದು ಎಂದು ವಾದಿಸುತ್ತಿದ್ದೇವೆ.

ಇಂದು, ಸಂಸತ್ತಿನ 43 ಮಹಿಳಾ ಸದಸ್ಯರ ಪೈಕಿ ಐವರು ಓಬಿಸಿ ಜಾತಿಗೆ ಸೇರಿದವರಾಗಿದ್ದಾರೆ. (1996ರ ಲೋಕಸಭೆಯಲ್ಲಿ ಒಟ್ಟು 39 ಸದಸ್ಯರಲ್ಲಿ ನಾಲ್ವರು ಓಬಿಸಿ ಜಾತಿಗೆ ಸೇರಿದವರಾಗಿದ್ದರು) ಹನ್ನೊಂದನೇ ಮತ್ತು ಹನ್ನೆರಡನೇ ಲೋಕಸಭೆಗಳಲ್ಲಿ ಮುಸ್ಲಿಂ ಸಮುದಾಯಕ್ಕೆ ಸೇರಿದ ಒಬ್ಬ ಮಹಿಳೆಯು ಇರಲಿಲ್ಲ. ಶೋಷಕ ಜಾತಿಯ ಮಹಿಳೆಯ ಪ್ರಮಾಣವು ಅವರ ವಾಸ್ತವಿಕ ಜನಸಂಖ್ಯೆಯ ಪ್ರಮಾಣಕ್ಕೆ ಸಮಾನವಾಗಿದೆ ಮತ್ತು ಓಬಿಸಿ ಮಹಿಳೆಯರ ಪ್ರಮಾಣವು 0.7% ದಿಂದ 0.8%ರಷ್ಟಿದೆ. ಇದು ಜನಸಂಖ್ಯೆಯಲ್ಲಿನ ಅವರ ವಾಸ್ತವಿಕ ಪ್ರಮಾಣಕ್ಕಿಂತ (26%) ಗಣನೀಯವಾಗಿ ಕಡಿಮೆಯಿದೆ ಎಂಬುದನ್ನು ತೋರಿಸುತ್ತದೆ.

ಮಸೂದೆಯ ಇತಿಹಾಸ : ಬೀಜಿಂಗ್‌ನ ಅಂತರರಾಷ್ಟ್ರೀಯ ಮಹಿಳಾ ಸಮ್ಮೇಳನವು ಅನುಮೋದಿಸಿದ ಕ್ರಿಯಾ ಯೋಜನೆಯು ಜನರಿಂದ ಚುನಾಯಿತರಾಗುವ ಎಲ್ಲ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಇರಬೇಕೆಂದು ಶಿಫಾರಸ್ಸು ಮಾಡಿದೆ. ಭಾರತ ಸರ್ಕಾರವು ಈ ಶಿಫಾರಸ್ಸನ್ನು ಅನುಷ್ಠಾನಗೊಳಿಸುತ್ತೇವೆ ಎಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾಷೆ ಕೊಟ್ಟಿದೆ. ಈ ಹಿನ್ನೆಲೆಯಲ್ಲಿ 1996ರ ಸೆಪ್ಟೆಂಬರ್ 12ರಂದು 81ನೇ ತಿದ್ದುಪಡಿಗಾಗಿ ಮಸೂದೆಯನ್ನು ದೇವೇಗೌಡ ಸರ್ಕಾರವು ಸಂಸತ್ತಿನಲ್ಲಿ ಮಂಡಿಸುತ್ತದೆ. ವಿವಿಧ ರಾಜಕೀಯ ಪಕ್ಷಗಳ ಸದಸ್ಯರು ಎತ್ತಿದ ಅನೇಕ ಆಕ್ಷೇಪಗಳಿಂದ ಲೋಕಸಭಾಧ್ಯಕ್ಷರಾದ ಶ್ರೀ ಪಿ.ಎ. ಸಂಗ್ಮಾರವರು ಪುನರವಲೋಕನಕ್ಕಾಗಿ ಸಂಸತ್ಸದಸ್ಯೆ ಗೀತ ಮುಖರ್ಜಿಯವರ ನೇತೃತ್ವದ ಜಂಟಿ ಸಮಿತಿಗೆ ಈ ಮಸೂದೆಯನ್ನು ಕಳುಹಿಸಿದರು. ಈ ಸಮಿತಿಯು 1996ರ ಡಿಸೆಂಬರ್ 9ರಂದು ಸಂಸತ್ತಿಗೆ ತನ್ನ ವರದಿಯನ್ನು ಸಲ್ಲಿಸಿತು.

ಅಲ್ಪಸಂಖ್ಯಾತ ಮತ್ತು ಓಬಿಸಿ ಮಹಿಳೆಯರಿಗೆ ವಿಶೇಷ ಸೌಲಭ್ಯಗಳನ್ನು ನೀಡಬೇಕೆಂಬ ಜಂಟಿ ಸಮಿತಿಯ ಸೂಚನೆಯು ಕಾರಣಕ್ಕೆ ಈ ಕರಡು ಪ್ರತಿಯು ವಿವಾದಾಸ್ಪದವಾಗಿದೆ. ನಾಲ್ಕು ವರ್ಷಗಳಿಂದ ಈ ವಿಷಯವನ್ನು ಎತ್ತಲಾಗುತ್ತಿದೆ ಮತ್ತು ಇದುವರೆಗೂ ಬಗೆಹರಿದಿಲ್ಲ. ಸಮಿತಿಯು ಈ ಬೇಡಿಕೆಯನ್ನು ಒಪ್ಪದಿದ್ದರೂ ಸಹ ಹಿಂದುಳಿದ ಜಾತಿಗಳ ಮೀಸಲಾತಿ ವಿಷಯದ ಮೇಲೆ ಚರ್ಚಿಸಲು ಸೂಚಿಸಿತ್ತು. ಸಂವಿಧಾನವು ಓಬಿಸಿಗಳಿಗೆ ಯಾವುದೇ ವಿಶೇಷ ಸೌಲಭ್ಯಗಳನ್ನು ನೀಡಿಲ್ಲವೆಂದು ಸಮಿತಿ ಹೇಳಿತ್ತು; ಆದ್ದರಿಂದ ಸಂಸತ್ತು ಈ ಬಗ್ಗೆ ತಿದ್ದುಪಡಿಯನ್ನು ತಂದಲ್ಲಿ, ಓಬಿಸಿ ಮಹಿಳೆಯರು ಯಾವುದೇ ಹಂತದಲ್ಲೂ ಮೀಸಲಾತಿ ಪ್ರಯೋಜನ ಪಡೆಯುತ್ತಾರೆ. ಜಂಟಿ ಸಮಿತಿಯು ತತ್ತ್ವದ ವಿರುದ್ಧವಾಗಿಲ್ಲ. ಬರೀ ತಾಂತ್ರಿಕ ಆಕ್ಷೇಪಣೆಯಷ್ಟೇ ಎಂಬುದನ್ನು ಇದು ಸೂಚಿಸುತ್ತದೆ. ಇದುವರೆಗೆ ಈ ತಾಂತ್ರಿಕ ಸಮಸ್ಯೆಯ ಬಗ್ಗೆ ಎರಡು ಪಕ್ಷಗಳು ಒಮ್ಮತಕ್ಕೆ ಬರಲಾಗಿಲ್ಲ. ಆದ್ದರಿಂದ ಮಸೂದೆ ಇತ್ಯರ್ಥವಾಗದೆ ಉಳಿದಿದೆ.

ಸೈದ್ಧಾಂತಿಕ ನೆಲೆಗಳು : ಪ್ರಜಾಸತ್ತಾತ್ಮಕ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯು ಅನೇಕ ಅಂಶಗಳನ್ನು ಅವಲಂಬಿಸಿದೆ. ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವವರ ಹಿತಾಸಕ್ತಿಗಳು ಒಂದು ಮುಖ್ಯ ಅಂಶವಾಗಿದೆ. ಇದನ್ನು ಒಟ್ಟಾಗಿ ಹೇಳುವುದೆಂದರೆ ಸಮಾಜದ ವಿವಿಧ ಜಾತಿಗಳು, ವರ್ಗಗಳು ಮತ್ತು ಸಮುದಾಯಗಳು ನೀತಿಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕು. ಇದು ತಮ್ಮ ಜಾತಿಗಳ, ವರ್ಗಗಳ ಮತ್ತು ಸಮುದಾಯಗಳ ಹಿತಾಸಕ್ತಿಗಳನ್ನು ಹೊಂದಿರಬೇಕು. ಇದನ್ನು ಅವರು ರಾಜಕೀಯಾಧಿಕಾರದಲ್ಲಿ ಪಡೆದ ಪಾಲಿನ ಆಧಾರದ ಮೇರೆಗೆ ಮಾಡಬೇಕು. ಪುರುಷ ಮತ್ತು ಮಹಿಳೆಯರು ತಮ್ಮದೇ ಆದ ಲಿಂಗೀಯ ಹಿತಾಸಕ್ತಿಗಳ ಹೊಂದಿರುವ ಹಾಗೇ ಜಾತಿ ನಿರ್ದಿಷ್ಟ ಹಿತಾಸಕ್ತಿಯನ್ನು ಸಹ ಹೊಂದಿರಬೇಕು. ನಮ್ಮ ಅನುಭವದ ಪ್ರಕಾರ ಜಾತಿ ನಿರ್ದಿಷ್ಟ ಹಿತಾಸಕ್ತಿಗಳು ಲಿಂಗೀಯ ಹಿತಾಸಕ್ತಿಗಳಿಂದ ಹೆಚ್ಚಿನ ಶಕ್ತಿಯನ್ನು ಹೊಂದಿದೆ.

ನಮ್ಮ ಶೈಕ್ಷಣಿಕ ನೀತಿಯು ಇದಕ್ಕೆ ಉದಾಹರಣೆಯಾಗಿದೆ. ಇಂಡಿಯಾ ಜಗತ್ತಿನಲ್ಲೇ ಅತ್ಯಧಿಕ ಸಂಖ್ಯೆಯ ಅನಕ್ಷರಸ್ಥರನ್ನು ಹೊಂದಿದೆ. ಈ ಅನಕ್ಷರರ ಪೈಕಿ ಬಹುಮಂದಿಯು ಆದಿವಾಸಿ, ದಲಿತ ಮತ್ತು ಓಬಿಸಿ

ಪುರುಷ ಮತ್ತು ಮಹಿಳೆಯರಿದ್ದಾರೆ. ಶಿಕ್ಷಣವು ಕೂಡಾ ಭಾರತದಂಥ ದೇಶದಲ್ಲಿ ವಿಶೇಷ ಗಮನ ಸೆಳೆಯುತ್ತದೆ. ಪ್ರಾಥಮಿಕ ಶಿಕ್ಷಣವು ಮುಖ್ಯ ಗಮನವನ್ನು ಪಡೆಯಬೇಕಿತ್ತು ಮತ್ತು ಹೆಚ್ಚು ನಿಧಿಯನ್ನು ಇದಕ್ಕೆ ಹಂಚಬೇಕಿತ್ತು. ಆದರೆ ಬ್ರಾಹ್ಮಣ ಶ್ರೀಮಂತರು ಪಡೆಯುತ್ತಿರುವ ಉನ್ನತ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಲಾಗಿದೆ. ಶೇ. 15ರಷ್ಟು ಶೋಷಿತ ಜಾತಿ ಪುರುಷ ಮತ್ತು ಮಹಿಳೆಯರು ಅಂತಹ ನೀತಿಯ ಪ್ರಯೋಜನ ಪಡೆದಿದ್ದರೆ, ಉಳಿದ ಕೋಟಿಗಟ್ಟಲೆ ಶೋಷಿತ ಜಾತಿಯ ಜನರು ಪ್ರಾಥಮಿಕ ಶಿಕ್ಷಣವನ್ನು ಪಡೆಯಲಾಗುತ್ತಿಲ್ಲ.

ಮತ್ತೊಂದು ಕಣ್ತೆರೆಸುವ ಉದಾಹರಣೆಯೆಂದರೆ, ಸುಷ್ಮಾ ಸ್ವರಾಜ್‌ರವರು, ಇನ್ನೂರೈವತ್ತು ಮಂದಿ ಕಾಶ್ಮೀರಿ ಬ್ರಾಹ್ಮಣ ಕುಟುಂಬಗಳು ಸರ್ವೋಚ್ಚ ನ್ಯಾಯಾಲಯದ ಆಜ್ಞೆಯ ಮೇರೆಗೆ ಡೆಲ್ಲಿಯನ್ನು ಬಿಡಬೇಕೆಂಬ ಸಂಗ ಲೋಕಸಭೆಯಲ್ಲಿ ಎತ್ತುತ್ತಾರೆ. ಆ ಸಂದರ್ಭದಲ್ಲಿ ಸುಷ್ಮಾ ಸ್ವರಾಜ್‌ರವರು ಆ ಸಂಗತಿಯನ್ನು ಮಂಡಿಸಿದ್ದೇ ತಡ ಉಳಿದೆಲ್ಲ ಪಕ್ಷಗಳು ಅವರ ಈ ಕಾಳಜಿಗೆ ತಮ್ಮ ಧ್ವನಿಗೂಡಿಸಿದವು. ಆದರೆ ದಲಿತ ಮಹಿಳಾ ಸಂಸತ್ಸದಸ್ಯೆಯಾದ ಭಗವತಿ ದೇವಿ ಒಂದು ಕೋಟಿ ಬಹೆಲಿಯಾ ಮಹಿಳೆಯರ ಸಂಗತಿಯನ್ನು ಪ್ರಸ್ತಾಪಿಸಿದಾಗ, ಒಬ್ಬ ಮಹಿಳಾ ಸಂಸತ್ಸದಸ್ಯೆಯು ಬೆಂಬಲವನ್ನು ಕೊಡುವುದಿಲ್ಲ.

ಹಿಂಸೆ, ಮಹಿಳೆ, ಜಾತಿ : ಮಹಿಳೆಯರ ವಿರುದ್ಧ ಗಂಭೀರ ಸ್ವರೂಪದ ಹಿಂಸೆಯನ್ನು ಮಹಿಳೆ ಅಧಿಕಾರಕ್ಕೆ ಬಂದಲ್ಲಿ ಯಶಸ್ವಿಯಾಗಿ ಪರಿಹರಿಸಬಹುದು. ಇದು ಮುಖ್ಯವಾಗಿ ಶೋಷಿತ (ಹಿಂದುಳಿದ) ಜಾತಿಗಳ ಮಹಿಳೆಯ ವಿಷಯವಾಗಿದೆ. ಬನ್ವಾರಿದೇವಿ ದಲಿತ ಮಹಿಳೆಯಾಗಿದ್ದರಿಂದ ಅತ್ಯಾಚಾರ ಮಾಡಲಾಯಿತು. ಸವರ್ಣೀಯ (ಜಾತಿ ಹಿಂದೂ) ಪುರುಷರಿಗೆ ಸವಾಲೆಸೆಯುವ ಧೈರ್ಯ ತೋರಿದಳು. ಶೋಷಿತ ಜಾತಿಯ ಮಹಿಳೆಯು ಶೋಷಕ ಜಾತಿಗಳ ಪುರುಷರಿಂದ ಇಂತಹುದೇ ರೀತಿ ಶೋಷಣೆಗೊಳಗಾಗುತ್ತಿದ್ದಾರೆ. ಇವರು ಅಧಿಕಾರಕ್ಕೆ ಬಂದಲ್ಲಿ, ತಾವು ಕೆಳಸ್ಥಾನದಿಂದ ಬಂದವರಾಗಿರುವುದರಿಂದ ಮಹಿಳಾ ಸ್ಥಾನಮಾನವನ್ನು ಪ್ರಶ್ನಿಸಿ, ಸ್ವಾಭಿಮಾನಗಳಿಸಲು ಶಕ್ತರಾಗುತ್ತಾರೆ. ಕೆಲಮಟ್ಟಿಗೆ ಅಪರಾಧಿಗಳನ್ನು ನಿಯಂತ್ರಣದಲ್ಲಿರಿಸಲು ಸಾಧ್ಯವಾಗುತ್ತದೆ. ಮಹಿಳೆಯರು ಆಡಳಿತದಲ್ಲಿ ಪಾತ್ರವಹಿಸುವುದರಿಂದ ಅಪರಾಧಿಗಳಿಗೆ ಶಿಕ್ಷೆಯಾಗಲು ಕಾರಣರಾಗುತ್ತಾರೆ.

ಜಾತಿ-ಆಧಾರಿತ ಮೀಸಲಾತಿಯ ವಿರೋಧಿಗಳಲ್ಲೊಬ್ಬರಾದ ಬೃಂದಾಕಾರತಳ ವಾದವೆಂದರೆ ಲಿಂಗ ತಾರತಮ್ಯವು ಜಾತಿ ಸಂಬಂಧಿತ ಸಂಗತಿಯೇನೂ ಅಲ್ಲ. ಇದು 'ಹಿಂದುಳಿದ' ಜಾತಿ ಮಹಿಳೆಯರಿಗೆ ನೀಡುವ ವಿಶೇಷ ಸೌಲಭ್ಯಗಳ ವಿರುದ್ಧ ಎತ್ತುವ ಸೈದ್ಧಾಂತಿಕವಾದವಾಗುತ್ತದಷ್ಟೇ. ಈ ವಿರೋಧಿಗಳು 'ಹಿಂದುಳಿದ' ಜಾತಿಗಳ ನಾಯಕತ್ವದ ವಿರುದ್ಧ ದೋಷಾರೋಪಣೆಯ ಪಟ್ಟಿಯನ್ನೇ ಹೊಂದಿದ್ದಾರೆ.

- ಅವರು ('ಹಿಂದುಳಿದ' ಜಾತಿ ಮುಖಂಡರು) ಮಹಿಳೆಯರಿಗೆ ನೀಡಲಾಗುವ ಯಾವುದೇ ರೀತಿಯ ಮೀಸಲಾತಿಯ ವಿರುದ್ಧವಿದ್ದಾರೆ. ಯಾಕೆಂದರೆ ಅವರು ಮೂಲತಃ ಪುರುಷ ಕಟ್ಟಾಭಿಮಾನಿಗಳು ಜಾತಿ-ಆಧಾರಿತ ಮೀಸಲಾತಿಯು ಇದಕ್ಕೆ ವಿನಾಯಿತಿಯಷ್ಟೇ.
- ಇವರು ಮಹಿಳೆಯನ್ನು ಬೇರ್ಪಡಿಸುತ್ತಾರೆ.
- ಇವರು ಹಿಂದುಳಿದ ಮಹಿಳೆಯರ ದುರ್ದೆಸೆಗೆ ಕಾರಣರು
- ಇವರ ಕಾಳಜಿಯು ಬರೀ ನಟನೆಯಲ್ಲದೆ ಬೇರೇನೂ ಅಲ್ಲ. ಇದುವರೆಗೆ ಇವರು ಮಹಿಳೆಯರ ವಿಷಯದ ಬಗ್ಗೆ ಯಾವುದೇ ನಿಲುವನ್ನು ತಳೆದವರಲ್ಲ.

- ಅವರು ದಲಿತರನ್ನು ಮತ್ತು ಆದಿವಾಸಿಗಳನ್ನು ಶೋಷಿಸುತ್ತಾರೆ. ಸಾಮಾಜಿಕ ನ್ಯಾಯದ ಬಗೆಗಿನ ವಾದವು ಬರೀ ಬೂಟಾಟಿಕೆಯದ್ದು.
- ನಿಜವಾಗಿ 'ಹಿಂದುಳಿದ' ಜಾತಿಗಳ ಮಹಿಳೆಯರಿಗೆ ತಮ್ಮ ಸ್ವಂತ ಸ್ಥಾನಗಳನ್ನು ಕಳೆದುಕೊಳ್ಳುವ ಭಯವಿದೆ.
- ಬ್ರಾಹ್ಮಣ ಜಾತಿಗಳ ಮಹಿಳೆಯರು ಮಾತ್ರ ಚುನಾಯಿತರಾಗುತ್ತಾರೆ ಎಂಬುದು ನಿಜವಲ್ಲ. ಇದು ಓಬಿಸಿ ಮಹಿಳೆಯರ ಸಾಮರ್ಥ್ಯಗಳಲ್ಲಿ ನಂಬಿಕೆಯ ಕೊರತೆಯನ್ನು ತೋರಿಸುತ್ತದೆ.

ಮೊದಲನೆಯದಾಗಿ, 'ಹಿಂದುಳಿದ' ಜಾತಿಗಳು ಪುರುಷರಲ್ಲದೆ ಮಹಿಳಾ ಸಂಸತ್ಸದಸ್ಯೆಯರಾದಂಥ ಭಗವತಿದೇವಿ, ಪೂಲನ್‌ದೇವಿ, ಕಾಂತಿಸಿಂಗ್, ಉಮಾಭಾರತಿಯವರು ಜಾತಿಯಾಧಾರಿತ ಮೀಸಲಾತಿಯನ್ನು ಡಿಮ್ಯಾಂಡ್ ಮಾಡುತ್ತಾರೆ. ಪುರುಷ ಕಟ್ಟಾಭಿಮಾನದ ದೋಷಾರೋಪಣೆಗೆ ಯಾವುದೇ ಆಧಾರಗಳಿಲ್ಲ. ಎರಡನೆಯದಾಗಿ, ಇಲ್ಲಿರುವ ಗ್ರಹೀತವೆಂದರೆ ಓಬಿಸಿ ಮಹಿಳೆಯರ ವಿಮೋಚನೆಯು ಹಿಂದುಳಿದ ಜಾತಿ ಗಂಡಸರ ಜವಾಬ್ದಾರಿ ಮಾತ್ರವೆಂದು ನೋಡುತ್ತದೆ. ಇದು ತೀವ್ರವಾಗಿ ಆಕ್ಷೇಪಾರ್ಹವಾದದು, ಜಾತೀಯವಾದುದು ಮತ್ತು ಅಸಂವೇದಿಯಾದ ವಾದವಾಗಿದೆ. ಈ ಮೂಲಕ ಶೋಷಿತ ಜಾತಿಗಳ ಮೇಲಿನ ಬ್ರಾಹ್ಮಣ ಶೋಷಣೆಯ ಎಲ್ಲ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತದೆ. ಗರ್ವದಿಂದ ಹೇಳುವುದಾದರೆ, ಹಿಂದುಳಿದ ಜಾತಿ-ಮಹಿಳೆಯರ ಬಗ್ಗೆ ಪ್ರಾಮಾಣಿಕ ಕಾಳಜಿ ಹೊಂದಿರುವವರೆಂದು ಅವರು ಭಾವಿಸುತ್ತಾರೆ. ರಾಜಕೀಯದಲ್ಲಿ ನಿರತರಾಗಿರುವ ಉಳಿದವರೆಲ್ಲ ಬದ್ಧತೆಯಿಲ್ಲದವರಾಗಿಬಿಡುತ್ತಾರೆ. ಇಂಥ ದೋಷಾರೋಪಣೆಗಳು ಹಿಂದುಳಿದ ಜಾತಿ ನಾಯಕತ್ವದ ಪೂರ್ವಗ್ರಹ ಮತ್ತು ಜಿಗುಪ್ಸೆಯಿಂದ ಬಂದವುಗಳು. ಇಂಥ ತಪ್ಪು ದೋಷಾರೋಪಣೆಗಳನ್ನು ಶೋಷಿತ ಜನರು ತಮ್ಮ ಹಕ್ಕುಗಳನ್ನು ಕೇಳಿದಾಗ ಮಾತ್ರ ಮಾಡಿದವುಗಳಾಗಿವೆ.

ದಿನಪತ್ರಿಕೆಗಳು ಇಡೀ ಚರ್ಚೆಯಲ್ಲಿ ತುಂಬಾ ಕುಖ್ಯಾತ ಪಾತ್ರವನ್ನು ವಹಿಸಿವೆ. ಆರಂಭದಲ್ಲಿ, ಹಿಂದುಳಿದ ಜಾತಿ ಎಂ.ಪಿ.ಗಳ ವಿರೋಧಕ್ಕೆ ಕಾರಣಗಳನ್ನು ತಿಳಿಸದೆ, ಓಬಿಸಿ ಎಂ.ಪಿ.ಗಳು ಮಹಿಳಾ ಮೀಸಲಾತಿ ಮಸೂದೆಯನ್ನು ವಿರೋಧಿಸುತ್ತಿದ್ದಾರೆ ಎಂಬ ಅಂಶವನ್ನು ವರದಿ ಮಾಡುತ್ತಾರೆ. 'ಮಹಾರಾಷ್ಟ್ರಟೈಮ್ಸ್'ನ ಸಂಪಾದಕೀಯದಲ್ಲಿ ಪುರುಷ ಮತ್ತು ಮಹಿಳೆಯರ ನಡುವೆ ನಾಗರಿಕ ಯುದ್ಧ' ಆರಂಭವಾಗಿದೆ; 'ನಾಗರಿಕ ಯುದ್ಧ' ಪದಕ್ಕೆ ಮರಾಠಿಯಲ್ಲಿ 'ಯಾದವಿ' ಎಂಬುದಿದೆ. ಇದಕ್ಕೆ ಸ್ಪಷ್ಟವಾದ ದ್ವಂದ್ವಾರ್ಥಗಳಿವೆ. ಇದು ಈ ದಿನಪತ್ರಿಕೆಗಳ ಜಾತೀಯ ಸೊಕ್ಕಿನ ಅಸಹ್ಯವಾದ ಪ್ರದರ್ಶನವಾಗಿದೆ. 'ಟೈಮ್ಸ್ ಆಫ್ ಇಂಡಿಯಾ'ದ ಎಂ.ಡಿ. ನಲಪತ್, ಜಾತಿ-ಆಧಾರಿತ ಮೀಸಲಾತಿಯು 'ಮೂರು ರಾಷ್ಟ್ರ ಸಿದ್ಧಾಂತ'ದೊಂದಿಗಿದೆ ಎಂದು ಹೋಲಿಸಿಕೊಂಡಿದ್ದಾರೆ.

ಈ ಪತ್ರಕರ್ತರ ರಾಜೀ ಗುಂಪು (ನೈತಿಕತೆ, ತತ್ತ್ವಗಳು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ರಕ್ಷಕರೆಂದು ಬಿಂಬಿಸಿಕೊಳ್ಳುತ್ತಿರುವವರು) ಹಾಗೂ ಎಡಪಂಥೀಯ ಪ್ರಗತಿಪರ ಮುಖಂಡರು ಈ ದೇಶದಲ್ಲಿ ಮನುವಾದಿ ಪರಂಪರೆಯನ್ನು ಮತ್ತೆ ಜಾರಿಗೊಳಿಸಲು ಹವಣಿಸುತ್ತಿದ್ದಾರೆ. ಆದ್ದರಿಂದ ಬ್ರಾಹ್ಮಣ ಲಾಬಿಯ ಹಠಮಾರಿ ಧೋರಣೆಯಿಂದಾಗಿ ಮಸೂದೆಯು ಇನ್ನು ಇತ್ಯರ್ಥವಾಗದೆ ಹಾಗೇ ಉಳಿದಿದೆ.

(ಮಾನವಿಕ ಮತ್ತು ಸಾಮಾಜಿಕ ವಿಜ್ಞಾನಗಳ ವಿಭಾಗ, ಐಐಟಿ, ಮುಂಬಯಿಯಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿರುವ ಸಾಯಿ ಠಾಕೂರ್ ಅವರು ಇಂಗ್ಲೀಷ್‌ಗೆ ಭಾಷಾಂತರಿಸಿರುತ್ತಾರೆ) ●

ಮಾನವ ಹಕ್ಕುಗಳು ಹಾಗೂ ಮಹಿಳಾ ಸಶಕ್ತತೆ

ಇಂದು ನಿಮ್ಮೊಂದಿಗಿದ್ದು, ನ್ಯಾಯಮೂರ್ತಿ ಸುನಂದಾ ಭಂಡಾರೆ ಸ್ಮಾರಕ ಫೌಂಡೇಶನ್ ಏರ್ಪಡಿಸಿರುವ "ಮಾನವ ಹಕ್ಕುಗಳು ಹಾಗೂ ಮಹಿಳಾ ಸಶಕ್ತತೆ" ಎಂಬ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಲು ನನಗೆ ಸಂತೋಷವಾಗುತ್ತಿದೆ. ಅಪಾರ ಬುದ್ಧಿಮತ್ತೆಯ ಸುನಂದಾ ಭಂಡಾರೆ ನ್ಯಾಯವಾದಿ ವೃತ್ತಿ ಸ್ವೀಕರಿಸಿ ದೆಹಲಿಯ ಉಚ್ಚ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಸ್ಥಾನಕ್ಕೆ ಏರಿದ್ದು ಅವರ ಅಪ್ರತಿಮ ವ್ಯಕ್ತಿತ್ವವನ್ನು ಸಂಕೇತಿಸುತ್ತದೆ. ಮಹಿಳಾ ಸಶಕ್ತತೆಯ ದೃಷ್ಟಿಯಿಂದ ನೋಡಿದಾಗ, ಸುನಂದಾಭಂಡಾರೆ ಉಚ್ಚನ್ಯಾಯಾಲಯದ ನ್ಯಾಯಮೂರ್ತಿಯಾದದ್ದು; ಲಿಂಗ ನ್ಯಾಯಕ್ಕಾಗಿ ಹೋರಾಟ ನಡೆಸುತ್ತಿರುವ ನಮ್ಮ ದೇಶದ ಎಲ್ಲಾ ಮಹಿಳೆಯರಿಗೆ ಸ್ಫೂರ್ತಿಯಾಗಿದ್ದಾರೆ. ಅವರು ಕೊಟ್ಟ ತೀರ್ಪುಗಳನ್ನು ಹಾಗೂ ಆಕೆಯ ಬರವಣಿಗೆ, ಮಹಿಳೆಯರನ್ನು ಮೇಲ್‌ಸ್ತರಕ್ಕೆ ಒಯ್ಯುವ ಪ್ರಕ್ರಿಯೆಗೆ ಅವರ ದೃಷ್ಟಿಕೋನ ಸಹಾಯಕವಾಗಿತ್ತೆಂಬುದು ತಿಳಿದು ಬರುತ್ತದೆ. "ಸ್ವಾತಂತ್ರ್ಯ ಹಾಗೂ ಹಕ್ಕುಗಳನ್ನು ಉತ್ತಮಗೊಳಿಸುವುದು ನಮ್ಮ ಜೀವನದ ಆದರ್ಶವಾಗಿತ್ತು. ಈ ದೃಷ್ಟಿಕೋನವು ನಮ್ಮ ದೇಶದ ಮಹಿಳಾ ಚಳುವಳಿಯ ಭಾಗವೇ ಆಗಿದೆ. ಸಮಾಜದಲ್ಲಿ ಮಹಿಳೆಯರಿಗೆ ನ್ಯಾಯ ಒದಗಿಸುವ ಧ್ಯೇಯೋದ್ದೇಶವನ್ನು ಇಟ್ಟುಕೊಂಡಿದ್ದ ಸುನಂದಾರವರ ಆಶಯವನ್ನು ದೇಶದಲ್ಲಿ ಪ್ರಸಾರ ಮಾಡಲು ವಿವಿಧ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿರುವ ದಿ|| ಸುನಂದಾರ ಪತಿ ಮುರಳೀಧರ ಭಂಡಾರೆ, ಮಗಳು ಮನಾಲಿ ಮತ್ತು ಸು.ಭಂ.ಫೌ.ಗೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

ಸುನಂದಾ ಅವರ ನೆನಪು ನನ್ನ ಮನಃ ಪಟಲದಲ್ಲಿ ಹಸಿಯಾಗೇ ಇರುವುದರಿಂದ ನನ್ನ ಮೊದಲ ಶ್ರದ್ಧಾಂಜಲಿ ಅವರಿಗೆ ಸಲ್ಲುತ್ತದೆ. ನ್ಯಾ. ಸುನಂದಾ ತಮ್ಮ ಒಂದು ಲೇಖನ "ಸಮಾಜ, ಕಾನೂನು ಹಾಗೂ ಲಿಂಗಸಮಾನತೆ"ಯಲ್ಲಿ ಕೆಳಹಂತದ ಮಹಿಳೆಯರು ತಾರತಮ್ಯಕ್ಕೆ ಒಳಗಾಗುವ ಕಾರಣವನ್ನು ಕುರಿತು...

"ಭಾರತದಲ್ಲಷ್ಟೇ ಅಲ್ಲ ಇಡೀ ವಿಶ್ವದಲ್ಲೇ ಮಹಿಳೆ ಮತ್ತು ಪುರುಷರ ನಡುವೆ ಸಮಾನತೆಯನ್ನು ತರಲು ನಿರಂತರವಾಗಿ ಶ್ರಮಿಸಬೇಕಾಗಿದೆ. ಈ ಕಾರ್ಯವನ್ನು ಯುಕ್ತಿಯಿಂದ ಸಫಲಗೊಳಿಸುವುದು ಗುರಿಯಾಗಿದೆ" ಎಂದಿದ್ದಾರೆ.

ನಮ್ಮ ದೇಶದಲ್ಲಿ ಈ ಭೇದಭಾವ ಮುಂದುವರಿದಿರುವುದಕ್ಕೆ ಮುಖ್ಯವಾದ ಕಾರಣಗಳೆಂದರೆ, ಮಹಿಳೆಯರ ಬಗ್ಗೆ ಸಮಾಜದಲ್ಲಿ ಗೌರವಾಭಿಮಾನಗಳಿರದ ಭಾವನೆ ಇರುವುದು ಹಾಗೂ ಮೂಲಭೂತ ಅವಶ್ಯಕತೆಗಳಿಗೆ ಸಂಬಂಧಿಸಿದಂತೆ ಮಹಿಳೆಯರು ಪರಾಧೀನೆಯಾಗಿರುವುದೇ ಆಗಿದೆ. ಹೆಣ್ಣಿನ ಶೋಷಣೆಗೆ ಸಂಬಂಧಿಸಿದಂತೆ ಕಾನೂನುಗಳನ್ನು ತರುವುದಕ್ಕಿಂತ ಮುಂಚೆ, ಮಹಿಳೆಯರ ಹಕ್ಕುಗಳನ್ನು ರಕ್ಷಿಸಲು ಧಾವಿಸುವುದಕ್ಕಿಂತ ಮುಂಚೆ, ಮಹಿಳೆಯರ ಬಗ್ಗೆ ಸಮಾಜದಲ್ಲಿರುವ ಪೂರ್ವಾಗ್ರಹಗಳನ್ನು ಇದಕ್ಕೆ ಆಧಾರವಾಗಿರುವ ದೃಷ್ಟಿಕೋನವನ್ನು ಹಾಗೂ ಮಹಿಳೆಯರ ಬಗ್ಗೆ ಸಮಾಜದಲ್ಲಿರುವ ನಿರ್ಲಕ್ಷ್ಯ ಭಾವನೆಯನ್ನು ನಿರ್ಮೂಲನೆ ಮಾಡಲು ನಾವು ದನಿ ಎತ್ತಬೇಕಾಗಿದೆ.

ನಮ್ಮ ದೇಶದಲ್ಲಿ ಈ ಭೇದಭಾವ ಮುಂದುವರಿದಿರುವುದಕ್ಕೆ ಮುಖ್ಯವಾದ ಕಾರಣಗಳೆಂದರೆ, ಮಹಿಳೆಯರ ಬಗ್ಗೆ ಸಮಾಜದಲ್ಲಿ ಗೌರವಾಭಿಮಾನಗಳಿರದ ಭಾವನೆ ಇರುವುದು ಹಾಗೂ ಮೂಲಭೂತ ಅವಶ್ಯಕತೆಗಳಿಗೆ ಸಂಬಂಧಿಸಿದಂತೆ ಮಹಿಳೆಯರು ಪರಾಧೀನೆಯಾಗಿರುವುದೇ ಆಗಿದೆ. ಹೆಣ್ಣಿನ ಶೋಷಣೆಗೆ ಸಂಬಂಧಿಸಿದಂತೆ ಕಾನೂನುಗಳನ್ನು ತರುವುದಕ್ಕಿಂತ ಮುಂಚೆ, ಮಹಿಳೆಯರ ಹಕ್ಕುಗಳನ್ನು ರಕ್ಷಿಸಲು ಧಾವಿಸುವುದಕ್ಕಿಂತ ಮುಂಚೆ, ಮಹಿಳೆಯರ ಬಗ್ಗೆ ಸಮಾಜದಲ್ಲಿರುವ ಪೂರ್ವಾಗ್ರಹಗಳನ್ನು ಇದಕ್ಕೆ ಆಧಾರವಾಗಿರುವ ದೃಷ್ಟಿಕೋನವನ್ನು ಹಾಗೂ ಮಹಿಳೆಯರ ಬಗ್ಗೆ ಸಮಾಜದಲ್ಲಿರುವ ನಿರ್ಲಕ್ಷ್ಯ ಭಾವನೆಯನ್ನು ನಿರ್ಮೂಲನೆ ಮಾಡಲು ನಾವು ದನಿ ಎತ್ತಬೇಕಾಗಿದೆ.

ಮೂಲ : ಡಾ|| ಕೆ. ಆರ್. ನಾರಾಯಣನ್

ಅನು : ಬಿ.ಎಸ್. ಶಾರದಾ

ಸ್ವಾತಂತ್ರ್ಯ, ಸಮಾನತೆ ಹಾಗೂ ನ್ಯಾಯಗಳನ್ನು ಘೋಷಿಸಿದ ಕ್ರಾಂತಿಗಳಿಗೆ ಮನುಷ್ಯಕುಲ ಸಾಕ್ಷಿಯಾಗಿ ನಿಂತಿದೆ. ಆದರೆ ಈ ಯಾವುದೇ ಕ್ರಾಂತಿ ಮಹಿಳೆಯರ ಹಕ್ಕುಗಳ ಬಗ್ಗೆ ಗಮನಹರಿಸಿದ್ದಿಲ್ಲ. ಫ್ರೆಂಚ್ ಕ್ರಾಂತಿಗೆ ರೂಸೋನ ಆದರ್ಶ ಪ್ರೇರಣೆಯಾಗಿತ್ತು. ಆತ 1763ರಲ್ಲಿ "ಪೂರ್ತಿಯಾಗಿ ತಿಳುವಳಿಕೆ ಇಲ್ಲದಿರುವುದು ಹೆಂಗಸರಿಗೆ ಲಾಭದಾಯಕವಾಗಿದೆ..." ಎಂದು ಹೇಳಿ, ಅವರನ್ನು ರಾಜಕೀಯದಿಂದ ಹೊರಗಿಡಬೇಕೆಂದು ಪ್ರತಿಪಾದಿಸಿದ. ಆತನ "ಸಾಮಾನ್ಯ ವಿಲ್ ಯೋಜನೆ" ಅಡಿಯಲ್ಲಿ ಪುರುಷರ ಉಯಿಲಿನಲ್ಲಿ ಹೆಂಗಸರು ಬಾರದೇ ಹೋದರು. 1789ರಲ್ಲಿ ಫ್ರೆಂಚ್ ಕ್ರಾಂತಿಯಾದ 20 ವರ್ಷಗಳ ನಂತರ ಪುರುಷರ ಹಾಗೂ ನಾಗರೀಕರ ಹಕ್ಕುಗಳ ಘೋಷಣೆ ಮಾಡಲಾಯಿತು. ಇದರಲ್ಲಿ ರೂಸೋನ ವಿಚಾರವನ್ನು ಕಾನೂನು ಬದ್ಧಗೊಳಿಸಲಾಯಿತು; ಪುರುಷರ ಹಾಗೂ ಗುಲಾಮರಲ್ಲದವರ ಹಕ್ಕುಗಳನ್ನು ಖಾತ್ರಿ ಪಡಿಸಲಾಯಿತು. ಖೇದದ ಸಂಗತಿಯೆಂದರೆ ಪ್ರಪಂಚದಲ್ಲೇ ಹೊಸತನ್ನು ಹುಟ್ಟುಹಾಕಿದ ಫ್ರೆಂಚ್‌ಕ್ರಾಂತಿ ಹಾಗೂ ಅದು ಪ್ರತಿಪಾದಿಸಿದ ಸ್ವಾತಂತ್ರ್ಯ, ಸಮಾನತೆ ಹಾಗೂ ಭಾತೃತ್ವದ ಕಲ್ಪನೆಯಿಂದ ಮಹಿಳೆಯರನ್ನು ಹೊರಗಿಡಲಾಯಿತು. ಫ್ರೆಂಚ್ ಕ್ರಾಂತಿಯಿಂದ ಬಂದ ಹೊಸ ಬೆಳಗಿನಲ್ಲಿ ಮನುಷ್ಯ ಕುಲ ಸಂತೋಷ ಪಡುತ್ತಿದ್ದ ಕಾಲದಲ್ಲೂ ಮಹಿಳೆಯರನ್ನು ಕುರಿತ ಪಕ್ಷಪಾತಿ ದೃಷ್ಟಿಕೋನ ಮುಂದುವರೆಯಿತು. ಇದು ನೆಪೋಲಿಯನ್ ಕಾಲದಲ್ಲೂ ಬಲಗೊಂಡು, ಆಗ ರೂಪಿಸಿಲಾದ ನಾಗರಿಕ ಸಂಹಿತೆಯಲ್ಲಿ ಪ್ರತಿಫಲನಗೊಂಡಿತು. ಈ ನಾಗರೀಕ ಸಂಹಿತೆಯ ಕರ್ತೃಗಳಲ್ಲಿ ಒಬ್ಬನಾದ ಪೋರ್ಟಾಲಿಸ್.



"ನಾವು ಲಿಂಗ ಸಮಾನತೆ ಹಾಗೂ ಲಿಂಗ ಆದ್ಯತೆಯ ಬಗ್ಗೆ ಬಹುಕಾಲದಿಂದ ಚರ್ಚೆ ಮಾಡುತ್ತಾ ಬಂದಿರುವುದರಲ್ಲಿ ಏನೂ ಹುರುಳಿಲ್ಲ" ಎಂದು ಬಹಿರಂಗವಾಗಿ ಘೋಷಿಸಿಬಿಟ್ಟ. ಹೆಂಗಸರ ಬಗೆಗಿನ ತನ್ನ ಪೂರ್ವಾಗ್ರಹವನ್ನು ಮಂಡಿಸಿದ ಆತ ಮುಂದುವರೆದು

"ಹೇಗೆ ಸ್ವಾಭಾವಿಕವಾಗಿಯೇ ಸ್ತ್ರೀ-ಪುರುಷರ ಸ್ವಭಾವದ ನಡುವಣ ವ್ಯತ್ಯಾಸದಿಂದಾಗಿ ಅವರ ಹಕ್ಕುಗಳು ಹಾಗೂ ಕೆಲಸದಲ್ಲಿ ತಾರತಮ್ಯ ಮಾಡುವುದನ್ನು ಸಮರ್ಥನೀಯ" ಎಂದೂ ಹೇಳಿದ.

ಫ್ರೆಂಚ್ ಕ್ರಾಂತಿಯಲ್ಲಿ ಕಂಡು ಬಂದಂತ ಅಮೇರಿಕಾದ ಸ್ವಾತಂತ್ರ್ಯ ಘೋಷಣೆಯಲ್ಲೂ ಸ್ವಾತಂತ್ರ್ಯಗಳು ಪುರುಷರಿಗಷ್ಟೇ ಸಂಬಂಧಿಸಿರುವ ಭಾವನೆಯು ಬೇರೂರಿದೆ. ಅಮೇರಿಕಾದ ಸ್ವಾತಂತ್ರ್ಯ ಘೋಷಣೆ ನೀಡಿದ ಹಕ್ಕುಗಳನ್ನು ಸಂಪತ್ತನ್ನು ಹೊಂದಿರದ ಪುರುಷರಿಗೆ ಮಹಿಳೆಯರಿಗೆ ಹಾಗೂ ಗುಲಾಮರಿಗೆ ನಿರಾಕರಿಸಲಾಯಿತು.

ಅಮೇರಿಕಾ ಸ್ವಾತಂತ್ರ್ಯ ಘೋಷಣೆಯ ಮುಖ್ಯ ತಿರುಳು, "ಎಲ್ಲಾ ಮಾನವರನ್ನು ಸಮಾನವಾಗಿ ಸೃಷ್ಟಿಸಲಾಗಿದೆ ಎಂಬುದಾಗಿತ್ತು. ಇದನ್ನು ಸಿದ್ಧಪಡಿಸಿದವರಲ್ಲಿ ಒಬ್ಬರಾದ ಜಾನ್ ಅದಂ ಎಂಬುವರಿಗೆ ಅವರ ಪತ್ನಿ ಮಹಿಳೆಯರನ್ನು ಮರೆಯಬೇಡಿರಿ" ಎಂದು ಎಚ್ಚರಿಸಿದ್ದಳೆಂಬುದು ಗಮನ ಸೆಳೆಯುವ ಸಂಗತಿಯಾಗಿದೆ. ಆಕೆ ಮುಂದುವರೆದು, "ನಮ್ಮ ದನಿಗೆ ಜಾಗವಿಲ್ಲದ, ನಮಗೆ ಪ್ರಾತಿನಿಧ್ಯವಿಲ್ಲದ ಕಾನೂನುಗಳನ್ನು ನಾವು ಪಾಲಿಸಬೇಕಿಲ್ಲ" ಎಂದು ಕೆಣಕಿದ್ದಳು. ಮಹಿಳೆಯರ ಹಕ್ಕುಗಳಿಗಾಗಿ ದನಿ ಎತ್ತಿದ ಪತ್ನಿಯ ಆಗ್ರಹ ಕಂಡು ಆಶ್ಚರ್ಯಪಟ್ಟ ಜಾನ್ ಅದಂ.

"ನಮ್ಮ ಹೋರಾಟದಿಂದ ಸರ್ಕಾರದ ಹಿಡಿತ ಎಲ್ಲೆಲ್ಲೂ ಸಡಿಲವಾಗಿದೆಯೆಂದು, ಮಕ್ಕಳು ಮತ್ತು ತರಬೇತಿ ಶಿಬಿರಾರ್ಥಿಗಳು ಅವಿಧೇಯರಾಗಿರುವರೆಂದು, ಕಾಲೇಜುಗಳಲ್ಲಿ ತುಮುಲ ಅಶಾಂತಿಯು ಕಾಣಿಸಿಕೊಳ್ಳುತ್ತಿದೆಯೆಂದು, ರೆಡ್ ಇಂಡಿಯನ್ನರು ತಮ್ಮ ಒಡೆಯರನ್ನು ಧಿಕ್ಕರಿಸುತ್ತಿದ್ದಾರೆಂದು ನಮಗೆ ವರದಿಗಳು ಬರುತ್ತಿವೆ. ಈಗ ಬಂದಿರುವ ನಿನ್ನ ಪತ್ರದಿಂದ, ಈ ಎಲ್ಲರಿಗಿಂತ ಹೆಚ್ಚು ಸಂಖ್ಯೆಯಲ್ಲಿರುವ ಮತ್ತು ಶಕ್ತಿಶಾಲಿಯಾಗಿರುವಂತ ಒಂದು ಸಮುದಾಯದಲ್ಲೂ ಅತೃಪ್ತಿ ಆಳವಾಗಿ ಬೇರೂರಿದೆ ಎಂಬುದು ಮೊಟ್ಟ ಮೊದಲ ಬಾರಿಗೆ ತಿಳಿದು ಬರುತ್ತಿದೆ" ಎಂದು ಪ್ರತಿಕ್ರಿಯಿಸಿದ.

ಮಹಿಳೆಯು ಇಂದಿಗೂ "ಪೂರ್ವಾಗ್ರಹದಿಂದ ಕೂಡಿದ ನಡತೆಗೆ ಹಾಗೂ ವಾತಾವರಣಕ್ಕೆ" ಬಲಿ ಪಶುಗಳಾಗಿ, ದಮನಿತರಾಗಿದ್ದಾರೆ ಎಂಬುದನ್ನು ನೋಡಿದರೆ ಅತ್ಯಂತ ವಿಷಾದವಾಗುತ್ತದೆ.

ವಿಶ್ವಸಂಸ್ಥೆಯ ಶಾಸನ (Charter)ದಲ್ಲಿ ಅದನ್ನು ಅಂಗೀಕರಿಸುವಾಗ ಸ್ತ್ರೀ ಪುರುಷರಿಗೆ ಸಮಾನ ಹಕ್ಕು ಎಂಬ ಪದಪುಂಜವೂ ಇರಲಿಲ್ಲ; ಲಿಂಗದ ಆಧಾರದಲ್ಲಿ ತಾರತಮ್ಯವನ್ನು ಪ್ರತಿಬಂಧಿಸುವ ಪ್ಯಾರ ಕೂಡ ಇರಲಿಲ್ಲ ಎಂಬುದು ಗಮನಾರ್ಹ. ಆದರೆ ಈ ಸಭೆಯಲ್ಲಿ ಭಾಗವಹಿಸಿದ್ದ ಮಹಿಳೆಯರು ಇದನ್ನು ಬಲವಾಗಿ ವಿರೋಧಿಸಿದ್ದರಿಂದಲೇ, ಲಿಂಗ ತಾರತಮ್ಯವಿಲ್ಲದೇ ಎಲ್ಲಾ ಮನುಷ್ಯರ ಹಕ್ಕುಗಳನ್ನು ವಿಶ್ವ ಸಂಸ್ಥೆಯ ಶಾಸನ ರಕ್ಷಿಸಬೇಕೆಂದು ಒತ್ತಾಯಿಸಿದರು. ಈ ಮಹಾನ್ ಧ್ಯೇಯವನ್ನು ಸಾಧಿಸಿದವರು ವಿಶ್ವಸಂಸ್ಥೆಯ ಶಾಸನ ಸಭೆಯಲ್ಲಿ ಹಾಜರಿದ್ದ ಮಹಿಳಾ ಪ್ರತಿನಿಧಿಗಳು. ಅವರ ಅಪಾರ ಕಾರ್ಯಶೀಲತೆಯಿಂದಾಗಿ ಅಂತರರಾಷ್ಟ್ರೀಯ ಮಟ್ಟದ ಒಂದು ಶಾಸನದಲ್ಲಿ ಸ್ತ್ರೀ-ಪುರುಷರ ನಡುವೆ ಸಮಾನತೆಯನ್ನು ಎತ್ತಿಹಿಡಿದಿರುವುದು ದಾಖಲಾಗಿರುವುದನ್ನು ನಾವಿಂದು ಕಾಣುತ್ತಿದ್ದೇವೆ. ಇದು ಲಿಂಗನ್ಯಾಯದ ಬಗೆಗಿನ ಈ ದಾಖಲೆ ಮನುಷ್ಯ ಇತಿಹಾಸದಲ್ಲೇ ಅಪೂರ್ವವಾದುದು. ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ ಸಂದರ್ಭದಲ್ಲೂ ಮಹಿಳಾ ಪ್ರತಿನಿಧಿಗಳು ಪ್ರತಿಭಟಿಸಿದ್ದರಿಂದ ಅದು ಪುರುಷ ಕೇಂದ್ರಿತವಾಗುಳಿಯದೆ "ಎಲ್ಲಾ ಮನುಷ್ಯರು ಸಹೋದರರು" ಎಂಬಂಥ ಪುರುಷವಾಚಕಗಳನ್ನು ಲಿಂಗ ಸೂಕ್ಷ್ಮತೆ ದೃಷ್ಟಿಕೋನದಿಂದ ಬದಲಾಯಿಸಿ ಅಳವಡಿಸಿಕೊಳ್ಳಲಾಯಿತು. 1995ರ ಬೀಜಿಂಗ್ ಸಮಾವೇಶವು "ಮಹಿಳೆಯರ ಹಕ್ಕುಗಳು ಮಾನವ ಹಕ್ಕುಗಳು" ಎಂಬ ಐತಿಹಾಸಿಕ ಘೋಷಣೆಯನ್ನು ಪ್ರಕಟಿಸಿದ ಬಳಿಕ ಮಾನವ ಹಕ್ಕುಗಳಿಗಾಗಿ ಹಾಗೂ ಮಹಿಳಾ ಸಶಕ್ತತೆಗಾಗಿ ನಡೆದ ಹೋರಾಟವು ನಿರ್ಣಾಯಕ ಹಾಗೂ ಹಿಂದೂಡಲಾಗದ ಘಟ್ಟ ತಲುಪಿತು.

"ಮಹಿಳಾ ಹಕ್ಕುಗಳು ಮಾನವ ಹಕ್ಕುಗಳು" ಎಂಬ ಹೇಳಿಕೆಯು ತನ್ನ ಅರ್ಥವ್ಯಾಪ್ತಿಯೊಳಗೆ ಕೇವಲ, ನಾಗರೀಕ ಹಾಗೂ ರಾಜಕೀಯ ಹಕ್ಕುಗಳನ್ನಷ್ಟೇ ಒಳಗೊಂಡಿರದೆ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಕ್ಕುಗಳನ್ನು ಒಳಗೊಂಡಿದೆ. ಎಲ್ಲಾ ಮಾನವಹಕ್ಕುಗಳನ್ನೂ ವಿಶೇಷವಾಗಿ ಪ್ರಸ್ತಾಪಿಸುವ ವಿಶಾಲ ವ್ಯಾಖ್ಯೆಯು ಇನ್ನೂ ಈಡೇರಬೇಕಾಗಿದೆ. ಮುಂದುವರೆದ ರಾಷ್ಟ್ರಗಳಲ್ಲಿ ಮಾನವ ಹಕ್ಕುಗಳಿಗಾಗಿ ದನಿ ಎತ್ತಿರುವ ಬಹುತೇಕ ತಥಾಕಥಿತ ಹೋರಾಟಗಾರರೂ ಈ ವಿಶಾಲ ವ್ಯಾಖ್ಯೆಯನ್ನು ಒಪ್ಪುವ ಮಟ್ಟಕ್ಕೆ ಬಂದಿಲ್ಲ. ನಾಗರೀಕ ಹಾಗೂ ರಾಜಕೀಯ ಹಕ್ಕುಗಳ ವ್ಯಾಪಕತೆಯನ್ನು ವಿಸ್ತರಿಸಲು ತೋರಲಾದ ಹಿಂಜರಿತವು ರೋಮ್‌ನಲ್ಲಿ ನಡೆದ ವಿಶ್ವ ಆಹಾರ ಸಮಿತಿಯ ಘೋಷಣೆಯಲ್ಲಿ ಎದ್ದು ಕಂಡಿತು. ಅಲ್ಲಿ ಕೆಲವು ಮುಂದುವರೆದ ದೇಶಗಳು ಅಗತ್ಯ ಪ್ರಮಾಣದಲ್ಲಿ ಆಹಾರ ಪಡೆಯುವುದು ಅಥವಾ ಹಸಿವಿನಿಂದ ಮುಕ್ತವಾಗುವುದು ಮೂಲಭೂತ ಹಕ್ಕು ಎಂದು ಘೋಷಿಸುವುದನ್ನು ಪ್ರತಿರೋಧಿಸಿದವು. ಹಸಿವಿನಿಂದ ಮುಕ್ತವಾಗುವ ಹಕ್ಕು ಹೊಂದುವುದು ಒಂದು ಧ್ಯೇಯ; ಇದನ್ನು ನಿಧಾನವಾಗಿ ಸಾಧಿಸಬಹುದೇ ಹೊರತು, ಇಂತಿಷ್ಟೇ ಸಮಯದಲ್ಲಿ ಇದನ್ನು ಜಾರಿಯಲ್ಲಿ ತರುವ ನಿರ್ಬಂಧವನ್ನು ಅಂತರರಾಷ್ಟ್ರೀಯ ಸಮುದಾಯದ ಸದಸ್ಯರ ಮೇಲೆ ಹೇರಲಾಗದೆಂದು ಅವು ಮತ್ತೆ ಮತ್ತೆ ವಾದಿಸಿದವು. ಇದು ಹೃದಯ ಹೀನವಾದುದು. 800 ಮಿಲಿಯನ್‌ಗಿನ್ನಾ ಹೆಚ್ಚು ಮಂದಿ ಬಡತನದ ರೇಖೆಗಿಂತಾ ಕೆಳಗೆ ಬದುಕುತ್ತಿರುವಾಗ ಹೀಗೆ ವಾದಿಸುವುದು ಮುಂದುವರೆದ ರಾಷ್ಟ್ರಗಳ ಹೃದಯ ಶೂನ್ಯತೆಯನ್ನು ಬಯಲಿಗಿಡುತ್ತದೆ. ಬಡತನಕ್ಕೆ ವಿಶ್ವಾದ್ಯಂತ ಬರಗಾಲದ ಮುಖವೂ ಅಂಟಿದೆ. "ಇಡೀ ಪ್ರಪಂಚಕ್ಕೆ ಅನ್ನದಾತರೆಂದು ಉಣಿಸುವವರು ಮಹಿಳೆಯರೇ" ಎಂಬ ಹೃದಯಾಂತರಾಳದ ಅಭಿಪ್ರಾಯ ಸಾರ್ವತ್ರಿಕವಾಗಿದೆ.

ಬೀಜಿಂಗ್‌ನಲ್ಲಿ ಮಾಡಲಾದ ಮಹಿಳಾ ಹಕ್ಕುಗಳು ಮಾನವ ಹಕ್ಕುಗಳು ಎಂಬ ಘೋಷಣೆ ಮಹಿಳೆಯರ ಏಳ್ಗೆಯ ದೃಷ್ಟಿಯಿಂದ ಮಾನವ ಕುಲದ ಚರಿತ್ರೆಯಲ್ಲೇ ಅತಿ ಮುಖ್ಯವಾದ ಕ್ರಾಂತಿಕಾರಿಯಾದುದು. ವಂಚಿತಗೊಂಡ ಮಾನವತೆಗೇ ಈ ಘೋಷಣೆಯು ಏಳ್ಗೆಯ ಹಾಗೂ ಸಶಕ್ತತೆಯ ಚೈತನ್ಯವನ್ನು ನೀಡಿದೆ. ಈ ಹಕ್ಕುಗಳನ್ನು ಮಹಿಳೆಯರಿಗೆ ಒದಗಿಸುವುದರಿಂದ ಮಹಿಳೆಯರನ್ನಷ್ಟೇ ಸಶಕ್ತಗೊಳಿಸಿದಂತಾಗದೆ ಪ್ರತಿಯೊಬ್ಬರ ಮಾನವ ಹಕ್ಕುಗಳನ್ನು ಖಾತ್ರಿ ಪಡಿಸಿದಂತಾಗುತ್ತದೆ. ವಾಸ್ತವದಲ್ಲಿ, ರಾಜಕೀಯ ಹಕ್ಕು ಹಾಗೂ ಉದ್ಯೋಗದ ಹಕ್ಕಿನಂಥ ಪ್ರಮುಖ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಹಕ್ಕು ನಿರಾಕರಿಸುವುದೆಂದರೆ, ನೈಜ ಅಭಿವೃದ್ಧಿ ಸಾಧಿಸುವ ನಮ್ಮ ಪ್ರಯತ್ನಗಳನ್ನು ನಾವೇ ಹುಸಿಗೊಳಿಸಿದಂತಾಗುತ್ತದೆ. ಚರಿತ್ರೆಯಲ್ಲಿ ಮಹಿಳೆಯರಿಗೆ ಈ ಹಕ್ಕುಗಳನ್ನು ನಿರಾಕರಿಸಿದ್ದಕ್ಕಾಗಿ ಮಾನವ ಕುಲ ಈಗಾಗಲೇ ಅಪಾರ ಬೆಲೆ ತೆತ್ತಿದೆ. ಮಹಿಳೆಯರ ಸ್ಥಾನಮಾನವನ್ನು ಕೇಂದ್ರೀಕರಿಸಿ ಅಧ್ಯಯನ ಮಾಡಿ ವರದಿ ಮಂಡಿಸಿದ 1995ರ ಮಾನವ ಅಭಿವೃದ್ಧಿ ವರದಿ..." ಅನೇಕ ಆರ್ಥಿಕ ಹಾಗೂ ರಾಜಕೀಯ ಅವಕಾಶಗಳಿಂದ ಮಹಿಳೆಯರನ್ನು ದೂರವಿಡುತ್ತಾ ಹೋಗುವುದೆಂದರೆ ಆಧುನಿಕ ಪ್ರಗತಿಗೆ ಧಕ್ಕೆಯನ್ನುಂಟು ಮಾಡುತ್ತಾ ಹೋಗುವುದೆಂದೇ ಅರ್ಥ" ಎಂದು ಸರಿಯಾಗೇ ಗುರುತಿಸಿದೆ.

ಇಲ್ಲಿ ಮಹಾತ್ಮ ಗಾಂಧಿಯವರನ್ನು ಸ್ಮರಿಸುವುದು ಅತಿ ಮುಖ್ಯ ಏಕೆಂದರೆ ಆಧುನಿಕ ಸಿದ್ಧಾಂತ ನಿರೂಪಕರಿಗಿಂತ ಎಷ್ಟೋ ದಶಕಗಳ ಮುಂಚೆ ಮಹಿಳೆಯರಿಗೆ ದಕ್ಕಬೇಕಾದ ಸಮಾನ ಹಕ್ಕಿನ ಬಗ್ಗೆ ಅವರು ಮಾತನಾಡಿದ್ದಾರೆ.

"ಮಹಿಳೆಯರನ್ನು ಪುರುಷನ ಅರ್ಧಾಂಗಿ ಎಂದು ತಿಳಿಯಲಾಗಿದೆ. ಎಲ್ಲಿಯವರೆಗೆ ಆಕೆಗೆ ಕಾನೂನಿನಲ್ಲಿ ಪುರುಷನಷ್ಟೇ ಸಮಾನ ಹಕ್ಕು ದೊರಕುವುದಿಲ್ಲವೊ, ಎಲ್ಲಿಯವರೆಗೆ ಹುಡುಗಿಯು ಹುಟ್ಟಿದಾಗ ಹುಡುಗ ಹುಟ್ಟಿದಾಗ ಸಿಗುವಷ್ಟೇ ಪ್ರೀತಿ-ವಾತ್ಸಲ್ಯದ ಸ್ವಾಗತ ಸಿಗುವುದಿಲ್ಲವೋ ಅಲ್ಲಿಯವರೆಗೆ ಭಾರತದ ಸಮಾಜ ಪಾರ್ಶ್ವವಾಯು ತಗುಲಿ ರೋಗದಿಂದ ಬಳಲುತ್ತಿದೇ ಎಂದೇ ಅರ್ಥ. ಮಹಿಳೆಯರನ್ನು ಹತ್ತಿಕ್ಕುವುದೆಂದರೆ ಅಹಿಂಸೆಯನ್ನು ನಿರಾಕರಿಸಿದಂತೆ" ಎಂದು 1940ರಲ್ಲೇ ಬರೆದಿದ್ದರು.

ಮೂಲಭೂತ ರಾಜಕೀಯ ಹಕ್ಕನ್ನು ಪಡೆದುಕೊಳ್ಳಲು ಮಹಿಳೆಯರು ಅಪಾರ ಶ್ರಮವಹಿಸಿ ಹೋರಾಡಿದ್ದಾರೆ.

20ನೇ ಶತಮಾನವನ್ನು ಮಹಿಳೆಯರ ಶತಮಾನವೆಂದು, ಮತ ಚಲಾಯಿಸುವ ಹಕ್ಕನ್ನು ತಮಗೆ ಪಡೆದುಕೊಳ್ಳಲು ಹೋರಾಡಿದ ಶತಮಾನ ಎಂದು ಗುರುತಿಸಲಾಗಿದೆ. ಆದರೂ ಬಹಳಷ್ಟು ದೇಶಗಳಲ್ಲಿ ಮಹಿಳೆಯರಿಗೆ ಮತದಾನದ ಹಕ್ಕನ್ನು ಇಂದಿಗೂ ನಿರಾಕರಿಸಲಾಗಿದೆ.

ತಮ್ಮ ಶಾಸಕಾಂಗಗಳಲ್ಲಿ ಶೇ. 40ರಷ್ಟು ಪ್ರಾತಿನಿಧ್ಯವನ್ನು ಮಹಿಳೆಯರಿಗೆ ಒದಗಿಸಿರುವ ಸ್ಕ್ಯಾಂಡಿನೇವಿಯಾ ರಾಷ್ಟ್ರಗಳನ್ನು ಹೊರತು ಪಡಿಸಿದರೆ ಇತರ ರಾಷ್ಟ್ರಗಳ ಶಾಸಕಾಂಗಗಳಲ್ಲಿ ಅವರಿಗೆ ದೊರೆತಿರುವುದು ಕೇವಲ ಶೇ. 10ರ ಸರಾಸರಿ ಪ್ರಾತಿನಿಧ್ಯ. ಅತ್ಯಂತ ವಿಶಾಲವಾದ ರಾಜಕೀಯ ಕ್ಷೇತ್ರದಲ್ಲಿ ಇಷ್ಟೊಂದು ಕಡಿಮೆ ಪ್ರಮಾಣದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ದೊರೆತಿರುವುದು ಮಹಿಳಾ ಸಶಕ್ತತೆ ಚರಿತ್ರೆಯಲ್ಲಿ ಕಾಣುವ ಶೋಚನೀಯ ವಾಸ್ತವ. ಈ ಗತಿಯಲ್ಲಿ ಮಹಿಳೆಯರಿಗೆ ರಾಜಕೀಯದಲ್ಲಿ ಪುರುಷರಿಗೆ ಸರಿಸಮಾನವಾದ ಪಾಲನ್ನು ಒದಗಿಸಲು ಇದೇ ಗತಿಯಲ್ಲಿ ಪ್ರಯತ್ನಿಸಿದರೆ ಕನಿಷ್ಠ ಪಕ್ಷ ಇನ್ನೂ 5 ಶತಮಾನಗಳಷ್ಟು ದೀರ್ಘಕಾಲ ಬೇಕಾಗುವುದೆಂದು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ಬಹು ಎಚ್ಚರಿಕೆಯಿಂದ ನಡೆಸಿರುವ ಅಧ್ಯಯನವು ಎಚ್ಚರಿಸುತ್ತದೆ.

ನಮ್ಮ ದೇಶದ ಸಂಸತ್ತಿನಲ್ಲಿ ಮಹಿಳೆಯರ ಪ್ರಾತಿನಿಧ್ಯ ಶೇ. 9ನ್ನು ಮೀರಿಲ್ಲ. ಭಾರತದ ಮಹಿಳೆಯರು ತಮ್ಮ ಹಕ್ಕುಗಳಿಗಾಗಿ ನಿರಂತರವಾಗಿ ಹೋರಾಟ ನಡೆಸುತ್ತಾ ಬಂದಿದ್ದರೂ, ರಾಜ್ಯಗಳ ವಿದಾನ ಮಂಡಲಗಳಲ್ಲಿ ಅವರ ಸಂಖ್ಯೆ ಶೇ. 10ನ್ನು ದಾಟಿಲ್ಲ. ಸ್ವಾತಂತ್ರ್ಯಕ್ಕಾಗಿ ಹೋರಾಟ ಕೈಗೊಂಡ ಸಮಯದಲ್ಲೇ ಮಹಾತ್ಮಗಾಂಧೀಜಿಯವರು ಪ್ರಜ್ಞಾಪೂರ್ವಕವಾಗಿ ಮಹಿಳೆಯರ ಬೆಂಬಲವನ್ನು ಪಡೆದುಕೊಂಡರು. ಅವರು 1929ರಲ್ಲಿ "ಮಹಿಳೆಯರಿಗೆ ಮತದಾನದ ಹಕ್ಕು ಹಾಗೂ ಸಮಾನವಾದ ಕಾನೂನು ಬದ್ಧ ಮನ್ನಣೆ ದೊರಕುವಂತಾಗಬೇಕು" ಎಂದು ಹೇಳಿದ್ದರು. 1930ರಲ್ಲಿ ಎರಡನೇ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದ್ದ ಗಾಂಧೀಜಿಯವರನ್ನು ಭವಿಷ್ಯದಲ್ಲಿ ಭಾರತದ ಸಂಸತ್ತಿನಲ್ಲಿ ಮಹಿಳೆಯರಿಗೆ ಸಾಕಷ್ಟು ಪ್ರಾತಿನಿಧ್ಯ ಒದಗಿಸುವ ಅವಶ್ಯಕತೆಯ ಬಗ್ಗೆ ಪ್ರಶ್ನಿಸಲಾಯಿತು. ಆಗ ಅವರು ತಮ್ಮದೇ ಆದ ಧಾಟಿಯಲ್ಲಿ "ಭಾರತದ ಶಾಸಕಾಂಗದಲ್ಲಿ ಸೂಕ್ತ ಪ್ರಮಾಣದ ಪ್ರಾತಿನಿಧ್ಯವು ಮಹಿಳೆಯರಿಗೆ ದೊರಕದಿದ್ದರೆ ಅದನ್ನು ತಾವು ಬಹಿಷ್ಕರಿಸುವುದಾಗಿ ಉತ್ತರಿಸಿದರು". ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕನ್ನು ಮಾನ್ಯ ಮಾಡಿದ ಸಂವಿಧಾನ ಜಾರಿಗೊಳಿಸುತ್ತಲೆ ಮಹಿಳೆಯರಿಗೆ ಮತದಾನದ ಹಕ್ಕು ಒದಗಿಸಲಾದದ್ದು ಸುಪ್ರಸಿದ್ಧ ಸಂಗತಿ. ಮಹಿಳೆಯರಿಗೆ ದೊರೆತ ಈ ಹಕ್ಕು ಹಾಗೂ ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಚಳುವಳಿಯಲ್ಲಿ ಮಹಿಳೆಯರು ಭಾಗವಹಿಸಿದುದ್ದರ ಫಲಿತಾಂಶವಾಗಿದೆ. ಮಹಾತ್ಮ ಗಾಂಧೀಜಿ 1925ರಲ್ಲಿ "ಎಲ್ಲಿಯವರೆಗೆ ಭಾರತದ ಮಹಿಳೆಯರು ಸಾರ್ವಜನಿಕ ಜೀವನದಲ್ಲಿ ಭಾಗವಹಿಸುವಂತಾಗುವುದಿಲ್ಲವೋ ಅಲ್ಲಿಯವರೆಗೆ ಈ ದೇಶಕ್ಕೆ ವಿಮೋಚನೆ ದೊರಕದು" ಎಂದು ಹೇಳಿದರು. ಅವರು ಇನ್ನೂ ಮುಂದುವರೆದು, ಎಲ್ಲಿಯವರೆಗೆ ಮಹಿಳೆಯರು ಸಾರ್ವಜನಿಕ ಜೀವನದಲ್ಲಿ ಪಾಲುಗೊಂಡು ಅದನ್ನು ಶುಚಿಗೊಳಿಸುವುದಿಲ್ಲವೋ ಅಲ್ಲಿಯವರೆಗೆ ನಮಗೆ ಸ್ವರಾಜ್ಯ ಸಿಕ್ಕಲಿಕ್ಕಿಲ್ಲ, ಒಂದು ವೇಳೆ ಅದು ಸಿಕ್ಕರೂ, ಅಂಥ

ಸ್ವರಾಜ್ಯ ನನಗೆ ಬೇಡ. ಏಕೆಂದರೆ ಮಹಿಳೆಯರು ಸಂಪೂರ್ಣವಾಗಿ ಭಾಗಿಯಾಗದೆ ಪಡೆದ ಸ್ವರಾಜ್ಯದಲ್ಲಿ ನನಗ್ಯಾವ ಆಸಕ್ತಿಯೂ ಇಲ್ಲ.

ರಾಷ್ಟ್ರಕವಿ ರವೀಂದ್ರನಾಥ್ ಟ್ಯಾಗೋರ್ ಕೂಡ "ಚರಿತ್ರೆಯ ಭಾಗ ಈ ಹಂತದಲ್ಲಿ ನಾಗರೀಕತೆಯು ಬಹುತೇಕವಾಗಿ ಪುರುಷ ಪ್ರಧಾನವಾಗಿದೆ. ಅಧಿಕಾರದ ಈ ನಾಗರಿಕತೆಯಲ್ಲಿ ಮಹಿಳೆಯರನ್ನು ಅಂಚಿಗೆ ದೂಡಲಾಗಿದೆ..." ಎಂದು ವ್ಯಥೆ ಪಡುತ್ತಾ, "ಈಗ ಕಾಲ ಬಂದಿದೆ, ಮಹಿಳೆಯರು ಈ ನಾಗರಿಕತೆಯೊಳಗೆ ತಮ್ಮ ಛಾಪು ಮೂಡಿಸಬೇಕಾಗಿದೆ. ನಿರ್ದಯೆ ಹಾಗೂ ಅವ್ಯಾಹತ ಪೈಪೋಟಿ ಪ್ರಧಾನವಾದ ಈ ಅಧಿಕಾರ ಯುಗದಲ್ಲಿ ಮಹಿಳೆಯರು ತಮ್ಮ ಅಪೂಜ್ಯ ಜೀವ ಸಿಂಚನಗೈಯ್ಯಬೇಕಾಗಿದೆ", ಎಂದು ಆಶಿಸಿದರು.

ನಮ್ಮ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂ ಸಂಸತ್ತಿನ ಬಾಗಿಲನ್ನು ಮಹಿಳೆಯರಿಗೆ ತೆರೆದಿಡಬೇಕಾದ ಅವಶ್ಯಕತೆಯ ಬಗ್ಗೆ ಸತತವಾಗಿ ಹೇಳಿದರು. ಅವರು 1950ರಲ್ಲಿ ಸಂಸತ್ತಿನ ಪ್ರಥಮ ಸಾರ್ವತ್ರಿಕ ಚುನಾವಣೆ ನಡೆಯುವ ಮುನ್ನ ಮುಖ್ಯಮಂತ್ರಿಗಳಿಗೆ ಬರೆದ ಪತ್ರದಲ್ಲಿ, "ನಾವು ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಚುನಾಯಿತರಾಗುವಂತೆ ನೋಡಿಕೊಳ್ಳಬೇಕೆಂದು ಒತ್ತಿ ಹೇಳಿದರು. ಆದರೆ ಚುನಾವಣೆಯಲ್ಲಿ ಮಹಿಳಾ ಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಚುನಾಯಿತರಾಗದಿದ್ದಾಗ ಅವರು ಮುಖ್ಯ ಮಂತ್ರಿಗಳಿಗೆ ಬರೆದ ಪತ್ರದ ಒಕ್ಕಣೆ ಹೀಗಿದೆ.

"ಮಹಿಳೆಯರು ಅತಿ ಕಡಿಮೆ ಸಂಖ್ಯೆಯಲ್ಲಿ ಸಂಸತ್ತಿಗೆ ಚುನಾಯಿತರಾಗಿರುವುದನ್ನು ನೋಡಿ ನನಗೆ ವ್ಯಥೆಯಾಗಿದೆ. ಮಹಿಳೆಯರು ಸಂಸತ್ತಿನಲ್ಲಿ ಹೆಚ್ಚಿನ ಪ್ರಾತಿನಿಧ್ಯ ಪಡೆಯುವಂತೆ ನೋಡಿಕೊಳ್ಳುವುದೆಂದರೆ ಅವರಿಗೆ ಉಪಕಾರ ಮಾಡಿದಂತೇನೂ ಅಲ್ಲ; ಅವರಿಗೆ ನ್ಯಾಯ ಒದಗಿಸಿದಂತೇನೂ ಅಲ್ಲ. ಬದಲಾಗಿ ನಮ್ಮ ರಾಷ್ಟ್ರದ ಭವಿಷ್ಯ ಉತ್ತಮವಾಗಿ ನಿರ್ಮಾಣಗೊಳ್ಳಲು ಇದು ಸಾಧ್ಯವಾಗಲೇಬೇಕು. ಮಹಿಳೆಯರು ಸಾಕಷ್ಟು ಸಂಖ್ಯೆಯಲ್ಲಿ ಸಂಸತ್‌ಗೆ ಪ್ರವೇಶಿಸುವಂತಾಗುವುದರಿಂದ ಇಡೀ ರಾಷ್ಟ್ರ ಸರಿಯಾದ ದಿಕ್ಕಿನಲ್ಲಿ ಮುನ್ನಡೆಯುವುದು ಸಾಧ್ಯವಾಗುತ್ತದೆ. ಮಹಿಳೆಯರು ಸಾರ್ವಜನಿಕ ಜೀವನದಲ್ಲಿ ಪೂರ್ಣವಾಗಿ ಭಾಗಿಯಾದಾಗ ಮಾತ್ರ ಭಾರತ ನೈಜ ಹಾಗೂ ಪರಿಪೂರ್ಣ "ಅಭಿವೃದ್ಧಿಯನ್ನು ಸಾಧಿಸಲು ಯೋಗ್ಯವಾಗುತ್ತದೆ ಎಂಬುದು ನನ್ನ ಧೃಡ ನಿಲುವಾಗಿದೆ. ಮಹಿಳೆಯರಿಗೆ ಅವಕಾಶಗಳು ಲಭ್ಯವಾದಾಗ ಅವರು ಪುರುಷರಿಗಿಂತ ಹೆಚ್ಚು ಸಮರ್ಥವಾಗಿ ಸಾಧನೆ ಗೈದಿದ್ದಾರೆ ಎಂದರೆ ಅತಿಶಯೋಕ್ತಿಯಾಗದು. ಭಾರತದ ಭವಿಷ್ಯವು ಬಹುತೇಕವಾಗಿ ಪುರುಷರ ಮೇಲೆ ಅವಲಂಬಿಸಿರುವುದಕ್ಕಿಂತ ಮಹಿಳೆಯರ ಅಪೂರ್ವ ಕೊಡುಗೆಯನ್ನು ಅವಲಂಬಿಸಿದೆ".

ತಳಮಟ್ಟದಲ್ಲಿ ಜನ ಪ್ರತಿನಿಧಿಗಳನ್ನು ಚುನಾಯಿಸುವ ಪ್ರಜಾಸತ್ತಾತ್ಮಕ ಸಂಸ್ಥೆಗಳಾದ ಪಂಚಾಯತಿ ಪುರ/ನಗರ ಸಭೆಗಳಲ್ಲಿ ಈಗ ಮಹಿಳೆಯರಿಗೆ ಶೇ. 33ರಷ್ಟು ಸ್ಥಾನಗಳನ್ನು ಮೀಸಲಿರಿಸಲಾಗಿದೆ. ಇದೊಂದು ಅತ್ಯಂತ ಸಮಾಧಾನಕರ ಅಂಶ. ಈ ಸಂಸ್ಥೆಗಳ ಮೂಲಕ ಸರಿಸುಮಾರು 10,00,000 ಜನ ಮಹಿಳೆಯರು ಜನರಿಂದ ಚುನಾಯಿತರಾಗಿ ಸಾರ್ವಜನಿಕ ಜೀವನದಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದಾರೆ. ಗ್ರಾಮೀಣ ಹಾಗೂ ಪಟ್ಟಣ ನಗರಗಳ ಮಹಿಳೆಯರು ಹೀಗೆ ಸಾರ್ವಜನಿಕ ಬದುಕಿಗೆ ಬಂದು, ತಮ್ಮ ಕೊಡುಗೆಯನ್ನು ನೀಡುತ್ತಿರುವುದು ಮಹಿಳಾ ಸಶಕ್ತತೆಗೆ ಅಪೂರ್ವ ಮಹತ್ವವನ್ನು ತಂದುಕೊಟ್ಟಿದೆ. ಪಂಚಾಯಿತಿಯಲ್ಲಿ ಕಂಡುಬಂದಿರುವ ಈ ಬೆಳವಣಿಗೆಯಿಂದಾಗಿ ನಮ್ಮ ಸಮುದಾಯಕ ಜೀವನದಲ್ಲಿ ಶಿಕ್ಷಣ, ಆರೋಗ್ಯ, ಶೌಚಾಲಯ ಹಾಗೂ ನಿರ್ಮಲ ಪರಿಸರ ಮುಂತಾದ ಕ್ಷೇತ್ರಗಳಿಗೆ ಅಪಾರ ಪ್ರಯೋಜನ ಲಭಿಸಿದೆ. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಸಾರ್ವಜನಿಕ ಜೀವನದಲ್ಲಿ ಭಾಗಿಯಾಗಿದ್ದರಿಂದಾಗಿ ಸಮಾಜದಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಚಟುವಟಿಕೆಗಳಿಗೆ ಹೆಚ್ಚಿನ ಮಹತ್ವ ಬಂದಿದೆ ಎಂಬುದು ಹಲವು ಅಧ್ಯಯನಗಳಿಂದ ಬೆಳಕಿಗೆ ಬಂದಿದೆ.

ಹಳ್ಳಿಗಾಡಿನ ಹಾಗೂ ಪಟ್ಟಣ/ನಗರ ಪ್ರದೇಶಗಳ ಮಹಿಳೆಯರು ತಮ್ಮ ಪಾಲ್ಗೊಳ್ಳುವಿಕೆಯಿಂದ ಇಂಥ

ಮಹತ್ವದ ಕೆಲಸಗಳಿಗೆ ದಾರಿ ದೀಪವಾಗಿರುವಾಗ, ಸಂಸತ್ತು ಮತ್ತು ವಿಧಾನ ಸಭೆಗಳಲ್ಲಿ ಶೇ. 33ರಷ್ಟು ಸ್ಥಾನಗಳನ್ನು ಇವರಿಗೆ ಕಾಯ್ದಿರಿಸುವ ಮಸೂದೆಯನ್ನು ಒಪ್ಪಿಕೊಳ್ಳಲು ನಾವೇಕೆ ಹಿಂಜರಿಯುತ್ತಿದ್ದೇವೆ? ಸಕ್ರಿಯವಾಗಿ ಭಾಗವಹಿಸುವ ಅವಕಾಶವನ್ನು ಮಹಿಳೆಯರಿಗೆ ಒದಗಿಸುವ ಮೂಲಕ ನಾವು ಮತ್ತೊಮ್ಮೆ ವಿಶ್ವಕ್ಕೆ ಮಾದರಿಯಾಗಿ ನಿಲ್ಲಬೇಕಾಗಿದೆ. ಈ ಪ್ರಯತ್ನದಲ್ಲಿ ನಾವು ಯಶಸ್ವಿಯಾಗುತ್ತೇವೆಂಬ ವಿಶ್ವಾಸ ನನಗಿದೆ. ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಗಳಲ್ಲಿ ಮಹಿಳೆಯರಿಗೆ ಶೇ. 33ರಷ್ಟು ಸ್ಥಾನಗಳನ್ನು ಕಾಯ್ದಿರಿಸುವುದಕ್ಕೆ ಬದ್ಧರಾಗಿರುವುದಾಗಿ, ಸ್ಪಷ್ಟಪಡಿಸಿರುವುದು ಸ್ವಾಗತಾರ್ಹ ಬೆಳವಣಿಗೆ. ಈ ದಿಸೆಯಲ್ಲಿ ನಾವು ಪ್ರಾಮಾಣಿಕವಾಗಿ ಮುನ್ನಡೆಯುತ್ತೇವೆಂಬ ಭರವಸೆ ನನಗಿದೆ.

ಪ್ರಾತಿನಿಧ್ಯ ಒದಗಿಸುವುದೂ ಸೇರಿದಂತೆ, ಮಹಿಳೆಯರಿಗೆ ಹಲವಾರು ಅವಕಾಶಗಳನ್ನು ತೆರೆದಿಡುವ ಹಿನ್ನೆಲೆಯಲ್ಲಿ "ಮಹಿಳೆಯರಿಗಾಗಿ ರಾಷ್ಟ್ರೀಯ ದೃಷ್ಟಿ ಕೋನಯೋಜನೆ"ಯನ್ನು 1988ರಲ್ಲಿ ರೂಪಿಸಲಾಗಿದ್ದು, ಇದರಲ್ಲಿ ಈ ಕುರಿತು ಹಲವಾರು ಸಲಹೆಗಳಿವೆ. ಈ ಯೋಜನೆಯಲ್ಲಿನ ವಿವರಗಳನ್ನು ಚರ್ಚಿಸುವಾಗ, 1946ರಲ್ಲಿ ಪ್ರಾರ್ಥನಾ ಸಭೆ ಬಳಿಕ ಒಮ್ಮೆ ಮಹಾತ್ಮ ಗಾಂಧೀಜಿ ಆಡಿದ ಮಾತುಗಳನ್ನು ನೆನಪಿಸಿಕೊಳ್ಳುವುದು ಸೂಕ್ತ, ಪ್ರಪಂಚದ ಅತಿ ದೊಡ್ಡ ಮಹಿಳಾಪರ ಚಿಂತಕರಾಗಿದ್ದ ಮಹಾತ್ಮ ಗಾಂಧೀಜಿ ಆಗ ಮಹಿಳೆಯರನ್ನು ಚುನಾವಣೆಯಲ್ಲಿ ಅಭ್ಯರ್ಥಿಯಾಗಿಸಲು ರಾಜಕೀಯ ಪಕ್ಷಗಳು ತೋರುತ್ತಿದ್ದ ನಿರಾಸಕ್ತಿಯನ್ನು ಕುರಿತು ಹೀಗೆ ಪ್ರತಿಕ್ರಿಯಿಸಿದರು.

"ಮಹಿಳೆಯರ ವಿಚಾರ ಬಂದಾಗ ಸಮಾನತೆ ಒದಗಿಸುವ ಹುಸಿ ಘೋಷಣೆ ಕೂಗುವುದು ನನ್ನ ಶೈಲಿಯಲ್ಲ. ಈ ನಿಟ್ಟಿನಲ್ಲಿ ನಾವು ಖಚಿತ ನಿಲುವು ತಾಳುವುದು ಇಂದಿನ ಅಗತ್ಯ. ನಮ್ಮ ಸಮಾಜದಲ್ಲಿ ಸಾಮಾನ್ಯವಾಗಿ ತುಚ್ಛೀಕರಿಸಲ್ಪಟ್ಟಿರುವ ಮಹಿಳೆಯರಿಗೆ ವಿಶೇಷ ಸ್ಥಾನಮಾನ ಒದಗಿಸಬೇಕು. ಈ ದಿಕ್ಕಿನಲ್ಲಿ ನಾವು ಹೆಜ್ಜೆ ಹಾಕಬೇಕು. ಇದರಿಂದಾಗಿ ಪುರುಷರಿಗೆ ಸಿಕ್ಕುತ್ತಿದ್ದ ಅವಕಾಶಗಳು ಕಡಿಮೆಯಾದರೂ ಅಡ್ಡಿಯಿಲ್ಲ; ಮಹಿಳೆಯರೇ ಇರಲಿ ಅಥವಾ ಇನ್ನಾವುದೇ ಸಮುದಾಯವಿರಲಿ. ಪೋಷಕ ವೃತ್ತಿಯನ್ನು ನಿರಾಕರಿಸಬೇಕು. ನಾವು ಪಡೆದುಕೊಳ್ಳಬೇಕಾಗಿರುವುದು ದಯೆ, ಅನುಕಂಪ, ಕರುಣೆಗಳಲ್ಲ. ನಾವು ನ್ಯಾಯಕ್ಕಾಗಿ ಆಗ್ರಹ ಪಡಿಸಬೇಕು. ಈ ಪ್ರಕ್ರಿಯೆಯಲ್ಲಿ ಪುರುಷರು ಪಾಲುಗೊಂಡರೆ, ಅವರು ಮಹಿಳೆಯರಿಗೆ ಉಪಕಾರ ಮಾಡಿದಂತೇನೂ ಆಗುವುದಿಲ್ಲ. ತಡವಾಗಿಯಾದರೂ ನ್ಯಾಯ ಸಿಗುವುದಕ್ಕೆ ನೆರವಾದ ಕರ್ತವ್ಯ ನಿರ್ವಹಿಸಿದಂತಾಗುತ್ತದೆ ಅಷ್ಟೇ".

ಮಹಿಳಾ ಸಶಕ್ತತೆಯೆಂಬುದು ಬರೀ ರಾಜಕೀಯಕ್ಕೆ ಸೀಮಿತವಾಗಿಲ್ಲ. ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ವಿಚಾರಗಳನ್ನು ಅದು ಒಳಗೊಂಡಿದೆ. ಮಹಿಳೆಯರು ತಮ್ಮ ಸಾಮಾಜಿಕ ಆರ್ಥಿಕ ಹಕ್ಕುಗಳನ್ನು ಪಡೆದುಕೊಳ್ಳಲು ರಾಜಕೀಯ ಸಶಕ್ತತೆಯು ಸಂಪೂರ್ಣ ಅವಕಾಶಗಳನ್ನು ಒದಗಿಸುತ್ತದೆ ಎಂಬುದೂ ನಿಜ. ಮಾನವಹಕ್ಕುಗಳ ಪ್ರಧಾನ ಭಾಗವಿದು. ನಾಗರೀಕತೆಯನ್ನು ರೂಪಿಸುವಲ್ಲಿ ಮಹಿಳೆಯರ ಅದ್ಭುತವಾದ ಕೊಡುಗೆಯನ್ನು



ಕಲಾಕೃತಿ : ಅಲಗನಾಥನ್ ಟಿ.

ನಿರ್ಲಕ್ಷಿಸಲಾಗಿದೆ ಎಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ಮಹಿಳೆಯರಿಗೆ ಮಾನವ ಹಕ್ಕುಗಳನ್ನು ಖಾತ್ರಿಪಡಿಸುವ ಜೊತೆಗೆ ಅವರು ಸಮಾನ ಅವಕಾಶಗಳನ್ನು ಪಡೆದುಕೊಳ್ಳುವಂತಾಗುವ ವಾತಾವರಣ ನಿರ್ಮಾಣವಾಗಬೇಕು. ಇದರಿಂದ ತಮ್ಮ ಕುಟುಂಬದ ಸುಸ್ಥಿತಿಗೆ ತಮ್ಮ ಸ್ವಾಭಿಮಾನದ ಬದುಕು ರೂಪಿಸಿಕೊಳ್ಳುವುದಕ್ಕೆ ಮಹಿಳೆಯರು ಸಶಕ್ತರಾಗುತ್ತಾರೆ. ಈ ಹಿನ್ನೆಲೆಯಲ್ಲಿ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿರುವ ಮಹಿಳೆಯರಿಗೆ ಒದಗಿಸುವ ನೆರವು, ಸಹಕಾರ ಮಹತ್ವ ಪಡೆಯುತ್ತದೆ. ಇದರಿಂದ ಮಹಿಳೆಯರು ಸಶಕ್ತರಾಗುವ ಪ್ರಕ್ರಿಯೆಗೆ ವಿಶೇಷ ಅರ್ಥ ಬರುತ್ತದೆ.

ಮಹಿಳೆ ಮತ್ತು ಪುರುಷರು ಸರಿಸಮಾನರು ಎಂಬುದು ಮೊದಲು ಮನೆಯಲ್ಲಿ ಪ್ರಾರಂಭವಾಗಬೇಕು. ಈ ಹಿನ್ನೆಲೆಯಲ್ಲಿ ಮಹಾತ್ಮ ಗಾಂಧೀಜಿಯವರು 1921ರಲ್ಲಿ ಶಾಲಾ ಮಕ್ಕಳಿಗಾಗಿ ಬರೆದಿರುವ ಮಹತ್ವದ ಪುಸ್ತಕವನ್ನು ಉಲ್ಲೇಖಿಸಲು ಬಯಸುತ್ತೇನೆ. ಗುಜರಾತಿನಲ್ಲಿ 'ಬಾಲ್‌ಪೋಕಿ' ಎಂದು ಕರೆಯುವ ಈ ಪುಸ್ತಕದಲ್ಲಿ, ಮಹಿಳೆ ಮತ್ತು ಪುರುಷರು ಮನೆಕೆಲಸವನ್ನು ಸಮನಾಗಿ ಮಾಡಬೇಕೆಂಬುದನ್ನು ಮಗ, ತಾಯಿ, ಮಗಳ ಸಂಭಾಷಣೆ ರೂಪದಲ್ಲಿ ನಿರೂಪಿಸಿದ್ದಾರೆ. ಆ ಪುಸ್ತಕದಲ್ಲಿನ ವಿಚಾರವು ಕುಟುಂಬದಲ್ಲಿ ವಿಷಮತೆಯನ್ನು ಉಂಟು ಮಾಡುತ್ತದೆಂದು ಕೆಲವರು ವಿರೋಧಿಸಿದರು. ಆ ಪುಸ್ತಕದಲ್ಲಿ ಬರುವ ಹುಡುಗಿ, ತನ್ನ ಶೈಕ್ಷಣಿಕ ಆಕಾಂಕ್ಷೆಯ ಜೊತೆಗೆ ತನ್ನ ಸಹೋದರನಂತೆ ಆಟೋಟದಲ್ಲಿ ಭಾಗವಹಿಸುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾಳೆ. ಆಗ ಮನೆ ಕೆಲಸದಲ್ಲಿ ಅಮ್ಮನಿಗೆ ಸಹಾಯ ಮಾಡುವಂತೆ ಆಕೆಯ ಸಹೋದರ ಬುದ್ಧಿ ಹೇಳಿದಾಗ ಆ ಹುಡುಗಿ ತನಗೆ ಓದುವ ಹಾಗೂ ಆಡುವ ಹಕ್ಕುಗಳಿವೆ ಎಂದು ತನ್ನ ಅಣ್ಣನೊಂದಿಗೆ ವಾದಿಸುತ್ತಾಳೆ. ಈ ವಾದವನ್ನು ಕೇಳಿಸಿಕೊಂಡ ಅಮ್ಮ ಮಗಳ ಸಹಾಯಕ್ಕೆ ಬರುತ್ತಾಳೆ; ಮಗನಿಗೆ ಅವನು ಮನೆ ಕೆಲಸದಲ್ಲಿ ಭಾಗವಹಿಸುವಂತೆ ತಿಳಿಹೇಳಿ, "ಈ ಮನೆ ನಿಮ್ಮಿಬ್ಬರಿಗೂ ಸೇರಿದ್ದು, ಈ ಮನೆಯ ಕೆಲಸ ನಿಮ್ಮಿಬ್ಬರದೂ ಜವಾಬ್ದಾರಿ" ಎನ್ನುತ್ತಾಳೆ.

ಗಾಂಧೀಜಿ ತಮ್ಮ ಕಾಲಮಾನಕ್ಕಿಂತ ತುಂಬಾ ಮುಂದಿದ್ದರು. ಇತ್ತೀಚಿನ ದಿನಗಳಲ್ಲಿ ನಾವು ಶಾಲಾ ಪಠ್ಯಗಳನ್ನು ಹೊಸದಾಗಿ ಬರೆಯುವ ಬಗ್ಗೆ ಮಾತುಕತೆಗಳಾಗುವುದನ್ನು ಕೇಳುತ್ತೇವೆ. ನಮ್ಮ ಶೈಕ್ಷಣಿಕ ಅಧಿಕಾರ ವರ್ಗ ಈ ಮೇಲಿನ ಪುಸ್ತಕವನ್ನು ನಮ್ಮ ಮಕ್ಕಳ ಪಠ್ಯಪುಸ್ತಕವನ್ನಾಗಿ ತರುವುದು ಸ್ವಾಗತಾರ್ಹ ವಿಚಾರವಾಗಿದೆ.

ಗಾಂಧೀಜಿಯವರು 1929ರಲ್ಲಿ ಮಹಿಳೆಯರು ಸಾರ್ವಜನಿಕ ಜೀವನದಲ್ಲಿ ಭಾಗವಹಿಸುವ ಅಗತ್ಯದ ಬಗ್ಗೆ ಬರೆದಿರುವುದನ್ನು ನೆನಪಿಸಬಯಸುತ್ತೇನೆ.

ಮಹಿಳೆ ಎಂದಿನಿಂದಲೂ ನೋವು ಸಹಿಸಿಕೊಳ್ಳುತ್ತಾ ಬಂದಿದ್ದಾಳೆ; ತ್ಯಾಗ ಮಾಡುತ್ತಾ ಬಂದಿದ್ದಾಳೆ. ಹೀಗಾಗಿ ಮಹಿಳೆಯ ಪಾಲ್ಗೊಳ್ಳುವಿಕೆಯಿಂದ ನಮ್ಮ ಸಾರ್ವಜನಿಕ ಜೀವನ ಶುದ್ಧಿಯಾಗುತ್ತದೆ; ಮಿತಿಯಿಲ್ಲದ ಮಹಾತ್ವಾಕಾಂಕ್ಷೆಗೆ ಮತ್ತು ಹಣ-ಆಸ್ತಿ-ಸಂಪಾದನೆಗೆ ಕಡಿವಾಣ ಬೀಳುತ್ತದೆ.

ಮಹಿಳಾ ಹಕ್ಕುಗಳ ಬಗ್ಗೆ ಹಾಗೂ ಅವರ ಸಾಮಾಜಿಕ ಪಾತ್ರದ ಬಗ್ಗೆ ಗಾಂಧೀಜಿ ಹೊಂದಿದ್ದ ದೃಷ್ಟಿಕೋನ ಇಂದಿಗೂ ಪ್ರಸ್ತುತವಾಗಿದೆ. ಆದರೆ ನಮ್ಮ ಆದರ್ಶಗಳಲ್ಲಿ ಹಾಗೂ ಅಭ್ಯಾಸಗಳಲ್ಲಿ ನಾವು ಬಹಳಷ್ಟು ಹಿನ್ನಡೆ ಸಾಧಿಸಿದ್ದೇವೆಂದು ನನಗನಿಸುತ್ತದೆ. ಉದಾಹರಣೆಗೆ, ಬ್ರಹ್ಮ ಸಮಾಜ ತಂದ ಸುಧಾರಣೆಯ ಪ್ರಭಾವದಿಂದಾಗಿ ಬ್ರಿಟೀಷರ ಕಾಲದಲ್ಲಿ 'ಸತಿ' ಪದ್ಧತಿಯನ್ನು ತೊಡೆದು ಹಾಕಲಾಗಿತ್ತು. ವಿಧವಾ ವಿವಾಹ, ವರದಕ್ಷಿಣೆಯ ಪದ್ಧತಿ ಮುಂತಾದವುಗಳ ಬಗ್ಗೆ ನಮ್ಮ ಆಲೋಚನೆ ಪ್ರಗತಿಪರವಾಗಿತ್ತು. ಆದರೆ ಇಂತಹ ಮಹತ್ವದ ವಿಚಾರಗಳಲ್ಲಿ ಇಂದು ನಾವು ಹಿಮ್ಮುಖವಾಗಿ ಹೆಜ್ಜೆ ಹಾಕುತ್ತಿರುವಂತಿದೆ. 'ಸತಿ' ಪದ್ಧತಿ ದೇಶದ ಕೆಲವು ಭಾಗದಲ್ಲಿ ಹೆಚ್ಚಾಗಿದೆ; ವರದಕ್ಷಿಣೆ ಪದ್ಧತಿ ಈ

ನವಸಮಾಜದ ಪ್ರಮುಖ ಸಮಸ್ಯೆಗಳಲ್ಲೊಂದಗಿದೆ. ಮಹಿಳೆಯರಿಗೆ ಕಿರುಕುಳ ನೀಡುವುದು, ಅವರನ್ನು ಕೆಟ್ಟದಾಗಿ ನಡೆಸಿಕೊಳ್ಳುವುದು, ಅವರ ಮೇಲೆ ದೌರ್ಜನ್ಯ ಎಸಗುವುದು ಮುಂತಾದ ಪ್ರಕರಣಗಳು ಮೊದಲಿಗಿಂತಾ ಎಷ್ಟೋ ಪಾಲು ಹೆಚ್ಚಾಗಿವೆ. ಅಂದು ಕೌರವರ ಆಸ್ಥಾನದಲ್ಲಿ ದ್ರೌಪದಿಯ ವಸ್ತ್ರಾಪಹರಣ ಹಾಗೂ ಅವಮಾನವಾದಂತೆ ಇಂದಿಗೂ ಕೂಡ ಮಹಿಳೆಯರ ಮೇಲೆ ಸಾರ್ವಜನಿಕವಾಗಿ ಹಲ್ಲೆ, ದೌರ್ಜನ್ಯ, ಮಾನಭಂಗ ಮುಂತಾದುವು ಮುಂದುವರೆದಿದೆ.

ಈಗ ಭಾರತದ ಪುರುಷರು ಗಂಭೀರವಾಗಿ ತಮ್ಮನ್ನು ಆತ್ಮಪರೀಕ್ಷೆಗೆ ಗುರಿಪಡಿಸಿಕೊಳ್ಳಬೇಕಾಗಿದೆ. ನಮ್ಮ ಸಮಾಜದಲ್ಲಿ ಹೀಗೆ ಬೆಳೆಯುತ್ತಿರುವ ಕಾಯಿಲೆ ಹಾಗೂ ಅವ್ಯವಸ್ಥೆಯನ್ನು ಸರಿಪಡಿಸಲು ಮುಂದಾಗಬೇಕಾಗಿದೆ. ಹೀಗೆ ಮಹಿಳೆಯರನ್ನು ಕೆಟ್ಟದಾಗಿ ನಡೆಸಿಕೊಳ್ಳುವುದು ಹಾಗೂ ವಂಚಿತ ಸಮುದಾಯವನ್ನು ಸ್ವಾರ್ಥಕ್ಕಾಗಿ ಬಳಸಿಕೊಳ್ಳುವುದು ಜ್ಞಾತ್ಯಾಧಾರಿತ ಹಾಗೂ ಬಂಡವಾಳ ಶಾಹಿಯಾಧಾರಿತವಾದ ನಮ್ಮ ಸಮಾಜದಲ್ಲಿ ನಿರಂತರವಾಗಿ ನಡೆದುಕೊಂಡು ಬಂದಿದೆ. ಇಂಥ ಪರಿಸ್ಥಿತಿಯಲ್ಲಿ ನಮ್ಮ ದೇಶದ ಬಡವರು, ಜನಸಾಮಾನ್ಯರು, ಮಹಿಳೆಯರು ವಿವಿಧ ಆಂದೋಲನಗಳ ನೇತಾರರಾಗಿ ತಮ್ಮ ಮೇಲಾಗುತ್ತಿರುವ ದೌರ್ಜನ್ಯವನ್ನು ಪ್ರತಿರೋಧಿಸಲು ಹಾಗೆಯೇ ಇಡೀ ಸಮಾಜವನ್ನು ಪರಿವರ್ತಿಸಲು ಪ್ರಯತ್ನಶೀಲರಾಗಿರುವುದು ಸಮಾಧಾನದ ಸಂಗತಿಯಾಗಿದೆ. ಪ್ರತಿಭಟನೆ, ಖಂಡನೆಯ ಕಾರ್ಯಕ್ರಮುಗಳೊಂದಿಗೆ ನಮ್ಮ ಜನ ನೀರಿನ ಬಳಕೆ, ಶೇಖರಣೆ ಹಾಗೂ ಅಭಿವೃದ್ಧಿಯಂಥ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ನವಸಮಾಜ ನಿರ್ಮಾಣದಲ್ಲಿ ಸಕ್ರಿಯರಾಗಬೇಕಾಗಿದೆ.

ಭಾರತದ ಮಹಿಳೆಯರು ಜಾಗೃತರಾದಾಗ ಶಕ್ತಿಯ ಕೇಂದ್ರವಾಗುತ್ತಾರೆ. ಆಗ ಅವರಿಂದ ಹೊರಹೊಮ್ಮುವ ಬೆಳಕು ಇಡೀ ಸಮಾಜಕ್ಕೆ ದಾರಿದೀಪವಾಗುತ್ತದೆ; ಸಮಾಜ ಪ್ರಗತಿ ಪರವಾಗಿ ಬದಲಾವಣೆ ಪಡೆಯುತ್ತದೆ.

ಈ ಶಕ್ತಿಯನ್ನು ಹುಟ್ಟು ಹಾಕುವುದು ಮತ್ತು ಅನುಭವಿಸುವುದು ಹೇಗೆ ಎಂಬುದನ್ನು ತೋರಿಸಿಕೊಟ್ಟವರಲ್ಲಿ ನ್ಯಾ. ಸುನಂದಾ ಭಂಡಾರೆ ಮೊದಲಿಗರು. ಅವರಿಗೆ ಗೌರವ ತರುವಂಥ ರೀತಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿರುವ ಸುನಂದ ಭಂಡಾರೆ ಫೌಂಡೇಶನ್‌ಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಧನ್ಯವಾದಗಳು. ಕೃಪೆ : ಮೈನ್‌ಸ್ಟ್ರೀಮ್

(ಭಾರತದ ಮಾಜಿ ರಾಷ್ಟ್ರಪತಿ ಕೆ.ಆರ್. ನಾರಾಯಣನ್‌ರವರು ನ್ಯಾಯಮೂರ್ತಿ ಸುನಂದಾ ಭಂಡಾರೆ ಸ್ಮಾರಕ ಫೌಂಡೇಶನ್ ಏರ್ಪಡಿಸಿದ್ದ ಸಮಾರಂಭದಲ್ಲಿ ಮಾಡಿದ ಭಾಷಣದ ಸಂಗ್ರಹಾನುವಾದ) ●

ಅಸ್ಪೃಶ್ಯತೆ ಸೃಷ್ಟಿಯ ಕಾರಣ ಅರಸುತ್ತಾ...

(19ನೇ ಪುಟದಿಂದ)

ಈ ಸಮಾಜದ್ರೋಹಿ ನಿಯಮುಗಳನ್ನಲ್ಲದೆ, ಕ್ರೂರ 'ನೀತಿಸಾರ'ವು ಶೂದ್ರರ ವಿವಾಹದಲ್ಲಿ ವೇದಮಂತ್ರ ಪಠನವನ್ನು ನಿಷೇಧಿಸಿತು. ಬೇರೆ ಬೇರೆ ಜಾತಿಯವರಿಗೆ ಬೇರೆ ಬೇರೆ ಸ್ಮಶಾನಗಳಿರಬೇಕೆಂದು ಕೌಟಿಲ್ಯನ 'ಅರ್ಥಶಾಸ್ತ್ರ' ಸಾರಿತು. ಇಷ್ಟೇ ಅಲ್ಲ ಬದುಕಿನ ಎಲ್ಲ ರಂಗಗಳಲ್ಲಿಯೂ ಈ ತಾರತಮ್ಯವನ್ನು ಮಾನದಂಡವಾಗಿಟ್ಟುಕೊಳ್ಳುವುದು ಆರಂಭವಾಯಿತು. ಅಂದರೆ ಬಿಳಿಯ ಅಕ್ಕಿ-ಬ್ರಾಹ್ಮಣ ಜಾತಿ, ಕೆಂಪು ಅಕ್ಕಿ-ಕ್ಷತ್ರಿಯ ಜಾತಿ, ಹಳದಿ ಅಕ್ಕಿ-ವೈಶ್ಯಜಾತಿ, ಕಪ್ಪು ಅಕ್ಕಿ-ಶೂದ್ರಜಾತಿಯೆಂದು ಹೇಳಲಾಗುತ್ತದೆ. ಇದೇ ರೀತಿ ಪಶು-ಪಕ್ಷಿ, ಮುತ್ತು-ರತ್ನಗಳ ವಿಷಯದಲ್ಲಿಯೂ ಚಾತುರ್ವರ್ಣನಿಷ್ಠ ವರ್ಗೀಕರಣ ಹೇಳಲಾಗುತ್ತದೆ.

'ಭಗವಂತ ಅಪ್ರತ್ಯಕ್ಷ ದೈವ, ಬ್ರಾಹ್ಮಣ ಪ್ರತ್ಯಕ್ಷ ದೈವ' ಎಂದು ಹೇಳುವ 'ವಿಷ್ಣು ಧರ್ಮ'ವು 'ಶೂದ್ರನು ದ್ವಿಜನಿಗೆ ಉದ್ಧಟತನ ತೋರಿದರೆ ಅವನ ನಾಲಗೆಯನ್ನು ಕತ್ತರಿಸಿ ಹಾಕಬೇಕು' ಎನ್ನುವುದೇ ಮೊದಲಾದ ನೂರಾರು ಅನ್ಯಾಯಗಳನ್ನು ಸ್ಮೃತಿಗಳು ಸಶಬ್ದವಾಗಿ ಸಾರುತ್ತವೆ. ಪ್ರತಿಯೊಂದು ಹಳ್ಳಿಯಲ್ಲಿ ಒಂದು ಅಸ್ಪೃಶ್ಯ ಕೇರಿ ಇರುವುದು, ಪ್ರತ್ಯೇಕ ಹೊಲೆಯರ ಬಾವಿಯಿದ್ದು, ಅದಕ್ಕೆ ಎಲುಬು ಕಟ್ಟುವುದು ಅಸ್ತಿತ್ವಕ್ಕೆ ಬಂದಿತು. ಗ್ರಾಮಸ್ಥರ ಎಂಜಲು ತಿನ್ನುವುದು, ಹೊಲಸು ಬಳಿಯುವುದು ಸಹಜವೆಂಬಂತೆ ರೂಢಿಗೆ ಬಂದಿತು. ಅಸ್ಪೃಶ್ಯನೊಬ್ಬನು ಮಧ್ಯಾಹ್ನ 1-00 ರಿಂದ 2-00 ಗಂಟೆಯ ಒಳಗೆ ಮಾತ್ರ ಊರಲ್ಲಿ ಪ್ರವೇಶಿಸಬಹುದು. ಕಾರಣ, ಅವನ ನೆರಳು ಅವನ ಕಾಲ ಕೆಳಗೆ ಬೀಳಬೇಕೆ ಹೊರತು, ಸವರ್ಣೀಯರ ಮೇಲೆ ಬೀಳಬಾರದು. ಉಗುಳುವುದಕ್ಕೆ ಕೊರಳಲ್ಲಿ ಮಣ್ಣಿನ ಮಡಕೆ ಮತ್ತು ದಾರಿಯಲ್ಲಿ ಮೂಡಿದ್ದ ತನ್ನ ಹೆಜ್ಜೆಗಳನ್ನು ಅಳಿಸಲು ಅವನು ಮರದ ಟೊಂಬೆಯನ್ನು ನಡಕ್ಕೆ ಕಟ್ಟಬೇಕಾಗಿತ್ತು. ಇದಲ್ಲದೆ ಕೈಯಲ್ಲೊಂದು ಗೆಜ್ಜೆಯ ಬಡಿಗೆ ಹಿಡಿದು, ಸದ್ದು ಮಾಡುತ್ತ ಊರನ್ನು ಪ್ರವೇಶಿಸಬೇಕಾಗಿತ್ತು. ಅವರ ಹೆಣ್ಣುಮಕ್ಕಳು ದೇವರ ಹೆಸರಿನಲ್ಲಿ ಶೋಷಣೆಗೆ ಒಳಗಾಗುವುದು ಅನಿವಾರ್ಯವಾಯಿತು. ಹೀಗೆ ಅಲ್ಪಸಂಖ್ಯೆಯ ಜನರ ಕೈಯಲ್ಲಿ ಬಹು ಜನಸಮಾಜ ನಲುಗಿ ಹೋಯಿತು.

3. ಅಸ್ಪೃಶ್ಯತೆಯ ನಿವಾರಣೆ : ಭಾರತದಲ್ಲಿ ಹೋರಾಟದ ಇತಿಹಾಸ

ಕ್ರಿ.ಶ. ಪೂ. ೬ ಮತ್ತು ೫ನೆಯ ಶತಮಾನದಲ್ಲಿ ಭಗವಾನ್ ಬುದ್ಧರು ಅಸಮಾನತೆಯ ವಿರುದ್ಧ ಸಿಡಿದೆದ್ದರು. ಅನೀತಿ, ಅಧರ್ಮ, ಮೂಢನಂಬಿಕೆ ಮಡುವಿನಲ್ಲಿ ಮುಳುಗಿದ್ದ ಬಹುಜನರನ್ನು ಬಡಿದೆಬ್ಬಿಸಿದರು. ವರ್ಣಾಶ್ರಮ ಸನಾತನವಾದದ್ದು, ಶಾಶ್ವತವಾದದ್ದು ಮತ್ತು ದೈವಸೃಷ್ಟಿಯೆಂಬ ನಂಬಿಕೆಗಳು ಬಲವಾಗಿ ಬೇರು ಬಿಡುತ್ತಿದ್ದ ಕಾಲದಲ್ಲಿ, ಭಗವಾನ್ ಬುದ್ಧರು ಹೇಳಿದ 'ಕಾರಣ ಮತ್ತು ಪರಿಣಾಮ' (Cause and Effect) ಸಿದ್ಧಾಂತವು ಬಲುದೊಡ್ಡ ಕ್ರಾಂತಿಯನ್ನೇ ಮಾಡಿತು, ವರ್ಣಾಶ್ರಮ ವ್ಯವಸ್ಥೆಯ ಬಲಿಪಶುಗಳ ಚಿಂತನೆಯನ್ನೇ ಬದಲಾಯಿಸಿಬಿಟ್ಟಿತು. ಜಗತ್ತಿನ ಯಾವುದೇ ಘಟನೆ ಆಕಸ್ಮಿಕವಲ್ಲ. ಪ್ರತಿಯೊಂದು ಘಟನೆಯ ಹಿಂದೆ ಒಂದು ಕಾರಣವಿದ್ದೇ ಇರುತ್ತದೆ. ವರ್ಣ ವ್ಯವಸ್ಥೆಯೆಂಬ ಪರಿಣಾಮದ ಹಿಂದೆ ಒಂದು ರೀತಿಯ ಹಿತಾಸಕ್ತಿಯ ಕಾರಣ ಇರಲೇಬೇಕು. ಈ ಪರಿಣಾಮವನ್ನು ಬದಲಿಸಲು, ವರ್ಣಾಶ್ರಮ ವ್ಯವಸ್ಥೆಯ ಬಲಿಪಶುಗಳು ವಿಭಿನ್ನವಾದ ಕಾರಣಗಳನ್ನು ಸೃಷ್ಟಿಸಿದರೆ, ಮುಂದೆ ವಿಭಿನ್ನವಾದ ಪರಿಣಾಮಗಳು ಬಂದೇ ಬರುತ್ತವೆ. ಈ ಚಿಂತನೆಯು ಸಾಮಾಜಿಕ ಕ್ಷೇತ್ರದಲ್ಲಿ ಅಷ್ಟೇ ಅಲ್ಲ, ಎಲ್ಲ ಕ್ಷೇತ್ರಗಳಿಗೂ ಅನ್ವಯಿಸುತ್ತದೆ. 'ಕಾರಣ ಮತ್ತು ಪರಿಣಾಮ'ವು ಭಗವಾನ್ ಬುದ್ಧರು ಜಗತ್ತಿಗೆ ನೀಡಿದ ಅತಿದೊಡ್ಡ ಕೊಡುಗೆಯಾಗಿದೆ.

'ಬಹುಜನ ಹಿತಾಯ ಬಹುಜನ ಸುಖಾಯ ಲೋಕಾನುಕಂಪಾಯ' ಎಂಬ ಸಿದ್ಧಾಂತದಿಂದ ಜನರಲ್ಲಿ ಸೌಹಾರ್ದತೆ ಮೂಡಿಸತೊಡಗಿದರು. ಶ್ರೇಣೀಕೃತ ವ್ಯವಸ್ಥೆಯನ್ನು ಧಿಕ್ಕರಿಸಿ ಸಮಾನತೆಯ ಆಧಾರದ ಮೇಲೆ ಸಮಾಜ ಸ್ಥಾಪಿಸಲು ಮುಂದಾದರು. ಪ್ರಾಚೀನ ಇತಿಹಾಸದಲ್ಲಿ ಅಸ್ಪೃಶ್ಯತೆ ನಿವಾರಣೆ ಹೋರಾಟದ ಮೈಲುಗಲ್ಲಾಗಿ ನಿಂತರು. ಸುಪ್ಪಿಯನು ಸ್ಮಶಾನ ಕಾವಲುಗಾರನ ಮಗ. ಸೋಪಕನು ಶ್ರಾವಸ್ತಿ ನಗರದಲ್ಲಿ ವಾಸಿಸುವ ಒಬ್ಬ ಅಸ್ಪೃಶ್ಯ ಜಾತಿಗೆ ಸೇರಿದವನು. ಇವರು ಕೀಳು ಜಾತಿಯಲ್ಲಿ ಹುಟ್ಟಿದರೂ, ಮಹೋನ್ನತರು (ಬುದ್ಧ) ತಮ್ಮ ಸಂಘಕ್ಕೆ ಸೇರಿಸಿಕೊಂಡು, ಶಿಸ್ತು ಮತ್ತು ಸಿದ್ಧಾಂತವನ್ನು ಕಲಿಸಿದರು.

ಸುಮಂಗಳನು ಶ್ರಾವಸ್ತಿಯಲ್ಲಿ ರೈತನಾಗಿದ್ದ. ಕಪಿಲವಸ್ತು ಊರಿನ ಚೆನ್ನನು ಶುದ್ಧೋದನ ರಾಜನ ಮನೆ ಕೆಲಸದವನು. ರಾಜಗೃಹ ಪಟ್ಟಣದ ಕುಂಬಾರ ಜಾತಿಗೆ ಸೇರಿದವ ಧನ್ನಿಯ. ಇವರು ಕೀಳು ಜಾತಿಯಲ್ಲಿ ಹುಟ್ಟಿದವರೆಂಬುದು ಗೊತ್ತಿದ್ದೂ ತಥಾಗತ ಬುದ್ಧರು ಇವರೆಲ್ಲರನ್ನು ತಮ್ಮ ಪಂಥಕ್ಕೆ ಸೇರಿಸಿಕೊಂಡರು.

ಬುದ್ಧರ ತರುವಾಯ ಉತ್ತರ ಭಾರತದಲ್ಲಿ ಯಾರೂ ಈ ಜಾತಿ ಶ್ರೇಣಿಯನ್ನು ನಿರಾಕರಿಸುವ ಧೈರ್ಯ, ಪ್ರಯತ್ನ ಮಾಡಲಿಲ್ಲ. ದಕ್ಷಿಣ ಭಾರತದಲ್ಲಿ ಮಾತ್ರ ಸಮಾಜ ಒಡೆಯುತ್ತ ಬಂದ ವೈದಿಕರ ವಿರುದ್ಧ ಪ್ರತಿಕ್ರಿಯೆ ಪ್ರತಿಭಟನೆಗಳು ಆಗಾಗ ಕಾಣಿಸಿಕೊಂಡಿವೆ. ತಮಿಳುನಾಡಿನ ೬೩ ಪುರಾತನರು ಇಲ್ಲಿ ಸ್ಮರಣಾರ್ಹರೆನಿಸಿದ್ದಾರೆ. ಇವರಲ್ಲಿ ನಂದನಾರ್ (ಹೊಲೆಯ), ಆದಿಬತ್ತ ನಾಯನಾರ್ (ಬೆಸ್ತ), ತಿರುಕುರಿಪುಂಡ ನಾಯನಾರ್ (ಅಗಸ), ತಿರುನೀಲಕಂಠ ನಾಯನಾರ್ (ಕುಂಬಾರ)-ಇವರೇ ಮೊದಲಾದ ಕೆಳಜಾತಿಯವರ ಬದುಕು ಭಕ್ತಿಪರಂಪರೆಯಲ್ಲಿ ಗಮನಾರ್ಹವೆನಿಸಿದೆ.

"ಈ ತಮಿಳು ಶೈವಪಂಥವು ವೇದಗಳನ್ನು ಒಪ್ಪಿಕೊಂಡೇ ಬೆಳೆದು ಬಂದಿದೆ ಎಂಬುದು ನಿಜವೇ ಆದರೂ ವರ್ಣಭೇದವನ್ನು ತುಳಿದು ಸಮಾನತೆಯನ್ನು ಸಾಧಿಸುವುದು ಅದರ ವೈಶಿಷ್ಟ್ಯವೆಂಬುದನ್ನು ಮರೆಯುವಂತಿಲ್ಲ" ಎಂಬ ಅಭಿಪ್ರಾಯವನ್ನು ಇಲ್ಲಿ ನೆನೆಯಬಹುದು. ●

ನಮ್ಮ ಹ್ಯಾಟು



ತಮಟೆ ತಾಳದ ಸದ್ದಿಗೆ
ಬೂಟು-ಬ್ಯಾಂಡಿನ ತುಳಿತ
ಪಂಚೆ ಸೀರೆಗೂ ಕೂಡ
ಸೂಟು-ಜೀನ್ಸ್‌ನ ಸೆಳೆತ

ರಕ್ತ ಬೆವರಾದರು
ಹೆಂಡ ಕುಡುಕರ ಪಟ್ಟ
ರಮ್-ಜಿನ್ ಕುಡಿದರೂ
ಜಂಟಲ್ ಮ್ಯಾನ್ ಎಂಬ ಕಿರೀಟ

ಗುಡಿಸಿಲುಗಳ ಒಳಗೆ ಹಸಿವಿನ ಸ್ವರಗಳು
ಕೆಳಗೆ ಭೂತಾಯಿಯ ಮಡಿಲು
ಸುತ್ತಲು ಶ್ರೀಮಂತರ ಕಕ್ಕಸು.
ಬಂಗಲೆಗಳ ಒಳಗೆ ಸ್ಪೂನು-ಫೋರ್ಕ್‌ನ ಸಂಗೀತ
ಕೆಳಗೆ ಮಿಂಚುವ ಮಾರ್ಬಲ್ಸ್‌ಗಳು
ಸುತ್ತಲು ಕುಟ್ಟಿದ ಕಲ್ಲುಗಳ ಕಟ್ಟೆ

ಗಂಜಲದಬಟ್ಟೆಗೆ
ಉದುರುವ ಎಲೆಗಳೇ ಚೆಲುವು
ಸಾಕ್ಷಿಗೆ ಹೊಂಗೆ ಮರದ ತಂಗಾಳಿ
ಗಾಜಿನ ಕೋಣೆಯಲಿ
ಹಾರಾಡುವ ನೋಟಿನ ಕಂತೆಗಳು
ಸಾಕ್ಷಿಗೆ ತಿರುಗುವ ಫ್ಯಾನ್‌ಗಳು
ತುಂಡು ಬಟ್ಟೆ
ತಲೆಯ ಮೇಲೆ ಭಾರದ ಅಗುಳು
ಸೂಟು-ಬೂಟು
ತಲೆಯ ಮೇಲೆ ಬಣ್ಣದ ಹ್ಯಾಟು

ಪೂರ್ತಿ ಗಡ್ಡ ಬಿಟ್ಟರೆ ಅನಾಗರೀಕರು
ಗಡ್ಡ ಅರ್ಧ ಬಿಟ್ಟರೆ ಸಭ್ಯರು

ಸಭ್ಯತೆಯ ಈ ಹುಯಿಲು
ನುಂಗಿ ಹಾಕಿದೆ ಕಾಡನ್ನು
ಕಾಡಿನ ಮಕ್ಕಳನು

ನಮ್ಮ ನಾಟಿ ಕೋಳಿಗೆ
ಕೆಂಟಕಿ ಚಿಕ್ಕನ್‌ನಿಂದ ಕುತ್ತು

ಏಳ ನೀರ ಬುರುಡೆಗಳಲಿ
ಕೊಕ್-ಪೆಪ್ಸಿಯ ರುಚಿ
ಲಗೋರಿಗೆ ಬೌಲಿಂಗ್‌ನಿಂದ ಸಡ್ಡು
ಕಲ್ಲು, ಕುಂಟೆ-ಬಿಲ್ಲೆಗೆ
ಸ್ನೂಕರ್-ಸಾಕರ್‌ನಿಂದ ಸುದೀರ್ಘ ರಜೆ

ಬದುಕು ಬರಡಾಗಿದೆ
ಕಣ್ಣೀರು ಕಡಲಾಗಿದೆ
ಬಾರಿ ಬಂಗಲೆಗಳ ಬಣ್ಣದಲಿ
ಮುಚ್ಚಿ ಹೋಗಿದೆ ನಮ್ಮ ನೋವು
ಕೋಟೆ ಕೊತ್ತಲುಗಳ ಕಪ್ಪು ಮೈಯಲ್ಲಿ
ಅಡಗಿ ಹೋಗಿದೆ ಪೂರ್ವಜರ ಪಾಡು.
ಈ ನಮ್ಮ ಪಾಡೆಲ್ಲವನು ಹಾಡಾಗಿಸುವುದು
ಸಾಕಾಗಿದೆ, ಸಾಕು ಸಾಕಾಗಿ ಹೋಗಿದೆ
ಬೇಕು ನಮಗೆ
ಹೊಸ ಸೂರ್ಯ ಚಂದ್ರರು
ಬನ್ನಿ ಒಟ್ಟಾಗಿ
ಸೃಷ್ಟಿಸುವ ಹೊಸ ನಕ್ಷತ್ರಗಳನು

ನಮ್ಮ ಬೆವರನೇ
ಬತ್ತಿಯಾಗಿಸಿ, ಎಣ್ಣೆಯಾಗಿಸಿ
ಬದುಕಿಗೆ ಬೆಳಕಾಗಿಸಿ
ಉತ್ತು-ಬಿತ್ತು ಬೆಳೆಯೋಣ
ಹೊಸ...

○ ಕೆ. ಮುರಳಿ ಮೋಹನ್‌ಕಾಟಿ

ನಾನು ಭೂಮಿ
ದುಡಿವವರ ಮೈಮೇಲಿನ
ಬಿಸಿ ಬೆವರು
ಬಿದ್ದಾಗ ತಣ್ಣಗೆ
ಬಸಿರಾಗಿ
ಬದುಕುಗಳ ಹೆರುತ್ತೇನೆ

ನಾನು ಆಕಾಶ
ಭೂಮಿ ಬದುಕಿನ
ಅನಂತ ಸಾಧ್ಯತೆಯೊಳಗೆ
ಹಿಂಡು ಸೂರ್ಯರ ದಂಡು
ಮೆಲ್ಲಗೆ ಮೇಲೇರುವಾಗ
ನೀಲಿಗ್ಯಾನ ಹೊಂದಿ
ನಗುತ್ತೇನೆ

ನಾನೊಂದು ನದಿ
ಮಣ್ಣಮಡಕೆಯನೊತ್ತು
ಇಡೀ ನದಿಯನ್ನೇ
ತುಂಬಿಕೊಳ್ಳುವವಳಂತೆ
ನೀರಿಗಿಳಿಯುವ
ಹೆಣ್ಣಿನ ಮೀನಕಂಡ
ಕಂಡು ತಣ್ಣಗೆ ಬೆವರುತ್ತೇನೆ

ನಾನೊಂದು ಮರ
ಬೆಂಕಿ, ಹಸಿರೊಳಗಿನ ಉಸಿರು
ಬುದ್ದಿ ಬೆಳಕು
ಭರವಸೆ...ಹಂಗೇ...
ಇವೆಲ್ಲವುಗಳ
ತಳ ಸಮುದಾಯ

○ ಹುಲಿಕುಂಟೆ ಮೂರ್ತಿ

ಬುದ್ಧನನ್ನೂ ಬಿಡದ ವೈದಿಕಶಾಹಿಯ ಕಟ್ಟುಕತೆಗಳು

ಗಯಾದ ಮಹಾಬೋಧಿ ಸೊಸೈಟಿಯ ಮುಖ್ಯಸ್ಥರಾಗಿದ್ದ ಬೌದ್ಧ ಭಿಕ್ಷು ಪ್ರಜ್ಞಾಶೀಲ ಭಂತೋಜಿ ಅವರು ಈಚೆಗೆ ಬೆಂಗಳೂರಿಗೆ ಬಂದು ವಿವಿಧ ಸ್ಥಳಗಳಲ್ಲಿ ಉಪನ್ಯಾಸ ನೀಡಿದರು. ವೈದಿಕ ಮಠವಾಗಿ ಬಿಡಬಹುದಾಗಿದ್ದ ಗಯಾದ ಬೌದ್ಧ ವಿಹಾರವನ್ನು ವಿಶ್ವಸ್ಮಾರಕವಾಗಿಸಲು ಪ್ರಯತ್ನಿಸಿ ಅದರಲ್ಲಿ ಅವರು ಸಫಲರೂ ಆದರು. ಅಂಬೇಡ್ಕರ್ ತತ್ವದಲ್ಲಿ ನಂಬಿಕೆ ಇರಿಸಿರುವ ಪ್ರಗತಿಶೀಲ ಭಂತೇಜಿ ಬೌದ್ಧಧರ್ಮ ಪ್ರಚಾರಕ್ಕಾಗಿ ದೇಶ ಸಂಚಾರ ಮಾಡುತ್ತಿದ್ದಾರೆ.

ಪ್ರಜ್ಞಾಶೀಲ ಭಂತೇಜಿ ನೀಡಿದ ಉಪನ್ಯಾಸಗಳಲ್ಲಿ ಆಡಿದ ಮಾತುಗಳನ್ನು ದು. ಸುರಸ್ವತಿ ಇಲ್ಲಿ ನಿರೂಪಿಸಿದ್ದಾರೆ.

○ ಪ್ರಜ್ಞಾಶೀಲ ಭಂತೇಜಿ

ಸಿದ್ಧಾರ್ಥ ಗೌತಮರ ಮೊದಲಿಗೆ ಹಲವಾರು ದಾರ್ಶನಿಕರಿದ್ದರು. 62ಕ್ಕೂ ಹೆಚ್ಚಿನ ಮತಗಳು ಜಾರಿಯಲ್ಲಿದ್ದವು. ಜೀವನ ದುಃಖಮಯವೆಂಬ ನಂಬಿಕೆ ಎಲ್ಲರದಾಗಿತ್ತು. ಪಾಪ-ಪುಣ್ಯ, ಸ್ವರ್ಗ ನರಕಗಳ ಕಲ್ಪನೆ, ಇಂತಹ ಕರ್ಮಮಾಡಿದರೆ ಭಗವಂತನಿಗೆ ಖುಷಿಯಾಗಿ ಸ್ವರ್ಗ ಪ್ರಾಪ್ತಿಯಾಗುವುದು ಇಲ್ಲವೇ ನರಕ ಪ್ರಾಪ್ತಿಯಾಗುತ್ತದೆ ಎಂಬ ವಿಚಾರಗಳು ಪ್ರಚಲಿತವಾಗಿದ್ದವು. ಎಲ್ಲಾ ಮತಗಳು ಒಂದನ್ನೊಂದು ವಿರೋಧಿಸುತ್ತಿದ್ದವು. ಇಂತಹ ಸಮಯದಲ್ಲಿ ಮಹಾವೀರ (ನಿಘುಂಟನಾಥಪುತ್ರ), ಸಿದ್ಧಾರ್ಥ ಗೌತಮರು ತಾವು ಕಂಡುಕೊಂಡ ಸತ್ಯದ ಮೂಲಕ ಜನರಿಗೆ ಮುಕ್ತಿಯ ಮಾರ್ಗ ತೋರಿದರು.

ಸಿದ್ಧಾರ್ಥ ಗೌತಮರ ಜೀವನ ಮತ್ತು ವಿಚಾರ ಕುರಿತಂತೆ ಹಲವಾರು ತಪ್ಪು ಕಲ್ಪನೆಗಳನ್ನು ಸಾಹಿತ್ಯದಲ್ಲಿ ಹುಟ್ಟು ಹಾಕಲಾಗಲಿದೆ. ಗೌತಮನು ಸಾವು, ವೃದ್ಧಾಪ್ಯ, ರೋಗ ಇವನ್ನೆಲ್ಲ ನೋಡಿ ಒಂದು ರಾತ್ರಿ ಹೆಂಡತಿ, ಮಗು, ರಾಜ್ಯ ಎಲ್ಲವನ್ನು ಬಿಟ್ಟು ಹೋದರೆಂಬ ವಿಷಯ ಹೆಚ್ಚು ಪ್ರಚಲಿತವಾಗಿದೆ. ಈ ತಪ್ಪು ಕಲ್ಪನೆಯನ್ನು ಹೋಗಲಾಡಿಸಿ ಬುದ್ಧನ ನಿಜವಾದ ತತ್ವವನ್ನು ತಿಳಿದುಕೊಳ್ಳಬೇಕಿದೆ. ಕೆಲವು ಘಟನೆಗಳು ನಮಗೆ ಸತ್ಯವನ್ನು ಅರಿವಾಗಿಸುತ್ತವೆ. ಅಂತಹ ಘಟನೆಗಳನ್ನು ಬೇಕೆಂತಲೇ ಮುಚ್ಚಿಡಲಾಗಿದೆ. ಅಂತಹ ಕೆಲವು ಘಟನೆಗಳನ್ನು ಹೇಳಲಿಚ್ಛಿಸುತ್ತೇನೆ.

ಗೌತಮರು ಜನಿಸಿದ ಕಪಿಲವಸ್ತುವು ಒಂದು ಗಣತಂತ್ರ ರಾಜ್ಯವಾಗಿತ್ತು. ಆ ರಾಜ್ಯದಲ್ಲಿ, 16 ವರ್ಷ ತುಂಬಿದ ಎಲ್ಲರೂ ಗಣತಂತ್ರ ಸಭಾದ ಸದಸ್ಯರಾಗುತ್ತಿದ್ದರು. ರಾಜ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಿ, ಎಲ್ಲರ ಸಮ್ಮತಿ ಪಡೆದು ನಿರ್ಧಾರಗಳನ್ನು ತೆಗೆದುಕೊಳ್ಳಲಾಗುತ್ತಿತ್ತು. ಒಮ್ಮೆ ವ್ಯವಸಾಯಕ್ಕೆ ರೋಹಿಣಿ ನದಿ ನೀರನ್ನು ಬಳಸಿಕೊಳ್ಳುವ ವಿಷಯದಲ್ಲಿ ಶಾಕ್ಯರು ಮತ್ತು ಕೋಲಿಯರ ನಡುವೆ ವಿವಾದ ಉಂಟಾಯಿತು. ಈ ವಿಷಯ ಕುರಿತು ಗಣಪರಿಷತ್‌ನಲ್ಲಿ ಚರ್ಚಿಸಲಾಯಿತು. ಪರಿಷತ್‌ನ ಮುಖ್ಯಸ್ಥನು ಕೋಲಿಯರ ವಿರುದ್ಧ ಯುದ್ಧ ಮಾಡಬೇಕೆಂಬ ನಿರ್ಧಾರಕ್ಕೆ ಎಲ್ಲರನ್ನು ಒಲ್ಲೆಸಿದ. ನೀರಿಗಾಗಿ ರಕ್ತ ಹರಿಸಬೇಕೆನ್ನುವ ನಿರ್ಧಾರವನ್ನು ಸಿದ್ಧಾರ್ಥ ಗೌತಮರು ಒಪ್ಪಲಿಲ್ಲ. ವೈರದಿಂದ ವೈರವನ್ನು, ಜಗಳದಿಂದ ಜಗಳವನ್ನು, ಬೆಂಕಿಯಿಂದ ಬೆಂಕಿಯನ್ನು ನಂದಿಸಲು ಸಾಧ್ಯವೇ ಇಲ್ಲ. ಪ್ರೇಮದಿಂದ, ವಿಶ್ವಾಸದಿಂದ ಮಾತ್ರ ವಿವಾದವನ್ನು ಬಗೆಹರಿಸಬೇಕು ಎಂಬ ಗೌತಮರ ಮಾತಿಗೆ ಮುಖ್ಯಸ್ಥರು ಸಮ್ಮತಿಸಲಿಲ್ಲ. ಪರಿಷತ್‌ನ ನಿರ್ಧಾರವನ್ನು ಗೌರವಿಸದಿದ್ದ ಕಾರಣಕ್ಕೆ ಗೌತಮರಿಗೆ ಶಿಕ್ಷೆ ವಿಧಿಸಲಾಯಿತು. ಮೂರು ರೀತಿಯ ಶಿಕ್ಷೆಯನ್ನು ಸೂಚಿಸಿ ಆಯ್ಕೆಯನ್ನು ಗೌತಮರಿಗೇ ಬಿಟ್ಟರು.

1. ಗೌತಮರ ತಂದೆ-ತಾಯಿಯರ ಸಂಪತ್ತನ್ನು ಪರಿಷತ್ತು ಮುಟ್ಟುಗೋಲು ಹಾಕಿಕೊಂಡು, ಅವರನ್ನು ಗಡಿಪಾರು ಮಾಡುವುದು.
2. ಮರಣ ದಂಡನೆ
3. ದೇಶ ತ್ಯಾಗ

ನನ್ನ ನಿರ್ಧಾರದಿಂದ ತಂದೆ-ತಾಯಿಯರಿಗೆ ತೊಂದರೆಯಾಗಬಾರದು, ಮತ್ತು ಜೀವಂತವಾಗಿದ್ದರೆ ಮನುಷ್ಯರ ಸ್ವಾರ್ಥ, ದುಃಖಕ್ಕೆ ಕಾರಣ ಹುಡುಕಬಹುದೆಂಬ ಕಾರಣಕ್ಕೆ ಗೌತಮರು ದೇಶತ್ಯಾಗ ಮಾಡುವುದನ್ನು ಒಪ್ಪಿಕೊಂಡರು. ವಿಷಯ ಎಲ್ಲರಿಗೂ ತಿಳಿದು ಎಲ್ಲರೂ ದುಃಖಿತರಾದರು. ಗೌತಮರ ಮನವೊಲಿಸಲು ಪ್ರಯತ್ನಿಸಿದರು, ಸಾಧ್ಯವಾಗಲಿಲ್ಲ. ಎಲ್ಲರೂ ದುಃಖಿತರಾಗಿ, ಗೌತಮರನ್ನು ಊರ ಹೊರಗಿನವರೆಗೂ ಬಂದು ಬೀಳ್ಕೊಟ್ಟರು. ಈ ಮಹತ್ವದ ಘಟನೆ ಕುರಿತು ಭಾರತೀಯ ಸಾಹಿತ್ಯದಲ್ಲಿ ಉಲ್ಲೇಖವೇ ಇಲ್ಲ. ಮಧ್ಯರಾತ್ರಿ ಮನೆಬಿಟ್ಟು ಹೋದರೆಂಬುದೇ ಪ್ರಚಲಿತವಾಗಿದೆ. ಶುದ್ಧೋದನ ಮಹಾರಾಜರಿಗೆ ಸಾಕಷ್ಟು ವಯಸ್ಸಾದ ಮೇಲೆಯೇ ಗೌತಮರು ಜನಿಸಿದ್ದು, ಹಾಗಾಗಿ ಗೌತಮರಿಗೆ ಮುದಿತನದ ಅರಿವಿತ್ತು. ಗೌತಮರು ಜನಿಸಿದ ಕೆಲವೇ ದಿನಗಳಲ್ಲಿ ಅವರ ತಾಯಿ ಮಾಯಾದೇವಿ ಮರಣಹೊಂದಿದರು. ಈ ವಿಷಯ ಗೌತಮರಿಗೆ ತಿಳಿದಿರಲಿಲ್ಲ ಎಂಬುದು ಸುಳ್ಳು. ಸಾವಿನ ವಿಷಯವು ಅವರಿಗೆ ತಿಳಿದಿತ್ತು.

ಒಮ್ಮೆ ಗೌತಮರು ಅವರ ಜಮೀನಿನಲ್ಲಿದ್ದ ನೇರಳೆ ಮರದ ಕೆಳಗೆ ಕುಳಿತಿದ್ದಾಗ ಅವರ ಗಮನ ಅಲ್ಲಿ ಜಮೀನಿನಲ್ಲಿ ದುಡಿಯುತ್ತಿದ್ದ ರೈತನೆಡೆಗೆ ಹೋಯಿತು ಅವನ ಮೈ ಮೇಲಿನ ಬೆವರನ್ನು ನೋಡುತ್ತಾ ಕೂತ ಗೌತಮರ ಮನದಲ್ಲಿ ಚಿಂತನೆ ಪ್ರಾರಂಭವಾಯಿತು. "ಒಬ್ಬ ಮನುಷ್ಯನಿಗೆ ಜೀವನ ನಡೆಸಲು ಎಷ್ಟು ಸಂಪತ್ತು ಬೇಕು, ನನ್ನ ತಂದೆಗೆ ಇರುವ ಆಸ್ತಿ, ಒಡವೆ, ಸಂಪತ್ತು ಎಷ್ಟು, ಅವರು ಬೆವರು ಹರಿಸುವುದೆಷ್ಟು. ಬೆವರು ಹರಿಸಿಯು ಬಡವರಿಗೆ ಸಿಗುವುದೆಷ್ಟು" ಎಂದು ಚಿಂತಿಸಿದರು.

ದೇಶ ತ್ಯಾಗ ಮಾಡಿದ ಗೌತಮರು ಸುಮಾರು 6 ವರ್ಷಗಳ ಕಾಲ ಕಠೋರ ತಪಸ್ಸಿನಲ್ಲಿ ತೊಡಗಿದರು. ಅನೇಕ ಜ್ಞಾನಿಗಳನ್ನು ಕಂಡರು. ಅಲಾರಕಲಾಂ ಎಂಬುವರ ಬಳಿ ಹಠಯೋಗದ ಸಾಧನೆ ಮಾಡಿದರು. ಆದರೂ ತಮ್ಮ ಹುಡುಕಾಟಕ್ಕೆ ಉತ್ತರ ಸಿಗದ ಕಾರಣ ಶಿಷ್ಯತ್ವ ಸ್ವೀಕರಿಸದೆ ಮುಂದೆ ಹೋದರು. ಗ್ರಾಮಪುತ್ತರ ಬಳಿ ಧ್ಯಾನ ಕಲಿತರು. ಮನುಷ್ಯರ ದುಃಖಕ್ಕೆ ಕಾರಣ ಸಿಗದೆ ಅಲ್ಲಿಂದಲೂ ಮುಂದೆ ಹೋದರು. ಗಯಾ ಸಮೀಪದ ಬೆಟ್ಟದ ಗುಹೆಯೊಂದರಲ್ಲಿ ಆಹಾರವಿಲ್ಲದೆ ಧ್ಯಾನ ಮಗ್ನರಾದರು. ಬಡವಾಗಿ ಮೂಳೆ ಚಕ್ಕಳವಾದರೂ ನಿಲ್ಲಲೂ ಸಹ ಆಗದೆ ನಿತ್ರಾಣರಾಗಿ ಬಿದ್ದಿದ್ದರು. ಆ ಸಮಯದಲ್ಲಿ ನರ್ತಕಿಯೊಬ್ಬಳು ತನ್ನ ಸಖಿಯೊಂದಿಗೆ ಮಾತನಾಡುತ್ತ ಹೋಗುತ್ತಿದ್ದರು. ಗೌತಮರಿಗೆ ಆಕೆಯ ಮಾತು ಕಿವಿಗೆ ಬಿತ್ತು. ಆಕೆ ತನ್ನ ಕಿಶಿಗೆ ವೀಣೆಯ ಕುರಿತು 'ನೋಡಿ ವೀಣೆಯ ತಂತಿಯನ್ನು ಅತಿಯಾಗಿ ಬಿಗಿಗೊಳಿಸಿದರೆ ತುಂಡಾಗುತ್ತೆ, ಸಡಿಲವಾಗಿ ಬಿಟ್ಟರೆ ನಾದಬರದು, ಸಮವಾಗಿ ಬಿಗಿಗೊಳಿಸಿದರೆ ಸುಮಧುರ ನಾದ ಹೊಮ್ಮುತ್ತದೆ' ಎಂದು ಹೇಳಿದಳು. ನರ್ತಕಿಯ ಮಾತು ಕೇಳಿದ ಗೌತಮರು ಅದನ್ನು ತಮ್ಮ ಬದುಕಿಗೆ ಅನ್ವಯಿಸಿ ನೋಡಿದರು. "ನಾನೊಬ್ಬ ರಾಜಕುಮಾರನಾಗಿದ್ದ ಅಗತ್ಯಕ್ಕಿಂತ ಹೆಚ್ಚು ತಿನ್ನುತ್ತಿದ್ದೆ. ಈಗ ಏನೂ ತಿನ್ನದೇ ಮೂಳೆ ಚಕ್ಕಳವಾಗಿದ್ದೇನೆ. ಜೀವನ ಹೊರಹೊಮ್ಮಬೇಕಾದರೆ ಅಗತ್ಯವಿರುವಷ್ಟನ್ನು ತಿನ್ನಲೇ ಬೇಕಾಗುತ್ತದೆ. ಈ ಮಧ್ಯಮ ಮಾರ್ಗ ಸರಿಯದೆ ಎಂದುಕೊಂಡರು. ಆಗ ಅವರು ಬಿದ್ದುಕೊಂಡಿದ್ದು ಉರುವೇಲ ಎಂಬ ಸ್ಥಳದ ಅರಳಿ ವೃಕ್ಷದ ಕೆಳಗೆ. ಅಲ್ಲಿಯೇ ಪಕ್ಕದ ಸೇನಾನಿಗ್ರಾಮದ ಮುಖ್ಯಸ್ಥನ ಮಗಳ ಹೆಸರು ಸುಜಾತ. ಆಕೆ ಮಗುವಾದರೆ ವೃಕ್ಷದೇವತೆಗೆ ಖೀರನ್ನು ನೈವೇದ್ಯ ಮಾಡುವೆನೆಂದು ಹರಸಿಕೊಂಡಿದ್ದಳು. ಬೇಡಿಕೆ ಪೂರೈಸಿದ್ದರಿಂದ ಖೀರಿನ ತಪ್ಪಲೆ ಹೊತ್ತುಕೊಂಡು ತನ್ನ ಸಖಿಯೊಡನೆ ವೃಕ್ಷದ ಬಳಿಗೆ ಹೊರಟಿದ್ದಳು. ತನ್ನ ಸಖಿಗೆ ಮುಂದೆ ಹೋಗಿ ಮರದಡಿ ಶುಚಿಗೊಳಿಸಲು ಹೇಳಿದಳು.

ಆ ಸಖಿ ಮರದ ಕೆಳಗೆ ಮೊಳೆ ಚಕ್ಕಳವಾಗಿ ಬಿದ್ದ ಗೌತಮರನ್ನು ನೋಡಿ ಹೆದರೆ ಓಡಿ ಬಂದಳು ಆಗ ಸುಜಾತ ವೃಕ್ಷದೇವತೆಯೇ ಇರಬೇಕೆಂದು ಎಣಿಸಿ ಖೀರನ್ನು ಗೌತಮರಿಗೆ ಶ್ರದ್ಧೆಯಿಂದ ಉಣ್ಣಿಸಿದಳು. ಆ ಖೀರಿನಿಂದಾಗಿ ಗೌತಮರ ದೇಹದಲ್ಲಿ ಚೈತನ್ಯ ಸಂಚಾರವಾಯಿತು. ಕರ್ಮ ಮಾಡಲು ಸಂತುಲಿತ ಆಹಾರದ ಅಗತ್ಯವೆಷ್ಟೆಂಬುದನ್ನು ಗೌತಮರು ಮನಗಂಡರು. ಸ್ವಲ್ಪ ಚೇತರಿಸಿಕೊಂಡು ಸಮೀಪದ ಕೊಳದಲ್ಲಿ ಸ್ನಾನ ಮಾಡಿದರು. ಉರುವೆ (ಈಗಿನ ಗಯಾ) ನಿರಂಜನ ನದಿಯ ದಡದಲ್ಲಿ ಅಡ್ಡಾಡಿದರು. ತನ್ನ ಹುಡುಕಾಟಕ್ಕೆ ದಾರಿ ಸಿಗುವವರೆಗೂ ಇಲ್ಲಿಂದ ಕದಲುವುದಿಲ್ಲ ಎಂದು ಆ ನೂರು ಅಡಿ ಅರಳಿ ವೃಕ್ಷದಡಿ ರೈತನೊಬ್ಬನಿಂದ ಕುಳಹುಲ್ಲಿನ 4 ಪಿಂಡಿ ಪಡೆದು ಹರಡಿಕೊಂಡು ಅದರ ಮೇಲೆ ಸಂಕಲ್ಪ ಮಾಡಿಕೊಂಡು ಕೂತರು. ಜೀವನದಲ್ಲಿ ದುಃಖವಿದೆ. ಯಾಕೆ ಇದೆ? ಕಾರಣವಿಲ್ಲದೆ ಯಾವುದೂ ಇರುವುದಿಲ್ಲ. ದುಃಖವಾಗುವುದು ಏಕೆ ಎಂದು ತಿಳಿದರೆ ಉತ್ತರ ಪರಿಹಾರದ ಮಾರ್ಗ ಸಿಗುತ್ತದೆ. ದುಃಖವಿದೆ, ದುಃಖಕ್ಕೆ ಕಾರಣಗಳು, ದುಃಖದಿಂದ ಮುಕ್ತಿ, ಆರ್ಯ ಅಷ್ಟಾಂಗ ಮಾರ್ಗ ಇವೆ ಗೌತಮರು ಮನವರಿಕೆ ಮಾಡಿಕೊಂಡ ನಾಲ್ಕು ಆರ್ಯ ಸತ್ಯಗಳು. ಇವು ಗೌತಮರು ಅನುಭವದಿಂದ ಬಂದದ್ದು. ಪೊಳ್ಳು ಕಲ್ಪನೆಯಿಂದಲ್ಲ.

ಗೌತಮ ಬುದ್ಧ ಮತ್ತು ಮಹಾವೀರ ಅವರಿಬ್ಬರೂ ಪ್ರಾಣಿ ಹಿಂಸೆಯ ವಿರುದ್ಧ ಪ್ರಚಾರ ಮಾಡಿದ್ದರ ಹಿಂದೆ ಕಾರಣವಿದೆ. ಬ್ರಾಹ್ಮಣಶಾಹಿ ವ್ಯವಸ್ಥೆಯು ಸ್ವರ್ಗ-ನರಕ, ಪಾಪ-ಪುಣ್ಯವೆಂಬ ಕಲ್ಪನೆಗಳನ್ನು ಜನರ ಮನಸ್ಸಿನಲ್ಲಿ ಬಲಪಡಿಸುವುದರೊಂದಿಗೆ ಪುಣ್ಯ ಪಡೆದುಕೊಳ್ಳಲು, ಸ್ವರ್ಗ ತಲುಪಲು ಯಜ್ಞ ಯಾಗಗಳ ಪ್ರಚಾರ ಮಾಡಿದರು. ಯಾಗ ಯಜ್ಞಗಳ ಹೆಸರಿನಲ್ಲಿ ಎತ್ತು, ದನ, ಕುದುರೆ ಇತ್ಯಾದಿ ಪ್ರಾಣಿಗಳು ಬಲಿಯಾಗುತ್ತಿದ್ದವು. ಎತ್ತು, ದನ, ಕುದುರೆಗಳು ಬಡವರ ವ್ಯವಸಾಯದ ಬದುಕಿಗೆ ಬೆನ್ನೆಲುಬಾಗಿದ್ದವು. ಪ್ರಾಣಿ ಬಲಿ ತಪ್ಪಿಸುವ ಸಲುವಾಗಿ ಪ್ರಾಣಿ ಹಿಂಸೆಯ ವಿರುದ್ಧ ಮಹಾವೀರ ಮತ್ತು ಗೌತಮ ಬುದ್ಧರು ಪ್ರಚಾರ ಮಾಡಿದರು. ಪುರಾತನ ಕಾಲದಿಂದಲೂ ದನದ ಮಾಂಸ ತಿನ್ನುತ್ತಿದ್ದ ಬ್ರಾಹ್ಮಣರು ಈಗ ಮಾಡುತ್ತಿರುವ ಗೋಹತ್ಯೆ ಗದ್ದಲ ತಮಾಷೆಯಾಗಿದೆ.

ಆಸೆ, ಅಸೂಯೆ, ದುರಾಸೆಯಿಂದ ದೂರವಾದ ಸುಂದರ ಮಾರ್ಗವನ್ನು ಗೌತಮರು ಜನತೆಗೆ ತೋರಿಸಿಕೊಟ್ಟರು. ವೈದಿಕಶಾಹಿಯಿಂದ ನಿರ್ನಾಮವಾಗಲಿದ್ದ ಈ ಸುಂದರ ಧರ್ಮವನ್ನು ಅಶೋಕ ಚಕ್ರವರ್ತಿಯು ಜಗತ್ತಿನ ಇತರೆಡೆಗೆ ತಲುಪುವಂತೆ ಮಾಡಿದ. ತನ್ನ ಮಗ, ಮಗಳು ಸಹೋದರಿಯನ್ನು ಬೇರೆ ದೇಶಗಳಿಗೆ ಧರ್ಮ ಪ್ರಚಾರಕ್ಕಾಗಿ ಕಳುಹಿಸಿದ. ಮುಂದೆ ಈ ಸ್ವಾತಂತ್ರ್ಯ ವಿಚಾರಧಾರೆಯ ಧರ್ಮವನ್ನು ಬ್ರಾಹ್ಮಣಶಾಹಿಯು ನಿರ್ನಾಮ ಮಾಡಿತು. ಭಿಕ್ಖುಗಳನ್ನು ಕೊಲ್ಲಲಾಯಿತು, ನಲಂದಾ, ತಕ್ಷಶಿಲಾ, ಉದ್ಯಾನಪುರಿ, ವಿಕ್ರಂಪುರಿ ಬೌದ್ಧ ವಿಶ್ವ ವಿದ್ಯಾಲಯಗಳನ್ನು, ಬೌದ್ಧ ಸಾಹಿತ್ಯವನ್ನು ನಾಶಮಾಡಲಾಯಿತು. ಸುಮತಿ ಭಾರ್ಗವರೆಂಬ ಬ್ರಾಹ್ಮಣನು ಮನು ಎಂಬ ಹೆಸರಿನಲ್ಲಿ ವರ್ಣಾಶ್ರಮ ಧರ್ಮವನ್ನು ಜಾರಿಗೊಳಿಸಿದರು. ಶಂಕರಾಚಾರ್ಯರು ಬುದ್ಧನ ಸಿದ್ಧಾಂತವನ್ನು ಮುರಿಯುವಲ್ಲಿ ಯಶಸ್ವಿಯಾದರು.

ಆಧುನಿಕ ಭಾರತದಲ್ಲಿ ದಲಿತರ ಏಳ್ಗೆಗಾಗಿ ಶ್ರಮಿಸಿದ ಬಾಬಾ ಸಾಹೇಬ್ ಅಂಬೇಡ್ಕರವರು ಬೌದ್ಧ ಧರ್ಮದ ಪ್ರಾಮುಖ್ಯತೆಯನ್ನು ಮನಗಂಡರು. ಅವರು ಸ್ವತಃ ನೋವು, ಅವಮಾನ ಅನುಭವಿಸಿಯೂ ಧೃತಿಗೆಡದೆ ದಲಿತರ ಏಳ್ಗೆಗಾಗಿ ದುಡಿದರು. ಎಲ್ಲ ಧರ್ಮಗಳ ಸಾರವನ್ನು

ಕೂಲಂಕುಷವಾಗಿ ಅಭ್ಯಸಿಸಿ ಕೊನೆಗೆ ಅವರು ಒಪ್ಪಿಕೊಂಡಿದ್ದು ಬೌದ್ಧಧರ್ಮವನ್ನು, ಹಿಂದುವಾಗಿ ಹುಟ್ಟಿದೆ ಆದರೆ ಹಿಂದುವಾಗಿ ಸಾಯಲಾರೆ ಎಂದು ಹೇಳಿದ್ದ ಬಾಬಾ ಸಾಹೇಬರು ಆಕರ್ಷಿತರಾದುದು ಬೌದ್ಧಧರ್ಮಕ್ಕೆ ಅದರ ಸ್ವತಂತ್ರ ವಿಚಾರಧಾರೆ, ಕರುಣೆ, ಸಮಾನತೆಯ ವಿಷಯಗಳಿಗಾಗಿ. ಅವರು ಸಂವಿಧಾನವನ್ನು ರಚಿಸಲು ಆಧಾರವಾಗಿದ್ದುಕೊಂಡಿದ್ದು ಸಹ ಬೌದ್ಧಧರ್ಮದ ತತ್ವಗಳನ್ನು "Buddha and his dhamma" ಪುಸ್ತಕದಲ್ಲಿ ಬಾಬಾ ಸಾಹೇಬರು ಬೌದ್ಧಧರ್ಮ ಕುರಿತು ವಿವರವಾಗಿ ಚರ್ಚಿಸುತ್ತಾರೆ.

ನೂರು ವರ್ಷಗಳಷ್ಟು ಹಿಂದೆಯೇ ಜ್ಯೋತಿಬಾ ಪುಲೆಯಂತಹ ಮಹಾತ್ಮರು ವೈದಿಕಶಾಹಿ ವಿರುದ್ಧ ಪ್ರತಿಭಟಿಸಿದರು. ಶಿಕ್ಷಣದ ಮಹತ್ವವನ್ನು ಅರಿತಿದ್ದ ಜ್ಯೋತಿಬಾ ಪುಲೆಯವರು ದಲಿತರ ಶಿಕ್ಷಣಕ್ಕಾಗಿ ಶ್ರಮಿಸಿದರು. ಸತ್ಯಶೋಧನಾ ಸಮಿತಿ ಪ್ರಾರಂಭಿಸಿದರು. ವಿಧವಾ ವಿವಾಹವನ್ನು ಪ್ರೋತ್ಸಾಹಿಸಿದರು. ತಾವೇ ವಿಧವೆಯನ್ನು ಮದುವೆಯಾಗಿ ಶಿಕ್ಷಣ ಕೊಡಿಸಿದರು. ಮಹಿಳೆಯರ ಶಿಕ್ಷಣಕ್ಕಾಗಿ ಶಾಲೆಯನ್ನು ತೆರೆದರು. ಭ್ರೂಣ ಹತ್ಯೆ ಪಾಪವೆಂದು ನಂಬಿದ್ದ ಪುಲೆಯವರು ಕಾಶಿಬಾಯಿ ಎಂಬ ವಿಧವೆ ಗರ್ಭಿಣಿಯಾಗಿ ಆತ್ಮಹತ್ಯೆಗಾಗಿ ಪ್ರಯತ್ನಿಸಿದಾಗ ಆಕೆಯನ್ನು ಉಳಿಸಿದರು. ಮುಂದೆ ಅವಳ ಮಗುವನ್ನು ದತ್ತು ತೆಗೆದುಕೊಂಡು ತಾವೇ ಬೆಳೆಸಿದರು. ಆತನಿಗೆ ಯಶವಂತನೆಂದು ಹೆಸರಿಟ್ಟಿದ್ದರು. ಮಹಾಪುರುಷರಷ್ಟೆ ಹೇಳಿದಂತೆ ನಡೆದುಕೊಳ್ಳುವುದು. ತಮ್ಮ ಬಲಗೈಗೆ ಲಕ್ವ ಹೊಡೆದಾಗ ತಮ್ಮ ಎಡಗೈಲೆ 'ಗುಲಾಮಗಿರಿ' ಪುಸ್ತಕವನ್ನು ಬರೆದು ಮುಗಿಸಿದರು. ವಿರೋಧವಿದ್ದರೂ ನಂಬಿಕೊಂಡ ಸತ್ಯ, ಆದರ್ಶಕ್ಕಾಗಿ ಪಟ್ಟು ಬಿಡದೆ ನಿಂತರು. ಶಿಕ್ಷಣದ ಅತ್ಯವಶ್ಯಕವೆನ್ನುತ್ತಿದ್ದ ಪುಲೆಯವರ ವಿಚಾರಗಳನ್ನು ಜೀವಂತವಾಗಿಟ್ಟಿದ್ದಿದ್ದರೆ ಇಂದು ಸಾಕ್ಷರತೆ ಯೋಜನೆಯ ಅಗತ್ಯವಿರುತ್ತಿರಲಿಲ್ಲ. ಇಂದು ಎಲ್ಲರ ಮನಸ್ಸಿನಲ್ಲಿ ವಿಷಮತೆ ತುಂಬಿದೆ. ಬ್ರಾಹ್ಮಣಶಾಹಿಯ ಗೊಬ್ಬರ ತುಂಬಿಕೊಂಡಿದೆ. ಮತಿ ಇಲ್ಲದೆ ಗತಿ ಇಲ್ಲ. ಮತಿಗಾಗಿ ಶಿಕ್ಷಣದ ಅರಿವು ಬೇಕು. ಅಂಬೇಡ್ಕರ್, ಜ್ಯೋತಿಬಾರವರ ಕನಸುಗಳು ನನಸಾಗಬೇಕಾದರೆ ನಾವು ಎಚ್ಚೆತ್ತುಕೊಳ್ಳಬೇಕು. ಇಲ್ಲವಾದರೆ ಬ್ರಾಹ್ಮಣ್ಯದ ಕತ್ತಲಲ್ಲೆ ಬಿದ್ದಿರಬೇಕಾಗುತ್ತದೆ. ಮುಂದೆ ಬಂದಿರುವ, ವಿದ್ಯಾವಂತ ದಲಿತರು, ಅಧಿಕಾರದಲ್ಲಿರುವ ದಲಿತರು ತಮ್ಮ ಸಮುದಾಯದವರಿಗಾಗಿ ದುಡಿಯಲು ಸಂಕಲ್ಪ ಮಾಡಬೇಕು. ಕೀಳರಿಮೆ ನಮ್ಮನ್ನು ಕೆಳಗೆ ತಳ್ಳುತ್ತದೆ. ಮೇಲೆದ್ದು ಬರಲು ಬುದ್ಧಿಗೆ ಶರಣು ಹೋಗಬೇಕು. ಅದೇ ಬುದ್ಧನ ಮಾರ್ಗ.

ಬೌದ್ಧಧರ್ಮವು ಮನುಷ್ಯ ಪ್ರಧಾನವಾದುದು. ಈ ಧರ್ಮದ ಮೂಲಭೂತ ಆಧಾರವೇ ಮನಸ್ಸು. ಇಂದ್ರಿಯಗಳನ್ನು ನಿಯಂತ್ರಿಸುವ ಆರನೆ ಇಂದ್ರಿಯವೇ ಮನಸ್ಸು. ಈ ಮನಸ್ಸನ್ನು ಏಕಾಗ್ರಗೊಳಿಸುವುದು ಧ್ಯಾನದ ಮೂಲಕ ಸಾಧ್ಯವೆಂಬುದನ್ನು ಗೌತಮರು ತೋರಿಸಿಕೊಟ್ಟರು. ಎಲ್ಲರಲ್ಲೂ ಬುದ್ಧತ್ವದ ಅಂಶವಿದೆ. ಓದು, ಚಿಂತನೆ, ಅನುಭವದಿಂದ ಪಡೆಯುವ (ಸೂತ್ತಾಮಯ ಪನ್ಯ, ಚಿಂತಾಮಯ ಪನ್ಯ, ಭಾವನಾಮಯಪನ್ಯ) ಜ್ಞಾನದ ಮೂಲಕ ಬುದ್ಧತ್ವವನ್ನು ತಲುಪಬಹುದು. ಕರುಣೆ, ಸಮಾನತೆ ಬೋಧಿಸಿದ ಬುದ್ಧಧರ್ಮವನ್ನು ವೈದಿಕಶಾಹಿಯು ತಿರುಚಿ ವಿರೂಪಗೊಳಿಸಲೆತ್ನಿಸಿತು. ತ್ರಿಪಿಟಕದ ಸಂಕೇತವಾಗಿದ್ದ ತ್ರಿಶೂಲವನ್ನು ಬ್ರಾಹ್ಮಣಶಾಹಿಯು ಆಯುಧವನ್ನಾಗಿಸಿತು. ಮೈತ್ರಿ, ಕರುಣೆ, ಮುದಿತ, ಉಪೇಕ್ಷೆಯೆಂಬ 4 ಬ್ರಹ್ಮವಿಹಾರಗಳನ್ನು ಬ್ರಹ್ಮನ ತಲೆಗಳನ್ನಾಗಿಸಿದರು. ಇಂತಹ ಅನೇಕ ಸುಳ್ಳುಗಳನ್ನು ಬಾಬಾ ಸಾಹೇಬರು ತಮ್ಮ ಪುಸ್ತಕಗಳಲ್ಲಿ ಹೊರಗೆಳೆದಿದ್ದಾರೆ. ಮಾಂಸಾಹಾರ ಸಸ್ಯಾಹಾರದ ಬಗ್ಗೆ ಈಗ ಗುಲ್ಲೆಬ್ಬಿಸುತ್ತಿದ್ದಾರೆ. ಭಿಕ್ಖುಗಳು ಇಂತಹದ್ದೇ ಆಹಾರಬೇಕೆಂದು ಕೇಳುವಂತಿಲ್ಲ. ಭಿಕ್ಷೆಯೆಂದು ಪಡೆದ ಆಹಾರ ಯಾವುದೇ ಆಗಿರಲಿ ಭಿಕ್ಖುವು ಭೇದವೆಣಿಸದೆ ತಿನ್ನಬೇಕೆಂದು ಬುದ್ಧರು ಹೇಳಿದ್ದಾರೆ. ಆತ್ಮ, ಪುನರ್ಜನ್ಮದ ಬಗ್ಗೆ ಬುದ್ಧರು ಏನೂ ಹೇಳಿಲ್ಲ. ಒಳ್ಳೆಯ ಕರ್ಮದಿಂದ ಒಳ್ಳೆಯ ಫಲ ಸಿಗುತ್ತದೆ. ಕೆಟ್ಟ ಕರ್ಮದಿಂದ ಕೆಟ್ಟ ಫಲ ಸಿಗುತ್ತದೆ. ಯಾವುದೂ ಶಾಶ್ವತವಲ್ಲ, ಬದಲಾವಣೆಯೊಂದೆ ನಿರಂತರ ಪ್ರಕ್ರಿಯೆ. ಬದಲಾವಣೆಯನ್ನು ಸಮಚಿತ್ತದಿಂದ ನೋಡಬೇಕೆಂದು ಬೌದ್ಧಧರ್ಮ ಹೇಳುತ್ತದೆ.

ಬಸವಣ್ಣನವರ ಬ್ಯಾಂಕ್ ಬ್ಯಾಲೆನ್ಸ್ 'ನಿಲ್' ಮಾಡಿದವರು !

ಗದುಗಿನ ತೋಂಟದಾರ್ಯ ಸ್ವಾಮಿಗಳು ತಮ್ಮ ವೈಚಾರಿಕ ಚಿಂತನೆಗಳಿಂದಾಗಿ ಇಡೀ ದೇಶದಲ್ಲಿ ಖ್ಯಾತರಾದವರು. ಕೋಮುಸೌಹಾರ್ದತೆಗಾಗಿ ಇಡೀ ದೇಶಾದ್ಯಂತ ಸಂಚರಿಸಿ ಕೋಮುವಾದಿಗಳ ನಿದ್ದೆ ಕೆಡಿಸಿರುವ ತೋಂಟದಾರ್ಯಸ್ವಾಮೀಜಿ ತಮ್ಮ ಮಠದಲ್ಲಿ ಎಲ್ಲ ಜಾತಿ-ಮತ-ಧರ್ಮಗಳ ಜನರಿಗೂ ಸಮಾನ ಪ್ರಾತಿನಿಧ್ಯ ನೀಡಿದ್ದಾರೆ. ಕೋಮು ಸೌಹಾರ್ದತೆಗಾಗಿ ನೀಡುವ ಭಾರತ ಸರ್ಕಾರದ ಅತ್ಯುನ್ನತ ಪ್ರಶಸ್ತಿಯನ್ನು ಪಡೆದಿರುವ ತೋಂಟದಾರ್ಯ ಸ್ವಾಮೀಜಿ ಅವರು ಈಚೆಗೆ ಸಭೆಯೊಂದರಲ್ಲಿ ಮಾಡಿದ ಭಾಷಣ ಇದು. ಬಸವಣ್ಣನ ಅನುಯಾಯಿಗಳೆಂದು ಹೇಳಿಕೊಳ್ಳುತ್ತ ಪುರೋಹಿತಶಾಹಿಗಳ ಅಪರಾವತಾರದಂತೆ ನಡೆದುಕೊಳ್ಳುತ್ತಿರುವ ವೀರಶೈವರ ಮನಸ್ಸಾಕ್ಷಿಯನ್ನು ಸ್ವಾಮೀಜಿಗಳು ಇಲ್ಲಿ ಪ್ರಶ್ನಿಸಿದ್ದಾರೆ.

○ ಜಗದ್ಗುರು ತೋಂಟದಾರ್ಯ ಮಹಾಸ್ವಾಮಿಗಳು, ಗದಗ

ನಾವು ಕೃತಯುಗದಲ್ಲಿದ್ದೆವು, ನಾವು ದ್ವಾಪರ ಯುಗದಲ್ಲಿದ್ದೆವು. ನಾವು ತ್ರೇತಾಯುಗದಲ್ಲಿದ್ದೆವು, ನಾವು ಕಲಿಯುಗದಲ್ಲಿದ್ದೇವೆ ಎಂದು ಹೇಳಿಕೊಂಡು ಬರುತ್ತಿದ್ದೇವೆ. ಇದು ನಾನು ಯಾರನ್ನೋ ಟೀಕಾ ಮಾಡ್ತಿನಿ ಅಂತ ತಿಳ್ಕೋಬೇಡಿ. ಬುದ್ಧ, ಮಹ್ಮದ್, ಏಸು ಇವರೆಲ್ಲಾ ಕಲಿಯುಗದಲ್ಲೇ ಇದ್ದವರು. ಇವರು ಜಗತ್ತಿನಲ್ಲಿ ನೂರು ಕೋಟಿ ಜನರನ್ನು ತಯ್ಯಾರು ಮಾಡಿರುವವರು ಯುಗಯುಗಾಂತರದಲ್ಲಿ ಇದ್ದೇವೆಂದು ಹೇಳಿಕೊಳ್ಳುವ ನಾವು ಎಷ್ಟು ಜನರನ್ನು ತಯ್ಯಾರು ಮಾಡಿದ್ದೇವೆ? ನಾವು ಏನಾದರೂ ಹೇಳಬೇಕಾದರೆ ನಾವು ಏನು ಮಾಡಿದ್ದೇವೆ? ಅಂತ ವಿಚಾರ ಮಾಡಬೇಕು.

ಬಸವಣ್ಣನವರ ಬಗ್ಗೆ ಎಷ್ಟು ಹೇಳಿದರೂ ಸಾಲದು. ಸಮುದ್ರದ ನೀರನ್ನು ಬೊಗಸೆಯಲ್ಲಿ ತೆಗೆದುಕೊಂಡಂತೆ, ಸಮುದ್ರದ ನೀರನ್ನೆಲ್ಲ ತರುವುದಕ್ಕೆ ಆಗುವುದಿಲ್ಲ. ಸಮಾಧಾನಕ್ಕಾಗಿ ಹಾಗೆ ಮಾಡುತ್ತೇವೆ. ಸೂರ್ಯನಿಗೇನು ಬೆಳಕು ಕಡಿಮೆ ಇದೆಯೇ? ಆದರೂ ನಮ್ಮ ಹೆಣ್ಣುಮಕ್ಕಳು ಇಲ್ಲಿಂದಲೇ ಆರತಿ ಬೆಳಗುತ್ತಾರೆ. ದಿನವೂ ಬೆಳಕು ಕೊಡುವಂಥ' ಸೂರ್ಯನಿಗೆ ನಾವೇನು ಬೆಳಕು ಕೊಡಬಲ್ಲೆವು? ಆದರೂ ನಾವು ಹಾಗೆ ಮಾಡುತ್ತೇವೆ.

ಬಸವಣ್ಣನವರ ಬಗ್ಗೆ ಎಷ್ಟು ಹೇಳಿದರೂ, ಎಷ್ಟು ಕೇಳಿದರೂ ಕಮ್ಮಿಯೇ, ನೂರಾರು ವರ್ಷಗಳಿಂದ ಹೇಳುತ್ತ ಬಂದಿದ್ದಾರೆ, ಕೇಳುತ್ತ ಬಂದಿದ್ದಾರೆ. ಹೇಳುವವರೂ ಹೋಗಿದ್ದಾರೆ, ಕೇಳುವವರೂ ಹೋಗಿದ್ದಾರೆ, ಬರೆಯುವವರೂ ಹೋಗಿದ್ದಾರೆ. ಆದರೆ ಹೇಳೋದು ಇನ್ನೂ ಮುಗಿದಿಲ್ಲ. ಕೇಳೋದು ಮುಗಿದಿಲ್ಲ. ಬರೆಯೋದೂ ಮುಗಿದಿಲ್ಲ. ಅವರ ವಿಷಯವೇ ಹಾಗಿದೆ. ಅವರು ಭಾರತಕ್ಕೆ ಅಷ್ಟೇ ಏಕೆ? ಪ್ರಪಂಚಕ್ಕೆ ಹೊಸ ಬೆಳಕು ಕೊಟ್ಟ ದಾರ್ಶನಿಕರು. ಅವರ ಕಾಲದಲ್ಲಿ ವೀರಶೈವ-ಲಿಂಗಾಯತ ಅನ್ನೋದು ವಿಶ್ವದೆತ್ತರಕ್ಕೆ ಕಾಣಿಸಿಕೊಂಡಿತ್ತು.

ಬಸವಣ್ಣನವರದು ಉಜ್ವಲವಾದ ಮಾರ್ಗ. ಹಿಂದೂ ಧರ್ಮದ ನೂರೆಂಟು ಕರ್ಮಠತನಗಳ ಅಡಿಗೆ ಸಿಲುಕಿ ನಿಟ್ಟುಸಿರು ಬಿಡುತ್ತಿದ್ದ ಭಾರತೀಯ ಜನಾಂಗವನ್ನು ಮೇಲಕ್ಕೆತ್ತಿ ನಿಲ್ಲಿಸಿದ ಮಹಾನತೆ ಅವರದು. ಏಸುವಿನ ಧರ್ಮಕ್ಕೆ ಅನೇಕ ಕಂದಾಚಾರಿಗಳು, ಕರ್ಮಠರು ಗಂಟುಬಿದ್ದಾಗ 'ಮಾರ್ಟಿನ್ ಕಿಂಗ್ ಲೂಥರ್'ನಂಥವರು ಉದಯವಾಗಿ ಆ ಧರ್ಮಕ್ಕೆ ಹೇಗೆ ಹೊಸ ಉಸಿರನ್ನು ಕೊಟ್ಟರೋ ಹಾಗೆ, ಬಸವಣ್ಣನವರು ಬಂದರು. ಏಸುವಿನ ಮಾನವೀಯತೆಯನ್ನು ಮಾನವ ಸಮಾನತೆಯನ್ನು ಕಮ್ಯೂನಿಸಂ ಸ್ವೀಕರಿಸಿತು. ಕಮ್ಯುನಿಸ್ಟರು ದೇವರನ್ನು ಒಪ್ಪುವುದಿಲ್ಲ. ಆ ಮಾತು ಬೇರೆ. ಆದರೆ ಏಸುವಿನ ಮಾನವ ಸಮಾನತೆಯೇ ಅದಕ್ಕೆ ಬುನಾದಿಯಾಯಿತು.

ಬಸವಣ್ಣ ಪ್ರತಿಪಾದಿಸಿದ ಶರಣಧರ್ಮಕ್ಕೆ ಇಂಥ ಪರಿಸ್ಥಿತಿ ಇರಲಿಲ್ಲ. ಬಸವಣ್ಣ ಹೋದ ಮೇಲೆ ಏನಾಯಿತು? ಮತ್ತೆ ಈ ಲಿಂಗಾಯುತ ಧರ್ಮ ಕಂದಾಚಾರಿಗಳ ಕೈವಶವಾಯಿತು. ಕರ್ಮಠರ ಕೈಗೊಂಬೆಯಾಯಿತು. ಪುರೋಹಿತ ಶಾಹಿಗಳ ಆಡುಂಬೊಲವಾಯಿತು. ಪಟ್ಟಭದ್ರರ ನೆಲೆವೀಡಾಯಿತು. ಎಲ್ಲರಿಗೂ ತಿಳಿಯುವ ಕನ್ನಡದಲ್ಲಿ ಇದ್ದ ಈ ಧರ್ಮವನ್ನು ಪುನಃ ಸಂಸ್ಕೃತ ಆಕ್ರಮಿಸತೊಡಗಿತು. ಮತ್ತೆ ತಾಡೋಲೆಗಳ ಮೇಲೆ ಸಂಸ್ಕೃತ ತೀಡಲಾಯಿತು. ತೀರಾ ಇತ್ತೀಚಿನವರೆಗೂ ಮಠಗಳಲ್ಲಿಯೇ ಸಂಸ್ಕೃತ ಪಾಠಗಳಿರೋದನ್ನೂ ಕಾಣಬಹುದು. ಯಾವುದನ್ನು ಬಸವಣ್ಣ ನಿರಾಕರಿಸಿದ್ದರೋ ಅದೆಲ್ಲವೂ ಇಲ್ಲಿ ಬಂದು ಬೀಡುಬಿಟ್ಟಿತು. ದೇವರಿಗೆ ಯಾವ ಭಾಷೆಯಾದರೇನು? ಭಾಷೆ ಅರ್ಥವಾದರೆ ಸಾಕು! ಆದ್ದರಿಂದಲೇ ಬಸವಣ್ಣನವರು ಅಚ್ಚ ಕನ್ನಡದಲ್ಲಿ ಹೇಳಿದರು. ಹದಿನಾರಾಮೆ ಕನ್ನಡದಲ್ಲಿ ಕ್ರಾಂತಿ ಮಾಡಿದರು, ಬಸವಣ್ಣನವರು ಹೋದ ಮೇಲೆ ಪಟ್ಟಭದ್ರರು ಎದ್ದುಕೂತು ಕನ್ನಡದಲ್ಲಿ ಬಂದ ಈ ಧರ್ಮವನ್ನು ಮೂಲೆ ಗುಂಪು ಮಾಡಿದರು.

ಜಾತಿ ವ್ಯವಸ್ಥೆ ಬಲಗೊಂಡಿತು. ವೃತ್ತಿಯ ಹೆಸರುಗಳೆಲ್ಲ ಜಾತಿಯ ಹೆಸರುಗಳಾದವು. ಮತ್ತೆ ಜಾತಿಯ ಚೌಕಟ್ಟು ಭದ್ರವಾಯಿತು. ಈ ಜಾತಿಯ ಚೌಕಟ್ಟಿನಲ್ಲಿ ಲಿಂಗಾಯತರೆಲ್ಲ ಸಿಕ್ಕುಬಿದ್ದುದರ ಅನಾಹುತ ಏನಾಗಿದೆ ಎಂಬುದನ್ನು ನಾವೀಗ ಅನುಭವಿಸುತ್ತಿದ್ದೇವೆ, ಪರಸ್ಪರ ಕಚ್ಚಾಡುತ್ತಿದ್ದೇವೆ.

ಆದರೆ ಈ ವಿಷ ಬೀಜ ಬಿದ್ದು ಈಗ ಮೊಳಕೆಯೊಡೆದು ಬೆಳೆದು ಮರವಾಗಿಬಿಟ್ಟದೆ. ಈ ಮರ ಹೇಗೆ ಬೆಳೆದಿದೆಯೆಂದರೆ ಇದನ್ನು ಕಡದಿರೂ ಕೂಡ ಮತ್ತೆ ಚಿಗಿಯುವಷ್ಟು ಸಮರ್ಥವಾಗಿ ಬಿಟ್ಟಿದೆ. ಲಿಂಗಾಯತ ಎಂಬುದಾದರೂ ಒಂದು ಜಾತಿಯಾಗಿದೆಯೇ? ಇದರಲ್ಲಿ ಹಲವು ಜಾತಿಗಳು ಹುಟ್ಟಿಕೊಂಡು ಈಗ ಆ ಜಾತಿಗಳ ಪ್ರಾಬಲ್ಯ ಹೆಚ್ಚಾಗಿದೆ. ಒಂದು ಕಾಲದಲ್ಲಿ ಲಿಂಗಾಯತರಿಗೂ ಜಾತಿ ಶ್ರೇಷ್ಠತೆಯ ಹುಚ್ಚು ಎಷ್ಟು ತಲೆಗೇರಿತ್ತೆಂದರೆ ನಾವು ಕೂಡಾ ಬ್ರಾಹ್ಮಣರು ಅಂತ ಹೇಳಿಕೊಳ್ಳುವಷ್ಟಾಗಿತ್ತು. ಸುಮಾರು ನೂರಿಪ್ಪತ್ತೈದು ವರ್ಷಗಳ ಹಿಂದೆ ಕೋರ್ಟಿಗೆ ಹೋಗಿ ನಾವು ಲಿಂಗಿ ಬ್ರಾಹ್ಮಣರು ಅಂತ ಲಿಂಗಾಯತರು ಕೋರ್ಟಿನಲ್ಲಿ ತೀರ್ಪು ತೆಗೆದುಕೊಂಡು ಬಂದರು. ಶ್ರೀ ಸಿ.ಆರ್. ಕರಿಬಸವ ಶಾಸ್ತ್ರಿಗಳು ಬರೆದ ಪುಸ್ತಕದಲ್ಲಿ ಈ ವಿಷಯ ಅಧಿಕೃತವಾಗಿ ಬರುತ್ತದೆ. ಯಾಕೆಂದರೆ ಆಗ ಬ್ರಿಟಿಷರ ಕಾಲ. ಶೂದ್ರರು, ಅಸ್ಪೃಶ್ಯರು ಕೆಳವರ್ಗದವರು ಅನಿಸಿಕೊಂಡರೆ ನಮಗೆ ಅಪಮಾನವಾಗುತ್ತದೆ ಎಂದು ತಿಳಿದುಕೊಂಡು ನಾವೂನು ಲಿಂಗಿ ಬ್ರಾಹ್ಮಣರು ಅಂತ ಮಾಡಿಕೊಂಡೀವಿ. ನಾವು ಲಿಂಗಿ ಬ್ರಾಹ್ಮಣರು ಅಂತ ಮಾಡಿಕೊಂಡಿದ್ದೇ ತಡ ಎಲ್ಲರಿಗೂ ಬ್ರಾಹ್ಮಣರಾಗೋ ಹುಚ್ಚು ಹಿಡಿಯಿತು. ಪತ್ತಾರರೂ ಕೋರ್ಟಿಗೆ ಹೋಗಿ ವಿಶ್ವಕರ್ಮ ಬ್ರಾಹ್ಮಣರು ಅಂತ ಮಾಡಿಕೊಂಡರು. ಯಾಕೆಂದರೆ ಬ್ರಾಹ್ಮಣರು ಅಂತ ಕರೆದುಕೊಂಡರೆ ಸಮಾಜದಲ್ಲಿ ಕಿಮ್ಮತ್ತು ಐತಿ ಅನ್ನೋ ಭಾವನೆ ಆಗ ಎಲ್ಲರಲ್ಲೂ ಬಂದುಬಿಟ್ಟ ಪರಿಣಾಮವಾಗಿ ಅಸ್ಪೃಶ್ಯರೂ ತಮ್ಮನ್ನು 'ಮಾತಂಗಿ ಬ್ರಾಹ್ಮಣರು' ಅಂತ ಕರಕೊಳ್ಳಾಕ ಶುರುಮಾಡಿದ್ರು. 'ನಾವು ಯಾಕೆ ಕರಕೊಳ್ಳಬೇಕು? ಅಂತ ಯಾರೊಬ್ಬರೂ ಆಗ ವಿಚಾರ ಮಾಡಲಿಲ್ಲ. ಲಿಂಗಾಯತರೇ ತಪ್ಪಿದ ಮೇಲೆ ಉಳಿದವರದೇನು? ಲಿಂಗಾಯತರೇ ತಾವು

ಯಾರು? ತಮ್ಮ ಧರ್ಮ ಯಾವುದು? ತಮ್ಮ ಬುನಾದಿ ಯಾವುದು? ತಮ್ಮ ಸಾಹಿತ್ಯ ಪರಂಪರೆ ಎಂಥದು? ಏನನ್ನೂ ಯೋಚನೆ ಮಾಡಲಿಲ್ಲ. ಅವನು ಮಾಡ್ತಾನಂತ ಇವನು, ಇವನು ಮಾಡ್ತಾನಂತ ಅವನು.

ನಮ್ಮ ಗದುಗಿನ ಹತ್ತಿರ ಮುಳಗುಂದ ಅಂತ ಒಂದು ಊರಿದೆ. ಆ ಮುಳುಗುಂದದಲ್ಲಿ ನಯಸೇನ ಅಂತ ಒಬ್ಬ ಕವಿ, ಆತ ತಮಾಷೆ ಹೇಳ್ತಾನೆ.

ಒಂದು ಯಜ್ಞ ನಡೆದಿತ್ತು. 'ಯಜ್ಞಕುಂಡದಲ್ಲಿ ತುಪ್ಪ' ಹಾಕ್ತಿದ್ರು. 'ಇಂದ್ರಾಯ ಸ್ವಾಹಾ, ಚಂದ್ರಾಯ ಸ್ವಾಹಾ' ಅಂತ ನಲವತ್ತು ಜನ ಕುತ್ಗಂಡು ತುಪ್ಪಾ ಹಾಕ್ತಿದ್ರು. ಮುಂದೆ ತುಪ್ಪಾ ಹಾಕ್ತಿದ್ದವನು ಬೋಗಣಿಯಲ್ಲಿ ಕೈಯಿಕ್ಕಿ ಕೈಯಿಕ್ಕಿ ಹಾಕ್ತಿದ್ದ. ಅವನ ಹಿಂದೆ ಉಳಿದವರೆಲ್ಲ ಹಾಗೆ ಮಾಡ್ತಿದ್ರು, ಆ ಮುಖ್ಯಸ್ಥನ ಬೆನ್ನನ್ನು ಒಂದು ನೊಣ ಕಡಿಯಿತು. ಅವನು ತುಪ್ಪದಲ್ಲಿ ಕೈ ಅದ್ದಿರೋದಕ್ಕೂ, ನೊಣ ಕಡಿಯೋದಕ್ಕೂ ಸರಿಹೋಯ್ತು. ಆತನಿಗೆ ನವೆ ಉಂಟಾಯಿತು. ನವೆ ಉಂಟಾಯ್ತಲ್ಲಾ ಅಂತ ಬೋಗಣಿಗೆ ಅದ್ದಿಕೊಂಡಿದ್ದ ಕೈಯಿಂದ ಬೆನ್ನನ್ನು ಚಪ್ಪರಿಸಿಕೊಂಡ. ಅವನ ಹಿಂದೆ ಇದ್ರಲ್ಲ! ಮುವ್ವತ್ತೊಂಭತ್ತು ಮಂದಿ. ಅವರೂ ಕೈ ಅದ್ದಿದ ತಮ್ಮ ತಮ್ಮ ಕೈಗಳಿಂದ ಬೆನ್ನು ಚಪ್ಪರಿಸಿಕೊಂಡರು. ಯಾಕೆ ಚಪ್ಪರಿಸಿಕೊಳ್ಳಬೇಕು? ಅನ್ನೋ ಯೋಚನೇನೆ ಮಾಡ್ಲಿಲ್ಲ. ನಲವತ್ತನೆಯವನನ್ನು ಕೇಳಿದರು. ಯಾಕೆ ಮಾಡ್ತೀಯಾ? ಅಂತ. ಅವನು ಹೇಳಿದ 'ಮುವತ್ತೊಂಭತ್ತನೆಯವ ಮಾಡಿದ' ಅಂತ ಅದಕ್ಕೆ 39ನೆಯವನನ್ನು ಕೇಳಿದರು, ಅವನು 38ನೆಯವನನ್ನು ತೋರಿಸಿದ. ಹೀಗೆ ಮೊದಲನೆಯವರ ಹತ್ತಿರ ಬಂದಾಗ ಅವನು ಹೇಳಿದ. ನನ್ನ ಬೆನ್ನನ್ನು ಒಂದು ನೊಣ ಕಡೀತು ಕಣಪ್ಪ ಅಂತ.

ನಮ್ಮದೂ ಅದೇ ಕತೆ. ಹಿಂದೆ ಮೈಸೂರಿನಲ್ಲಿ ಹರಿಜನರೂ ಕೋರ್ಟಿಗೆ ಹೋದರು. ಅವರು ತಾವು 'ಮಾತಂಗ ಬ್ರಾಹ್ಮಣರು' ಅಂತ ಸಿದ್ಧಮಾಡಿಕೊಂಡರು. ಹರಿಜನರಿಗೂ ಬ್ರಾಹ್ಮಣರು ಅಂತ ಅನ್ನಿಸಿಕೊಳ್ಳಬೇಕು ಎಂಬ ಹುಚ್ಚು ಬಂತು. ಇದರಿಂದಾಗಿ ನಾವು ದೊಡ್ಡ ಬೆಲೆಯನ್ನು ತೆರಬೇಕಾಯಿತು. ನಮ್ಮಿಂದ ದಲಿತರು ದೂರಾದರು. ನಮ್ಮಿಂದ ಶೂದ್ರರು ದೂರವಾದರು. ಇದ್ದ ಲಿಂಗಾಯತರಲ್ಲೇನೇ ಮೇಲುವರ್ಗದ ಲಿಂಗಾಯತರು, ಶ್ರೀಮಂತ ಲಿಂಗಾಯತರು, ಕೆಳವರ್ಗದ ಲಿಂಗಾಯತರು ಎಂದಾಯಿತು. 'ಈ ಲೋಕದೊಳಗೆ ಮತ್ತೆ ಅನಂತ ಲೋಕ' ಎಂದು ಬಸವಣ್ಣ ಹೇಳ್ತಾರಲ್ಲ. ಹಾಗೆ ಈ ಲಿಂಗಾಯತ ಧರ್ಮದಲ್ಲಿ ಅನೇಕ ಜಾತಿಗಳು ಹುಟ್ಟಿಕೊಂಡವು. ಈಗ ನಾವೆಲ್ಲ ಕಿತ್ತಾಡ್ತೀವಿ! 'ಜಾತಿ ಹೋಗಬೇಕು, ಜಾತಿ ಹೋಗಬೇಕು!' ಅಂತ. ಅದರ ಬೇರು ಬಹಳ ದಿನದ್ದು ಅದೆ, ಅದು ಕೇವಲ ಬುಡಕಡಿದರೆ ಹೋಗೋದಲ್ಲ. ಬೇರು ಅಗೆದು ಹುಡುಕಿ ಕಿತ್ತು ನಾಶಮಾಡಬೇಕು. ಅದನ್ನು ಹುಡುಕಿ ತೆಗಿಬೇಕಾದರೆ ಬಾಳ ತಿಳುವಳಿಕೆ ಬೇಕಾಗ್ತದೆ, ಒಂದು ಬಗೆಯ ಸಮನ್ವಯ ಬುದ್ಧಿ ಬೇಕಾಗ್ತದೆ. ಈ ಜಾತಿ ವ್ಯವಸ್ಥೆಯ ನೀಚತನ ಏನಿದೆಯಲ್ಲ ಅದು ಕೇವಲ ಸಾಮಾಜಿಕ ಸ್ತರದಲ್ಲಿ ಮಾತ್ರ ಉಳಿಯದೆ, ಧರ್ಮದಲ್ಲೂ ಬಂದುಬಿಟ್ಟಿತು. ಅದರ ಪರಿಣಾಮವಾಗಿ ಜಂಗಮರು, ಬಣಸ್ಥನದವರು ಇವರು ಮೇಲುವರ್ಗದವರು ಎಂದೆನಿಸಿಕೊಂಡುಬಿಟ್ಟರು. ಉಳಿದವರು ಕೆಳವರ್ಗದವರು ಎಂದಾದರು. ಹೀಗೆ ಮೇಲಿನವರು ಮೇಲಿಯೇ ಉಳಿದರು. ಕೆಳಗಿನವರು ಕೆಳಗೆ ಉಳಿದರು. ಸುಮಾರು 60 ವರ್ಷಗಳ ಹಿಂದೆ ಬ್ರಿಟಿಷರ ಕಾಲದಲ್ಲಿ ಒಂದು ಸೆನ್ಸಸ್ ನಡೀತು. ಆಗ ನಮ್ಮ ಸಮಾಜದ ಹಿರಿಯರೊಬ್ಬರು ಲಿಂಗಾಯತರ ಬಗ್ಗೆ ಒಂದು ಲೆಕ್ಕ ಕೊಟ್ಟರು. ನಮ್ಮ ಲಿಂಗಾಯತರಲ್ಲಿ ಯಾರ್ಯಾರು ಇದಾರೆ ಅಂತ. ಒಂದು ರೂಪಾಯಿ ಲಿಂಗಾಯತರು, ಹನ್ನೆರಡಾಣೆ ಲಿಂಗಾಯತರು, ಎಂಟಾಣೆ

ಒಂದು ರೂಪಾಯಿ ಲಿಂಗಾಯತರು, ಹನ್ನೆರಡಾಣೆ ಲಿಂಗಾಯತರು, ಎಂಟಾಣೆ ಲಿಂಗಾಯತರು ಇದಾರೆ ಅಂತ ಆಗಿನ ಕಾಲದ ವಾರದ ಮಲ್ಲಪ್ಪನವರು ಲೆಕ್ಕ ಕೊಟ್ಟರು. ಸಮಾಜದಲ್ಲಿ ರೂಪಾಯಿ ಲಿಂಗಾಯತರು ಅಂದರೆ ಗುರುಲಿಂಗ ಜಂಗಮರು.

ಲಿಂಗಾಯತರು ಇದಾರೆ ಅಂತ ಆಗಿನ ಕಾಲದ ವಾರದ ಮಲ್ಲಪ್ಪನವರು ಲೆಕ್ಕ ಕೊಟ್ಟರು. ಸಮಾಜದಲ್ಲಿ ರೂಪಾಯಿ ಲಿಂಗಾಯತರು ಅಂದರೆ ಗುರುಲಿಂಗ ಜಂಗಮರು.

ಇವರು ಪಾದೋದಕ ಪ್ರಸಾದ ಕೊಡಲಿಕ್ಕೆ ಅರ್ಹರು. ಇವರು ಅಯ್ಯನೋರು, ಜಂಗಮರು. ಇವರಿಗೆ ಬಣಜಿಗರು ಪಂಚಾಚಾರದವರು ಅಂದರೆ ಅವರು ಹನ್ನೆರಡಾಣೆ ಲಿಂಗಾಯತರು. ಇವರಿಗೂ ಅಷ್ಟಾವರಣದೊಳಗಿನ ಎಲ್ಲವೂ ಉಂಟು. ಆದರೆ ಇವರು ಪಾದೋದಕ ಪ್ರಸಾದವನ್ನು ತೆಗೆದುಕೊಳ್ಳಬಹುದೇ ಹೊರತು, ಕೊಡುವ ಅಧಿಕಾರ ಇವರಿಗೆ ಇಲ್ಲ. ಅಂದರೆ ಇವರಿಗೆ, ಗುರುವಾಗಲು ಬರೋದಿಲ್ಲ. ಜಂಗಮ ಅನ್ನಿಸಿಕೊಳ್ಳೋದು ಸಾಧ್ಯವಿಲ್ಲ. ಆಮೇಲೆ ಉಳಿದವರು ಎಂಟಾಣೆ ಲಿಂಗಾಯತರು.

ಇದನ್ನು ಪ್ರತಿಭಟಿಸಿ ಆಗ ಒಂದು ದೊಡ್ಡ ಚಳುವಳೀನೇ ನಡೀತು. ಅಕ್ಕಲಕೋಟೆ ಮುಂತಾದ ಕಡೆಯವರು ಸೆನ್ಸಸ್‌ಗೆ ಹೋಗಿ, ವಾರದ ಮಲ್ಲಪ್ಪನವರು ಕೊಟ್ಟಿರೋ ರೀತಿ ಸರಿಯಾದುದಲ್ಲ ಅಂತ ವಾದಿಸಿದರು. ಸಿದ್ಧಾಂತ ಶಿಖಾಮಣಿಯಲ್ಲಿ ಹೀಗಿಲ್ಲ. ವಚನ ಶಾಸ್ತ್ರದಲ್ಲಿ ಹೀಗಿಲ್ಲ. ಯಾವನು ದೀಕ್ಷಾ ಪಡೀತಾನೋ, ಅವನು ವೇಶ್ಯಾಪುತ್ರವೇ ಆಗಿರಲಿ, ದಾಸಿ ಪುತ್ರನೇ ಆಗಿರಲಿ, ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ಕರೆತಂದು ಪೂಜಿಸಿ ಪಾದೋದಕ ಪ್ರಸಾದ ಸ್ವೀಕರಿಸುವುದೇ ವೀರಶೈವರ ಲಕ್ಷಣ. ಇದರಲ್ಲಿ ಜಾತಿ ಇಲ್ಲ ಅನ್ನೋದನ್ನ ಬಹಳ ತರ್ಕಬದ್ಧವಾಗಿ ಹೇಳಿದ ಮೇಲೆ, ಅದು ಒಂದು ನೆಲೆಗೆ ಬಂದು ನಿಂತಿತು. ಇದನ್ನು ಇಲ್ಲಿ ಯಾಕೆ ಹೇಳ್ತಿನಿ ಅಂದರೆ ನಾವು ಈಗ ಕಚ್ಚಾಡ್ತೀವೆಲ್ಲ ಜಾತಿ ಹಿಡ್ಕೊಂಡು ಈ ಜಾತಿ ಬೇರು ಎಷ್ಟು ಆಳಕ್ಕೆ ಇಳಿದು ಹೋಗ್ಯಾವ ನೋಡ್ರಿ...ಅಂತ ತಿಳಿಸಾಕ.

ಆಮೇಲೆ ಏನಾಯ್ತು ಅಂದ್ರೆ...ಮ್ಯಾಲಿನವರು ಮ್ಯಾಲೆ, ಕೆಳಗಿನವರು ಕೆಳಗೇ ಉಳದ್ರು. ಅವರಲ್ಲಿ ಗುಂಪುಗಾರಿಕೆ ಬೆಳೀತು. ಕೆಳಗಿನವರಲ್ಲೂ ಗುರುಗಳಾದರು. ಇಂಥ ಅವಕಾಶ ಸಿಕ್ಕಾಗ ನಾವೂ ಯಾಕೆ ಗುರುಗಳಾಗಬಾರದು? ಅಂತ ಶುರುವಾಯಿತು. ಹಾಗಾಗಿ ನಮ್ಮಲ್ಲೂ ಕುಲಕ್ಕೊಬ್ಬ ಗುರುಗಳು, ಅದಕ್ಕೊಂದು ಮಠ ಹುಟ್ಟಿಕೊಂಡವು. ಇದು ಬಣಜಿಗರ ಮಠ, ಇದು ಸಾದರ ಮಠ, ಇದು ಸಜ್ಜನ ಗಾಣಿಗರ ಮಠ, ಇದು ಪಂಚಾಚಾರದವರ ಮಠ ಅಂತ ಆರಂಭಗೊಂಡವು. ಮಠದ ವ್ಯವಸ್ಥೆ ಬಂದ ಕೂಡಲೇ ಅದು ಜಾತಿವಾದಕ್ಕೆ ಬಂದುಬಿಟ್ಟಿತು. ಮಠಗಳು ಸಮಾಜಕ್ಕೆ ಒಂದು ಮಟ್ಟಿಗೆ ಎಷ್ಟು ಒಳ್ಳೆಯ ಕೆಲಸ ಮಾಡಿದ್ದವೋ ಅಷ್ಟೇ ಇನ್ನೊಂದು ರೀತಿಯಿಂದ ಅಪಾಯವನ್ನೂ ಉಂಟು ಮಾಡಿದವು. ಇದು ಪ್ರಜ್ಞಾವಂತರಿಗೆಲ್ಲ ಗೊತ್ತು. ಒಂದು ಸರ್ಕಾರ ಬೀಳಲಿಕ್ಕೆ ನಮ್ಮದೇ ಆದ ಒಂದು ಮಠ ಕಾರಣ ಆಯಿತು ಅನ್ನೋದು ಐತಿಹಾಸಿಕ ಸತ್ಯಸಂಗತಿ. ಯಾಕೆ ಅಂತಂದ್ರೆ ಅದರಲ್ಲಿ ಸ್ವಾರ್ಥ ಬರ್ತದೆ, ಪ್ರತಿಷ್ಠೆ ಬರ್ತದೆ, ಅಹಂ ಬರ್ತದೆ, ಇದಾದ ನಂತರ ನಮ್ಮವರಾರೂ ಹಿಂದಿನದನ್ನು ವಿಚಾರ ಮಾಡಲಿಲ್ಲ. ಮುಂದಿನದನ್ನ ಆಲೋಚಿಸಲಿಲ್ಲ. ಹೊಸದಾಗಿ ನಾವೇನು ಮಾಡಬೇಕಾಗಿದೆ ಅಂತ ಇವೊತ್ತಿಗೂ ಯಾರೂ ಯೋಚಿಸ್ತಾ ಇಲ್ಲ. ಹರಿಯೋ ನೀರನ್ನು ನಾವು ಅಡ್ಡಗಟ್ಟಿದರೆ, ಅದು ನಿಂತು ಕೊಳೀತದೆ, ಹುಳು ಆಗ್ತಾವೆ, ವಾಸನೆ ಬರ್ತದೆ. ಆ ನಿಂತ ನೀರನ್ನೇ ತೀರ್ಥ ಅಂತ ತೆಗೆದುಕೊಂಡ ಹಾಗೆ, ನಮ್ಮ ಧರ್ಮಾನೇ ದೊಡ್ಡದು, ನನ್ನ ಮಠಾನೇ ಶ್ರೇಷ್ಠ, ನನ್ನ ಜಾತೀನೇ ದೊಡ್ಡದು, ಅಂತ ಆಗಿಬಿಟ್ಟಿತು. ಇಷ್ಟೊತ್ತಿಗಾಗಲೇ ನಮ್ಮ ಸಮಾಜಕ್ಕೆ ಹೊಸತನದ ಗಾಳಿ ಬರಬೇಕಾಗಿತ್ತು.

ಅಲ್ಲಿ ಹೇಗೆ ಕ್ರಿಶ್ಚಿಯಾನಿಟಿಯಲ್ಲಿ ಪ್ರಾಟೆಸ್ಟೆಂಟ್ ಹುಟ್ಟಿ ಬಂತೋ ಅಥವಾ ಮಾರ್ಟಿನ್ ಲೂಥರ್‌ನಂಥವರು ಹುಟ್ಟಿ ಬಂದರೋ ಹಾಗೆ ಈ ಜಾತಿಯ ಮಠಮಾನ್ಯಗಳ ವಿರುದ್ಧ ಅಥವಾ ಈ ಜಾತಿಯ ಸಂಘಸಂಸ್ಥೆಗಳ ವಿರುದ್ಧ ಬಂಡಾಯ ಮಾಡಿ ಈ ವೀರಶೈವ ಲಿಂಗಾಯತವನ್ನು ಮೂಲ ತತ್ವಕ್ಕೆ ತಿರುಗುವಂತೆ ಮಾಡಿದ್ದರೆ ಇವೊತ್ತಿನ ಈ ಗೊಂದಲ, ಇವೊತ್ತಿನ ಈ ಸಂಕೀರ್ಣತೆ ಉಂಟಾಗುತ್ತಿರಲಿಲ್ಲ. ನಾವು ಹತ್ತರ ಜೊತೆಗೆ ಹನ್ನೊಂದನೆಯವರಾಗಿ ಬಿಟ್ಟೆವು. ●

ಡಿ.ವಿ.ಜಿ. ವೈದಿಕ ಸಂಪತ್ತು, ಶೂದ್ರ ಇತ್ಯಾದಿ...

○ ಶ್ರೀಮತಿ ವಿಜಯಾ ಮಹೇಶ್

ದೇಶದಲ್ಲಿ ನಾನಾ ವಿಧದ ಸಂಪತ್ತುಗಳಿರುತ್ತವೆ. ಉದಾ:ಗೆ ನಿಸರ್ಗ ಸಂಪತ್ತು ಮತ್ತು ಇನ್ನೂ ಬೇರೆ ಬೇರೆ ಆದರೆ ಇವೆಲ್ಲಕ್ಕಿಂತ ಮುಖ್ಯವಾದ ಸಂಪತ್ತೊಂದಿದೆ! ಅದು ತಮಗೇನಾದರೂ ಗೊತ್ತೆ? ಬಹುಶಃ ಗೊತ್ತಿಲ್ಲ. ಹೌದು ನಿಮಗೆ ನಿಜವಾಗಿಯೂ ಗೊತ್ತಿಲ್ಲ! ಬಂಧುಗಳೇ ಅದೇ ವೈಧಿಕ ಸಂಪತ್ತು!" ಈ ವೈಧಿಕ ಸಂಪತ್ತು ಈಗ ಬಹಳ ವಿರಳವಾಗುತ್ತಿದೆ. ವೇದಾಧ್ಯಯನ ಕ್ಷೀಣವಾಗುತ್ತಿದೆ. ಭರತ ಖಂಡಕ್ಕೆ ಯಾವ ವಿದ್ಯಾಸಂಪತ್ತು ಪ್ರಾಣ ಸ್ವರೂಪವಾದದ್ದೋ ಯಾವುದು ನಮ್ಮ ದೇಶಕ್ಕೆ ಆತ್ಮಪ್ರಾಯವಾದದ್ದೋ ಅದು ಲುಪ್ತವಾಗುತ್ತಿದೆ. ಇದಕ್ಕೆ ಪರಿಹಾರ ಹುಡುಕಬೇಕಾಗಿದೆ" ಇದು ಸುಮಾರು 70 ವರುಷಗಳ ಹಿಂದೆ ಶ್ರೀಮಾನ್ ಡಿ.ವಿ.ಜಿ.ಯವರನ್ನು ಕಾಡಿದ್ದ ವಿಚಾರ! ಅವರು ಸೂಚಿಸಿದ್ದ ಪರಿಹಾರಗಳು ಹೀಗಿವೆ.

1) ವೈದಿಕರು ಎಷ್ಟೆ ಕಷ್ಟ ಬಂದರೂ ಎಷ್ಟು ದಾರಿದ್ರ ಬರಲಿ ತಮ್ಮ ಕುಲವಿದ್ಯೆಯನ್ನು ತಾವು ಎಂದಿಗೂ ಕೈ ಬಿಡಬಾರದು.

2) ವೇದಶಾಸ್ತ್ರಗಳನ್ನು ಅವಹೇಳನ ಮಾಡುವುದಿಲ್ಲವೆಂದೂ, ವೈದಿಕ ವಿಷಯದಲ್ಲಿಯೂ ಅಲಕ್ಷ್ಯ ಮಾಡುವುದಿಲ್ಲವೆಂದು ಬ್ರಾಹ್ಮಣರು ಮತ್ತು ಇತರ ಜನರೂ ಪ್ರತಿಜ್ಞೆ ಮಾಡಬೇಕು.

3) ಬ್ರಾಹ್ಮಣರು ಕಛೇರಿ, ಕಾರ್ಖಾನೆಗಳಲ್ಲಿ ಕೆಲಸ ಮಾಡುವವರು ಮನೆಗೆ ಬೇಗ ಬಂದು ಕುಲ ವಿದ್ಯೆ, ಕುಲಧರ್ಮವನ್ನು ಕಾಪಾಡಬೇಕು.

4) ಆದಷ್ಟು ಮಟ್ಟಿಗೆ ಸದಾಚಾರ ಸಂಪ್ರದಾಯಗಳನ್ನು ಕಾಪಾಡಬೇಕು. ಮನೆಯ ವಾತಾವರಣ ಬ್ರಾಹ್ಮಣ ವಾತಾವರಣವಾಗಬೇಕು.

ವೇದ ಶಾಸ್ತ್ರಗಳ ಹಿತ ಚಿಂತನೆಯು ಬ್ರಾಹ್ಮಣ ವರ್ಗಕ್ಕೆ ಮಾತ್ರ ಸಂಬಂಧಪಟ್ಟಿದ್ದಲ್ಲ. ವೇದ ಶಾಸ್ತ್ರಗಳ ಸಂರಕ್ಷಣೆ ಸಮಸ್ತ ಹಿಂದೂ ಜನಾಂಗಕ್ಕೂ ಸೇರಿದ ಕರ್ತನ್ಯ. ವೈದಿಕ ಸಂಸ್ಕೃತಿಯೂ ಎಲ್ಲರಿಗೂ ಸೇರಿರುವ ಸ್ವತ್ತು. ಸಮಸ್ತ ದೇಶಗಳಿಗೂ ವೈದಿಕ ಸಂಸ್ಕೃತಿಯೂ ಅತ್ಯಂತ ಮೌಲ್ಯವುಳ್ಳ ಸಂಪತ್ತು, ವೈದಿಕ ಬ್ರಾಹ್ಮಣನೇನಿದ್ದರೂ ಈ ವಿಷಯದಲ್ಲಿ ಟ್ರಸ್ಟೀ-ನ್ಯಾಸ ಪಾಲಕನಂತೆ ಇರಬೇಕು. ಇತರರ ಪ್ರಯೋಜನಕ್ಕೆ ಬ್ರಾಹ್ಮಣನು ವಿದ್ಯೆ ಸಂಪ್ರದಾಯಗಳನ್ನು ಕಾಪಾಡಿಕೊಂಡಿರಬೇಕಾದವನು. ನಾನಾ ಹಿಂದೂ ಜಾತಿಗಳ ಹಿತಾರ್ಥವಾಗಿ, ಲೋಕ ಹಿತಾರ್ಥವಾಗಿ ಆಗಬೇಕಾದ್ದು ಮುಖ್ಯವಾಗಿ ಬ್ರಾಹ್ಮಣ ಸಂರಕ್ಷಣೆ. ಇದು ಡಿವಿಜಿಯವರು ವೈದಿಕ ಬ್ರಾಹ್ಮಣರಿಗೆ ಆಗಾಗ ಮನವಿ ಮಾಡಿಕೊಳ್ಳುತ್ತಿದ್ದ ವಿಚಾರಗಳು. (ಇವರು ವೈದಿಕರು ಮತ್ತು ವೈದಿಕ ಬ್ರಾಹ್ಮಣರು ಎಂದು ಕರೆದಿರುವುದು, ಅದರಲ್ಲಿರುವ ವ್ಯತ್ಯಾಸವೇನು ಎಂಬುದು ನನಗೆ ಗೊತ್ತಿಲ್ಲ).

ವೇದ ಶಾಸ್ತ್ರಗಳ ಹಿತ ಚಿಂತನೆಯು ಬ್ರಾಹ್ಮಣ ವರ್ಗಕ್ಕೆ ಮಾತ್ರ ಸಂಬಂಧಪಟ್ಟಿದ್ದಲ್ಲ. ವೇದ ಶಾಸ್ತ್ರಗಳ ಸಂರಕ್ಷಣೆ ಸಮಸ್ತ ಹಿಂದೂ ಜನಾಂಗಕ್ಕೂ ಸೇರಿದ ಕರ್ತವ್ಯ. ವೈದಿಕ ಸಂಸ್ಕೃತಿಯೂ ಎಲ್ಲರಿಗೂ ಸೇರಿರುವ ಸ್ವತ್ತು. ಸಮಸ್ತ ದೇಶಗಳಿಗೂ ವೈದಿಕ ಸಂಸ್ಕೃತಿಯೂ ಅತ್ಯಂತ ಮೌಲ್ಯವುಳ್ಳ ಸಂಪತ್ತು, ವೈದಿಕ ಬ್ರಾಹ್ಮಣನೇನಿದ್ದರೂ ಈ ವಿಷಯದಲ್ಲಿ ಟ್ರಸ್ಟೀ-ನ್ಯಾಸ ಪಾಲಕನಂತೆ ಇರಬೇಕು. ಇತರರ ಪ್ರಯೋಜನಕ್ಕೆ ಬ್ರಾಹ್ಮಣನು ವಿದ್ಯೆ ಸಂಪ್ರದಾಯಗಳನ್ನು ಕಾಪಾಡಿಕೊಂಡಿರಬೇಕಾದವನು. ನಾನಾ ಹಿಂದೂ ಜಾತಿಗಳ ಹಿತಾರ್ಥವಾಗಿ, ಲೋಕ ಹಿತಾರ್ಥವಾಗಿ ಆಗಬೇಕಾದ್ದು ಮುಖ್ಯವಾಗಿ ಬ್ರಾಹ್ಮಣ ಸಂರಕ್ಷಣೆ. ಇದು ಡಿವಿಜಿಯವರು ವೈದಿಕ ಬ್ರಾಹ್ಮಣರಿಗೆ ಆಗಾಗ ಮನವಿ ಮಾಡಿಕೊಳ್ಳುತ್ತಿದ್ದ ವಿಚಾರಗಳು.

ಮಾನ್ಯ ಡಿ.ವಿಜಿಯವರಿಗಿಂತ ಹಿರಿಯರಾದ ವಿದ್ವಾಂಸರೊಬ್ಬರಿದ್ದರು. ಅವರ ಹೆಸರು ವಿರೂಪಾಕ್ಷ ಶಾಸ್ತ್ರಿಗಳು. ಇವರು ಕಟ್ಟಾ ಸಂಪ್ರದಾಯಸ್ಥರು, ವರ್ಣಾಶ್ರಮ ಧರ್ಮದ ಪಾಲಕರು! ಒಂದು ಸಾರಿ ಅಂದರೆ ಸುಮಾರು 1926-27ರಲ್ಲಿ ಪಂಡಿತ ಮದನ ಮೋಹನ ಮಾಳವೀಯರು ಮೈಸೂರಿಗೆ ಭೇಟಿಕೊಟ್ಟಿದ್ದರು. ಈ ಶಾಸ್ತ್ರಿಗಳು ಮೈಸೂರಿನ ಪರಕಾಲ ಮಠದಲ್ಲಿ ಒಂದು ಸಭೆಯನ್ನು ಕರೆದು ಹಿಂದು ಸಮಾಜದಲ್ಲಿ ಅನಿವಾರ್ಯವಾಗಿ ಆಗಬೇಕಾದ ಕೆಲವು ಸುಧಾರಣೆಗಳನ್ನು ಚರ್ಚಿಸುವುದಕ್ಕೆ ಮುಖ್ಯ ಅತಿಥಿಯಾಗಿ ಮಾಳವೀಯರನ್ನು ಕರೆದಿದ್ದರು. ಸಂಜೆ ಪ್ರಾರಂಭವಾಯ್ತು. ಈ ಸಭೆಯಲ್ಲಿ ದಿವಾನ್ ಮಿರ್ಜಾ ಸಾಹೇಬರು, ಎ. ಸುಬ್ರಹ್ಮಣ್ಯ ಅಯ್ಯರ್ ವಿ. ಸುಬ್ರಮಣ್ಯ ಅಯ್ಯರ್ ಹೀಗೆ ಗಣ್ಯ ವ್ಯಕ್ತಿಗಳು ಹಾಜರಿದ್ದರು.

ಬಂಧುಗಳೇ ಇದೆಲ್ಲವನ್ನೂ ಹೇಳುವುದಕ್ಕೆ ಒಂದು ಮುಖ್ಯ ಕಾರಣವಿದೆ. 1902 ರಿಂದ 1940ರ ಘಟ್ಟವನ್ನು ಇಲ್ಲಿನ ಮೈಸೂರು ಪ್ರಾಂತ್ಯದಲ್ಲಿ ಹಾಗೂ ಇಡೀ ದಕ್ಷಿಣ ಭಾರತದಲ್ಲಿ ಬ್ರಾಹ್ಮಣೇತರರ ಚಳುವಳಿ ಬಹಳ ಪ್ರಬಲವಾಗಿದ್ದ ಕಾಲ. ತಂದೆ ಪೆರಿಯಾರರ ಕೇರಳದ ನಾರಾಯಣ ಗುರುಗಳ, ಮಹಾರಾಷ್ಟ್ರದಲ್ಲಿ ಫುಲೆಯವರ ಶಿಕ್ಷಣ ಕ್ರಾಂತಿ, ಶಾಹುರವರ ಮೀಸಲಾತಿ ಚಳುವಳಿ, ಇಲ್ಲಿನ ಮೈಸೂರಿನಲ್ಲಿ ನಾಲ್ವಡಿಯವರು ಬ್ರಾಹ್ಮಣೇತರರಿಗೆ ಶಿಕ್ಷಣದಲ್ಲಿ, ಸರ್ಕಾರಿ ನೌಕರಿಯಲ್ಲಿ ಮೀಸಲಾತಿ ಜಾರಿಗೆ ತರುತಿದ್ದಂತಹ ಕಾಲವಾಗಿತ್ತು. ಕ್ರೂರ ಜಾತಿ ವ್ಯವಸ್ಥೆಯಿಂದ ಹಿಂದು ಧರ್ಮದ ಅನಾಗರೀಕ, ಕ್ರೂರ, ಸಂಪ್ರದಾಯಗಳು, ಅಸ್ಪೃಶ್ಯತೆ ಎಲ್ಲವೂ ಇಲ್ಲಿನ ಅಸ್ಪೃಶ್ಯರಿಗೆ, ಹಿಂದುಳಿದವರಿಗೆ, ಶೂದ್ರರಿಗೆ ಅಲ್ಪಸಂಖ್ಯಾತರಿಗೆ ವಿದ್ಯೆ, ನೌಕರಿ, ಅಂತಸ್ತು ಎಲ್ಲವೂ ನಿರಾಕರಿಸಲ್ಪಟ್ಟಿದರ ವಾತಾವರಣದಲ್ಲಿ ಮೇಲಿನ ಮಹಾನ್ ಚೇತನಗಳು ವರ್ಣಾಶ್ರಮ ಧರ್ಮದ ಮೇಲೆ ಸಮರ ಸಾರಿದ್ದಂತಹ ಘಟ್ಟ ಆಗಿನದು. ಇದು ಇಲ್ಲಿನ ವೈಧಿಕರಿಗೆ ಅರ್ಥವಾಗಿ ಇನ್ನೂ "ನಮ್ಮಗಳ ಗತಿಯೇನು, ಹಿಂದು ಧರ್ಮದ ಮುಂದಿನ ಗತಿಯೇನು?" ಎಂಬ ಪ್ರಶ್ನೆ ಸನಾತನಿಗಳಿಗೆ ಕಾಡತೊಡಗಿತು! ಪ್ರಜಾಪ್ರಭುತ್ವ, ಬಹುಸಂಖ್ಯೆ ಆಧಾರದ ಮೇಲೆ ಆಡಳಿತ, ವಹಿವಾಟು ಎಲ್ಲವೂ ನಡೆದರೆ ಬ್ರಾಹ್ಮಣರ ಗತಿಯೇನು? ಎಂಬುದು ಆಗಿನ ಬ್ರಾಹ್ಮಣರ ಚಿಂತೆಯಾಗಿತ್ತು! ಆಗಿನ ಸಂದರ್ಭಕ್ಕೆ ಒಂದು ಪರಿಹಾರ ಹುಡುಕಿದವರು ಶ್ರೀಮಾನ್ ಮಾಳವೀಯರವರು! ಅವರು ಪ್ರತಿಪಾದಿಸಿದ ವಿಷಯ ಹೀಗಿದೆ !

ಹಿಂದು ಸಮಾಜ ದುರ್ಬಲವಾಗುತ್ತಿದೆ. ಈ ಪ್ರಜಾ ಯುಗದಲ್ಲಿ ಸಂಖ್ಯಾ ಬಲಕ್ಕೆ ಹೆಚ್ಚು ಗಣನೆಯುಂಟು. ರಾಜ್ಯದ ಎಲ್ಲಾ ವಿಷಯಗಳಿಗೆ ಸಂಖ್ಯಾಧಿಕ್ಯದಂತೆ ನಿರ್ಣಯವಾಗುತ್ತವೆ. ಆದ್ದರಿಂದ ಹಿಂದು ಸಮಾಜವು ತನ್ನ ಸಂಖ್ಯಾಬಲವನ್ನು ಕಾಪಾಡಿಕೊಳ್ಳುವುದು ಬಹಳ ಅವಶ್ಯ. ಈಗ ನೋಡಿದರೆ ಕ್ರಿಸ್ತ ಮಿಷನರಿಗಳು ಹಾಗೂ ಅನ್ಯಮತಗಳ ಪ್ರಚಾರಕರ ಮಾತಿಗೆ ಮರುಳಾಗಿ ಹಾಗೂ ಪ್ರಭಾವಕ್ಕೆ ಒಳಗಾಗಿ ಮತಾಂತರಗೊಳ್ಳುತ್ತಿದ್ದಾರೆ. ಹೀಗೆ ದಿನೆ ದಿನೇ ಒಂದು ಸಮಾಜಕ್ಕೆ ಸಂಖ್ಯಾಬಲ ನಷ್ಟವಾಗುತ್ತಿದೆ. ಹಿಂದು ಸಮಾಜವನ್ನು ಬಿಟ್ಟುಹೋಗುತ್ತಿರುವವರಲ್ಲಿ ಪಂಚಮರೆನಿಸಿಕೊಂಡ ಜಾತಿಯವರು ಹೆಚ್ಚು. ಈ ಜಾತಿಯ ಜನರಿಗೆ ಉತ್ತಮ ವರ್ಣದವರು ಯಾವ ವಿಧವಾದ ಸಹಾಯ ಕೊಡುತ್ತಿಲ್ಲ. ಈ ಜನಕ್ಕೆ ತಮ್ಮ ಮತವೇನೆಂಬುದೇ ಗೊತ್ತಿಲ್ಲ. ಅವರಿಗೆ ತಿಳುವಳಿಕೆ ಕೊಡಲು ಬ್ರಾಹ್ಮಣ ಸಂಸ್ಥೆಗಳಲ್ಲಿ ಯಾವ ಏರ್ಪಾಟನ್ನು ಮಾಡಿಲ್ಲ. ಪಂಚಮರೊಬ್ಬರೇ ಏಕೆ? ಇತರ ವರ್ಣಗಳವರಿಗೂ ನಾವು ಮತ ಸಂಬಂಧವಾದ ದೀಕ್ಷೆ ಸಂಸ್ಕಾರಗಳನ್ನು ಏರ್ಪಡಿಸಿಲ್ಲ. ಹೀಗೆ ಮತ ಸಂಸ್ಕಾರವಿಲ್ಲದವರು ಸನಾತನ ಧರ್ಮದ ಮಹತ್ವವನ್ನು ಕಾಣದೆ ಇಲ್ಲಿ ಏನೂ ತಿರುಳಿಲ್ಲವೆಂದು ಭಾವಿಸಿ

ಭ್ರಾಂತಿಪಟ್ಟು ಮತಾಂತರಗಳಿಗೆ ಸೇರಿಬಿಡುವುದು ಖಚಿತ. ಇದಕ್ಕಾಗಿ ನಾವುಗಳು ಕೆಲವು ಏರ್ಪಾಟುಗಳನ್ನು ನಡೆಸುವುದು ತೀರ ಅವಶ್ಯವಾಗಿದೆ. ಮದನ ಮೋಹನ ಮಾಳವೀಯರ ಸೂಚನೆಗಳು ಹೀಗಿದ್ದವು.

1) ಧರ್ಮ ಪೀಠಗಳ ಕೆಲವು ವಿದ್ವಾಂಸರು ಎಲ್ಲ ಬ್ರಾಹ್ಮಣೇತರ ವರ್ಗಳಿಗೂ ಒಂದು ಮತ ಸಂಸ್ಕಾರವನ್ನು ಮಾಡಿಸಿ ದೀಕ್ಷೆ ಕೊಡಲು ಸಿದ್ಧರಾಗಬೇಕು.

2) ಗಂಡಸು-ಹೆಂಗಸು ಯಾರಾದರಾಗಲಿ, ಸಂಸ್ಕಾರ ಬಯಸಿದರೇ ಆತನಿಗೆ ಒಂದು ಗೊತ್ತಾದ ಕ್ರಮದಲ್ಲಿ ಸಂಸ್ಕಾರ ಮಾಡಿಸಬೇಕು.

3) ಶ್ರೀರಾಮನವಮಿ, ಕೃಷ್ಣಾಷ್ಟಮಿ, ಶಿವರಾತ್ರಿ, ದುರ್ಗಾಷ್ಟಮಿ-ಇಂತಹ ದಿವಸಗಳಲ್ಲಿ ಅವರೆಲ್ಲರನ್ನು ಒಂದು ಕ್ಷೇತ್ರದಲ್ಲಿ ಸೇರಿಸಬೇಕು.

4) ಇವರುಗಳು ವಿದ್ವಾಂಸರಿಗೆ ಪ್ರದಕ್ಷಿಣೆ ಹಾಕತಕ್ಕದ್ದು.

5) ನಂತರ ರಾಮತಾರಕ ಮಂತ್ರವನ್ನೋ, ಶಿವಪಂಚಾಕ್ಷರಿಯನ್ನೋ, ನಾರಾಯಣ ಅಷ್ಟಾಕ್ಷರಿಯನ್ನೋ ಹೇಳಿಕೊಟ್ಟು ಅವರ ಬಾಯಿಂದ ಮೂರು ಸಲ ಹೇಳಿಸತಕ್ಕದ್ದು.

6) ನಂತರ ಕಳಶಗಳನ್ನು ಹಿಡಿದುಕೊಂಡು ಊರಿನ ಗುಡಿಗೆ ಹೋಗಿ ಮಂಗಳಾರತಿ, ಪ್ರಸಾದ ಸ್ವೀಕರಿಸತಕ್ಕದ್ದು.

7) ಅದೊಂದು ದಿನ ಅವರು ಮಾಂಸ, ಮದ್ಯ ತಿನ್ನಬಾರದು ಎಂದು ಹೇಳುವುದು. ಬಳಿಕ ಪ್ರತಿದಿನ ಮನೆಯಲ್ಲಿ ಹತ್ತು ಸಲ ಹೇಳಿಕೊಟ್ಟ ಮಂತ್ರ ಜಪಿಸತಕ್ಕದ್ದು. ಈ ರೀತಿ ಮಾಡುವುದರಿಂದ ಎಲ್ಲ ಸಮಾಜದ ಜನರಿಗೆ ಹಿಂದು ಧರ್ಮ ನಮ್ಮದೆಂಬ ಭಾವನೆ ಬರುತ್ತದೆ. ಅನ್ಯಮತಸ್ಥರು ನಡೆಸುತ್ತಿರುವ ಧಾಳಿ ತಗ್ಗುತ್ತದೆ.

ಪ್ರವಚನ ಸೂಚನೆಗಳನ್ನು ಕೊಡುತ್ತಿದ್ದಾಗ ಮಾಳವೀಯರ ಕಡೆ ಶ್ರೀಮಾನ್ ವಿರೂಪಾಕ್ಷ ಶಾಸ್ತ್ರಿಗಳು ಒಂದು ರೀತಿ ದುಗುಡ ಭಯ, ಶಂಕೆಗಳಿಂದ ಅವರತ್ತ ನೋಡುತ್ತಾ ಮಾಲವೀಯರು ಎಲ್ಲಿ ಶಾಸ್ತ್ರ ಸಂಪ್ರದಾಯಗಳಿಗೆ ಧಕ್ಕೆ ತರುವ ಸುಧಾರಣೆಗಳನ್ನು ಹೇಳಿಯಾರೋ ಎಂದು ಆತಂಕ ವ್ಯಕ್ತಪಡಿಸುತ್ತಿದ್ದರು! ಬ್ರಾಹ್ಮಣೇತರರು ರಾಮಾಯಣ, ಮಹಾಭಾರತಗಳನ್ನು ಕೆಲ ಶುಭ ದಿನಗಳಲ್ಲಿ ಓದಬಹುದು ಎಂದು ಹೇಳುತ್ತಿದ್ದಂತೆಯೇ "ಬ್ರಾಹ್ಮಣ ಮುಖೇನ ಬ್ರಾಹ್ಮಣ ಮುಖೇನ ಶ್ರೋತವ್ಯಂ" ಎಂದು ವಿರೂಪಾಕ್ಷ ಶಾಸ್ತ್ರಿಗಳು ಒತ್ತೊತ್ತಿ ಹೇಳುತ್ತಿದ್ದರು. ಕೊನೆಗೆ ತಡೆಯಲಾರದೇ "ಮಾಲವೀಯ ಮಹನೀಯರು ಒಳ್ಳೆ ವಂಶದಲ್ಲಿ ಹುಟ್ಟಿದವರು; ಮನ್ಮಥನನ್ನು ಗೆದ್ದವರು (ಮದನ ಮೋಹನ -ಮದನಜಿತ್) ಇಂಥವರು ವರ್ಣಾಶ್ರಮಾಚಾರಗಳ ವ್ಯವಸ್ಥೆಯನ್ನು ಒಡೆದರು ಎಂಬ ಅಪಕೀರ್ತಿ ಬಾರದಿರಲಿ" ಎಂದು ಹೇಳಿ ಮುಗಿಸಿದರು.

ಬಂಧುಗಳೇ ಇಲ್ಲಿ ನಮ್ಮ ಪ್ರಶ್ನೆ ಏನೆಂದರೇ ಇವರ ಒಂದು ಧರ್ಮಕ್ಕೆ ಇತರ ಜಾತಿಯವರು ಕೇವಲ ಸಂಖ್ಯೆಗೆ ಸೇರಬೇಕು. ಮಿಕ್ಕಿದ್ದು ಜಾತಿ ವ್ಯವಸ್ಥೆ Intact ಆಗಿ ಮುಂದುವರಿಯಬೇಕು. ಇವರು ಪಂಚಮರೆಂದು ಹೇಳುವ ಅಸ್ಪೃಶ್ಯರನ್ನು ಹಿಂದು ತೆಕ್ಕೆಯೊಳಗೆ ಎಳೆದುಕೊಳ್ಳಬೇಕು ಎನ್ನುವ ಯೋಚನೆಯೇ ಪಂಚಮರು ವರ್ಣ ವ್ಯವಸ್ಥೆಯ ಹೊರಗಿರುವವರು ಎಂದಾಯಿತು! ಇನ್ನು ವರ್ಣ ವ್ಯವಸ್ಥೆ ಒಳಗಿರುವ ಶೂದ್ರರು, ಹಿಂದುಳಿದವರು ಹಿಂದುಗಳ ಕೈಕಾಲುಗಳಾಗಿ ಇರಬೇಕೆಂದು ಇವರು ಹೇಳುವುದು! ಹಾಗಾದರೆ ಹಿಂದು ಧರ್ಮ ಎನ್ನುವುದು ಬಹಳ ಕೃತಕವಾದ ಪೊಳ್ಳು ಪದರ ಎಂದಾಯಿತು! ಇದು ನಿಜವಾಗಿಯೂ ಪೊಳ್ಳು ಎಂದು ತೋರಿಸಕೊಡಬೇಕಾದವರು ಇಲ್ಲಿನ ಶೂದ್ರರು, ಹಿಂದುಳಿದ ಜಾತಿಗಳು ತಮ್ಮ ತಮ್ಮ ಜಾತಿಗಳನ್ನು ಗಟ್ಟಿಪಡಿಸಿದರೆ, ಇವರ ಕುಲ ದೇವರುಗಳು, ವಿಶಿಷ್ಟವಾದ ಆಚರಣೆಗಳು ಎಲ್ಲವನ್ನು ಅವರವರ ಜಾತಿ ಜನರಿಂದ ಬಂದ ಈ ಆಚರಣೆಗಳನ್ನು ಸಮರ್ಥಿಸಿಕೊಂಡು ಯಾವುದೇ ಕೀಳರಿಮೆ ಇಲ್ಲದೆ ವ್ಯಕ್ತಪಡಿಸಿದರೆ ಈ ಹಿಂದು ಧರ್ಮ ಎಷ್ಟು ಪೊಳ್ಳಾಗಿದೆ ಎಂಬುದು ತಿಳಿಯುತ್ತದೆ. ಅದು ಬಿಟ್ಟು ಬ್ರಾಹ್ಮಣೇತರರು ಬಾಯಿ ಚಪಲಕ್ಕೆ ಬ್ರಾಹ್ಮಣರನ್ನು ಅವರ ಆಚರಣೆಗಳನ್ನು ವಿರೋಧಿಸುತ್ತಾ, ತಾವು ಬಹಳ Intalectual ಎಂದು ತೋರ್ಪಡಿಸಿಕೊಳ್ಳುತ್ತಾ, ತಮ್ಮ ಮನೆಗಳಲ್ಲಿ ಏನಾದರೂ ವಿಶೇಷವಾದರೇ ಓಡಿ ಹೋಗಿ ಬ್ರಾಹ್ಮಣ ಪುರೋಹಿತರನ್ನು ಕರೆ ತಂದು, ಸತ್ಯನಾರಾಯಣ ಪೂಜೆ ಮಾಡಿಸುವುದು, ಗೃಹಪ್ರವೇಶಕ್ಕೆ ಬ್ರಾಹ್ಮಣ ಪುರೋಹಿತರನ್ನು ಕರೆಸುವುದು ಬೇಕಾದ ಹಾಗೆ ಕೊಟ್ಟು ಕಳಿಸುವುದು. ಮದುವೆಗಳಿಗೆ ಬ್ರಾಹ್ಮಣ ಪುರೋಹಿತರನ್ನು ಕರೆಸುವುದು ಹೀಗೆ ಬ್ರಾಹ್ಮಣರನ್ನು ಓಲೈಸುತ್ತಲೇ ಅವರಿಗೆ ಗೊತ್ತಿಲ್ಲದ ಹಾಗೆಯೇ ಹಿಂದು ತೆಕ್ಕೆಯೊಳಗೆ ಸೇರಿಕೊಂಡು "ನಾನು Anti Brahmin" ಎಂದು ಹೇಳಿಕೊಳ್ಳುವುದು ಬಹಳ ಉಡಾಫೆಯಾಗಿ ಕಾಣಿಸುತ್ತದೆ. ನನಗೆ ಗೊತ್ತಿರುವ ಕೆಲಗೌಡ ಸ್ನೇಹಿತರು, ಲಿಂಗಾಯಿತರು, ಹಿಂದುಳಿದವರು, ಇವರೆಲ್ಲಾ 'They are more brahmin's than what brahmins are" ಅಷ್ಟುಮಟ್ಟಿಗೆ ಬ್ರಾಹ್ಮಣರನ್ನು ಅನುಕರಿಸುತ್ತಾರೆ! ಇದೆಲ್ಲಾ ಬ್ರಾಹ್ಮಣರನ್ನು ಓಲೈಸಲೇ ಹೊರತು ಮತ್ತೇನೂ ಅಲ್ಲ. ಈ ಶೂದ್ರರು ಹಿಂದುಳಿದವರು ತಮ್ಮ ಕುಲ ದೇವರುಗಳಾದ ಚೌಡಮ್ಮ, ಮದ್ದೂರಮ್ಮ, ದೊಡ್ಡಮ್ಮ ತಾಯಿ ರಾಚಪ್ಪಾಜಿ, ಸಿದ್ದಪ್ಪಾಜಿ ಇವರನ್ನು ಹೊರ ತಂದು ಇವರ ಮನೆಯ ಹಿರಿಯರನ್ನೇ ಕರೆಸಿ ಮನೆಯ ವಿಶೇಷ ಸಮಾರಂಭಗಳನ್ನು ಆಚರಿಸಲು ಪ್ರಾರಂಭಿಸಿದರೇ ಒಮ್ಮೆಗೆ ಬ್ರಾಹ್ಮಣರಿಗೆ ನಡುಕ ಉಂಟಾಗುತ್ತದೆ. ಆದರೇ ಇವರು ಮಾಡುವುದಿಲ್ಲ! ಅಂದ ಮೇಲೆ ಬ್ರಾಹ್ಮಣರಿಗೆ ಬ್ರಾಹ್ಮಣೇತರರು ಏನು Treat ಕೊಟ್ಟಾರು? ಅದೊಂದು ಭ್ರಮೆ ಅಷ್ಟೆ! ಅಲ್ಲದೆ ಕೊನೆಯಲ್ಲಿ ತಮಗೊಂದು ಮುಖ್ಯವಾದ ವಿವರಣೆ ಒಂದನ್ನು ಕೊಡಬೇಕು. ಶ್ರೀಮಾನ್ ವೆಂಕಟನಾರಣಭಟ್ಟ ಎಂಬುವರು ಅಂದಿನ ಕಾಲದ ಪ್ರಖರ ಪಂಡಿತರು, ಸೆಂಟ್ರಲ್ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದವರು. ಅವರು ಶೂದ್ರ ಎಂಬ ಪದದ ಅರ್ಥವನ್ನು ವ್ಯಾಖ್ಯಾನಿಸಿರುವುದು ಹೀಗೆ.

'ಶೂದ್ರ' ಎಂದರೆ ಸಣ್ಣ ಮನಸ್ಸಿನವನು ಎಂದು ಅರ್ಥ. ನಾಲ್ಕು ವರ್ಣಗಳಲ್ಲಿ ಒಂದು ವರ್ಣದವನು ಎಂದು ಅರ್ಥವಲ್ಲ. 'ಶೂದ್ರ' ಎಂದರೆ ಮನಸ್ಸಿನಲ್ಲಿ ಸರ್ವದಾ ಶೋಕಪಡುತ್ತಿರುವವನು ಎಂದು ಅರ್ಥ. ನನಗೆ ಅದಿಲ್ಲವಲ್ಲ, ಇದಿಲ್ಲವಲ್ಲ, ಅವನಿಗೆ ಹಾಗಾಯಿತಲ್ಲ, ಹೀಗಾಯಿತಲ್ಲ-ಎಂದು ಆಶೆಗಳನ್ನು, ಅಸೂಯೆಗಳನ್ನು ಅತಿಯಾಗಿ ಮಾಡಿಕೊಂಡು ಸಂಕಟಪಡುತ್ತಿರುವ ಮನುಷ್ಯ ಎಂದು ಅರ್ಥ" ಬಂಧುಗಳೇ ಹೇಗಿದೆ ಇವರ ವ್ಯಾಖ್ಯಾನ?

ವಿವೇಕಾನಂದರ ವಿಚಾರಧಾರೆ

ನಮ್ಮ ಸಮಾಜದಲ್ಲಿ ನೂರಾರು ವರ್ಷಗಳಿಂದಲೂ ಮದುವೆ ಪ್ರತಿಯೊಂದು ಮತದ ಒಳಪಂಗಡಗಳಲ್ಲಿಯೇ ಪರಿಮಿತಿಗೊಂಡು, ಎಂತಹ ಅವಸ್ಥೆಗೆ ತಂದಿದೆ ಎಂದರೆ ಮದುವೆ ಎಂದರೆ ಭ್ರಾತೃವರ್ಗದವರು, ಬಂಧು ವರ್ಗದವರಿಗೆ ಇದು ಮೀಸಲಾಗಿ ಹೋಗಿದೆ. ಈ ಕಾರಣದಿಂದಲೇ ಜನಾಂಗ ಶಾರೀರಕ ದುರ್ಬಲತೆಯನ್ನು ಹೊಂದುತ್ತಿವೆ. ಪರಿಣಾಮವಾಗಿ ಎಲ್ಲ ಬಗೆಯ ರೋಗ ರುಜಿನಗಳು ಮತ್ತು ಇತರ ಕೆಡಕುಗಳಿಗೂ ಸುಲಭವಾಗಿ ಪ್ರವೇಶ ದೊರೆತಿದೆ. ಕೆಲವೇ ಮಂದಿ ವ್ಯಕ್ತಿಗಳ ಸಣ್ಣ ವೃತ್ತದೊಳಗೇ ರಕ್ತಚಲನೆಯಾಗಬೇಕಾಯಿತು. ಆದರಿಂದ ರಕ್ತ ಕಲುಷಿತವಾಗಿದೆ. ಆದ್ದರಿಂದ ಹೊಸದಾಗಿ ಹುಟ್ಟಿದ ಮಕ್ಕಳು ತಮ್ಮ ತಂದೆತಾಯಿಗಳಿಂದ ಹುಟ್ಟುತ್ತಲೇ ಅವರ ದೇಹ ಪ್ರಕೃತಿಯ ರೋಗಗಳನ್ನು ಪಿತ್ರಾರ್ಜಿತವಾಗಿ ಹೊಂದುತ್ತಾರೆ. ಹೀಗೆ ರಕ್ತರಕ್ತದಿಂದ ಹುಟ್ಟಿದ ಅವರ ದೇಹಗಳಲ್ಲಿ ಯಾವ ರೋಗದ ಸೂಕ್ಷ್ಮ ಕ್ರಿಮಿಗಳನ್ನೂ ತಡೆಗಟ್ಟುವ ಶಕ್ತಿ ಇರುವುದಿಲ್ಲ. ಈ ರೋಗಗಳಾದರೋ ಯಾವಾಗಲೂ ಅವರನ್ನು ಬಲಿತೆಗೆದುಕೊಳ್ಳಲು ಕಾದುಕೊಂಡಿರುತ್ತವೆ. ಈ ಮದುವೆಯ ವೃತ್ತವನ್ನು ವಿಶಾಲವಾಗಿ ಮಾಡುವುದರ ಮೂಲಕ ಮಾತ್ರ ನಾವು ಹೊಸ ಬಗೆಯ ಬೇರೆ ವಿಧವಾದ ರಕ್ತವನ್ನು ಸಂತಾನಕ್ಕೆ ತುಂಬಬಹುದು. ಆಗ ಅವು ನಮ್ಮ ಈಗಿನ ಕಾಲದ ಅನೇಕ ಬಗೆಯ ರೋಗಗಳು ಮತ್ತು ಅವುಗಳ ಕೆಡಕು ಪರಿಣಾಮಗಳಿಂದ ಪಾರಾಗಬಹುದು.

ರೋಗದ ಕಾರಣಗಳನ್ನೆಲ್ಲಾ ಬೇರುಸಹಿತ ಕಿತ್ತೊಗೆಯಬೇಕು. ಅವುಗಳನ್ನು ಹಾಗೇ ಅಡಗಿಸಿದರೆ ಪ್ರಯೋಜನವಿಲ್ಲ. ನಮಗೆ ಅನೇಕ ವಿಧವಾದ ಸುಧಾರಣೆಗಳು ಬೇಕು. ಇದನ್ನು ನಿರಾಕರಿಸುವಷ್ಟು ದಡ್ಡರಾರಿದ್ದಾರೆ? ಉದಾಹರಣೆಗೆ ಭರತಖಂಡಕ್ಕೆ ಅಂತರ್ಜಾತೀಯ ವಿವಾಹ ಪದ್ಧತಿ ಅವಶ್ಯಕ.

ಹಿಂದೂ ವಿವಾಹಗಳ ಸುತ್ತ-5

ಒಬ್ಬ ಮಾನವನ ಲೇಖನಿಯಿಂದಾಗಿ ಅನಾಗರಿಕ ಸ್ಥಿತಿಗೆ ತನ್ನನ್ನು ಒಪ್ಪಿಸಿಕೊಂಡು ಅಧೋಗತಿಗೆ ಇಳಿಯುವ ಹಾಗೂ ಇನ್ನೊಂದು ವರ್ಗವನ್ನು ಶಿಖರ ಸ್ಥಿತಿಗೇರಿಸುವ ವ್ಯಕ್ತಿಯ ತಾರತಮ್ಯ, ಬವಣೆಯನ್ನು ಅನುಭವಿಸುವ ವರ್ಗ ಯಾವುದಿದ್ದೀತು? ಆತ ಎಲ್ಲ ಜನರನ್ನೂ ತನ್ನ ಸ್ವಾಧೀನಪಡಿಸಿಕೊಂಡ ಒಬ್ಬ ಪ್ರಜಾಪೀಡಕನಾಗಿರಬೇಕು, ಇಲ್ಲವಾದರೆ ಈ ರೀತಿಯಾಗಿ ಒಟ್ಟಾರೆ ಅನ್ಯಾಯವಾದ ವಿಧಾನದಲ್ಲಿ ತನ್ನ ಪೋಷಕತನವನ್ನು ನಿರ್ವಹಿಸಲು ಆತನನ್ನು ಬಿಡಲಾಯಿತೆಂಬುದನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ

(ಹಿಂದಿನ ಸಂಚಿಕೆಯಿಂದ)

ನಾನು ಮೊದಲು ಭಾರತದ ಕಾನೂನು ಕಟ್ಟಳೆಗಳನ್ನು ಕೊಟ್ಟವನ ವಿಚಾರ ಪರಿಶೀಲಿಸಲು ಉದ್ದೇಶಿಸಿದ್ದೇನೆ. ಪ್ರತಿಯೊಂದು ರಾಷ್ಟ್ರವೂ ತನ್ನ ನ್ಯಾಯ ನಿಬಂಧನಕಾರರನ್ನು ಪಡೆದಿರುತ್ತದೆ, ಆತ ಆ ದೇಶದ ಗ್ಲಾನಿಯ ಕಾಲದಲ್ಲಿ ಅವತಾರವಾಗಿ ಉದ್ಭವಿಸುತ್ತಾನೆ, ಪಾಪಪೂರಿತ ಮಾನವ ಸಮುದಾಯವನ್ನು ಸರಿಪಡಿಸುತ್ತಾನೆ, ಅವರಿಗೆ ನ್ಯಾಯ ಮತ್ತು ನೈತಿಕತೆಯ ಕಾನೂನುಗಳನ್ನು ಕೊಡುತ್ತಾನೆ. ಭಾರತದ ಕಾನೂನು ಜನಕನಾದ ಮನು, ಈ ವ್ಯಕ್ತಿ ಬದುಕಿದ್ದು ನಿಜವೇ ಆದರೆ, ನಿಶ್ಚಯವಾಗಿಯೂ ಆತ ನಿರ್ಲಜ್ಜ ವ್ಯಕ್ತಿಯೇ ಸರಿ. ಜಾತಿ ಕಾನೂನುಗಳನ್ನು ಕೊಟ್ಟವನು ಆತನೇ ಎಂಬ ಕಥೆಯನ್ನು ಪುರಸ್ಕರಿಸುವುದಾದರೆ ಮನು ಒಬ್ಬ ಧೈರ್ಯಶಾಲಿಯಾದ ವ್ಯಕ್ತಿಯೇ ಇರಬೇಕು. ಆತನ ಹಂಚಿಕೆಯನ್ನು ಒಪ್ಪಿಕೊಂಡ ಮಾನವ ಜನಾಂಗವು ನಮಗೆ ಪರಿಚಿತವಾದುದಕ್ಕಿಂತ ತೀರ ಭಿನ್ನವಾದ ಜನಾಂಗವಾಗಿರಬೇಕು. ಜಾತಿಯ ಕಾನೂನು 'ಕೊಡಲ್ಪಟ್ಟಿತು' ಎಂಬುದನ್ನು ಊಹಿಸಿಕೊಳ್ಳಲೂ ಆಗದು. ಮನು ಕೂಡ ತನ್ನ ಕಾನೂನನ್ನು ಮೀರಿ ಬದುಕಿರಲಾರನೆಂದು ಹೇಳುವುದು ಉತ್ಪ್ರೇಕ್ಷೆಯಾಗಲಾರದು; ಏಕೆಂದರೆ ಒಬ್ಬ ಮಾನವನ ಲೇಖನಿಯಿಂದಾಗಿ ಅನಾಗರಿಕ ಸ್ಥಿತಿಗೆ ತನ್ನನ್ನು ಒಪ್ಪಿಸಿಕೊಂಡು ಅಧೋಗತಿಗೆ ಇಳಿಯುವ ಹಾಗೂ ಇನ್ನೊಂದು ವರ್ಗವನ್ನು ಶಿಖರ ಸ್ಥಿತಿಗೇರಿಸುವ ವ್ಯಕ್ತಿಯ ತಾರತಮ್ಯ, ಬವಣೆಯನ್ನು ಅನುಭವಿಸುವ ವರ್ಗ ಯಾವುದಿದ್ದೀತು? ಆತ ಎಲ್ಲ ಜನರನ್ನೂ ತನ್ನ ಸ್ವಾಧೀನಪಡಿಸಿಕೊಂಡ ಒಬ್ಬ ಪ್ರಜಾಪೀಡಕನಾಗಿರಬೇಕು, ಇಲ್ಲವಾದರೆ ಈ ರೀತಿಯಾಗಿ ಒಟ್ಟಾರೆ ಅನ್ಯಾಯವಾದ ವಿಧಾನದಲ್ಲಿ ತನ್ನ ಪೋಷಕತನವನ್ನು ನಿರ್ವಹಿಸಲು ಆತನನ್ನು ಬಿಡಲಾಯಿತೆಂಬುದನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ; ಆತ ನೀಡಿದ ಸಂಸ್ಥೆಗಳತ್ತ ಸುಮ್ಮನೆ ಕಣ್ಣಾಡಿಸಿದರೂ ಸಾಕು ಈ ಅನ್ಯಾಯ ಕಂಡುಬರುತ್ತದೆ. ಮನುವಿನ ವಿಚಾರದಲ್ಲಿ ನಾನು ಕಠೋರವಾಗಿರುವಂತೆ ತೋರಬಹುದು, ಆದರೆ ನನ್ನ ಶಕ್ತಿ ಆತನ ಪ್ರೇತವನ್ನು ಕೊಲ್ಲುವಷ್ಟು ಸಶಕ್ತವಾಗಿಲ್ಲವೆಂದು ನನಗೆ ಖಚಿತವಾಗಿದೆ. ಆತ ಅಮೂರ್ತ ವ್ಯಕ್ತಿಯಂತೆ ಜೀವಿಸಿದ್ದು ಆಕರ್ಷಿಸುತ್ತಿದ್ದಾನೆ, ಮತ್ತು ಆತ ಇನ್ನೂ ದೀರ್ಘಕಾಲ ಬದುಕಿರಬಲ್ಲನೆಂಬ ಭಯ ಕೂಡ ನನಗಿದೆ. ನಿಮ್ಮ ಮನಸ್ಸಿಗೆ ನಾಟುವಂತೆ ಹೇಳಬೇಕಾದ ಒಂದು ವಿಷಯವೆಂದರೆ ಜಾತಿಯ ಕಟ್ಟಳೆಗಳನ್ನು ಮನು ಕೊಡಲಿಲ್ಲ. ಆತ ಹಾಗೆ ಮಾಡುವುದು ಸಾಧ್ಯವೂ ಇಲ್ಲ. ಮನುವಿಗಿಂತ ತುಂಬ ಹಿಂದಿನಿಂದ ಜಾತಿ ಇತ್ತು. ಆತ ಅವನ್ನು ಎತ್ತಿ ಹಿಡಿದಿದ್ದಾನೆ, ಅದನ್ನು ಸೈದ್ಧಾಂತಿಕಗೊಳಿಸಿದ್ದಾನೆ. ಆದರೆ ನಿಶ್ಚಯವಾಗಿಯೂ ಹಿಂದೂ ಸಮಾಜದ ಇಂದಿನ ವ್ಯವಸ್ಥೆಯನ್ನು ಆತ ಕಟ್ಟಳೆಗೊಳಿಸಿದವನಲ್ಲ ಮತ್ತು ಹಾಗೆ ಮಾಡಲು ಸಾಧ್ಯವೂ ಇರಲಿಲ್ಲ. ಅಸ್ತಿತ್ವದಲ್ಲಿದ್ದ ಜಾತಿ ಕಟ್ಟಳೆಗಳನ್ನು ಕ್ರೋಢೀಕರಿಸುವುದರೊಂದಿಗೆ ಮತ್ತು ಜಾತಿ ಧರ್ಮವನ್ನು ಬೋಧಿಸುವುದರೊಂದಿಗೆ ಆತನ ಕೆಲಸ ಮುಗಿಯಿತು. ಜಾತಿ ವ್ಯವಸ್ಥೆಯ ಪ್ರಸಾರ ಮತ್ತು ಬೆಳವಣಿಗೆಯು ಅತಿ ಬೃಹತ್ತಾದುದು; ಅದನ್ನು ಸಾಧಿಸಬೇಕಾದರೆ ಒಬ್ಬ ವ್ಯಕ್ತಿ ಅಥವಾ ಒಂದು ವರ್ಗದ ಶಕ್ತಿ ಅಥವಾ ಕಪಟ ಬೇಕು. ಇದಕ್ಕೆ ಸದೃಶ ವಾದ ವಾದವೆಂದರೆ ಬ್ರಾಹ್ಮಣರು ಜಾತಿಯನ್ನು ಸೃಷ್ಟಿ ಮಾಡಿದರೆಂಬ ಸಿದ್ಧಾಂತ. ಮನುವಿನ ವಿಚಾರದಲ್ಲಿ ಆಗಲೇ ತಾನು ಏನನ್ನು ಹೇಳಿದ್ದೇನೊ ಅದಕ್ಕಿಂತ ಹೆಚ್ಚಾಗಿ ಹೇಳಬೇಕಾಗಿಲ್ಲ; ಈ ಸಿದ್ಧಾಂತ ತಪ್ಪು ಆಲೋಚನೆಯದು, ಅಸೂಯೆಯ ದುರದ್ದೇಶಪೂರಿತವಾದದ್ದು. ಬ್ರಾಹ್ಮಣರು ಅನೇಕ ಸಂಗತಿಗಳಲ್ಲಿ ಅಪರಾಧಿಗಳಾಗಿರಬಹುದು, ಇದು ನಿಜವೂ ಹೌದೆಂದೂ ನಾನು ಧೈರ್ಯವಾಗಿ ಹೇಳಬಲ್ಲೆ; ಆದರೆ ಜಾತಿಗಳನ್ನು ಬ್ರಾಹ್ಮಣೇತರರ ಮೇಲೆ ಹೇರುವ ಕೆಲಸ ಬ್ರಾಹ್ಮಣರ ಸಾಮರ್ಥ್ಯಕ್ಕೆ ಮೀರಿದ್ದು. ಜಾತಿಯ ಪ್ರಕ್ರಿಯೆಗೆ ಬ್ರಾಹ್ಮಣರು ತಮ್ಮ ನಯವಾದ ಸಿದ್ಧಾಂತದ ಮೂಲಕ ಸಹಾಯ ಮಾಡಿರಬಹುದು ಆದರೆ ಅವರು ನಿಶ್ಚಯವಾಗಿಯೂ ಅವರ ಸ್ವಂತ ನೆಲೆಯ ಆಚೆಗೆ ತಮ್ಮ ಯೋಜನೆಯನ್ನು ದಾಟಿಸಲಾರರು. ತಮ್ಮ ಸ್ವಂತ ಮಾದರಿಗಳಿಗೆ ಅನುಗುಣವಾಗಿ ಸಮಾಜವನ್ನು ರೂಪಿಸುವುದು, 'ಎಷ್ಟೊಂದು ಅದ್ಭುತ', ಎಷ್ಟು ಕಠಿಣ, ಅದರ ಮುಂದುವರಿಸುವಿಕೆಯನ್ನು ಯಾರೊಬ್ಬರೂ ಸ್ತುತಿಸುತ್ತಾ ಸುಖಿಸಬಹುದಷ್ಟೆ ಆದರೆ ಅದನ್ನು ಇನ್ನೂ ದೀರ್ಘವಾಗಿ ಚಾಚುವುದು ಸಾಧ್ಯವಿಲ್ಲ. ನನ್ನ ಆಕ್ರಮಣದ ಭಾವಾವೇಶ ಅನಗತ್ಯವೆಂದು ತೋರಬಹುದು. ಆದರೆ ಇದು ಅಪ್ರಸ್ತುತವಾದುದಲ್ಲವೆಂದು ನಾನು ನಿಮಗೆ ಭರವಸೆ ಕೊಡಬಲ್ಲೆ. ಹಿಂದೂ ಸಮಾಜವೆಂಬುದು ಯಾವುದೊ ಒಂದು ಬಗೆಯಲ್ಲಿ ಜಾತಿ ವ್ಯವಸ್ಥೆಯ ಚೌಕಟ್ಟಿನೊಳಗೆ ರೂಪಿತವಾಗಿದೆಯೆಂದು ಸಂಪ್ರದಾಯ ನಿಷ್ಠರಾದ ಹಿಂದೂಗಳ ಮನಸ್ಸಿನಲ್ಲಿ ಬಲವಾದ ಒಂದು ನಂಬಿಕೆಯಿದೆ; ಹಿಂದೂ ಸಮಾಜವೆಂಬ ಈ ಸಂಸ್ಥೆಯು ಶಾಸ್ತ್ರ ಸಮ್ಮತಿಯಿಂದ ಪ್ರಜ್ಞಾಪೂರ್ವಕವಾಗಿ ಸೃಷ್ಟಿಯಾಗಿದೆಯೆಂದೂ ಬಲವಾಗಿ ನಂಬಿದ್ದಾರೆ. ಈ ನಂಬಿಕೆ ಇರುವುದಷ್ಟೇ ಅಲ್ಲ-ಇದು ಒಳ್ಳೆಯದೇ ಹೊರತು ಮತ್ತೇನೂ ಅಲ್ಲವೆಂದೂ, ಇದು ಶಾಸ್ತ್ರ ಸಮ್ಮತಿಯಿಂದ ಕೂಡಿರುವುದಾಗಿಯೂ ಶಾಸ್ತ್ರಗಳು ತಪ್ಪಾಗಿರುವುದು ಸಾಧ್ಯವಿಲ್ಲವೆಂದೂ-ಎಂಬ ಆಧಾರಗಳನ್ನಿತ್ತು ಈ ನಂಬಿಕೆಯನ್ನು ಸಮರ್ಥಿಸಲಾಗುತ್ತಿದೆ. ಈ ಧೋರಣೆಯ ಪ್ರತಿಕೂಲ ವಿಚಾರ ಕುರಿತು ನಾನು ಸಾಕಷ್ಟು ವಾದಿಸಿರುವುದು-ಧಾರ್ಮಿಕ ಪರವಾನಿಗೆಯು ವೈಜ್ಞಾನಿಕ ಆಧಾರಗಳ ಮೇಲೆ ನಿಂತಿದೆಯೆಂಬ ಕಾರಣಕ್ಕಲ್ಲ ಅಥವಾ ಅದರ ವಿರುದ್ಧವಾಗಿ ಬೋಧಿಸುತ್ತಿರುವ ಸುಧಾರಕರಿಗೆ ನೆರವಾಗಲೂ ಅಲ್ಲ. ಉಪದೇಶವು ಜಾತಿ ವ್ಯವಸ್ಥೆಯನ್ನು ನಿರ್ಮಿಸಲಿಲ್ಲ; ಉಪದೇಶದಿಂದ ಜಾತಿ ವ್ಯವಸ್ಥೆಯನ್ನು ನಿರ್ನಾಮ ಮಾಡುವುದೂ ಸಾಧ್ಯವಿಲ್ಲ. ಧಾರ್ಮಿಕ ಶಾಸನವನ್ನು ಒಂದು ವೈಜ್ಞಾನಿಕ ವಿವರಣೆಯ ಸ್ಥಾನಕ್ಕೇರಿಸಿ ಸ್ತುತಿಸುವ ಧೋರಣೆಯು ಎಷ್ಟು ಕೃತಕವಾದದ್ದೆಂಬುದನ್ನು ತೋರಿಸುವುದು ನನ್ನ ಗುರಿ.

ಹೀಗೆ ಭಾರತದಲ್ಲಿ ಜಾತಿಗಳ ಪ್ರಸಾರವನ್ನು ಬಿಡಿಸುವುದರಲ್ಲಿ ಈ ಮಹಾನ್ ವ್ಯಕ್ತವಾದವು ತುಂಬ ದೂರದವರೆಗೆ ನಮ್ಮ ನೆವಿಗೆ ಒದಗಿಬರಲಾರದು. ಬಹುಶಃ ನ್ಯಾಯಕೋಪಾಸನೆಗೆ ಹೆಚ್ಚು ಬಳಕೆಯಿರದ ಪಾಶ್ಚಾತ್ಯ ವಿದ್ವಾಂಸರು ಬೇರೆ ಬೇರೆ ವಿರವಣೆ ಕೊಡಲೆತ್ನಿಸಿದ್ದಾರೆ. ಅವರ ಪ್ರಕಾರ, ಭಾರತದಲ್ಲಿ ವಿವಿಧ ಜಾತಿಗಳು ಹಬ್ಬಿಕೊಂಡು 'ರೂಪಿತ'ವಾಗಿರುವ ಕೇಂದ್ರ ಬಿಂದುಗಳೆಂದರೆ- 1. ಕಸುಬು, 2. ಬುಡಕಟ್ಟು ಜನಾಂಗದ ಸಂಘಟನೆಗಳ ಪಳೆಯುಳಿಕೆಗಳು, 3. ಹೊಸ ನಂಬಿಕೆಯ ಉದಯ, 4. ಅಂತರ್ಜಾತೀಯ ಸಂತಾನ ಮತ್ತು 5. ವಲಸೆ.

ಈ ಕೇಂದ್ರ ಬಿಂದುಗಳು ಬೇರೆ ಸಮಾಜಗಳಲ್ಲಿ ಇರಲಿಲ್ಲವೆ ಮತ್ತು ಇವು ಭಾರತಕ್ಕೆಮಾತ್ರ ವಿಶಿಷ್ಟವಾದುವೆ ಎಂಬ ಪ್ರಶ್ನೆಯನ್ನು ಕೇಳಬಹುದು. ಇವು ಭಾರತಕ್ಕಷ್ಟೇ ವಿಶಿಷ್ಟವಾಗಿರದಿದ್ದರೆ ಮತ್ತು ಜಗತ್ತಿಗೇ ಸಮಾನವಾಗಿದ್ದರೆ, ಈ ಜಗತ್ತಿನ ಇತರ ಭಾಗಗಳಲ್ಲಿ ಅವು ಜಾತಿಯಾಗಿ 'ರೂಪ'ಗೊಳ್ಳಲಿಲ್ಲವೇಕೆ? ವೇದಗಳ ನಾಡಾದ ಭಾರತಕ್ಕಿಂತಲೂ ಆ ಭಾಗಗಳು ಇನ್ನು ಪವಿತ್ರ ತಮವಾಗಿದ್ದುವೆಂದೇ ಅಥವಾ ಪ್ರಾಧ್ಯಾಪಕರು ತಪ್ಪು ತಿಳಿದಿರಬಹುದೆ? ಈ ಉತ್ತರಾರ್ಧವೇ ನಿಜವಿರಬೇಕೆನಿಸುತ್ತದೆ.

ಮೇಲೆ ಹೇಳಿದ ಕೇಂದ್ರ ಬಿಂದುಗಳಲ್ಲಿ ಒಂದಿಲ್ಲೊಂದನ್ನು ಆಧರಿಸಿ ರೂಪಿತವಾದ ತಮ್ಮ ತಮ್ಮ ಸಿದ್ಧಾಂತಗಳಿಗೆ ಅನೇಕ ಲೇಖಕರು ಅತ್ಯುನ್ನತ ಸೈದ್ಧಾಂತಿಕ ಮೌಲ್ಯವನ್ನು ಸಾಧಿಸಲು ಯತ್ನಿಸಿದ್ದಾರೆ. ಸೂಕ್ಷ್ಮ ಪರೀಕ್ಷೆಯಿಂದ ನೋಡಿದಾಗ ಆ ಪ್ರಯತ್ನಗಳೆಲ್ಲಾ ಡೊಗರನ್ನು ಮೆಚ್ಚುವ ಉದಾಹರಣೆಗಿಂತ ಹೆಚ್ಚಲ್ಲವೆಂದು ಹೇಳಲು ವಿಷಾದವಾಗುತ್ತದೆ; ಮಾಥ್ಯೂ ಆರ್ನಾಲ್ಡರು ಹೇಳುವಂತೆ 'ತನ್ನೊಳಗೆ ಭವ್ಯತೆಯೇ ಇರದ ಭವ್ಯವಾದ ಹೆಸರು'-ಅಷ್ಟೆ, ಸರ್ ಡೆನ್‌ಜಿಲ್ ಇಬ್ಬೆಟ್ಸನ್, ಶ್ರೀ ನೆಸ್‌ಫೀಲ್ಡ್, ಶ್ರೀ ಸೆನಾರ್ಜಿ ಹಾಗೂ ಸರ್ ಎಚ್. ರಿಸ್ಲೆ-ಇವರುಗಳು ಜಾತಿಯನ್ನು ಕುರಿತು ಪ್ರತಿಪಾದಿಸಿರುವ ವಿವಿಧ ಸಿದ್ಧಾಂತಗಳೂ ಹಾಗೇ ಇವೆ. ಅವನ್ನು ಒಟ್ಟಾಗಿಸಿ ಟೀಕಿಸಿ ಹೇಳುವುದಾದರೆ ಅವೆಲ್ಲ, ತರ್ಕಶಾಸ್ತ್ರದಲ್ಲಿ ಹೇಳುವ 'ಸಾಧಿಸಬೇಕಾದ ವಿಷಯವನ್ನೇ ಸಿದ್ಧವೆಂದಿಟ್ಟುಕೊಳ್ಳುವಂತೆ', ಮಾರುವೇಷದ ರೂಪಗಳು, 'ಭಾರತದಲ್ಲಿ ಇಡೀ ಜಾತಿ ವ್ಯವಸ್ಥೆ ರಚನೆಯಾಗಿರುವುದು ಕಾರ್ಯವಿಧಾನ ಮತ್ತು ಕಾರ್ಯವಿಧಾನದ ಬುನಾದಿಯ ಮೇಲೆ' ಎಂದು ನೆಸ್‌ಫೀಲ್ಡರು ಹೇಳುತ್ತಾರೆ. ಮೇಲಿನ ಈ ಹೇಳಿಕೆಯನ್ನು ಕೊಡುವುದರ ಮೂಲಕ ಅವರು ನಮ್ಮ ಆಲೋಚನೆಯನ್ನು ಅಷ್ಟೇನೂ ಹೆಚ್ಚು ದೂರ ಕೊಂಡೊಯ್ಯುವುದಿಲ್ಲವೆಂದು ಅವರಿಗೆ ಸರಿಯಾಗಿ ನೆನಪಿಸಬೇಕಾಗುತ್ತದೆ; ಭಾರತದಲ್ಲಿ ಜಾತಿಗಳು ಕ್ರಿಯಾತ್ಮಕ ಅಥವಾ ವೃತ್ತಿಪರವೆಂದೇ ಹೇಳಿದಂತಾಗುವ ಅವರ ಈ ಹೇಳಿಕೆ ತುಂಬ ಸಪ್ಪೆಯಾದ ಸಂಶೋಧನೆ; ವೃತ್ತಿಪರ ಗುಂಪು ವೃತ್ತಿಪರ ಜಾತಿಯಾದದ್ದು ಏಕೆ? ಎಂಬುದಕ್ಕೆ ನೆಸ್‌ಫೀಲ್ಡರಿಂದ ಇನ್ನೂ ಅರಿಯಬೇಕಾಗಿದೆ. ನೆಸ್‌ಫೀಲ್ಡರ ಈ ಹೇಳಿಕೆ ಒಂದು ಮಾದರಿಯೆಂಬುದು ವಾಸ್ತವವಾಗಿರದಿದ್ದಲ್ಲಿ, ನಾನು ತುಂಬ ಉಲ್ಲಾಸದಿಂದ ಇತರ ಮಾನವಕುಲಶಾಸ್ತ್ರಜ್ಞರ ಸಿದ್ಧಾಂತಗಳನ್ನು ಪರಿಶೀಲಿಸುವ ಕೆಲಸಕ್ಕೆ ತೊಡಗುತ್ತಿದ್ದ.

ಭಿನ್ನಭಿನ್ನವಾಗಿ ಸಿಡಿದು ಹೋಗುವ ನಿಯಮಕ್ಕೆ ಬದ್ಧವಾಗಿ ಹುಟ್ಟಿಕೊಂಡ ಜಾತಿ ವ್ಯವಸ್ಥೆಯು ಒಂದು ಸ್ವಾಭಾವಿಕ ಘಟನೆಯೆಂದು ಹರ್ಬರ್ಟ್ ಸ್ಪೆನ್ಸರ್ ಅವರು ತಮ್ಮ ವಿಕಾಸ ನಿಯಮದಲ್ಲಿ ವಿವರಿಸಿದ್ದಾರೆ. ಸಂಪ್ರದಾಯವಾದಿ ಸಮರ್ಥಕರ ನುಡಿಕಟ್ಟನ್ನು ಅಳವಡಿಸಿ ಹೇಳುವುದಾದರೆ-ಜಾತಿ ವ್ಯವಸ್ಥೆಯೂ 'ಪರಸ್ಪರಾವಲಂಬಿತ ಭಾಗಗಳುಳ್ಳ ಒಂದು ಸಮಷ್ಟಿಯೊಳಗಿನ ರಾಚನಿಕ ವ್ಯತ್ಯಾಸಗಳಂತೆ'. ಉತ್ತಮ ಸಂತಾನ ಪಡೆಯುವ ಶಾಸ್ತ್ರದ ನಿಯಮಗಳ ಒಂದು ಪ್ರಾರಂಭಿಕ ಪ್ರಯತ್ನವಾಗಿ ಜಾತಿ ವ್ಯವಸ್ಥೆಯನ್ನು ಅನಿವಾರ್ಯವೆಂದು, ಎಲ್ಲರೂ ಒಂದೇ ಹೇತ್ವಾಭಾಸ ವರ್ಗಕ್ಕೆ ಸೇರಿದವರೆಂದು, ಪರಿಗಣಿಸುವ ಪ್ರಯತ್ನ ಈ ಕಟ್ಟಳೆಗಳ ನಿರೀಕ್ಷೆಯಿಂದ, ಅಸಹಾಯಕ ಮತ್ತು ವಿನಯಶೀಲ ಜನರ ಮೇಲೆ ವ್ಯವಸ್ಥೆಯನ್ನು ಎಚ್ಚರದಿಂದಲೇ ಹೇರಲಾಗಿದೆ. ಜಾತಿಯ ವ್ಯವಸ್ಥೆಯನ್ನು ವಿವರಿಸುವ ಈ ತೆರನಾದ ಸಿದ್ಧಾಂತಗಳನ್ನು ಟೀಕಿಸುವ ಸಲುವಾಗಿ ನಿಂತುಕೊಳ್ಳದೆ ಈಗ ನಾನು ನಿಮ್ಮ ಮುಂದೆ ಈ ವಿಷಯ ಕುರಿತ ನನ್ನ ಸ್ವಂತ ದೃಷ್ಟಿಕೋನವನ್ನು ಮಂಡಿಸುತ್ತೇನೆ. ಹಿಂದೂ ಸಮಾಜವು ಇತರ ಸಮಾಜಗಳಿಗೆ ಸಮಾನವಾಗಿ ವರ್ಗಗಳಿಂದ ಕೂಡಿದ್ದಾಗಿದೆ ಎಂಬುದನ್ನು ಪ್ರಾರಂಭದಲ್ಲೇ ನೆನಪಿಗೆ ತಂದುಕೊಳ್ಳುವುದು ಒಳ್ಳೆಯದು. ನಮಗೆ ತಿಳಿದುಬಂದಿರುವ ಪ್ರಾರಂಭದ ವರ್ಗಗಳು; 1. ಬ್ರಾಹ್ಮಣರು ಅಥವಾ ಪುರೋಹಿತ ವರ್ಗ, 2. ಕ್ಷತ್ರಿಯರು ಅಥವಾ ಸೈನಿಕ ವರ್ಗ, 3. ವೈಶ್ಯರು ಅಥವಾ ವರ್ತಕ ವರ್ಗ ಮತ್ತು 4. ಶೂದ್ರರು ಅಥವಾ ಕಸುಬುದಾರರು ಮತ್ತು ದಾಸ್ಯವೃತ್ತಿಯವರು. ಇದು ಮೂಲಭೂತವಾಗಿ ಒಂದು ವರ್ಗ ವ್ಯವಸ್ಥೆಯಾಗಿದ್ದು ಇದರಲ್ಲಿ ವ್ಯಕ್ತಿಗಳು ಅರ್ಹತೆಯಿದ್ದಾಗ ಅವರ ವರ್ಗವನ್ನು ಬದಲಾಯಿಸಬಹುದಾಗಿತ್ತು, ಆದ್ದರಿಂದ ವರ್ಗಗಳು ಅವುಗಳ ಸಿಬ್ಬಂದಿಯನ್ನೂ ಬದಲಾಯಿಸಿಕೊಳ್ಳಬಹುದಿತ್ತು-ಎಂಬ ಅಂಶಕ್ಕೆ ನಿರ್ದಿಷ್ಟವಾದ ಗಮನ ಹರಿಸಬೇಕು. ಹಿಂದೂಗಳ ಇತಿಹಾಸದ ಯಾವುದೋ ಒಂದು ಹಂತದಲ್ಲಿ ಪುರೋಹಿತ ವರ್ಗ ಸಾಮಾಜಿಕವಾಗಿ ಉಳಿದ ಜನರಿಂದ ತಾನಾಗಿ ಬೇರ್ಪಟ್ಟಿತು ಮತ್ತು ತನ್ನ ಬಾಗಿಲು ಮುಚ್ಚುವ ವರ್ತನೆಯಿಂದಾಗಿ ತಾನೇ ಒಂದು ವರ್ಗವಾಗಿ ಪರಿಣಮಿಸಿತು. ಸಾಮಾಜಿಕ ಶ್ರಮ ವಿಭಜನೆಯ ಕಟ್ಟಳೆಗೆ ಒಳಪಟ್ಟು ಉಳಿದ ವರ್ಗಗಳು ತಾರತಮ್ಯಗಳಿಗೆ ಒಳಗಾದವು; ಕೆಲವು ದೊಡ್ಡವಾದುವು, ಉಳಿದವುಗಳು ಸಣ್ಣಪುಟ್ಟ ಗುಂಪುಗಳಾದವು. ವೈಶ್ಯ ಮತ್ತು ಶೂದ್ರ ವರ್ಗಗಳು ಮೂಲ ಜೀವದ್ರವ್ಯವಾಗಿದ್ದು ಇಂದಿನ ಅಸಂಖ್ಯಾತ ಜಾತಿಗಳಿಗೆ ಆಕರವಾದುವು. ಸೈನಿಕ ವೃತ್ತಿಯು ಅಷ್ಟು ಸುಲಭವಾಗಿ ತನ್ನನ್ನು ತಾನು ಅತಿ ಚಿಕ್ಕದಾಗಿ ಉಪವಿಭಜನೆಗೊಳ್ಳಲು ಅವಕಾಶ ಕೊಡುವುದಿಲ್ಲ ವಾದ್ದರಿಂದ ಕ್ಷತ್ರಿಯ ವರ್ಗವು ಸೈನಿಕರು ಮತ್ತು ಆಡಳಿತಗಾರರು ಎಂದು ವ್ಯತ್ಯಾಸಗೊಂಡಿರಬಹುದು.

ಒಂದು ಸಮಾಜದ ಈ ಉಪ-ವಿಭಜನೆಯು ತೀರ ಸ್ವಾಭಾವಿಕವಾದುದು. ಈ ಉಪ-ವಿಭಜನೆಗಳ ಅಸ್ವಾಭಾವಿಕ ಸಂಗತಿಯೆಂದರೆ ಅವು ಜಾತಿ ವ್ಯವಸ್ಥೆಯ ಮುಕ್ತ-ದ್ವಾರ ಲಕ್ಷಣವನ್ನು ಕಳೆದುಕೊಂಡಿರುವುದು ಮತ್ತು ತನ್ನ ಸುತ್ತ ಬೇಲಿ ಕಟ್ಟಿಕೊಂಡ ಘಟಕಗಳಾಗಿ ಅಂದರೆ ಜಾತಿಗಳಾಗಿ ಪರಿಣಮಿಸಿರುವುದು. ಈಗ ಪ್ರಶ್ನೆ ಏನೆಂದರೆ : ಅವರನ್ನು ತಮ್ಮ ಬಾಗಿಲುಗಳನ್ನು ಮುಚ್ಚುವಂತೆ ಮತ್ತು ಸ್ವಜಾತಿ ಪದ್ಧತಿಯವರಾಗುವಂತೆ ಒತ್ತಾಯಿಸಲಾಯಿತೆ? ಅಥವಾ ಅವರೇ ಸ್ವಯಿಚ್ಛೆಯಿಂದ ಬಾಗಿಲುಗಳನ್ನು ಮುಚ್ಚಿದರೊ? ಇದಕ್ಕೆ ಎರಡು ವಿಧವಾದ ಉತ್ತರವಿದೆಯೆಂದು ನಾನು ನಿವೇದಿಸುತ್ತೇನೆ: ಕೆಲವರು ಬಾಗಿಲುಗಳನ್ನು ಮುಚ್ಚಿದರು; ಉಳಿದವರು ತಮ್ಮ ಪಾಲಿಗೆ ಬಾಗಿಲುಗಳನ್ನು ಮುಚ್ಚಲಾಗಿದೆಯೆಂದು ಕಂಡುಕೊಂಡರು. ಒಂದು ಮನಸ್‌ಶಾಸ್ತ್ರೀಯವಾದ ವಿವರಣೆಯಾಗಿದ್ದರೆ ಇನ್ನೊಂದು ಯಾಂತ್ರಿಕವಾದುದು-ಆದರೆ ಇವೆರಡೂ ಪರಸ್ಪರ ಪೂರಕವಾಗಿವೆ; ಜಾತಿ ವ್ಯವಸ್ಥೆಯ ಸಂಗತಿಯನ್ನು ಅದರ ಸಮಗ್ರತೆಯಲ್ಲಿ ವಿವರಿಸಲು ಇವೆರಡೂ ಅಗತ್ಯ.

ನಾನು ಮೊದಲು ಮಾನಸಿಕ ವ್ಯಾಖ್ಯಾನವನ್ನು ತೆಗೆದುಕೊಳ್ಳುತ್ತೇನೆ. ಈ ಸಂಬಂಧವಾಗಿ ಉತ್ತರಿಸಬೇಕಾದ ಪ್ರಶ್ನೆ ಇದು: ಈ ಕೈಗಾರಿಕಾ, ಧಾರ್ಮಿಕ ಅಥವಾ ಬೇರೆಯೇ ಆದ ಉಪವಿಭಾಗಗಳು ಅಥವಾ ವರ್ಗಗಳು ತಮ್ಮ ಬಾಗಿಲುಗಳನ್ನು ತಾವೇ ಮುಚ್ಚಿದ್ದು ಅಥವಾ ಸ್ವಜಾತಿ ಘಟಕಗಳಾದದ್ದು ಏಕೆ? ಏಕೆಂದರೆ ಬ್ರಾಹ್ಮಣರು ಹಾಗಿದ್ದರು-ಎಂಬುದೇ ನನ್ನ ಉತ್ತರ. ಸ್ವಜಾತಿ ಪದ್ಧತಿ ಅಥವಾ ಬಾಗಿಲು ಮುಚ್ಚಿದ ವ್ಯವಸ್ಥೆಯು ಹಿಂದೂ ಸಮಾಜದಲ್ಲಿ ಒಂದು ರೂಢಿಯ ಶೈಲಿಯಾಗಿತ್ತು ಮತ್ತು ಅದು ಬ್ರಾಹ್ಮಣ ಜಾತಿಯಿಂದ ಹುಟ್ಟಿದ ರೂಢಿಯಾಗಿದ್ದುದರಿಂದಾಗಿ ಅದನ್ನು ಎಲ್ಲ ಬ್ರಾಹ್ಮಣೇತರ ಉಪ-ವಿಭಾಗ ಅಥವಾ ವರ್ಗಗಳವರೂ ಹೃದಯಪೂರ್ವಕವಾಗಿ ಅನುಕರಿಸಿದರು; ಮುಂದೆ ಅವರುಗಳೇ ಸ್ವಜಾತಿ ಪದ್ಧತಿ ಪಾಲಿಸುವ ಜಾತಿಗಳಾದರು. ಈ ಎಲ್ಲ ಉಪ-ವಿಭಜನೆಗಳನ್ನೂ ಅವುಗಳ ತಾರತಮ್ಯದ ಮುನ್ನಡೆಯಲ್ಲಿ 'ಅನುಕರಣೆಯ ಅಂಟುಜಾಡ್ಯ ಬೆನ್ನು ಹತ್ತಿ ಅವು ಜಾತಿಗಳಾಗುವಂತೆ ಮಾಡಿತು. ಅನುಕರಣೆಯ ಪ್ರವೃತ್ತಿ ಜನಮನದಲ್ಲಿ ಆಳವಾಗಿ ಬೇರೂರಿದೆ; ಭಾರತದಲ್ಲಿ ನಾನಾ ಜಾತಿಗಳು ರಚಿತವಾಗಲು ಈ ಅನುಕರಣೆಯ ಒಲವು (ಕಾರಣವೆಂಬುದನ್ನು) ಅಸಮರ್ಪಕ ವಿವರಣೆಯೆಂದು ಗ್ರಹಿಸಬಾರದು. ಅನುಕರಣ ಚಾಳಿ ಎಷ್ಟು ಆಳವಾಗಿ ಕೂತಿದೆಯೆಂದರೆ ವಾಲ್ಟರ್‌ಬೇಗ್ ಹಾಟ್ ಹೀಗೆ ವಾದಿಸಿದ್ದಾರೆ: "ಅನುಕರಣೆಯು ಅಪ್ರೇರಿತವೆಂದು ಅಥವಾ ಪ್ರಜ್ಞಾಪೂರ್ವಕವಾದುದೆಂದು... ನಾವು ಆಲೋಚಿಸಕೂಡದು. ಇದಕ್ಕೆ ತದ್ವಿರುದ್ಧವಾಗಿ, ಮನಸ್ಸಿನ ಅಜ್ಞಾತ ಭಾಗಗಳಲ್ಲಿ ಅದು ತನ್ನ ಸ್ಥಳವನ್ನು ಪಡೆದಿದೆ, ಆದರ ಭಾವನೆಗಳು, ಪ್ರಜ್ಞಾಪೂರ್ವಕವಾಗಿ ಮೂಡುವುದಕ್ಕಿಂತ ದೂರದಲ್ಲಿದ್ದು, ಇವೆಯೆಂಬುದೇ ಅರಿವಿಗೆ ಬರಲಾರದು; ಅವು ಬರುವುದರ ಸುಳಿವೂ ತಿಳಿಯುವುದಿಲ್ಲ, ಅವು ಬಂದಾಗಲೂ ಗೊತ್ತಾಗುವುದಿಲ್ಲ. ನಮ್ಮ ಸ್ವಭಾವದಲ್ಲಿರುವ ಅನುಕರಣ ಪ್ರವೃತ್ತಿಯ ಮುಖ್ಯವಾದ ನೆಲೆಯೆಂದರೆ ನಮ್ಮ ನಂಬಿಕೆ. ಇದನ್ನು ನಂಬು ಅಥವಾ ಅದನ್ನು ನಂಬಬಾರದು ಎಂದು ನಮ್ಮನ್ನು ಮೊದಲೇ ನಿಯಂತ್ರಿಸುವ ಕಾರಣಗಳೆಂದರೆ ನಮ್ಮ ಸ್ವಭಾವದಲ್ಲಿರುವ ತೀರ ಅಜ್ಞಾತ ನೆಲೆಗಳು. ಆದರೆ ವಿಚಾರ ಮಾಡದೆಯೇ ಸುಮ್ಮನೆ ನಂಬಿಬಿಡುವ ಅನುಕರಣ ಪ್ರವೃತ್ತಿಯ ವಿಚಾರದಲ್ಲಿ ಯಾವ ಅನುಮಾನವೂ ಇಲ್ಲ".

(ಮುಂದಿನ ಸಂಚಿಕೆಗೆ)

ದಯವಿಟ್ಟು ಓದಿರಿ



ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ನಂತರ ಶೋಷಿತರ ಬದುಕಿನಲ್ಲಿ ಸ್ವಾಭಿಮಾನದ ಬೀಜಬಿತ್ತಿ ಹೋರಾಟದ ಫಲ ತಂದಿತ್ತ ಕೀರ್ತಿ ಕರ್ನಾಟಕದ ದಲಿತ ಚಳವಳಿಗೆ ಸಲ್ಲುತ್ತದೆ. ಕಾಲು ಶತಮಾನಗಳ ಕಾಲದ ದಲಿತ ಚಳವಳಿಯ ವಿಭಿನ್ನ ಅಭಿವ್ಯಕ್ತಿ ಮತ್ತು ಪ್ರತಿಭಟನೆಯ ಮಾದರಿಗಳನ್ನು ಕುರಿತು ಚಿಂತಕ ಡಾ॥ ಡಿ.ಆರ್. ನಾಗರಾಜ್ ಬರೆದಿರುವ 'ದಿ ಫ್ಲೇಮಿಂಗ್ ಫೀಟ್' ಕೃತಿಯನ್ನು ಎಂ.ಎಸ್. ಆಶಾದೇವಿಯವರು ಕನ್ನಡೀಕರಿಸಿ ಓದುಗರಿಗಾಗಿ ನೀಡಿದ್ದಾರೆ.

ಪ್ರತಿಗಳಿಗಾಗಿ ಸಂಪರ್ಕಿಸಿ : **ವಸಂತ ಪ್ರಕಾಶನ**
ನಂ. 59, 38/1, 19ನೇ ಮುಖ್ಯರಸ್ತೆ
ಪದ್ಮನಾಭನಗರ, ಬೆಂಗಳೂರು-560 070
ಬೆಲೆ : ರೂ. **75/-**



ಅತಿ ಶ್ರೇಷ್ಠವಾದ ಮಾನವೀಯ ಮೌಲ್ಯಗಳನ್ನು ಜಗತ್ತಿಗೆ ಸಾರಿದ ಬೌದ್ಧ ಸಾಹಿತ್ಯದ ಪವಿತ್ರ ಗ್ರಂಥಗಳಾದ ತ್ರಿಪಿಟಕಗಳನ್ನೆಲ್ಲಾ ಸಂಗ್ರಹವಾಗಿಯಾದರೂ ಸಾರವತ್ತಾಗಿಯೇ ಅಧ್ಯಯನ ಮಾಡಿದಂತಾಗುವ ಕೃತಿ **'ಸೌಂದರನಂದ'** ಮಹಾಕಾವ್ಯ. ಅಶ್ವಘೋಷನ ಈ ಕೃತಿಯನ್ನು ಓದುಗರಿಗಾಗಿ ಕನ್ನಡದಲ್ಲಿ ನೀಡಿರುವವರು ಹಿರಿಯ ವಿದ್ವಾಂಸರೂ, ಸಂಶೋಧಕರೂ ಆದ ಡಾ॥ ಎಲ್. ಬಸವರಾಜುರವರು.

ಪ್ರತಿಗಳಿಗಾಗಿ ಸಂಪರ್ಕಿಸಿ : **ಲೋಹಿಯಾ ಪ್ರಕಾಶನ**
'ಕ್ಷಿತಿಜ', ಈಪ್ಪಗಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ - 583103
ದೂರವಾಣಿ : 08392/57412 ಬೆಲೆ : ರೂ. **180/-**



ಭಾರತ ಸ್ವಾತಂತ್ರ್ಯ ಚಳವಳಿ ದೇಶವನ್ನು ಕ್ರಮೇಣ ವ್ಯಾಪಿಸುತ್ತಲಿದ್ದ ಸಂದರ್ಭದಲ್ಲಿ ದಕ್ಷಿಣ ಭಾರತ ಇದಕ್ಕೆ ಸ್ಪಂದಿಸುತ್ತ ಬಂದ ರೀತಿಗಳನ್ನು ಆಳವಾಗಿ ಶೋಧಿಸಿದ ಡಾ॥ ಎಸ್. ಚಂದ್ರಶೇಖರ್ ಅವರ **'ದಕ್ಷಿಣ ಭಾರತ ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ'** ಎಂಬ ಆಂಗ್ಲ ಕೃತಿಯನ್ನು ಕನ್ನಡಿಗರಿಗಾಗಿ ಅನುವಾದಿಸಿದ್ದಾರೆ ಲೇಖಕ ಸಿ. ನಾಗಣ್ಣನವರು.

ಪ್ರತಿಗಳಿಗಾಗಿ ಸಂಪರ್ಕಿಸಿ : **ನಿರ್ದೇಶಕರು ಪ್ರಸಾರಾಂಗ**
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - 583276
ಬೆಲೆ : ರೂ. **120/-**



20ನೇ ಶತಮಾನದ ಶ್ರೇಷ್ಠ ಭಾರತೀಯ ಚಿಂತಕರೂ, ಕ್ರಿಯಾಶೀಲ ರಾಜಕಾರಣಿಗಳೂ ಕರ್ನಾಟಕ ರಾಜಕೀಯ ಹಾಗೂ ಸಾಂಸ್ಕೃತಿಕ ಜಗತ್ತಿನ ಮೇಲೆ ಮಹತ್ತರ ಪ್ರಭಾವ ಬೀರಿದ ರಾಮಮನೋಹರ ಲೋಹಿಯಾ ಅವರ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮಾಡಿದೆ. ಇದರ ಫಲವೇ **"ಕಣ್ಣೆದುರಿಗಿನ ಪ್ರಶ್ನೆಗಳು"** ಕೃತಿ ಸಂಪುಟ ಐದು.

ಪ್ರತಿಗಳಿಗಾಗಿ ಸಂಪರ್ಕಿಸಿ : **ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ**
ಬೆಂಗಳೂರು - 560 001 ಬೆಲೆ : ರೂ. **25/-**